
ಆಲ್ಬರ್ಟ್ ಐನ್‌ಸ್ಟೈನ್

ಮೂಲ
ಮೇ ಬ್ಲಾಕರ್ ಫ್ರೀಮನ್

ಅನುವಾದ
ಸೂ. ಸುಬ್ರಹ್ಮಣ್ಯಂ



ಪ್ರಗತಿ ಪ್ರಕಾಶನಾಲಯ

ಆಲ್ಬರ್ಟ್ ಐನ್‌ಸ್ಟೈನ್

(ವಿಶ್ವದ ರಹಸ್ಯಗಳನ್ನು ಶೋಧಿಸಿದ ಮಹಾವಿಜ್ಞಾನಿ)

*

ಬರೆದವರು:

ನೋ ಬ್ಲಾಕರ್ ಫ್ರೀಮನ್

*

ಕನ್ನಡಿಸಿದವರು:

ಸೂ. ಸುಬ್ರಹ್ಮಣ್ಯಂ

★

ಪ್ರಕಾಶಕರು:

ಪ್ರಗತಿ ಪ್ರಕಟಣಾಲಯ,

ಗಾಂಧೀನಗರ : : ಬೆಂಗಳೂರು-9

ALBERT EINSTEIN

By Mae Blacker Freeman

Translated by

S. Subramaniam

First Edition: January 1963.
Price Re. 1/-

Printed at
MANIPAL POWER PRESS, MANIPAL.

ಮುನ್ನುಡಿ

ಜಗತ್ತಿನ ಮಹಾ ವಿಚಾರವಂತರ ವಿರಳ ಪಂಕ್ತಿಯಲ್ಲಿ ಆಲ್ಬರ್ಟ್ ಐನ್‌ಸ್ಟೈನರ ಹೆಸರು ಚಿರಸ್ಥಾಯಿಯಾಗಿದೆ. ನೂತನ ಭಾವನೆಗಳ ನ್ನೊಳಗೊಂಡ ಅವರ ಸಿದ್ಧಾಂತಗಳು ಭೌತಪ್ರಪಂಚದಲ್ಲಿ ಕ್ರಾಂತಿಯುತವಾಗಿವೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಅವರ ವಿಶೇಷ ಸಾಪೇಕ್ಷವಾದವು ವಸ್ತು ಮತ್ತು ಶಕ್ತಿಗಳ ನಡುವಣ ಸಂಬಂಧವನ್ನು ಕುರಿತು ಹೇಳುತ್ತದೆ. ಈ ವಾದದ ಪರಿಣಾಮವಾಗಿಯೇ ಪರಮಾಣು ಶಕ್ತಿ ಇಂದು ಮಾನವಾಧೀನವಾಗಿದೆ. ಲೋಕ ಕಲ್ಯಾಣದತ್ತ ಪರಮಾಣು ಶಕ್ತಿಯನ್ನು ಬಳಸಿಕೊಳ್ಳುವ ವಿವೇಚನೆ ಇಂದಿನ ಮಾನವನದಾಗಿದೆ.

ಯಾವುದೂ ನಿರುಪಾದಿಕವಲ್ಲ; ಎಲ್ಲವೂ ಚಲನೆಯಲ್ಲಿರುತ್ತದೆ. ನಾವು ಕಾಣುವುದು ಸಾಪೇಕ್ಷ ಚಲನೆ ಮಾತ್ರ ಎಂದು ಈ ವಾದ ತಿಳಿಸುತ್ತದೆ. ಅವರ ಏಕ ಕ್ಷೇತ್ರವಾದ ಆಕರ್ಷಣ ಶಕ್ತಿ, ವಿದ್ಯುತ್ಕಾಂತ ಶಕ್ತಿ ಮತ್ತು ಸಾಪೇಕ್ಷವಾದಗಳ ಸೂತ್ರಪ್ರಾಯದ ತ್ರಿವೇಣಿ ಸಂಗಮ. ದ್ಯುತಿವಿದ್ಯುತ್ ಪರಿಣಾಮವನ್ನು ಕುರಿತ ಅವರ ಶೋಧನೆಗೆ **1921**ರ ನೊಬೆಲ್ ಪಾರಿತೋಷಕ ಲಭಿಸಿತು.

"ವಾತ್ಸಲ್ಯಪೂರ್ಣನೂ ದಯಾಮಯಿಯೂ ಆದ ದೇವರು ನಿರ್ಮತ್ಸರನು" ಎಂದು ಅವರೊಮ್ಮೆ ಪ್ರಪಂಚವನ್ನು ಕುರಿತೆಂದರು. ವಿಜ್ಞಾನವನ್ನುಳಿದು ಸಂಗೀತ ಮತ್ತು ವಿಶ್ವಶಾಂತಿಯೇ ಈ ಸೌಜನ್ಯ ಸರಳ ಗಂಭೀರಯುತ, ಹಾಸ್ಯಪ್ರಿಯ ಹಸನ್ಮುಖಿಯ ಮನಸ್ಸನ್ನಾವರಿಸಿದ್ದ ಎರಡು ವಿಷಯಗಳು.

ಇಂಥ ಮಹಾ ವಿಜ್ಞಾನಿಯ ಜೀವನವನ್ನು ಕನ್ನಡಿಗರಿಗೆ ಪರಿಚಯ ಮಾಡಿಕೊಡುವ ಸದವಕಾಶವನ್ನು ಕಲ್ಪಿಸಿದ ಎಲ್ಲ ಸನ್ಮಿತ್ರರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

ಬೆಂಗಳೂರು.
29—1—63

ಸೂ. ಸುಬ್ರಹ್ಮಣ್ಯಂ.

ಪರಿವಿಡಿ

೧. ಮಂದಬುದ್ಧಿಯ ಪುಟ್ಟ ಹುಡುಗ

"ಈ ಹುಡುಗನೊಬ್ಬ ಮೂರ್ಖ!"

ಪ್ರಾಥಮಿಕ ಶಾಲೆಯ ಉಪಾಧ್ಯಾಯರು ತೊಡೆಯ ಮೇಲೆ ಕೈ ಮಡಿಸಿ ಸೌಮ್ಯಮೂರ್ತಿಯಂತೆ ಕುಳಿತಿದ್ದ ಬಾಲಕನತ್ತ ಬೆರಳು ತೋರಿಸಿ ಹೀಗೆಂದಿದ್ದರು. "ತುಂಬ ಸುಲಭವಾದ ವಿಷಯವನ್ನೂ ಅವನು ತಿಳಿಯಲಾರ. ನೋಡಿ ಅವನನ್ನು!"

ತರಗತಿಯೇ ಆಲ್ಬರ್ಟ್ ಐನ್‌ಸ್ಟೈನನತ್ತ ತಿರುಗಿತು. ಕೆಲವು ದೊಡ್ಡ ಹುಡುಗರು ಮುಸಿಮುಸಿ ನಕ್ಕರು. ಉಪಾಧ್ಯಾಯರು ಮುಂದುವರಿಸಿದ್ದರು: "ಆಲ್ಬರ್ಟ್, ನಾನು ನಿನ್ನನ್ನೊಂದು ಪ್ರಶ್ನೆ ಕೇಳಿದೆ. ಬೇಗ ಅದಕ್ಕೆ ಉತ್ತರ ಕೊಡು".

ಆಲ್ಬರ್ಟ್ ಅಲುಗಾಡಲಿಲ್ಲ. ಅದನ್ನು ಕೇಳಿದವನಂತೆ ಕಾಣಿಸುವ ಸೂಚನೆಯೂ ಅವನಲ್ಲಿ ಕಂಡುಬರಲಿಲ್ಲ. ಉಪಾಧ್ಯಾಯರು ಯಾರೋ ಬೇರೆ ಹುಡುಗನೊಡನೆ ಮಾತನಾಡುತ್ತಿರುವಂತೆ ತೋರುವ ಸನ್ನಿವೇಶವದಾಗಿತ್ತು.

ತರಗತಿಯನ್ನು ಮೌನವಾವರಿಸಿತು. ಅದೊಂದು ದೊಡ್ಡ ಕೊಠಡಿ. ಅದರ ಒಂದು ಗೋಡೆಯಲ್ಲಿ ಸ್ವಲ್ಪ ಎತ್ತರದಲ್ಲಿದ್ದ ಕಿಟಿಕಿಗಳ ಅನೇಕ ಗಾಜಿನ ಕಟಕಟೆಗಳಿಂದ ಸ್ವಲ್ಪ ಮಸುಕು ಬೆಳಕೂ ಚಳಿಯೂ ನುಸುಳಿ ಬರುತಿದ್ದುವು. ಹುಡುಗರು ಉದ್ರೇಕಗೊಂಡಿದ್ದರು. ಐನ್‌ಸ್ಟೈನ್ ಮತ್ತೆ ಶಿಕ್ಷೆಗೆ ಗುರಿಯಾಗುತ್ತಾನೆಂದು ಅವರೆಲ್ಲ ಆನಂದದಿಂದಿದ್ದರು. ಏಕೆಂದರೆ ಅವರಾರಿಗೂ ಐನ್‌ಸ್ಟೈನನನ್ನು ಕಂಡರಾಗುತ್ತಿರಲಿಲ್ಲ. ಅದೇನೇ ಇರಲಿ, ಅವರಿಗೆ ಪಾಠದಿಂದ ಸ್ವಲ್ಪ ಕಾಲ ವಿರಾಮ ದೊರಕಿತ್ತು.

ಉಪಾಧ್ಯಾಯರು ಆಜಾನುಬಾಹು ವ್ಯಕ್ತಿಯೇ ಆಗಿದ್ದರು.

ಅವರ ದಪ್ಪ ಕತ್ತಿನ ಮೇಲಿದ್ದ ಪುಟ್ಟ ತಲೆ, ಪೂರ್ಣ ವಪನದಿಂದಾಗಿ, ಮತ್ತೂ ಚಿಕ್ಕದಾಗಿ ಕಾಣುತ್ತಿತ್ತು. ಅವರು ನೆಟ್ಟಗೆ ಸೆಟೆದು ನಿಂತು ಆಲ್ಬರ್ಟ್‌ನಿಗೆ ಆಜ್ಞೆಯನ್ನು ಬೊಗಳಿದ್ದರು. ಹೌದು, ಅಂತಹ ಗಡಸು ಧ್ವನಿ ಅವರದು. "ಎದ್ದು ನಿಲ್ಲು! ಹೊರಡು! ತೊಲಗು ಹೊರಗಿನ ವರಾಂಡಕ್ಕೆ. ಮಧ್ಯಾಹ್ನದ ವರೆಗೂ ಅಲ್ಲಿಯೇ ಇರು."

ಆಲ್ಬರ್ಟ್‌ಗೆ ಆನಂದವೇ ಆಗಿತ್ತು. ಬೆತ್ತದ ಸೇವೆಗಿಂತ ಈ ಗಡೀಪಾರು ಎಷ್ಟೋ ಉತ್ತಮವಾಗಿತ್ತು. ಹೊರಗಡೆ ವಿಪರೀತ ಚಳಿ. ಎರಡು ಗಂಟೆಗಳ ಕಾಲ ಅಲ್ಲಿ ನಿಲ್ಲುವುದೆಂದರೆ ಅತಿ ಆಯಾಸದ ಕೆಲಸ. ಆದರೆ ತರಗತಿಯಲ್ಲಿಯೇ ಉಳಿದು ಅನುಪಯುಕ್ತ ಹಾಗು ಅವಿವೇಕದ ಪ್ರಶ್ನೆಗಳಿಗೆ ಉತ್ತರ ಹೇಳುವುದಕ್ಕಿಂತಲೂ ಇದು ಎಷ್ಟೋ ಪಾಲು ಮಿಗಿಲೆನಿಸುತ್ತಿತ್ತು.

ಆಲ್ಬರ್ಟ್ ಐನ್‌ಸ್ಟೈನ್ ಎಂದೂ ಉದ್ದೇಶಪೂರ್ವಕವಾಗಿ ಅವಿಧೇಯನಾಗಿ ವರ್ತಿಸಿದವನಲ್ಲ. ಆದರೆ ಅವನಿಗೆ ತತ್‌ಕ್ಷಣದಲ್ಲಿ ಉತ್ತರ ಕೊಡುವುದು ಸಾಧ್ಯವಾಗಿರಲಿಲ್ಲ. ಅವನು ಹೇಳಿದುದೆಲ್ಲವೂ ಒಮ್ಮೆ ಮನಸ್ಸಿನಲ್ಲಿಯೇ ಜಾಗರೂಕನಾಗಿ ಆಲೋಚಿಸಿ ಹೊರಗೆಡಹಿದ ಮಾತುಗಳು. ಈ ಆಲೋಚನೆಗೆ ಕೆಲವು ಕಾಲ ಹಿಡಿಯುತ್ತಿತ್ತು. ಉಪಾಧ್ಯಾಯರಾದರೋ ಆಲೋಚನಾಭರಿತ ಉತ್ತರಕ್ಕಿಂತ ಚಟುವಟಿಯ ತತ್‌ಕ್ಷಣದ ಉತ್ತರಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿತ್ತಿದ್ದರು. ಅಸ್ಪಷ್ಟವಾಗಿ ನಿಧಾನವಾಗಿ ಮಾತಾಡುತ್ತಿದ್ದ ಆಲ್ಬರ್ಟ್‌ಗೆ ಈ ಬಗೆಯ ಉತ್ತರ ಕೊಡಲು ಸಾಧ್ಯವಿರಲಿಲ್ಲ.

ಪಾಠಶಾಲೆ ಜರ್ಮನಿಯ ಮ್ಯೂನಿಚ್ ನಗರದ ಒಂದು ಭಾಗದಲ್ಲಿತ್ತು. ಆರು ವರ್ಷಗಳ ಹಿಂದೆ, ಮಾರ್ಚ್ 14, 1879ರಂದು, ಮ್ಯೂನಿಚ್ ನಗರಕ್ಕೆ ಎಂಭತ್ತೈದು ಮೈಲು ಪಶ್ಚಿಮಕ್ಕಿದ್ದ ಉಲ್ಮ್ ನಗರದಲ್ಲಿ ಆಲ್ಬರ್ಟ್ ಜನಿಸಿದುದು. ಆಲ್ಬರ್ಟ್‌ಗೆ ಒಂದು ವರ್ಷವಾದಾಗ ಆತನ ತಂದೆತಾಯಿ ಮ್ಯೂನಿಚ್ ನಗರಕ್ಕೆ ಬಂದುಸೇರಿದ್ದರು.

ಮ್ಯೂನಿಚ್ ಇರುವುದು ಜರ್ಮನಿಯ ದಕ್ಷಿಣ ಭಾಗವಾದ ಬವೇರಿಯ ಪ್ರದೇಶದಲ್ಲಿ. ಸುಮಾರು ಸಾವಿರ ವರ್ಷಗಳು ಬವೇ

ರಿಯ ಸ್ವತಂತ್ರವಾಗಿದ್ದು ತನ್ನದೇ ಆದ ರಾಜನ ಆಳ್ವಿಕೆಗೊಳಪಟ್ಟಿತ್ತು. ಆಲ್ಬರ್ಟನ ಜನನಕ್ಕೆ ಕೆಲವು ವರ್ಷಗಳ ಮುಂಚೆ ಬವೇರಿಯ ಸ್ವಾತಂತ್ರ್ಯವನ್ನು ತ್ಯಜಿಸಿ ಪ್ರಷ್ಯ ಮತ್ತಿತರ ಜರ್ಮನ್ ರಾಜ್ಯ ಗಳೊಡನೆ ಮಿಳಿತಗೊಂಡು ನೂತನ ಜರ್ಮನ್ ರಾಷ್ಟ್ರದ ಒಂದು ಭಾಗವಾಯಿತು.

ಪ್ರಷ್ಯದ "ರಕ್ತ ಮತ್ತು ಕಬ್ಬಿಣದ ಛಾನ್ಸಲರ್" ಎಂದು ಪ್ರಸಿದ್ಧಿ ಪಡೆದ ರಾಜಕಾರಣಿ ನಾಯಕ ಬಿಸ್ಮಾರ್ಕ್ ಪ್ರಜಾಪ್ರಭುತ್ವದಲ್ಲಿ ಅಪ ನಂಬಿಕೆ ಹೊಂದಿದ್ದು ಬಲವಾದ ಸಮರ್ಥ ಸರಕಾರವನ್ನು ನಿರೂಪಿ ಸುವವರಾಗಿದ್ದರು. ಕಷ್ಟಜೀವಿಗಳಲ್ಲದ ಬವೇರಿಯನ್ನರನ್ನು ಪ್ರಷ್ಯ ನರಂತೆ ಬದುಕುವಂತೆ ಬಲವಂತಪಡಿಸಿದರು. ಶಿಸ್ತು, ವಿಧೇಯತೆ, ಆಜ್ಞೆಗಳಿಗೆ ಪರಮ ಗೌರವ ನೀಡುವುದೇ ಪ್ರಷ್ಯಾದ ಜೀವನಬಗೆ. ಈ ಹೊಸ ವ್ಯವಸ್ಥೆಯಲ್ಲಿ ಶಾಲೆಗಳನ್ನು ಸೈನ್ಯದಳದ ಸಲಕರಣೆಗಳಂತೆ ನಡೆಸಲಾಗುತ್ತಿತ್ತು. ಉಪಾಧ್ಯಾಯರು ಸೈನ್ಯಾಧಿಕಾರಿಗಳಂತಿದ್ದರು. ಶಿಸ್ತು ಸೈನ್ಯಶಿಬಿರದ್ದಕ್ಕೆ ಸರಿಸಮನಾಗಿತ್ತು.

ಪುಟ್ಟ ಬಾಲಕ ಆಲ್ಬರ್ಟ್ ಹೊರಗಿನ ಚಳಿಯಲ್ಲಿ ನಡುಗುತ್ತ ನಿಂತಿದ್ದನು. ಒಳಗಿನ ಕೊಠಡಿಯಲ್ಲಿ ಉಪಾಧ್ಯಾಯರ ಚಕಮಕಿ ಪ್ರಶ್ನೆಗಳಿಗೆ ಇತರ ಹುಡುಗರು ಜಿಗಿದು ಉತ್ತರ ಹೇಳುತ್ತಿದ್ದುದು ಆಲ್ಬರ್ಟ್‌ಗೆ ಕೇಳಿಸುತ್ತಿತ್ತು.

ಮನೆಗೆ ಹೋಗುವುದು ಅದೆಷ್ಟು ಚೆಂದ! ಅಲ್ಲಿನ ಪರಿಸ್ಥಿತಿಯೇ ಬೇರೆಯಿತ್ತು. ತನ್ನ ನಾಲ್ಕು ವರ್ಷದ ತಂಗಿ ಮಾಯಾ ಮನೆ ಸೇರಿದ ಕೂಡಲೆ ಪ್ರೀತಿಯಿಂದ ತಬ್ಬಿ ಮುದ್ದಾಡುತ್ತಿದ್ದಳು. ವಿಶಾಲವಾದ ಪೂರ್ವಕಾಲದ ಅಡುಗೆಮನೆಯಲ್ಲಿ ತಾಯಿ ಬಿಸಿ ಊಟ ಹಾಕುತ್ತಿದ್ದಳು. ಸುಂದರ ಉದ್ಯಾನದಿಂದ ಸುತ್ತುವರಿದಿದ್ದ ಮನೆ ಆಹ್ಲಾದಕರ ವಾಗಿತ್ತು. ಜೈಲಿಗೆ ಸಮಾನವಾದ ಶಾಲೆಯಲ್ಲಿ ಒಂದು ದಿನ ಕಳೆದ ನಂತರ ಮನೆ ಸೇರುವುದು ಅತ್ಯಾನಂದಕರವಾಗಿತ್ತು, ಪುಟ್ಟ ಆಲ್ಬರ್ಟ್‌ಗೆ.

ಹರ್ಮಾನ್ ಮತ್ತು ಪಾಲಿನ್ ಐನ್‌ಸ್ಟೈನರಿಗೆ ಮಗನನ್ನು

ಕಂಡರೆ ಅಪಾರ ಪ್ರೇಮ. ಅವನ ಸಾವಧಾನದ ಚರ್ಯೆಯನ್ನು ಅವರು ಮೌನದಿಂದಲೆ ಈಕ್ಷಿಸುತ್ತಿದ್ದರೂ ಒಮ್ಮೊಮ್ಮೆ ಅವನ ಬಗೆಗೆ ಗುಪ್ತವಾಗಿ ಚಿಂತಿಸುತ್ತಿದ್ದರು. ಅವನು ಮಾತನಾಡುವುದನ್ನು ಕಲಿಯುವುದು ನಿಧಾನವಾಗಿತ್ತು; ಚಿಕ್ಕವರು ಸಾಮಾನ್ಯವಾಗಿ ಆಸಕ್ತವಾಗಿರುವ ವಿಷಯಗಳಲ್ಲೆಲ್ಲ ಅವನು ನಿರಾಸಕ್ತನಾಗಿದ್ದನು. ಉಳಿದ ಹುಡುಗರೆಲ್ಲರೂ ತೋಟದಲ್ಲಿ ಜಿಗಿದಾಡುತ್ತಿರಲು ತನ್ನ ಪಾಡಿಗೆ ತಾನು ಏಕಾಂಗಿಯಾಗಿ ಅನುದ್ವೇಗದಿಂದಿರುವುದರಲ್ಲೇ ಅವನಿಗೆ ಅಭಿಲಾಷೆ.

ಐನ್‌ಸ್ಟೈನ್ ದಂಪತಿಗಳ ಸಂಸಾರ ಜೀವನ ಸೌಹಾರ್ದಪೂರ್ಣ; ಪ್ರೇಮಮಯ. ಅವರಿಗೆ ಅನೇಕ ನೆಂಟರಿಷ್ಟರು; ಅವರ ಮನೆ ನೋಡಲು ಬಂದ ಚಿಕ್ಕಪ್ಪ-ಚಿಕ್ಕಮ್ಮಂದಿರ, ಸಂಬಂಧಿಕರ ಮೇಳವೇ ಆಗಿತ್ತು. ಅವರೆಲ್ಲ ವಾರಾಂತ್ಯದಲ್ಲಿ ಸಮೀಪದ ಗಿರಿ ಪ್ರದೇಶಗಳಿಗೊ ಅಥವಾ ಬವೇರಿಯದ ಸರೋವರ ಪ್ರದೇಶಗಳಿಗೋ ಹೋಗಿಬರುತ್ತಿದ್ದರು. ಕೆಲವು ವೇಳೆ ಅವರು ಸಣ್ಣಪುಟ್ಟ ಪ್ರವಾಸಗೃಹಗಳಲ್ಲಿ ತಂಗುತಿದ್ದರು. ಆಗ ಆಲ್ಬರ್ಟ್ ತನ್ನ ಪ್ರೀತಿಪಾತ್ರ ಭಕ್ಷ್ಯ ಸಾಸೆಜ್ ತರಿಸಿ ತಿನ್ನುತ್ತಿದ್ದನು.

ಈ ಪ್ರವಾಸಗಳೆಂದರೆ ಆಲ್ಬರ್ಟ್‌ಗೆ ಅಮಿತಾನಂದ. ಇದಕ್ಕೆ ಮುಖ್ಯ ಕಾರಣವೆಂದರೆ ಈ ಪ್ರವಾಸಗಳಿಂದ ತನ್ನ ಪ್ರೀತಿಯ ಗ್ರಾಮಾಂತರ ಪ್ರದೇಶಗಳನ್ನು ಅವನು ಕಾಣಬಹುದಿತ್ತು. ದಟ್ಟವಾದ ಗಿಡಮರಗಳ ಮಧ್ಯೆ, ಅವುಗಳ ಎಲೆಗಳಿಂದ ಸೂರ್ಯರಶ್ಮಿ ವಿವಿಧಾಕಾರದಲ್ಲಿ ಭೂಮಿಯಲ್ಲಿ ಚಿತ್ರವೆಸಗಿರುವುದನ್ನು ನೋಡುತ್ತ ಹೋಗುವುದೇ ಒಂದು ಆನಂದ. ಕೆಲವೊಮ್ಮೆ ಮರದ ಎಲೆಯೊಂದನ್ನು ಕೈಗೆತ್ತಿಕೊಂಡು ಅದರ ಚಿಕ್ಕ ಎಳೆಗಳನ್ನೂ ಸ್ವರೂಪವನ್ನೂ ನೋಡಿ ಅಚ್ಚರಿಪಡುತ್ತಿದ್ದನು. ದೀರ್ಘಕಾಲ ಅಚಲನಾಗಿ ಕುಳಿತು ಸರೋವರಗಳ ಮೇಲೇಳುವ ಅಲೆ ತರಂಗಗಳನ್ನು ನೋಡುತ್ತಾ ಕುಳಿತುಬಿಡುತ್ತಿದ್ದನು; ರಾತ್ರಿಯಲ್ಲಿ ಕತ್ತಲಿನ ಆಕಾಶದಲ್ಲಿ ಮಿನುಗುವ ನಕ್ಷತ್ರಗಳನ್ನು ವೀಕ್ಷಿಸುತ್ತಿದ್ದನು.

"ಆಲ್ಬರ್ಟನದು ಬಹು ಗಾಂಭೀರ್ಯ" ಎಂದರು ಚಿಕ್ಕಪ್ಪ - ರೂಡಿಮಾವ, ಈಸರ್ ನದೀ ತೀರದಲ್ಲಿ ಪ್ರವಾಸ ಮಾಡುತ್ತಿದ್ದ ಒಂದು ದಿನ. "ನೋಡು, ಮಿಕ್ಕೆಲ್ಲ ಹುಡುಗರು ಹೇಗೆ ಹರ್ಷದಿಂದ ಆಟವಾಡಿಕೊಂಡು ಒಬ್ಬರನ್ನೊಬ್ಬರು ಕೀಟಲೆ ಮಾಡುತ್ತಿದ್ದಾರೆ. ನನ್ನ ಮಗಳು ಎಲ್ಸಾ ಕೂಡ ಆಲ್ಬರ್ಟನ ವಯಸ್ಸಿನವಳೇ, ಎಷ್ಟು ಸಂತೋಷಚಿತ್ತದಿಂದಿದ್ದಾಳೆ! ಆಲ್ಬರ್ಟ್ ಹಾಗಿಲ್ಲ. ಸರೋವರದ ಆಚೆ ಏನನ್ನೋ ನೋಡುತ್ತ ಸುಮ್ಮನೆ ಕುಳಿತಿದ್ದಾನೆ."

ಎಂದಿನಂತೆ ಪಾಲಿನ್ ತನ್ನ ಮಗನ ಪರ ವಕಾಲತ್ತು ವಹಿಸಿ ಮಾತನಾಡಿದಳು: "ಅವನು ಮೌನವಾಗಿರುವುದಕ್ಕೆ ಕಾರಣ ಅವನೇನನ್ನೋ ಯೋಚಿಸುತಿದ್ದಾನೆ. ಸ್ವಲ್ಪ ದಿನವಾದ ಮೇಲೆ ನೋಡುವಿಯಂತೆ-ಅವನೊಬ್ಬ ಪ್ರೊಫೆಸರ್ ಆಗುತ್ತಾನೆ!"

ರೂಡಿಮಾವ ನಕ್ಕರು. ಪ್ರೊಫೆಸರ್! ಎಂತಹ ತಮಾಷೆ! ಅತ್ಯಂತ ಮೇಧಾವಿ ವಿದ್ಯಾರ್ಥಿಗಳು ಮಾತ್ರವೇ ಆ ಹುದ್ದೆಗೇರಬಲ್ಲ ಭರವಸೆಯುಳ್ಳವರು. ಪಾಲಿನ್ ತನ್ನ ಮಗನ ಪೆದ್ದುತನವನ್ನು ಹೀಗೆ ಮುಚ್ಚಿಡುವುದನ್ನು ರೂಡಿ ಆಕ್ಷೇಪಿಸುವಂತಿರಲಿಲ್ಲ. ಸಂಸಾರಗಳು ಅನ್ಯೋನ್ಯವಾಗಿದ್ದು ಒಬ್ಬರನ್ನೊಬ್ಬರು ಕಾಪಾಡಿಕೊಂಡು ಹೋಗಬೇಕು. ತುಸು ಪೆದ್ದು ಎಂದು ತೋರಿದರೂ, ಮಿಕ್ಕೆಲ್ಲ ಹುಡುಗರಂತೆ ಅವನಾಗುವುದರ ಬಗ್ಗೆ ಗುಪ್ತ ಶಂಕೆಯಿದ್ದರೂ ಅವರೆಲ್ಲ ಪುಟ್ಟ ಆಲ್ಬರ್ಟನನ್ನು ಪ್ರೀತಿಸುತಿದ್ದರು.

ಆಟದ ಸಾಮಾನುಗಳೆಂದರೆ ನಿರಾಸಕ್ತಿ ಈ ಮೌನಿ ಹುಡುಗನಿಗೆ. ತಂಗಿ ಮಾಯಾ ಪುಟ್ಟ ಗೊಂಬೆ, ಗಾಡಿ, ಇನ್ನಿತರ ಆಟದ ಸಾಮಾನುಗಳನ್ನು ಮುಂದೆ ಹಾಕಿಕೊಂಡು ಸಂತೋಷದಿಂದ ಆಟವಾಡುತ್ತಿದ್ದರೆ ಆಲ್ಬರ್ಟ್ ನಿಶ್ಶಬ್ದವಾಗಿ ಗಿಡಪೊದರೆಗಳ ನಡುವೆ ನುಸುಳಿ ಉದ್ಯಾನದ ಒಂದು ಮೂಲೆ ಸೇರಿಬಿಡುತ್ತಿದ್ದ. ಅಲ್ಲಿ ಯಾವುದಾದರೊಂದು ಎಲೆಯನ್ನೋ ಇರುವೆಯ ಗುಂಪಿನ ಚಲನೆಯನ್ನೋ ನೋಡುತ್ತ ಕುಳಿತಿರುತ್ತಿದ್ದನು.

ಆಲ್ಬರ್ಟನ ಆರೋಗ್ಯ ಕೆಟ್ಟಾಗಲಂತೂ ಅವನ ತಂದೆತಾಯಿ

ಗಳಿಗೆ ಎಂದೂ ಇಲ್ಲದಷ್ಟು ಚಿಂತೆ; ಅವನ ಜ್ವರವನ್ನೋ ನೆಗಡಿಯನ್ನೋ ಕಡಮೆಮಾಡಲು ಅವರು ಔಷಧವನ್ನೇನೋ ಕೊಡುತ್ತಿದ್ದರು. ಆದರೆ ಸುಸ್ತಾಗಿ ಹಾಸಿಗೆ ಹಿಡಿದು ಮಲಗಿರುತ್ತಿದ್ದ ಆಲ್ಬರ್ಟನ ಕಣ್ಣುಗಳಿಗೆ ಕಾಂತಿ ತರುವುದು ಅವರಿಂದ ಅಸಾಧ್ಯವಾಗುತ್ತಿತು. ಆಲ್ಬರ್ಟ್ ನರಳಿ ಗೋಣಗುತ್ತಿರಲಿಲ್ಲ. ತನ್ನ ಪಾಡಿಗೆ ತಾನು ಹಾಸಿಗೆಯಲ್ಲಿ ಮಲಗಿ ಆಗಾಗ್ಗೆ ಕಿಟಕಿಯಿಂದಾಚೆ ಕಾಣುವ ತೋಟವನ್ನು ನೋಡುತ್ತಿರುತ್ತಿದ್ದನು. ಅವನನ್ನು ಸಂತೋಷಗೊಳಿಸಲು ಅವರು ಎಲ್ಲ ಪ್ರಯತ್ನವನ್ನೂ ಮಾಡುತ್ತಿದ್ದರು.

ಒಂದು ದಿನ ಆಲ್ಬರ್ಟ್ ನೆಗಡಿಯಿಂದ, ಹಾಸಿಗೆ ಹಿಡಿದಿದ್ದು ಅದೇ ತಾನೇ ಸುಧಾರಿಸಿಕೊಳ್ಳುತ್ತಿದ್ದಾಗ ಹರ್ಮಾನ್ ವ್ಯಾಪಾರದ ಸಲುವಾಗಿ ಪಟ್ಟಣಕ್ಕೆ ಹೋಗಿದ್ದನು. ಅಲ್ಲಿ ಅಂಗಡಿಯೊಂದರ ಕಿಟಕಿಯ ಮೂಲಕ, ಚಿಕ್ಕ ದಿಕ್ಸೂಚಿಯೊಂದನ್ನು ಅವನು ಕಂಡನು. "ಓಹೋ ಆಲ್ಬರ್ಟನ ಮನಸ್ಸಿಗೆ ಹಿಡಿಸಬಹುದಾದ ವಸ್ತುವೊಂದಿಲ್ಲಿದೆ. ಪ್ರಾಯಶಃ ಈ ಪುಟ್ಟ ಪೆಟ್ಟಿಗೆಯಲ್ಲಿದ್ದುಕೊಂಡು ಅಲುಗಾಡುತ್ತಿರುವ ಸೂಚಿ ಅವನ ಗಮನವನ್ನು ಸ್ವಲ್ಪ ಕಾಲವಾದರೂ ಸೆಳೆದೀತು" ಎಂದು ಆಲೋಚಿಸಿದ ಹರ್ಮಾನ್. ಅದನ್ನು ಕೊಂಡು ಮನೆಗೆ ತೆರಳಿದ.

"ನೋಡಿಲ್ಲಿ, ಆಲ್ಬರ್ಟ್, ನಿನಗೆ ನಾನೇನು ತಂದಿರುವೆನು, ನೋಡು. ಯಕ್ಷಿಣಿ ಸೂಚಿಯುಳ್ಳ ಒಂದು ಪವಾಡ ಪೆಟ್ಟಿಗೆ! ನೋಡು! ಈ ಪೆಟ್ಟಿಗೆಯನ್ನು ನೀನು ಹೇಗಾದರೂ ತಿರುಗಿಸು. ಆದರೂ ಈ ಹಠಮಾರಿ ಸೂಜಿ ಆ ದಿಕ್ಕಿಗೇ ತಿರುಗುತ್ತದೆ."

ಆಲ್ಬರ್ಟ್ ಪೆಟ್ಟಿಗೆಯನ್ನು ತನ್ನ ಅಂಗೈನಲ್ಲಿರಿಸಿಕೊಂಡ. ಹೀಗೂ ಹಾಗೂ ತಿರುಗಿಸಿ ನೋಡಿದ, ಪ್ರತಿಸಲವೂ ಸೂಚಿ ಒಂದೇ ದಿಕ್ಕನ್ನು ತೋರಿಸುತ್ತ ನಿಂತುಬಿಡುತ್ತಿತ್ತು. ಐನ್‌ಸ್ಟೈನನಿಗೆ ತನ್ನ ಮಗ ಅದರೊಡನೆ ಆಟವಾಡಿಕೊಂಡಿರುವುದು ಹರ್ಷದಾಯಕವಾಯಿತು.

"ಅಪ್ಪಾ, ಸೂಚಿ ಒಂದೇ ಕಡೆ ತಿರುಗಿಕೊಳ್ಳೋದಕ್ಕೆ ಕಾರಣವೇನಪ್ಪ?"

"ಅದಾ? ಅದು ನಿನಗೆ ಅರ್ಥವಾಗೋಲ್ಲ. ಭೂಮಿಯಲ್ಲಿನ

ಆಯಸ್ಕಾಂತ ಬಲ ಅದನ್ನು ಹೀಗೆ ಎಳೆದು ಒಂದೇ ದಿಕ್ಕಿಗೆ ನಿಲ್ಲಿಸುತ್ತದೆ."

"ಏನಪ್ಪಾ ಅದು? ಎಂತಹ ಅಯು-ಅಯು-ಬಲ?" ಅಷ್ಟು ಚೆನ್ನಾಗಿ ಮಾತನಾಡಲು ಬಾರದ ಆಲ್ಬರ್ಟನಿಗೆ ಆ ಪದವನ್ನು ಉಚ್ಚರಿಸುವುದಕ್ಕಾಗಲಿಲ್ಲ.

"ಅದೇನೋ ಒಂದು, ಹೋಗಲಿ ಬಿಡು" ಹರ್ಮಾನ್ ಕರುಣೆಯಿಂದ ನುಡಿದ. "ನಮಗೆ ಕಾಣಿಸದ ಒಂದು ಶಕ್ತಿಗೆ ವಿಚಿತ್ರವಾದೊಂದು ಹೆಸರಿಟ್ಟಿದ್ದಾರೆ. ಆ ಆಟದ ಸಾಮಾನಿನೊಡನೆ ಆಡಿಕೊಂಡು ಸಂತೋಷವಾಗಿರು."

"ಅಲ್ಲ ಅಪ್ಪಾ, ಅದ್ಯಾಕೆ ಸೂಚಿ ಹಾಗೆ ಮಾಡುತ್ತೆ?"

ಈ ವೇಳೆಗಾಗಲೇ ತಂದೆ ಐನ್‌ಸ್ಟೈನರು ಅರ್ಧ ದೂರ ಮೆಟ್ಟಲಿಳಿದು ಬಂದಿದ್ದರು. "ಜೇಕ್ ಚಿಕ್ಕಪ್ಪನ್ನ ಕೇಳು, ಅವನು ಹೇಳುತ್ತಾನೆ" ಎನ್ನುತ್ತ ತಮ್ಮ ದಾರಿ ಹಿಡಿದರು.

ಜೇಕ್ ಚಿಕ್ಕಪ್ಪ ಐನ್‌ಸ್ಟೈನನ ಸೋದರ. ಇಬ್ಬರೂ ಒಂದೇ ವ್ಯಾಪಾರದಲ್ಲಿ ತೊಡಗಿದ್ದರು. ವಿದ್ಯುತ್ ಸಲಕರಣೆಗಳ ಒಂದು ಪುಟ್ಟ ಅಂಗಡಿ ಅವರದು. ಹರ್ಮಾನ್ ಐನ್‌ಸ್ಟೈನ್ ಅದರ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿದ್ದ; ಜೇಕಬ್ ಐನ್‌ಸ್ಟೈನ್ ಅದರ ತಾಂತ್ರಿಕ ಕಾರ್ಯಾಚರಣೆಯ ಹೊಣೆ ಹೊತ್ತಿದ್ದನು. ಆಲ್ಬರ್ಟ್ ಕೇಳುತ್ತಿದ್ದ ಅನೇಕ "ಅಷ್ಟೇಕೆ? ಅದು ಹೇಗೆ" ಎಂಬ ಪ್ರಶ್ನೆಗಳಿಗೆ ಜೇಕ್ ಚಿಕ್ಕಪ್ಪನೇ ಸಾವಧಾನದಿಂದ ಉತ್ತರ ಕೊಡುತ್ತಿದ್ದುದು.

ಆ ದಿಕ್ಸೂಚಿಯನ್ನಿಟ್ಟುಕೊಂಡು ಆಲ್ಬರ್ಟ್ ಹಾಸಿಗೆಯ ಮೇಲೆ ಗಂಟೆಗಳನ್ನು ಕಳೆದ. ನಿಧಾನವಾಗಿ ಅದನ್ನು ತಿರುಗಿಸಿದ; ಓರೆಯಾಗಿ ಹಿಡಿದು ನೋಡಿದ; ಮೃದುವಾಗಿ ಕುಟ್ಟಿದ; ತಲೆಕೆಳಗು ಮಾಡಿದ. ಏನೇ ಮಾಡಿದರೂ ಸೂಚಿ ತಿರುಗು ಹಾಕಿ ಉತ್ತರ ದಿಕ್ಕನ್ನೇ ತೋರಿಸುತ್ತಿತ್ತು.

ಆಲ್ಬರ್ಟನಿಗೆ ಈ ಚೇತೋಹಾರಿ ಗೊಂಬೆ ಆಶ್ಚರ್ಯವನ್ನೂ ಆನಂದವನ್ನೂ ಉಂಟುಮಾಡಿತು. ಅವನ ಆಲೋಚನೆಗಳು ಸುಂಟರ

ಗಾಳಿಯಂತೆ ತಿರುಗಿದುವು. ನಿಸರ್ಗದಲ್ಲಿ ನಾವು ಕಾಣಲಾಗದ, ಮುಟ್ಟಿ ತಿಳಿಯಲಾಗದ–ಏಕೆ, ಕಲ್ಪಿಸಿಕೊಳ್ಳಲೂ ಆಗದಂತಹ— – ವಸ್ತುಗಳಿರುವುದೆಂದು ಅದೇ ಮೊತ್ತಮೊದಲಿಗೆ ಆಲ್ಬರ್ಟನಿಗೆ ಅರಿವುಂಟುಮಾಡಿತು. ಎಲ್ಲೋ ಹೊರ ಆಕಾಶವಲ್ಲಿನ ಯಾವುದೋ ಶಕ್ತಿಯ ಪ್ರಭಾವದಿಂದ ಸೂಚಿ ಚಲಿಸುವುದು. ಇಷ್ಟಾದರೂ ಆಕಾಶವಾದರೋ ಕೇವಲ ಶೂನ್ಯ! ಹಾಗೆಂದು ಜೇಕ್ ಚಿಕ್ಕಪ್ಪನೇ ಹೇಳಿದ್ದ. ಹಾಗಾದರೆ, ಆಕಾಶವು ಶೂನ್ಯವಾಗಿರಲಾರದು. ದಿಕ್ಸೂಚಿಯ ಸೂಚಿಯನ್ನು ಹಿಡಿದೆಳೆದು ನಿಲ್ಲಿಸುವ ಶಕ್ತಿಯನ್ನು ಹೊಂದಿರುವ ಆಕಾಶ ಸಾಮಾನ್ಯವಾಗಿರಲಾರದು.

ಆಲ್ಬರ್ಟ್ ಅಚಲನಾಗಿ ಹಾಗೆಯೇ ಮಲಗಿದ್ದ. ಪಾಲಿನ್ ಅವನನ್ನು ನೋಡಿ ಆಶ್ಚರ್ಯಗೊಂಡಳು. ಹುಡುಗನ ಕಣ್ಣುಗಳು ಕಾಂತಿಯುತವಾಗಿದ್ದುವು; ಅವನ ಕಪೋಲಗಳಲ್ಲಿ ಕಳೆ ಮೂಡಿಬಂದಿತ್ತು. ಆ ಆಟದ ಸಾಮಾನನ್ನು ತೆಗೆದಿಟ್ಟು ಸ್ವಲ್ಪ ನಿದ್ರೆ ಮಾಡುವಂತೆ ಹೇಳಿದರೂ ಬಹಳ ಕಾಲ ಅವನಿಗೆ ನಿದ್ರೆಯೇ ಬರಲಿಲ್ಲ. ಆ ದಿಕ್ಸೂಚಿ ಅವನ ಅಪ್ರತಿಮ ಪ್ರೀತಿಯ ಅತಿ ಮೋಹಕ ನಿಧಿಯಾಯಿತು. ಅದೇ ಅವನ ಪಾಲಿನ ವಿಜ್ಞಾನ ಜಗತ್ತಿಗೆ ಪೀಠಿಕಾ ಪ್ರಾಯವಾಯಿತು.

ಜೇಕ್ ಚಿಕ್ಕಪ್ಪನ ಸಹಾನುಭೂತಿ, ಮನೆಯವರೆಲ್ಲರ ಪ್ರೀತಿಯಿದ್ದರೂ ಶಾಲೆಯಲ್ಲಿ ಮಾತ್ರ ಆಲ್ಬರ್ಟ್ ಎಂದಿನಂತೆಯೇ ಇದ್ದ. ದೀರ್ಘಕಾಲದ ಆಲೋಚನೆಯ ಬಳಿಕವೇ ಅವನು ಮಾತನಾಡುತಿದ್ದುದು. ಆ ವೇಳೆಗೆ ಎಲ್ಲರ ಸಹನೆಯೂ ಕಳೆದು ಪಾಠ ಮುಂದುವರಿಯುತ್ತಿತ್ತು.

ಒಂಭತ್ತು ವರ್ಷಗಳಾಗಿದ್ದು ಪ್ರಾಥಮಿಕ ಶಾಲೆಯ ಕೊನೆಯ ತರಗತಿಯಲ್ಲಿದ್ದಾಗಲೂ ಆಲ್ಬರ್ಟ್ ಸಂಪೂರ್ಣ ಸತ್ಯವೆಂದು ತಿಳಿಯುವವರೆಗೂ ಬಾಯಿಯನ್ನೇ ಬಿಡುತ್ತಿರಲಿಲ್ಲ. ಏಟು ಬೀಳುವುದಿದ್ದರೂ ಸರಿಯೆ, ಆಲ್ಬರ್ಟ್ ತಪ್ಪು ಅಥವಾ ಅಸಮಂಜಸ ಉತ್ತರವನ್ನೆಂದಿಗೂ ಕೊಡುತ್ತಿರಲಿಲ್ಲ. ಇದರಿಂದಾಗಿ ಅವನ ಸಹಪಾಠಿಗಳು– ಬಂದ ಸಂಕಷ್ಟದಿಂದ ಪಾರಾಗಲು ಏನಾದರೊಂದು ಹೇಳಿ ನುಣುಚಿ

ಕೊಳ್ಳುತ್ತಿದ್ದ ಅವನ ಸಹಪಾಠಿಗಳು–ಆಲ್ಬರ್ಟ್‌ನನ್ನು "ಸತ್ಯ ಹರಿಶ್ಚಂದ್ರ" ಎಂದು ಅಡ್ಡ ಹೆಸರಿಟ್ಟುಕರೆಯಲಾರಂಭಿಸಿದರು.

ಹತ್ತು ವರ್ಷವಾಗಿದ್ದಾಗ ಆಲ್ಬರ್ಟ್ ಲೂಯಿಟ್ ಪಾಲ್ಟ್ "ಜಿಮ್ನೇಸಿಯುಮ್" ಸೇರಿದನು. ಜರ್ಮನಿಯಲ್ಲಿ ಜಿಮ್ನೇಸಿಯುಮ್ ಎನ್ನುವುದು ಒಂದು ಬಗೆಯ ಮೇಲು ದರ್ಜೆಯ ವಿದ್ಯಾಶಾಲೆ. ಯಾವ ವೃತ್ತಿಯನ್ನವಲಂಬಿಸುವುದಕ್ಕೂ ಈ ಶಾಲೆಯಿಂದ ಡಿಪ್ಲೊಮಾ ಪಡೆದೇ ವಿಶ್ವವಿದ್ಯಾನಿಲಯವನ್ನು ಸೇರಬೇಕಿತ್ತು.

ಆಲ್ಬರ್ಟ್ ಲೂಯಿಟ್ ಪಾಲ್ಟ್‌ನಲ್ಲಿ ವಿದ್ಯಾವ್ಯಾಸಂಗ ಮಾಡುವುದನ್ನು ಐನ್‌ಸ್ಟೈನ್ ದಂಪತಿಗಳು ಅಂಜಿಕೆಯಿಂದಲೇ ಕಂಡಿದ್ದರು. ಪ್ರಾಥಮಿಕ ಶಾಲೆಯಿಂದ ಕೆಳಮಟ್ಟದಲ್ಲಿ ತೇರ್ಗಡೆ ಹೊಂದಿ, ನಿಧಾನದ ಹಾಗು ಮಂಕು ವಿದ್ಯಾರ್ಥಿಯೆಂಬ ಹೆಸರನ್ನೂ ತಂದು ಕೊಂಡಿದ್ದ ಆಲ್ಬರ್ಟನನ್ನು ಮೇಲಿನ ಶಾಲೆಗೆ ಕಳುಹಿಸುವಾಗ ಅವರ ಹೃದಯವೇನೂ ಹಗುರವಾಗಿರಲಿಲ್ಲ.

ಈ ವಿದ್ಯಾರ್ಥಿಯೇ ಮುಂದೆ ಜಗತ್ತಿನ ಮಹಾ ವಿಜ್ಞಾನಿಗಳಲ್ಲಿ ಒಬ್ಬನೆಂದು ಪರಿಗಣಿತನಾಗಿ ಪ್ರಖ್ಯಾತನಾಗಿ ಬಾಳಿದ **ಆಲ್ಬರ್ಟ್ ಐನ್‌ಸ್ಟೈನ್!**

೨. ಶಾಲೆಯ ಸೆಣಸಾಟಗಳು

ಆಲ್ಬರ್ಟ್ ಐನ್‌ಸ್ಟೈನ್ ಮುಂದೆ ಮಹಾ ಪ್ರಸಿದ್ಧಪುರುಷರಾದರು. ಎಲ್ಲಿ ಹೋದರೂ ಅವರನ್ನು ವರದಿಗಾರರು ಹಿಂಬಾಲಿಸುತ್ತಿದ್ದರು. ಅವರ ಮುಖಚಿತ್ರ ಜಗತ್ತಿನ ಎಲ್ಲೆಡೆಯಲ್ಲಿಯೂ ಪರಿಚಯವಾಯಿತು. ಅವರು ಅನೇಕ ರಾಜಮನೆತನಗಳ ಗೌರವಾನ್ವಿತ ಅತಿಥಿಗಳಾಗಿಯೂ ಆಹ್ವಾನಿಸಲ್ಪಡುತ್ತಿದ್ದರು. ಯಾವುದಾದರೊಂದು ಪಟ್ಟಣದ ಮೂಲಕ ಅವರು ಪ್ರಯಾಣ ಮಾಡುತ್ತಿದ್ದರೆ ಜನರು ಗುಂಪುಕಟ್ಟಿ ಅವರ ಸಂದರ್ಶನಕ್ಕಾಗಿ ಹಾತೊರೆಯುತ್ತಿದ್ದರು. ಅವರ ಕೊನೆಯ ವರ್ಷಗಳಲ್ಲಿ ಒಬ್ಬ ಅಂಗರಕ್ಷಕನು ಅವರನ್ನು ಅನುಸರಿಸಬೇಕಾಯಿತು. ಕುತೂಹಲಾಕಾಂಕ್ಷಿಗಳಾಗಿದ್ದ ಜನ ಅವರ ಕೋಟಿನ ಗುಂಡಿಯನ್ನೋ ಕಂಠವಸ್ತ್ರವನ್ನೋ ಜ್ಞಾಪಕದ ಸವಿನೆನಹಿಗೆಂದು ಕಸಿದುಕೊಂಡು ಬಿಡುತ್ತಿದ್ದರು.

ಐನ್‌ಸ್ಟೈನರು ಹೋಗುತ್ತಿದ್ದ ಮಾರ್ಗಮಧ್ಯದ ರೈಲ್ವೆ ನಿಲ್ದಾಣವೊಂದರಲ್ಲಿ ಒಂದು ದಿನ ಜನರ ಗುಂಪು ಸೇರಿತ್ತು. ಆ ಗುಂಪಿನ ಮುಂದೆ ಒಬ್ಬ ಮನುಷ್ಯನೂ ಆತನ ಚಿಕ್ಕ ಮಗನೂ ಅನುಕೂಲ ಸ್ಥಳವನ್ನಾಕ್ರಮಿಸಿ ನಿಂತಿದ್ದರು. ದೀರ್ಘವಾದ ಶ್ವೇತಕೇಸರಗಳನ್ನುಳ್ಳ ಸ್ವಲ್ಪ ಬಾಗಿದ ಆ ಮಹಾ ವ್ಯಕ್ತಿಯನ್ನು ಸ್ವಾಗತಿಸುವುದರಲ್ಲಿ ಅವರೂ ಪಾಲ್ಗೊಂಡರು. ಆ ಬಳಿಕ ತಂದೆ ಮಗನತ್ತ ತಿರುಗಿ, "ಮಗೂ, ಇದನ್ನೆಂದೂ ಮರೆಯಬೇಡ, ಚರಿತ್ರೆಯಲ್ಲೆಲ್ಲಾ ಮಹಾ ಪ್ರಸಿದ್ಧನೆನಿಸಿದ ವ್ಯಕ್ತಿಯನ್ನು ನೀನು ಇದೇ ತಾನೆ ನೋಡಿರುವೆ" ಎಂದನು.

ಜನತೆ ಐನ್‌ಸ್ಟೈನರನ್ನು ಕಾಣುವ ಬಗೆ ಈ ರೀತಿಯದಾಗಿತ್ತು. ಆದರೂ ಈ ಗೌರವಕ್ಕೆ ಪಾತ್ರರಾಗಲು ಕಾರಣವಾದ ಅವರ ಹಲವು

ವೈಜ್ಞಾನಿಕ ಭಾವನೆಗಳನ್ನು ಜಗತ್ತಿನಲ್ಲಿ ಕೆಲವೇ ಮಂದಿ ಅರ್ಥ ಮಾಡಿಕೊಳ್ಳಬಲ್ಲವರಿದ್ದುದು ವಿಚಿತ್ರವೇ ಸರಿ. ಈ ಸಂಗತಿಯೇ ಜನರಲ್ಲಿ ಸೋಜಿಗವನ್ನುಂಟುಮಾಡಿತ್ತು. ಅವರ ಕಾರ್ಯಕ್ಷೇತ್ರ ಭೌತಶಾಸ್ತ್ರ. ಭೌತಶಾಸ್ತ್ರವು ವಸ್ತು ಮತ್ತು ಅದರ ಕ್ರಿಯಾಸ್ವರೂಪ ವನ್ನು ತಿಳಿಯುವ ಒಂದು ವಿಜ್ಞಾನ ಭಾಗ.

ವಿಶ್ವದಲ್ಲಿ ಎಲ್ಲವೂ ವಸ್ತುವಿನಿಂದ ಮಾಡಲ್ಪಟ್ಟಿವೆ—ಲೋಹ, ಗಾಳಿ, ನೀರು, ಜನ ಎಲ್ಲವೂ. ಏಕೆ, ನಕ್ಷತ್ರಗಳೂ, ಚಂದ್ರ ಸೂರ್ಯರೂ ವಸ್ತುವಿನಿಂದಲೆ ರಚಿಸಲ್ಪಟ್ಟವರು. ಈ ವಿಷಯಗಳ ಮೇಲೆ ಐನ್‌ಸ್ಟೈನ್ ಅಪೂರ್ವವಾದ ಭವ್ಯ ಭಾವನೆಗಳನ್ನು ಹೊಂದಿ ದ್ದುದರಿಂದ ಇತರ ವಿಜ್ಞಾನಿಗಳು ಅವರನ್ನು ಒಬ್ಬ "ಮಾನಸಿಕ ಅದ್ಭುತ ವ್ಯಕ್ತಿ" ಎಂದೇ ತಿಳಿದಿದ್ದರು. ಎಲ್ಲಿ ಹೋದರೂ ಅವರನ್ನು ಅತ್ಯಾದರದಿಂದಲೂ ಗೌರವದಿಂದಲೂ ಕಾಣುವುದಕ್ಕೆ ಕಾರಣ ಅವರ ಅನುಪಮ ಅಪೂರ್ವ ಆಲೋಚನಾಶಕ್ತಿ. ಈ ಮಿತಭಾಷಿ ಸಭ್ಯ ವಿಜ್ಞಾನಿ ಜಗತ್ತಿನ ಎಲ್ಲರ ಹೃದಯವನ್ನೂ ಸೂರೆಗೊಂಡರು.

ಆದರೆ ಜನತೆ ಮುಂದಾಗುವ ಘಟನೆಗಳೇನೆಂದು ಭವಿಷ್ಯ ನುಡಿಯಲಾರದು. ಅನ್ಯಮನಸ್ಕ ಐನ್‌ಸ್ಟೈನ್ ಮುಂದೆ ಮಹಾ ವ್ಯಕ್ತಿಯಾಗುವನೆನ್ನಲು ಯಾವ ಯಕ್ಷಿಣಿ ವಿಧಾನವೂ ತಿಳಿದಿರಲಿಲ್ಲ. ಲೂಯಿಟ್ ಪಾಲ್ಟ್ ಜಿಮ್ನೇಸಿಯಮ್‌ನಲ್ಲಿ ಅವನ ಮೌನವಾದ ಕನಸು ಕಾಣುವಿಕೆಯನ್ನು ಮಹಾ ಮಂಕನ ಲಕ್ಷಣವೆಂದು ಹೆಸರಿಸ ಲಾಗಿತ್ತು. ಮನೆಯಲ್ಲಿಯಾದರೋ ತನ್ನ ಪಾಡಿಗೆ ತಾನು ಇರು ತ್ತಿದ್ದುದು ಸಾಂಘಿಕ ಜೀವಿಯಲ್ಲವೆಂಬ ಹೆಸರನ್ನು ಅವನಿಗೆ ತಂದಿತ್ತು.

ಅವನಿಗೆ ಶಾಲೆ ಹೆಚ್ಚು ತ್ರಾಸದಾಯಕವಾಯಿತು. ಅವನು ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳನ್ನು ಕಲಿಯಬೇಕಾಯಿತು. ಆ ಭಾಷೆಗಳನ್ನು ಕಲಿಯುವ ಅಭಿಲಾಷೆಯಾಗಲೀ ವ್ಯಾಕರಣವನ್ನು ಕಂಠಪಾಠ ಮಾಡುವ ಮನಸ್ಸಾಗಲೀ ಅವನಿಗೆ ಇರಲಿಲ್ಲ. ವಿದ್ಯಾರ್ಥಿ ಗಳಿಗೆ ಬೋಧಿಸಲು ಸಂತತವಾಗಿ ಹೇಳಿಕೊಡುತ್ತಿದ್ದ ಪಾಠಕ್ರಮ ವನ್ನು ಅವನು ದ್ವೇಷಿಸತೊಡಗಿದನು. ಬರೆದ ಸೂತ್ರವನ್ನೇ ಬರೆ

ಯುವುದು; ಅದನ್ನೇ ನೂರಾರು ಸಲ ಓದುವುದು—ಇವುಗಳನ್ನು ಅವನ ಮನಸ್ಸು ಒಪ್ಪುತ್ತಿರಲಿಲ್ಲ. ಉಪಾಧ್ಯಾಯರು ಬಲವಂತಪಡಿಸಿದಷ್ಟೂ ಇವನ ಪ್ರತಿಭಟನೆ ಹೆಚ್ಚುತ್ತಿತ್ತು.

ಚರಿತ್ರೆಯಲ್ಲಿಯೂ ಅವನೇನೂ ಹೇಳಿಕೊಳ್ಳುವಂತಹವನಾಗಿರಲಿಲ್ಲ. ಅಷ್ಟೊಂದು ಇಸವಿಗಳನ್ನು ತಾನೇಕೆ ಉರುಹೊಡೆಯಬೇಕೆಂಬುದು ಅವನಿಗೆ ಅಚ್ಚರಿಯ ಸಂಗತಿಯಾಗಿತ್ತು. ಅದು ಮೂರ್ಖತನವೇ ಸರಿ; ಏಕೆಂದರೆ, ಎಲ್ಲ ಇಸವಿಗಳನ್ನೂ ಪುಸ್ತಕದಲ್ಲಿ ಮುದ್ರಿಸಿರುವುದರಿಂದ ಅವಶ್ಯ ಬಂದಾಗ ಪುಸ್ತಕದಿಂದ ಅವುಗಳನ್ನು ಪಡೆಯಬಹುದಾಗಿತ್ತು.

ಎಲ್ಲ ವಿಷಯಗಳಲ್ಲೂ ಉಪಾಧ್ಯಾಯರನ್ನು ಕೋಪಗೊಳಿಸುತ್ತಿದ್ದುದಕ್ಕೆ ಕಾರಣ ಅವನು "ಇದು ಹೀಗೇಕೆ? ಅದು ಹಾಗೇಕೆ?" ಎಂದು ಪ್ರಶ್ನೆಗಳನ್ನು ಕೇಳುತ್ತಿದ್ದುದೇ ಆಗಿತ್ತು. ಉಪಾಧ್ಯಾಯರು ಕೋಪದಿಂದ ಕೆಂಡ ಕಾರುತ್ತ, "ಅದೆಲ್ಲ ನಿನಗೇಕೆ? ಕೇಳಿದ್ದಕ್ಕೆ ಉತ್ತರ ಹೇಳು" ಎಂದು ಗರ್ಜಿಸುತ್ತಿದ್ದರು. ಅವನ ಸೂಕ್ಷ್ಮ ಪ್ರಶ್ನೆಗಳು ಉಪಾಧ್ಯಾಯರಿಗೆ ಆತಂಕವನ್ನೂ ಪೇಚಾಟವನ್ನೂ ತರುತ್ತಿದುವು. ಕೆಲವು ವೇಳೆ ಅವುಗಳಿಗೆ ಉತ್ತರವೇ ಇರುತ್ತಿರಲಿಲ್ಲ. ಹಾಗೇನಾದರೂ ಇದ್ದರೂ ಸಹ ಅದು ಉಪಾಧ್ಯಾಯರಿಗೇ ತಿಳಿದಿರಲಿಲ್ಲ.

ಜೇಕ್ ಚಿಕ್ಕಪ್ಪನಂತೂ ಅತಿ ಶ್ರಮದಿಂದ ಆಲ್ಬರ್ಟ್‌ಗೆ ನೆರವಾಗುತ್ತಿದ್ದನು. ಆಲ್ಬರ್ಟ್, "ಬೀಜಗಣಿತವೆಂದರೇನು?" ಎಂದು ಕೇಳಿದಾಗ ಜೇಕ್, "ಅದೊಂದು ಖುಷಿವಿಜ್ಞಾನ. ಹೆಸರು ತಿಳಿಯದ ಪುಟ್ಟ ಪ್ರಾಣಿಯ ಷಿಕಾರಿಗೆ ನಾವು ಹೋಗುತ್ತೇವೆ. ಅದನ್ನು "ಎಕ್ಸ್" ಎಂದು ಕರೆಯುತ್ತೇವೆ. ಆ ಪ್ರಾಣಿ ಸಿಕ್ಕಿದ ಕೂಡಲೆ ಅದರ ಮೇಲೆ ಜಿಗಿದು ಅದರ ನಿಜವಾದ ಹೆಸರನ್ನಿಡುತ್ತೇವೆ" ಎಂದಿದ್ದನು. ಆಲ್ಬರ್ಟ್‌ಗೆ ಈ ವಿಷಯ ಮನಸ್ಸಿಗೆ ಚೆನ್ನಾಗಿ ನಾಟಿತ್ತು. ಉಳಿದ ಹುಡುಗರು ಇನ್ನೂ ಸಾಮಾನ್ಯ ಸಂಕಲನದಲ್ಲೇ ತೊಡಗುತ್ತಿದ್ದಾಗ ಅವನು ಅದನ್ನು ನೀರು ಕುಡಿದಂತೆ ಮಾಡಿಬಿಡುತ್ತಿದ್ದನು.

ಆ ಬಳಿಕ ಅವನಿಗೆ ಅಧ್ಯಯನದ ಅರಿವಾಯಿತು. ಹಲವು ಅಕ್ಷರಗಳನ್ನು ಸೇರಿಸಿ ಒಂದು ಪದವಾಗಿ ಜೋಡಿಸುವುದು ಪ್ರಾಥಮಿಕ ಶಾಲೆಯಲ್ಲಿ ಪ್ರಯಾಸಕರವಾಗಿತ್ತು. ಜಿಮ್ನೇಸಿಯಮ್‌ನಲ್ಲಿ ಈ ಪದಗಳ ಜೋಡಣೆ ಎಷ್ಟು ಅರ್ಥವತ್ತಾಗಿರುವುದೆಂದು ತಿಳಿದು ಅಚ್ಚರಿಪಟ್ಟನು. ಅವುಗಳಿಂದಲೇ ಗಯಟೆ ಮತ್ತು ಷಿಲ್ಲರ್‌ರವರ ಸುಂದರ ಕಾವ್ಯಗಳು ರಚಿತವಾಗಿದ್ದುವು. ಅವರು ತಿಳಿಯಬೇಕೆಂದಿದ್ದುದನ್ನು ಈ ಪದಗಳು ಹೇಳುತ್ತಿದ್ದುವು. ಉಪಾಧ್ಯಾಯರ ಕೋಪಾವೇಶಗಳಿಗೆ ಪಾತ್ರರಾಗದೆ ಪ್ರಶ್ನೆಗಳಿಗೆ ತಾವೇ ಉತ್ತರವನ್ನೂ ಅವುಗಳಿಂದ ಅವನು ತಿಳಿಯಬಹುದಾಗಿತ್ತು.

ವರ್ಷಗಳುರುಳಿದಂತೆ ಅವನು ಹೆಚ್ಚುಹೆಚ್ಚು ವ್ಯಾಸಂಗಮಾಡ ತೊಡಗಿದನು. ಐಹ್‌ಸ್ಟೈನ್‌ರ ಪ್ರಕೃತಿ ವಿಜ್ಞಾನವನ್ನು ಕುರಿತ ಜನಪ್ರಿಯ ಗ್ರಂಥಮಾಲೆಯ ಪರಿಚಯ ಅವನಿಗಾಯಿತು. ಆ ಗ್ರಂಥಗಳಲ್ಲಿ ಪ್ರಾಣಿಗಳು, ಸಸ್ಯಗಳು, ಧೂಮಕೇತು, ಅಗ್ನಿಪರ್ವತ, ಮೋಡ ಮೊದಲಾದ ಎಲ್ಲ ವಿಷಯಗಳನ್ನೂ ವಿವೇಚಿಸಲಾಗಿತ್ತು. ಅನೇಕ ವಿಜ್ಞಾನ ವಿಷಯಗಳನ್ನೂ ಅದರಲ್ಲಿ ಕೊಡಲಾಗಿತ್ತು. ಆಲ್ಬರ್ಟ್ ಅದೆಲ್ಲವನ್ನೂ ಗ್ರಹಿಸಿಕೊಂಡನು. ರೇಖಾಗಣಿತದ ಪುಸ್ತಕವೊಂದು ಮೇಲಿನ ತರಗತಿಯಲ್ಲಿ ದೊರಕಲು ಆಲ್ಬರ್ಟ್ ಅದೆಲ್ಲವನ್ನೂ ಓದಿ ಅದರಲ್ಲಿನ ಲೆಕ್ಕವೆಲ್ಲವನ್ನೂ ಒಂದು ತಪ್ಪೂ ಇಲ್ಲದಂತೆ ಮಾಡಿ ಮುಗಿಸಿದನು. ಆ ಪುಸ್ತಕ ಅವನಿಗೆ ತಂದ ಆನಂದ, ಉದ್ವೇಗವನ್ನು ಅವನೆಂದೂ ಮರೆಯಲಿಲ್ಲ.

ಸಂಗೀತವೆಂದರೆ ಅವನಿಗೆ ಎಲ್ಲಿಲ್ಲದ ಆನಂದ. ತನ್ನ ಚಿಕ್ಕಂದಿನ ದಿನಗಳಲ್ಲಿ ಅವನು ಬಾಕ್, ಬೀತೋವೆನ್ ಮತ್ತು ಮೋಟ್ಸಾರ್ಟ‌ರ ಸಂಗೀತವನ್ನು ಬಹುವಾಗಿ ಕೇಳಿದನು. ಅವನ ತಾಯಿಗೂ ಸಂಗೀತವೆಂದರೆ ಪ್ರೀತಿ. ಪ್ರತಿ ವಾರವೂ ಅನೇಕ ಸಂಗೀತ ಕಲಾವಿಲಾಸಿಗಳು ಅವರ ಮನೆಯಲ್ಲಿ ನೆರೆದು ಗೋಷ್ಠಿ ನಡೆಯಿಸುತ್ತಿದ್ದರು. ಆಲ್ಬರ್ಟ್ ಊಟದ ಮೇಜಿನ ಕೆಳಗೋ ಪರದೆಗಳ ಸಂದಿನಲ್ಲಿಯೋ ಕುಳಿತು ಕೇಳುತ್ತಿದ್ದನು. ಯಾರಾದರೂ ಅವನನ್ನು ಪತ್ತೆ ಮಾಡಿ ನಿದ್ರೆ ಮಾಡುವಂತೆ ಹೇಳಿ ಅಲ್ಲಿಂದ ಓಡಿಸುತ್ತಿದ್ದರು.

ಆಲ್ಬರ್ಟ್ ಆರು ವರ್ಷದವನಿದ್ದಾಗ ಪಾಲಿನ್ ಅವನಿಗೆ ಒಂದು ಪಿಟೀಲನ್ನು ತಂದುಕೊಟ್ಟು ಸಂಗೀತ ತರಗತಿಗೆ ಸೇರಿಸಿದಳು. ಆದರೆ ಅಲ್ಲಿ ಅವನೇನೂ ಚೆನ್ನಾಗಿ ಕಲಿಯಲಿಲ್ಲ. ನುಡಿಸಿದ ಸರಳೆಯನ್ನೇ ನುಡಿಸುವಷ್ಟು ತಾಳ್ಮೆ ಅವನಿಗಿರಲಿಲ್ಲ; ದೀರ್ಘಕಾಲದ ಅಭ್ಯಾಸವೂ ಅವನಿಗೆ ಹಿಡಿಸಲಿಲ್ಲ. ಅವನ ಪಾಲಿಗೆ ಅದು ಸಂಗೀತವೇ ಆಗಿರಲಿಲ್ಲ. ಅವನಿಗೆ ಸಂಗೀತವೆಂದರೆ ಮೋಟ್ಸಾರ್ಟನ ಅಲೆಅಲೆಯಾಗಿ ಕೇಳುವ ಸುಂದರ ತರಂಗಗಳು; ಬಾಕ್‌ನ ಮನ ಕದಡುವ ಚತುರ ಸ್ವರಮೇಳಗಳು.

ಜಿಮ್ನೇಸಿಯುಮ್‌ನಲ್ಲಿರುವ ವರೆಗೂ ಅವನು ವಿದ್ಯಾಭ್ಯಾಸವನ್ನು ಎಡವುತ್ತ ಕುಂಟುತ್ತ ಸಾಗಿಸಿದ್ದನು. ಅವನ ಉಪಾಧ್ಯಾಯರ ಮೇಲಾಗಲೀ ಸಹಪಾಠಿಗಳ ಮೇಲಾಗಲೀ ಅವನು ಯಾವ ವಿಶೇಷ ಪ್ರಭಾವವನ್ನೂ ಬೀರಿರಲಿಲ್ಲ. ಈ ಪುಟ್ಟ ಹುಡುಗ ಮಹಾ ವಿಜ್ಞಾನಿಯಾಗಲು ವಿಕಸಿತವಾಗುತ್ತಿರುವನೆಂದು ಯಾರೂ ತಿಳಿದಿರಲಿಲ್ಲ

ಜಿಮ್ನೇಸಿಯುಮ್‌ನಲ್ಲಿ ಅವನಿಗೆ ಹರ್ಷದಾಯಕವಾದುದೆಂದರೆ ಪ್ರಾಚೀನ ಸಾಹಿತ್ಯವನ್ನು ಬೋಧಿಸುತ್ತಿದ್ದ ಪ್ರೊಫೆಸರ್ ರೂಯೆಸ್‌ರವರ ತರಗತಿ. ಪುಸ್ತಕ ಪ್ರಪಂಚದಲ್ಲಿ ತನಗೆ ಆಸ್ಥೆಯನ್ನುಂಟುಮಾಡಿದ ಅವರನ್ನು ಅವನು ಎಂದೂ ಕೃತಜ್ಞತೆಯಿಂದ ನೆನೆಯುತ್ತಿದ್ದನು. ಮುಂದೆ ಕೆಲವು ವರ್ಷಗಳ ಬಳಿಕ ಐನ್‌ಸ್ಟೈನ್ ಪ್ರಸಿದ್ಧಿಯ ಹಂತವನ್ನೇರುತ್ತಿದ್ದಾಗ ಮ್ಯೂನಿಚ್ ನಗರದ ಮೂಲಕ ಹಾದುಹೋಗುವ ಸಂದರ್ಭವೊದಗಿ ಬಂದಿತ್ತು. ಸುಖಸಂತೋಷದ ತರಗತಿಯ ದಿನಗಳನ್ನು ನೆನೆದು ಅವರು ಪ್ರೊಫೆಸರ್ ರೂಯೆಸ್‌ರವರನ್ನು ಸಂದರ್ಶಿಸುವ ನಿರ್ಧಾರಮಾಡಿದರು. ಬಾಗಿಲು ತೆಗೆದ ಪ್ರೊಫೆಸರರು ಮುಂದೆ ನಿಂತಿದ್ದ ತರುಣನನ್ನು ಗುರುತಿಸದಾದರು.

ಆಗ ಆಲ್ಬರ್ಟ್ ಐನ್‌ಸ್ಟೈನ್, "ನಾನು ಒಮ್ಮೆ ನಿಮ್ಮ ವಿದ್ಯಾರ್ಥಿಯಾಗಿದ್ದೆ. ನನ್ನ ನೆನಪಿರುವುದೇ ತಮಗೆ?" ಎಂದು ಕೇಳಿದರು.

ನಗುತ್ತ ನಿಂತಿದ್ದ ತರುಣನನ್ನು ಪ್ರೊಫೆಸರ್ ರೂಯೆಸ್ ಸಂಶಯದಿಂದ ನೋಡತೊಡಗಿದರು. ಅವರು ತರುಣನನ್ನು ಗುರುತು

ಹೆಚ್ಚದಾಗಿದ್ದರು. ಏನು ಮಾಡುತ್ತಿರಬಹುದು ಈ ತರುಣ? ಪ್ರಾಯಶಃ ಹಣ ಸಾಲ ಕೇಳಲು ಬಂದಿರಬಹುದು.

ಕೂಡಲೇ ಪ್ರೊಫೆಸರರು ತಮ್ಮ ಭೇಟಿಗೆ ಬಂದಿದ್ದ ತರುಣನಿಗೆ ಮಾತನಾಡಲೂ ಅವಕಾಶ ಕೊಡದೆ ಬಾಗಿಲು ಮುಚ್ಚಿದರು. ಜಗತ್ತಿನಲ್ಲೇ ಅಪ್ರತಿಮ ಮೇಧಾವಿ ಎನಿಸಿಕೊಂಡಿದ್ದ ಸಭ್ಯ ತರುಣ ವ್ಯಥೆಯಿಂದ ಹಿಂತಿರುಗಿ ನಡೆದನು.

ಜಿಮ್ನೇಸಿಯಮ್‌ನಲ್ಲಿ ಐನ್‌ಸ್ಟೈನನಿದ್ದ ಕೊನೆಯ ವರ್ಷ ಹರ್ಮಾನ್ ಐನ್‌ಸ್ಟೈನ್ ನಡೆಸುತ್ತಿದ್ದ ವಿದ್ಯುತ್ ವ್ಯಾಪಾರ ಕುಸಿದು ಸಂಸಾರ ತೊಂದರೆಗೀಡಾಯಿತು. ಎಲ್ಲರೂ ಆತಂಕ ಕಳವಳದಿಂದ ಕೂಡಿದವರಾಗಿ ಅನೇಕ ಸಮಾಲೋಚನೆ ನಡೆಯಿಸಿದರು. ಕೊನೆಗೆ ಮನೆಯನ್ನು ಮಾರಿ ಇಟಲಿ ದೇಶದ ಮಿಲಾನ್ ನಗರಕ್ಕೆ ತೆರಳುವು ದೆಂದು ಅವರು ನಿರ್ಧರಿಸಿದರು. ಅಲ್ಲಿ ಸಂಬಂಧಿಕರು ಅವರಿಗೆ ಬೇರೆ ವ್ಯಾಪಾರವನ್ನು ಪ್ರಾರಂಭಿಸಲು ಸಹಾಯವಾಗುವರೆಂದು ಹೀಗೆ ನಿರ್ಧರಿಸಿದರು.

"ಆದರೆ ಆಲ್ಬರ್ಟನಿಗೇನು ಮಾಡುವುದು?" ಪಾಲಿನ್ ಆತಂಕ ದಿಂದ ಪ್ರಶ್ನಿಸಿದಳು. "ಅವನಿಗಿನ್ನೂ ಹದಿನೈದು ವರ್ಷ. ಡಿಪ್ಲೊಮಾ ತೆಗೆದುಕೊಳ್ಳುವ ವರೆಗೂ ಅವನು ಜಿಮ್ನೇಸಿಯಮ್‌ನಲ್ಲೇ ಇರ ಬೇಕು".

ಹರ್ಮಾನ್ ಶತಪಥ ಹಾಕತೊಡಗಿದನು. "ಹೌದು, ಏನು ಮಾಡುವುದು ನಮ್ಮ ಹುಡುಗನ ಬಗೆಗೆ? ಮಾಯಾ ಇನ್ನೂ ಚಿಕ್ಕ ವಳಾದ್ದರಿಂದ ಈ ಬದಲಾವಣೆ ಅವಳಿಗೆ ಅಷ್ಟು ಪರಿಣಾಮವಾಗ ಲಾರದು, ಆದರೆ ಆಲ್ಬರ್ಟ್......" ಎಂದು ಅರೆ ನುಡಿದು ಪತ್ನಿ ಯತ್ತ ಕುತೂಹಲದಿಂದ ನೋಡಿದನು. ವ್ಯಕ್ತಪಡಿಸದಿದ್ದರೂ ತಮ್ಮ ಹುಡುಗ ಶಾಲೆಯಲ್ಲಿ ಹಿಂದೆ ಬಿದ್ದಿರುವ ವಿಷಯ ಅವರಿಗೆ ತಿಳಿದಿತ್ತು. ಹಾಗಿರುವಾಗ ಈ ಬದಲಾವಣೆ ಅವನಿಗೆ ತುಂಬ ತೊಂದರೆಯನ್ನು ಮಾಡುವುದೆಂದು ಅವರು ತಿಳಿದಿದ್ದರು.

ಪಾಲಿನ್‌ಗೆ ತನ್ನ ಪ್ರೀತಿಯ ಪುತ್ರ ತನ್ನೊಡನಿರಬೇಕೆಂದು ಆಸೆ.

ಆದರೆ ಆತನಿಗೆ ಅತ್ಯುತ್ತಮವಾದುದಾವುದೆಂದು ಅವಳು ತಿಳಿದಿದ್ದಳು. "ಅವನನ್ನು ಇಲ್ಲಿಯೆ ಬಿಟ್ಟಿರೋಣ," ಎಂದು ನಿರ್ಧರಿಸಿ ನುಡಿದಿದ್ದಳು ಪಾಲಿನ್. "ಡಿಪ್ಲೋಮಾ ಪಡೆದನಂತರ ಅವನು ಮಿಲಾನ್‌ನಲ್ಲಿ ನಮ್ಮೊಡನೆ ಬಂದಿರಲಿ".

ಹಾಗೆಯೇ ವ್ಯವಸ್ಥೆ ಮಾಡಲಾಯಿತು. ಅಲ್ಬರ್ಟ್ ಮ್ಯೂನಿಚ್‌ನ ವಸತಿಗೃಹವೊಂದರಲ್ಲಿ ಇರುವಂತಾಯಿತು. ಜಿಮ್ನೇಸಿಯುಮ್‌ನ ಕೊನೆಯ ವರ್ಷವನ್ನು ಅವನು ಮನೆಯವರಿಂದ ದೂರವಿದ್ದು ಕಳೆಯಬೇಕಾಯಿತು.

ಹಲವು ತಿಂಗಳು ಕಷ್ಟಪಟ್ಟುಕೊಂಡೇ ಆಲ್ಬರ್ಟ್ ಮುಂದುವರಿದಿದ್ದನು. ಹಿಂದೆಂದಿಗಿಂತಲೂ ಈಗ ಅವನಿಗೆ ಶಾಲೆ ಅಸಹ್ಯವಾಯಿತು; ಅವನ ಮನಸ್ಸು ಅಸಂತೋಷದ ತೌರಾಯಿತು. ಈಗ ಅವನಿಗೆ ಮನೆಯವರ ಪ್ರೀತಿವಿಶ್ವಾಸಗಳೂ, ತೃಪ್ತಿ ಸಂತುಷ್ಟಿಯೂ ಇಲ್ಲವಾಗಿತ್ತು. ಮೊದಲಿಗಿಂತ ಈಗ ಉಪಾಧ್ಯಾಯರ ಉಪಟಳ ಹೆಚ್ಚಾಗಿತ್ತು. ಒಂದು ದಿನ ಅವರಲ್ಲೊಬ್ಬರು ಐನ್‌ಸ್ಟೈನನ್ನು ಕರೆದು, "ಐನ್‌ಸ್ಟೈನ್, ನೀನು ತರಗತಿಯಲ್ಲಿ ಪ್ರಶ್ನೆ ಕೇಳದಿರುವಂತೆ ನಾನು ನಿನ್ನನ್ನು ಬಲಾತ್ಕಾರಪಡಿಸಬೇಕಾಗಿದೆ. ನಿನ್ನ ಆ ಪ್ರಶ್ನೆಗಳಿಗೆ ನನ್ನ ಬಳಿ ಉತ್ತರವಿಲ್ಲ. ಇದರಿಂದ ಉಳಿದ ವಿದ್ಯಾರ್ಥಿಗಳಿಗೂ ನನ್ನ ಮೇಲಿನ ಗೌರವ ಕಡಮೆಯಾಗುತ್ತಿದೆ. ನೀನು ಈ ಶಾಲೆಯನ್ನು ಬಿಡುವುದಾಗಿ ನಿರ್ಧರಿಸಿದರೆ ಅದು ಉತ್ತಮ ಯೋಜನೆಯೆಂದು ನನಗನಿಸುತ್ತದೆ" ಎಂದರು.

ಇದು ಅವನ ಕೊನೆಯ ಪೆಟ್ಟಾಯಿತು. ಐನ್‌ಸ್ಟೈನ್‌ಗೆ ಇನ್ನೂ ಅಲ್ಲಿ ಮುಂದುವರಿಯುವುದು ಸಾಧ್ಯವಿರಲಿಲ್ಲ. ತನ್ನ ವೈದ್ಯರ ಬಳಿಗೆ ಹೋಗಿ ತನ್ನ ಆರೋಗ್ಯ ಚೆನ್ನಿಲ್ಲವೆಂದೂ ವಿಶ್ರಾಂತಿ ಅಗತ್ಯವೆಂದೂ ಬರೆದುಕೊಡುವಂತೆ ಕೇಳಿದನು. ಶಾಲಾ ಅಧಿಕಾರಿಗಳು ಅತ್ಯಂತ ಸಂತೋಷದಿಂದ ಅವನಿಗೆ ರಜೆಯಿತ್ತರು. ಕೂಡಲೇ ಆಲ್ಬರ್ಟ್ ಮಿಲಾನ್‌ಗೆ ಹೊರಡುವ ರೈಲನ್ನು ಹತ್ತಿದನು.

೩. ಇಟಲಿಯಲ್ಲಿ ರಜಾದಿನಗಳು

ಸುರಮ್ಯ ಇಟಲಿ! ಪ್ರಜ್ವಲಿಸುವ ನೀಲಬಾನಿನ ಹೊಳಪಿನಿಂದ ಮಿನುಗುವ ಇಟಲಿ! ಸುವರ್ಣ ದ್ರವವನ್ನು ಎಲ್ಲದರ ಮೇಲೂ ಸಿಂಪಡಿಸಿರುವಂತೆ ತೋರುವ ಸೂರ್ಯರಶ್ಮಿಗಳು! ಇನ್ನೂ ತಲುಪುತ್ತಿರುವಂತೆಯೇ ಆ ನಾಡಿನ ಸುಂದರ ನೋಟಕ್ಕೆ ಅಲ್ಬರ್ಟ್ ಮಾರು ಹೋದನು. ಕಳೆದ ಆರು ತಿಂಗಳು ಮ್ಯೂನಿಚ್‌ನಲ್ಲಿ ಅನುಭವಿಸಿದ ಬೇಸರ ಬವಣೆಗಳು ಕ್ಷಣಾರ್ಧದಲ್ಲಿ ಮಾಯವಾಗತೊಡಗಿದುವು.

ಮನೆಯವರು ಅವನನ್ನು ಹರ್ಷದಿಂದ ಬರಮಾಡಿಕೊಂಡರು. ತಾಯಿ ಪ್ರೀತಿಯಿಂದ ಆಲಂಗಿಸಿ ಹಾಗೆಯೇ ಎವೆಯಿಕ್ಕದೆ ಅವನನ್ನು ನೋಡಿದಳು. ಅವಳು ಕಂಡ ನೋಟಕ್ಕೆ ಮನಸ್ಸು ಮರುಗಿತು. ಐನ್‌ಸ್ಟೈನ್ ತೂಕ ಕಳೆದುಕೊಂಡು ಪೇಲವವಾಗಿ ಹೋಗಿದ್ದನು. ಸಾಮಾನ್ಯವಾಗಿ ಚಟುವಟಿಕೆಯಿಂದ ಚಲಿಸುತ್ತಿದ್ದ ರೆಪ್ಪೆಗಳು ಭಾರವಾಗಿದ್ದಂತೆ ತೋರಿತು. ಕಣ್ಣು ತೆರೆದರೆ ಏನು ಅನಿಷ್ಟ ಕಂಡೀತೋ ಎಂದು ಅವು ತೆರೆಯಲು ಹಿಂಜರಿದಿದ್ದಂತೆ ತೋರಿತು.

"ಆಲ್ಬರ್ಟ್ ಕಂದ, ನೀನು ಬಹಳ ಸಣ್ಣಗಾಗಿ ಹೋಗಿರುವೆ" ಎಂದು ಪಾಲಿನ್ ನಿಡುಸುಯ್ದಳು. ಆಕೆ ಐನ್‌ಸ್ಟೈನನನ್ನು "ಪ್ರೀತಿಯ ಪುಟ್ಟ ಆಲ್ಬರ್ಟ್" ಎಂದೇ ಕರೆಯುವ ವಾಡಿಕೆ. "ಆಲ್ಬರ್ಟ್" ಎನ್ನುವುದರ ಉಚ್ಚಾರಣೆ "ಆಲ್ಬರ್ಟಲ್" ಆಗುತ್ತಿದ್ದುದು ಸಾಮಾನ್ಯ. "ಆದರೆ ಅದರ ಬಗ್ಗೆ ಚಿಂತೆ ಬೇಡ. ಹೇಗೂ ನೀನು ಮನೆಗೆ ಬಂದಿರುವೆ. ಎಲ್ಲವನ್ನೂ ಸರಿ ಮಾಡುವುದಾಗುತ್ತದೆ. ಈ ರಾತ್ರಿಯ ಭೋಜನಕ್ಕೆ ಏನು ತಯಾರಾಗಿದೆಯೆಂದು ನೀನು ಊಹಿಸಬಲ್ಲೆಯಾ?"

ಹುಡುಗಾಟದ ನಗು ಆಲ್ಬರ್ಟನ ಕಣ್ಣುಗಳಲ್ಲಿ ಮಿಂಚಿ ಮಾಯವಾಯಿತು. ಒಂದು ವಿಚಿತ್ರ ಭಕ್ಷ್ಯದ ಹೆಸರನ್ನವನು ಹೇಳಿದ.

"ಛೇ, ಇಲ್ಲ. ಇಂದು ನಿನ್ನ ಪ್ರೀತಿಯ ಸಾಸೆಜ್, ಜೊತೆಗೆ ಇನ್ನೂ ಕೆಲವು." ಪಾಲಿನ್ ಉತ್ತಮ ಗೃಹಿಣಿ. ತನ್ನ ಮಗ ದೃಢ ಕಾಯನಾಗಲು ಅವನಿಗೆ ಪುಷ್ಟಿಕರ ಆಹಾರಗಳ ಅವಶ್ಯಕತೆಯಿದೆ ಯೆಂದು ಆಕೆ ತಿಳಿದಿದ್ದಳು.

ಆಲ್ಬರ್ಟ್ ಹುಸಿನಕ್ಕ. ಮತ್ತೆ ತನ್ನವರೊಡನಿರುವುದು ಅವನಿಗೆ ಒಳಿತೆನಿಸಿತ್ತು. ಮತ್ತಾವುದೇ ಹುಡುಗನಾಗಿದ್ದರೆ ಸಂತೋಷಾತಿರೇಕ ದಿಂದ ಕುಣಿದು ಕುಪ್ಪಳಿಸಿ ಹೊಸ ಮನೆಯೆಲ್ಲವನ್ನೂ ಪರಿಶೀಲಿಸಿ ಆ ಸುಂದರ ನಗರವನ್ನು ಹೊಗಳಿ ಹರಟುತ್ತಲೂ, ತನ್ನ ಕಳೆದ ಆರು ತಿಂಗಳ ಮುಜಗರವನ್ನು ಹಳಿಯುತ್ತಲೂ ಇರುತ್ತಿದ್ದನೇನೋ. ಆದರೆ ಜಿಮ್ನೇಸಿಯಮ್ಮಿನ ಕಟ್ಟುನಿಟ್ಟಾದ ಶಿಸ್ತು ಅದುಮಿ ಹಾಕಿದ್ದ ಆಲೋ ಚನೆಗಳನ್ನೆಲ್ಲ ಬಿಡುಗಡೆಮಾಡಿದ್ದ ಮನೆಯವರ ಪ್ರೀತಿವಿಶ್ವಾಸಗಳ ಶಾಂತವಾತಾವರಣದಲ್ಲಿ ಮಿಂದು ಆಲ್ಬರ್ಟ್ ತೃಪ್ತನಾಗಿ ಮೌನ ದಿಂದಿದ್ದು ಬಿಟ್ಟನು.

ಹರ್ಮಾನ್ ಮತ್ತು ಪಾಲಿನ್ ಐನ್‌ಸ್ಟೈನ್ ಸರಳ ಬದುಕನ್ನು ಬಾಳುತ್ತಿದ್ದ ಶ್ರಮಜೀವಿಗಳು. ಗದ್ದಲದ ಗುಂಪು ಕಟ್ಟಿಕೊಂಡು ಮಿತ್ರರೊಂದಿಗಿದ್ದಾಗಲೂ ಈ ಮಿತಭಾಷಿ ಏಕಾಂತಪ್ರಿಯ ಆಲ್ಬ ರ್ಟನ ನಡವಳಿಕೆ ಅವರಿಗೆ ತಿಳಿಯದ ವಿಚಿತ್ರ ಸಮಸ್ಯೆಯಾಯಿತು. ಆಲ್ಬರ್ಟ್ ಬಿಚ್ಚುಮಾತಿನವನಾಗಿರಲಿಲ್ಲ; ತನ್ನ ಭಾವನೆಗಳನ್ನೆಂದೂ ವ್ಯಕ್ತಪಡಿಸಿದವನಲ್ಲ. ಆದರೂ ಅವನ ಮನಸ್ಸಿನಲ್ಲಾಗುತ್ತಿದ್ದ ತುಮುಲವನ್ನು ಅವನ ತಂದೆತಾಯಿಗಳು ಕಂಡುಕೊಂಡಿದ್ದರು.

"ಮ್ಯೂನಿಚ್‌ನಲ್ಲಿ ಕಳೆದ ಕೆಲವು ತಿಂಗಳುಗಳು ಅವನಿಗೆ ಬಹು ಪ್ರಯಾಸಕರವಾಗಿರಬೇಕು" ಎಂದನು ಹರ್ಮಾನ್ ನಿಡುಸುಯ್ಯುತ್ತ ತನ್ನ ಪತ್ನಿಗೆ.

"ಹುಡುಗ ಬಹಳ ಬಳಲಿಹೋಗಿದ್ದಾನೆ, ಹರ್ಮಾನ್. ಅಲ್ಲಿನ ಕಾರ್ಯ ಚಟುವಟಿಕೆಗಳು ಬಹಳವಾಗಿದ್ದುವೆಂದು ತೋರುತ್ತದೆ. ಸ್ವಲ್ಪ ದಿನ ಕಾದುನೋಡಿರಿ...ಈ ಉತ್ತಮ ಹವಾಗುಣ...ನನ್ನ ಉಪ ಚಾರ.... ಸ್ವಲ್ಪ ದಿನಗಳಲ್ಲೇ ಅವನು ದೃಢಕಾಯನಾಗುತ್ತಾನೆ."

ಹರ್ಮಾನ್ ನಿಧಾನವಾಗಿ ತಲೆದೂಗಿದನು. "ಹೌದು, ಅದೆಲ್ಲ ಸರಿ... ಆದರೆ ನೋಡು ಪಾಲಿನ್, ವ್ಯಾಪಾರ ಏಕೋ ಚೆನ್ನಾಗಿ ನಡೆಯುತ್ತಿಲ್ಲ. ಬೆಳೆದ ಹುಡುಗನನ್ನು ಸ್ವಸ್ಥವಾಗಿ ಸೋಮಾರಿಯಾಗಿ ಕಾಲ ಕಳೆಯುಬಿಡಲು ನಮ್ಮಲ್ಲಿ ಹಣವೆಲ್ಲಿದೆ? ನಾನೇನೂ ಅವನು ಈಗಲೇ ಸಂಪಾದಿಸಬೇಕೆಂದು ಹೇಳುತ್ತಿಲ್ಲ. ಆದರೆ ಅವನ ಭವಿಷ್ಯದ ಬಗೆಗೆ ಅವನು ಯೋಚಿಸಬೇಕು. ಅವನೇನು ಮಾಡುತ್ತಾನೆ? ಯಾವ ಉದ್ಯೋಗಕ್ಕೆ ಅವನು ಹೋಗಬಲ್ಲ? ಅವನು ಯಾವ ಕೆಲಸಕ್ಕೂ ಸರಿಹೋಗುವಂತೆ ಕಾಣುವುದಿಲ್ಲ. ನಮ್ಮ ಅಂಗಡಿಯಲ್ಲೂ ಅವನಿಗೆ ಆಸಕ್ತಿಯಿಲ್ಲ. ನಿಜವಾಗಿಯೂ ಹೇಳುವುದಾದರೆ, ಅವನಿಗೆ ಓದುವುದು, ಕನಸು ಕಾಣುವುದು–ಇವುಗಳನ್ನು ಬಿಟ್ಟರೆ ಮತ್ತಾವುದರಲ್ಲೂ ಆಸಕ್ತಿಯಿಲ್ಲದವನಂತೆ ಕಾಣುತ್ತಾನೆ."

"ಆದರೆ ಅವನು ಗಣಿತದಲ್ಲಿ ಬಹಳ ಬುದ್ಧಿವಂತ," ಪಾಲಿನ್ ಹೆದರುತ್ತಲೇ ಸೂಚಿಸಿದಳು, "ಅದು ಯಾವುದಾದರೊಂದು ರೀತಿಯಲ್ಲಿ ಉಪಯೋಗವಾಗುವುದಿಲ್ಲವೇ?"

"ಹೌದು, ನಿಜ. ಸಂಖ್ಯೆ, ಲೆಕ್ಕಗಳಲ್ಲಿ ಅವನು ಚುರುಕಾಗಿದ್ದಾನೆ. ಆದರೆ ಅವನು ಇಂಜನಿಯರ್ ಅಥವಾ ಮತ್ತಾವುದೇ ತಾಂತ್ರಿಕ ಕೆಲಸ ಮಾಡುವುದಕ್ಕೆ ಬರಿಯ ಲೆಕ್ಕದಲ್ಲಿನ ಚುರುಕುತನ ಸಾಲದು. ಇದನ್ನು ನಾವು ಅವನೊಡನೆ ನಿಸ್ಸಂಕೋಚದಿಂದ ವಿಚಾರ ಮಾಡಿ ಅವನ ಆಸಕ್ತಿ ಬೇರೆ ಯಾವುದಾದರೂ ಉಪಯುಕ್ತ ವಿಷಯದತ್ತ ಹೊರಳುವುದೇ ನೋಡೋಣ."

"ಹರ್ಮಾನ್, ನೀವು ಹೇಳುವುದು ನಿಜ". ಕಳವಳದ ಧ್ವನಿಯಿಂದ ಪಾಲಿನ್ ನುಡಿದಳು. "ಅವನು ತನ್ನ ಭವಿಷ್ಯದ ಬಗ್ಗೆ ಖಂಡಿತ ಯೋಚಿಸಬೇಕು. ಆದರೆ ಸದ್ಯಕ್ಕೆ ಸ್ವಲ್ಪಕಾಲ ಅವನು ವಿರಾಮ ಪಡೆಯಬಾರದೇ? ಅವನಿಗೆ ಸ್ವಲ್ಪಕಾಲ ವಿಶ್ರಾಂತಿ ಕೊಡೋಣ. ಅವನಿಗೆ ನೆಮ್ಮದಿಯಿಲ್ಲವಾಗಿದೆ ಮತ್ತು ಅವನ ಮನಸ್ಸು ಬಹಳ ಅಸ್ವಸ್ಥಗೊಂಡಿದೆ."

ಹೀಗೆ ಆಲ್ಬರ್ಟ್ ಸ್ವಲ್ಪ ದಿನಗಳ ಕಾಲ ಶಾಲೆಯನ್ನು ಮರೆಯು

ವಂತೆ ಮಾಡಲಾಯಿತು. ರಜೆ ಕಳೆದ ಬಳಿಕ ಹೊಸ ಚೈತನ್ಯದಿಂದ ತನ್ನ ಅಧ್ಯಯನಗಳಲ್ಲಿ ಹೆಚ್ಚಿನ ಆಸಕ್ತಿಯಿಂದ ಉದ್ಯುಕ್ತನಾಗುವ ನೆಂಬ ಭರವಸೆಯನ್ನು ಅವನ ತಂದೆತಾಯಿಗಳು ಹೊಂದಿದರು.

ತನ್ನ ಪಾಡಿಗೆ ತಾನು ಇರುವಂತಹ ಸನ್ನಿವೇಶವನ್ನು ಕಲ್ಪಿಸಿ ಕೊಟ್ಟುದಕ್ಕಾಗಿ ಆಲ್ಬರ್ಟ್ ತುಂಬ ಕೃತಜ್ಞನಾಗಿದ್ದನು. ಈ ಸಮಯದಲ್ಲಿ ಅವನ ಆಲೋಚನೆಗಳು ನೂತನ ಹಾಗೂ ವಿಶೇಷ ದಿಕ್ಕಿನಲ್ಲಿ ಸಾಗಿದ್ದುವು. ಆದರೆ ಒಂದು ಮಾತ್ರ ಖಚಿತವಾಗಿತ್ತು. ತಾನು ಪುನಃ ಜರ್ಮನಿಗೆ ಹೋಗುವವನಲ್ಲವೆಂದು ಅವನು ತಿಳಿದಿದ್ದನು. ಕೊನೆಯ ಪಕ್ಷಕ್ಕೆ ಅಲ್ಲಿ ಶಾಲೆಗೆ ಸೇರುವುದಂತೂ ಅಸಂಭವವಾಗಿತ್ತು. ಕೋಪೋದ್ರೇಕಗೊಂಡ ಪ್ರೊಫೆಸರರ ಕಿಡಿಗಣ್ಣಿನ ಮುಂದೆ ಕುಳಿತು ಬೇಸರ ತರುವ ಬೇಡದ ಇಸವಿಗಳನ್ನು ಉರು ಹಚ್ಚುವುದಾಗಲಿ, ಲ್ಯಾಟಿನ್ ಕ್ರಿಯಾಪದಗಳ ಅಭ್ಯಾಸವಾಗಲಿ ಅವನಿಂದ ಸಾಧ್ಯವಿರಲಿಲ್ಲ. ತನ್ನ ಭವಿಷ್ಯವೇನೆಂಬುದರ ಅರಿವು ಅವನಿಗಿರಲಿಲ್ಲ. ಆದರೆ ಈ ಶಾಂತ ವಾತಾವರಣದ ದಿನಗಳ ಸುಖಾನುಭವವನ್ನು ಸವಿಯಲು ಅವನು ನಿರ್ಧರಿಸಿದನು.

ಅವನಿಗೆ ಅತ್ಯಂತ ತೃಪ್ತಿ ತಂದ ಸಂಗತಿಯೆಂದರೆ ಓದಲು ಅವನಿಗಿದ್ದ ಸ್ವಾತಂತ್ರ್ಯ. ಬಹು ದಿನಗಳಿಂದಲೂ ಓದಬೇಕೆಂದಿದ್ದ ಗ್ರಂಥಗಳನ್ನು ಓದಲು ಕಾಲವೂ ಸ್ವಾತಂತ್ರ್ಯವೂ ಈಗ ದೊರಕಿತ್ತು. ಅವನು ಸಂತತ ಅಧ್ಯಯನದಲ್ಲಿ ತೊಡಗಿದನು. ಎಲ್ಲಿ ಹೋದರೂ ಅವನ ಕಂಕುಳಲ್ಲಿ ಪುಸ್ತಕವಿದ್ದೇ ಇರುತ್ತಿತ್ತು.

ಮಾಯಾಳ ಇಟಾಲಿಯನ್ ಸ್ನೇಹಿತರು ಆಲ್ಬರ್ಟನ ಗಂಭೀರ ಮುಖಮುದ್ರೆಯನ್ನೂ ಶಾಂತ ಸ್ವಭಾವವನ್ನೂ ಮೆಚ್ಚಿಕೊಂಡಿದ್ದರು. “ಆಲ್ಬರ್ಟೋ” ಎಂದು ಕರೆಯುತ್ತ ಅವನನ್ನು ತಮ್ಮ ಎಲ್ಲ ಸಣ್ಣ ಪುಟ್ಟ ಪ್ರವಾಸಗಳಿಗೂ ಆಹ್ವಾನಿಸುತ್ತಿದ್ದರು. ಆಲ್ಬರ್ಟ್ ಎಂದೂ ಚೆಲ್ಲಾಟವಾಡಿದವನಲ್ಲ, ಮುನ್ನುಗ್ಗಿ ಹೋಗುತ್ತಲೂ ಇರಲಿಲ್ಲ. ಚಿಕ್ಕ ತಮಾಷೆಗಳನ್ನೂ, ಆಟಕ್ಕಾಗಿ ಸಣ್ಣಪುಟ್ಟ ಸಮಸ್ಯೆಗಳನ್ನೂ ವಿಚಿತ್ರವಾಗಿಯೂ, ವಿಸ್ಮಯಕರವಾಗಿಯೂ ಹೇಳುತ್ತಿದ್ದುದು ಅವನ

ಒಂದು ಸ್ವಭಾವವಿಶೇಷವಾಗಿತ್ತು. ಅನೇಕ ಸಲ ಅವನು ಗಂಟೆ ಗಟ್ಟಲೆ ತಪ್ಪಿಸಿಕೊಂಡು ಹೋಗಿ ಯಾವುದಾದರೊಂದು ಕಲ್ಲು ಬಂಡೆಯ ಆಸರೆಯಲ್ಲೋ ಮರದ ನೆರಳಿನಲ್ಲಿಯೋ ಓದುತ್ತ ಕುಳಿತು ಬಿಡುತ್ತಿದ್ದನು.

ಗಾಳಿ ಸಂಚಾರವೆಂದರೆ ಅವನಿಗೆ ತುಂಬ ಆಸೆ. ಅಂತಹ ವೇಳೆ ಯಲ್ಲಿ ಅವನು ನಿಸರ್ಗಕ್ಕೆ ಬಲು ಸಮೀಪದಲ್ಲಿದ್ದು ಅದರ ಎಲ್ಲ ಸೂಕ್ಷ್ಮಗಳನ್ನೂ ಶ್ರದ್ಧೆಯಿಂದ ವೀಕ್ಷಿಸುತ್ತಿದ್ದನು. ಪುಟ್ಟ ಮೊಗ್ಗು, ಒಂದು ಚಿಕ್ಕ ಜಲಪಾತ, ಒಂದು ಬಂಡೆಯ ಸ್ವರೂಪ, ವರ್ಣರಂಜಿತ ಸೂರ್ಯಾಸ್ತ—ಇವುಗಳೆಲ್ಲ ಅವನ ಮನಸ್ಸನ್ನು ಸೆರೆ ಹಿಡಿಯು ತ್ತಿದ್ದುವು. ಗಾಳಿ ಬೀಸಿದಾಗ ಸರೋವರಗಳ ಮೇಲೋಡಾಡುವ ಅಡ್ಡಾದಿಡ್ಡಿ ಅಲೆಗಳ ರಚನೆಯಲ್ಲಿ ಅವನಿಗೆ ವಿಶೇಷ ಕುತೂಹಲ. ನಕ್ಷತ್ರಗಳನ್ನೂ ಚಂದ್ರನನ್ನೂ ನೋಡುತ್ತಾ ಅವುಗಳ ಆಚೆ ಏನಿರಬಹು ದೆಂದು ಹಾಗೆಯೇ ಅಚ್ಚರಿಯಿಂದ ಆಲೋಚಿಸುತ್ತಿದ್ದನು.

ಮಾನವ ನಿರ್ಮಿತ ವಿಚಿತ್ರಗಳಲ್ಲಿ ಕೂಡ ಅವನಿಗೆ ಆಸಕ್ತಿ. ಒಂದೇ ಸಲಕ್ಕೆ ಇಪ್ಪತ್ತು ಸಾವಿರ ಭಕ್ತರು ನೆರೆಯಬಹುದಾಗಿದ್ದ, ತಂಪಾಗಿಯೂ ಮತ್ತು ಎತ್ತರವಾಗಿಯೂ ಇದ್ದ ಒಳಭಾಗವನ್ನುಳ್ಳ ಮಿಲಾನ್ ಚರ್ಚ್‌ನಲ್ಲಿ ಅವನು ಅನೇಕ ಗಂಟೆಗಳನ್ನು ಕಳೆದಿದ್ದನು. ಕಠಿಣವಾದ ಅದರ ಶೃಂಗ ಶಿಲೆಗಳಲ್ಲಿ ಅಷ್ಟು ನಯವಾದ ಚಿತ್ರ ಕೆಲಸ ವನ್ನು ಹೇಗೆ ಮಾಡಿರಬಹುದೆಂದು ಅವನು ವಿಸ್ಮಯಪಡುತ್ತಿದ್ದನು.

ಮಿಲಾನಿನ ಸಂತ ಮೇರಿಯಾ ಚರ್ಚಿನ ಒಂದು ಗೋಡೆಯ ಮೇಲೆ ಲಿಯೊನಾರ್ಡೋ ದವಿಂಚಿ ರಚಿಸಿದ್ದ "ಅಂತ್ಯ ಭೋಜನ" ಎಂಬ ವರ್ಣಚಿತ್ರವನ್ನು ಅವನು ಪರಿಶೀಲಿಸುತ್ತಿದ್ದಾಗ "ಅಮ್ಮ, ಈ ಚಿತ್ರವೇನೋ ಬಹಳ ಸುಂದರವಾಗಿದೆ. ಆದರೆ ಬಣ್ಣ ಮಾತ್ರ ಮಾಸಿ ಹೋಗಿದೆ." ಎಂದನು ಆಲ್ಬರ್ಟ್.

"ಅದರಲ್ಲಿ ಆಶ್ಚರ್ಯವೇನಿಲ್ಲ. ಲಿಯೊನಾರ್ಡೋ ನಾಲ್ಕುನೂರು ವರ್ಷಗಳ ಹಿಂದೆ ಈ ಚಿತ್ರವನ್ನು ಬರೆದುದು! ನಾಲ್ನೂರು ವರ್ಷ ಗಳಲ್ಲಿ ಬಣ್ಣ ಸ್ವಲ್ಪ ಮಾಸಿ ಹೋಗುವುದು ತಪ್ಪೇನಲ್ಲವಲ್ಲ."

ಆಲ್ಬರ್ಟ್ ತಲೆಯಾಡಿಸುತ್ತಾ, "ಇದಕ್ಕೂ ಹಿಂದೆ ಬರೆದ ಅನೇಕ ಚಿತ್ರಗಳ ಬಣ್ಣ ಇನ್ನೂ ಸ್ವಚ್ಛವಾಗಿಯೂ ಪ್ರಕಾಶಮಾನ ವಾಗಿಯೂ ಇದೆ. ದವಿಂಚಿ ಪ್ರಯೋಗ ನಡೆಯಿಸುತ್ತಿದ್ದನು. ಹಿಂದಾರೂ ಉಪಯೋಗಿಸದ ಹೊಸಹೊಸ ಬಣ್ಣಗಳನ್ನು ಲಿಯೂ ನಾರ್ದೋ ಬಳಸುತ್ತಿದ್ದ. ಅವನೊಬ್ಬ ವಿಜ್ಞಾನಿ. ಅಮ್ಮ, ಅದು ವರೆಗೂ ತಿಳಿದುದಕ್ಕಿಂತ ಆಚೆ ಏನಿರುವುದೆಂದು ತಿಳಿಯಲು ಅವನು ಪ್ರಯತ್ನ ನಡೆಯಿಸುತ್ತಿದ್ದ" ಎಂದನು.

ಪಾಲಿನ್ ಭುಜ ಹಾರಿಸಿ, "ಜನರು ವಸ್ತುಗಳು ಹೇಗಿದೆಯೋ ಅಷ್ಟರಿಂದಲೇ ತೃಪ್ತರಾಗಬೇಕು, ಆಲ್ಬರ್ಟ್. ವಿಜ್ಞಾನವಂತೆ, ಅಬ್ಬಾ!" ಎಂದು ಉದ್ವೇಗದಿಂದಲೇ ತನ್ನ ಬಟ್ಟೆ ಸರಿಪಡಿಸಿಕೊಂಡಳು. "ಹಳೆಯ ನೈಜಮಾರ್ಗವನ್ನು ಭರವಸೆಯ ಮಾರ್ಗವನ್ನು ಬಿಟ್ಟು ಹೊಸ ವಸ್ತು ಗಳನ್ನು ಬಳಸಿ ಪ್ರಯೋಗವಂತೆ! ಅವನಿಗೇನಾದರೂ ಬುದ್ಧಿ ಇದ್ದಿದ್ದರೆ ಈ ಚಿತ್ರ ಇಂದಿಗೂ ಮೊದಲ ದಿನದಷ್ಟೇ ಪ್ರಕಾಶಮಾನವಾಗಿ ರುತ್ತಿತ್ತು."

ಆದರೆ ಆಲ್ಬರ್ಟ್ ಈ ವ್ಯಾಖ್ಯಾನಕ್ಕೆ ಕಿವಿಗೊಟ್ಟಿರಲಿಲ್ಲ. ಅವನ ಕಣ್ಣುಗಳಲ್ಲಾಗಲೇ ದೂರದ ಕನಸು ಕಾಣುವ ನೋಟ ಮೂಡಿತ್ತು. ಪಾಲಿನ್ ಮೆಲ್ಲನೆ ಮೆಟ್ಟಿಂಗಾಲಿಟ್ಟು ಕೊಠಡಿಯಿಂದ ಹೊರ ಹೋಗಲು ಪ್ರಯತ್ನಿಸುತ್ತಿದ್ದಾಗ ಆಲ್ಬರ್ಟ್ ಆಕೆಯನ್ನು ಕರೆದನು.

"ಅಮ್ಮ, ನಾನು ಈ ದೇಶವನ್ನು ನೋಡುವುದಕ್ಕೆ ಒಂದು ಚಿಕ್ಕ ಪ್ರವಾಸ ಹೋಗುತ್ತೇನೆ. ಇಲ್ಲಿ ಎಷ್ಟೋ ಆಶ್ಚರ್ಯಕರ, ಸುಂದರ ವಸ್ತು ವಿಷಯಗಳಿವೆ."

"ಪ್ರವಾಸವೇ? ನಿಜಕ್ಕೂ? ಅವುಗಳಿಗೆ ನಮ್ಮ ಬಳಿ ಹಣವೆಲ್ಲಿ ಬಂತು ಆಲ್ಬರ್ಟ್? ನಿಂಗೇ ಗೊತ್ತು ಅಪ್ಪನ ವ್ಯಾಪಾರ ಚೆನ್ನಾಗಿ ನಡೆ ಯುತ್ತಿಲ್ಲವೆನ್ನುವುದು. ಮತ್ತೇ......"

ಆಲ್ಬರ್ಟ್ ನಡುವೆ ಬಾಯಿ ಹಾಕಿ, "ಹೌದು, ಅದು ನನಗೆ ಗೊತ್ತು. ಆದರೆ ಅದಕ್ಕಾಗಿ ನನಗೇನೂ ಬೇಕಿಲ್ಲ. ನನ್ನ ಪಾಡಿಗೆ ನಾನು ಕಾಲ್ನಡಿಗೆಯಲ್ಲಿಯೇ ಹೋಗುತ್ತೇನೆ. ಮಾರ್ಗ ಮಧ್ಯ

ದಲ್ಲಿಯೇ ಮಲಗುವುದು. ಭೂಮಿಯೇ ಹಾಸಿಗೆ; ಆಕಾಶವೇ ಹೊದಿಕೆ."

ಮಾರನೆಯ ದಿನವೇ ಅವನು ದಕ್ಷಿಣ ದಿಕ್ಕಿಗೆ ಹೊರಟು ಜಿನೋವಾ ಮೂಲಕ ಸುಂದರ ಇಟಾಲಿಯನ್ ತೀರ ಪ್ರದೇಶಗಳನ್ನು ಹಾದು ಪೀಸಾ ತಲುಪಿದನು. ಇಟಲಿಯ ಒಳಭಾಗದ ಪರ್ವತ ಪ್ರದೇಶವನ್ನೆಲ್ಲ ಸುತ್ತಿ ಅಲ್ಲಿನ ಪ್ರಾಚೀನ ಗ್ರಾಮಪ್ರದೇಶಗಳ ಪರಿಚಯ ಪಡೆದನು. ಕಲಾದೇವತೆಯ ಆವಾಸಸ್ಥಾನವಾದ ಫ್ಲಾರೆನ್ಸ್ ನಗರವನ್ನು ಸಂದರ್ಶಿಸಿ ಅಮಿತಾನಂದ ಹೊಂದಿದನು. ಆ ಸುತ್ತಮುತ್ತಲ ಪರ್ವತ ಪ್ರದೇಶಗಳಲ್ಲಿ ನಿಂತು ಫ್ಲಾರೆನ್ಸ್ ನಗರದ ರೂಪಾವಲೋಕನ ನಡೆಯಿಸುತ್ತ ಗಂಟೆಗಟ್ಟಲೆ ಆಲೋಚನಾಮಗ್ನನಾಗುತ್ತಿದ್ದನು.

ಐನ್‌ಸ್ಟೈನನ ಜೀವನದಲ್ಲಿ ಈ ದಿನಗಳು ಅತ್ಯಂತ ಸುಖದಾಯಕವಾಗಿದ್ದುವು. ಮೈ-ಮನಗಳ ದಣಿವು ಕಳೆದು, ಅಷ್ಟು ಕಾಲ ನಿಸರ್ಗದ ನಲ್ಮೆಯಾಗಿ ಕಳೆದುದರಿಂದ ಕಂದು ವರ್ಣ ತಿರುಗಿ, ಅವನು ಮಿಲಾನಿಗೆ ಹಿಂತಿರುಗಿದನು.

ಆದರೆ ಮನೆಯಲ್ಲಿ ಅವನಿಗೆ ಒಳ್ಳೆಯ ಸುದ್ದಿಯೇನೂ ಕಾದಿರಲಿಲ್ಲ. ಮತ್ತೊಮ್ಮೆ ಅವನ ತಂದೆಯ ವ್ಯಾಪಾರ ಕುಸಿದುಬಿದ್ದಿತ್ತು. ಮನೆಯವರೆಲ್ಲ ಪೇವಿಯಾಗೆ ತೆರಳುವ ಸಿದ್ಧತೆಯಲ್ಲಿದ್ದರು.

೪ ಒಡೆದ ಕನಸು

ಐನ್‌ಸ್ಟೈನ್ ಸಂಸಾರ ತಲೆಕೆಳಗಾಯಿತು. ಪೇವಿಯಾದಲ್ಲಿ ಹೊಸ ಅಂಗಡಿಯನ್ನು ಹಾಕಬೇಕಿತ್ತು; ಹೊಸ ಸಂಸಾರವನ್ನು ಹೂಡಬೇಕಿತ್ತು. ಈ ಸಮಯದಲ್ಲಿ ವ್ಯಾಪಾರವನ್ನು ಉತ್ತಮಗೊಳಿಸಲು ನೆರವು ನೀಡಲಾರದ ಹದಿನಾರು ವರ್ಷದ ತರುಣನಿಗೆ ಅಲ್ಲಿ ಎಡೆಯಿರಲಿಲ್ಲ.

ಆಲ್ಬರ್ಟನ ದುರದೃಷ್ಟವೋ ಎನ್ನುವಂತೆ ಅವನ ಮುಂದಿನ ವ್ಯಾಸಂಗಕ್ಕೆ ಹಣವೇ ಇರಲಿಲ್ಲ. ಅವನ ತಂದೆತಾಯಿ ಅವನನ್ನು ಯಾವುದಾದರೊಂದು ವೃತ್ತಿಗೆ ಬೇಗ ಸೇರುವ ಉದ್ದೇಶವಿಟ್ಟುಕೊಂಡು ಕಾರ್ಯನಿರತನಾಗುವಂತೆ ಪ್ರೇರೇಪಿಸಿದರು. "ನಿನ್ನ ಪ್ರಯತ್ನಗಳನ್ನು ಕೇಂದ್ರೀಕರಿಸು......ವಾಸ್ತವವನ್ನು ತಿಳಿದುಕೋ...... ಯೋಚಿಸಿ ನೋಡು" ಎಂದಿದ್ದರು.

ಉದ್ದಕ್ಕೂ ಆಲ್ಬರ್ಟ್ ಯೋಚಿಸುತ್ತಲೇ ಬಂದಿದ್ದನು. ಇಟಲಿಯ ಸುಂದರ ಪರ್ವತ ಪ್ರದೇಶಗಳನ್ನು ಹಾದುಹೋಗುತ್ತಿದ್ದಾಗ, ಕಲಾವಸ್ತು ಸಂಗ್ರಹಾಲಯಗಳಲ್ಲಿ, ನೀಲಾಕಾಶ, ಸರೋವರಗಳನ್ನು ವೀಕ್ಷಿಸುತ್ತಿದ್ದಾಗ—ಎಲ್ಲ ಸಮಯದಲ್ಲೂ ಅವನು ಆಲೋಚನಾ ಮಗ್ನನಾಗಿಯೇ ಇರುತ್ತಿದ್ದನು. ಅವನ ಆಲೋಚನೆಗಳೆಲ್ಲವೂ ಅವನು ಎಂದೂ ಮಾಡಕೂಡದಾಗಿದ್ದ ವಿಷಯಗಳ ಬಗೆಗೆ ನಿರ್ಧಾರಕ್ಕೆ ಬರುವುದರಲ್ಲೆ ಆಗಿದ್ದುವು. ಶಾಲೆಯನ್ನು ಶಾಶ್ವತವಾಗಿ ಬಿಟ್ಟಾದರೂ ಬಿಟ್ಟೇನು, ತಾನು ಪುನಃ ಶಿಕ್ಷೆಗೆ ಹೆದರಿ ವ್ಯಾಸಂಗ ಮಾಡಬೇಕಾದಂಥ ಸ್ಥಳ ಸೇರುವುದಿಲ್ಲವೆಂದು ತೀರ್ಮಾನಿಸಿದನು. ಅವನ ಮಾತಿನಲ್ಲಿಯೇ ಹೇಳುವುದಾದರೆ ತನ್ನ ಸುತ್ತಲೂ ಕಂಡುಬರುತ್ತಿದ್ದ "ಬೇಟೆ"—ಹಣಕ್ಕಾಗಿ ಬೇಟೆ, ಕೀರ್ತಿಗಾಗಿ ಬೇಟೆ, ವೈಯಕ್ತಿಕ ಸುಖಕ್ಕಾಗಿ ಬೇಟೆ—

ಇಂಥ ಬೇಟೆಯ ಶಿಕಾರಿ ತಾನೆಂದೂ ಮಾಡುವುದಿಲ್ಲವೆಂಬ ನಿರ್ಧಾರ ತಳೆದನು. ಇವೆಲ್ಲ ಅವನಿಗೆ ಅರ್ಥಶೂನ್ಯವಾಗಿ ಕಂಡುಬರುತಿದ್ದುವು.

ಅವನು ತನಗೆ ಸಾಧ್ಯವೆಂದು ಆಲೋಚಿಸಿದ ಒಂದು ವೃತ್ತಿಯೆಂದರೆ ಉಪಾಧ್ಯಾಯನಾಗುವುದು. ತನಗೆ ಯಾವ ರೀತಿಯಲ್ಲಿ ಪಾಠ ಕೇಳುವ ಹಂಬಲವಿತ್ತೊ ಆ ಬಗೆಯಲ್ಲಿ ಬೋಧಿಸುವ ಆಶಯ ಅವನಿಗಿತ್ತು. ಮಾರ್ಗದರ್ಶಕನಾಗುತ್ತ, ಸಹಾಯ ಮಾಡುತ್ತ, ತಾಳ್ಮೆಯಿಂದಲೂ ಆಲೋಚನೆಗಳ ಆಧಾರದಿಂದಲೂ ಬೋಧಿಸಬೇಕೇ ವಿನಾ ಬಲವಂತದಿಂದಲೂ ಪುನರುಕ್ತಿಗಳಿಂದಲೂ ಪಾಠಪ್ರವಚನವನ್ನು ಬೋಧಿಸುವುದನ್ನು ಅವನು ಖಂಡಿಸಿದ್ದನು. ತನ್ನ ಆದರ್ಶದ ದಿಕ್ಕಿನಲ್ಲಿ ಕಾರ್ಯತತ್ಪರನಾಗುವುದು ತನಗೇ ಸಂತೋಷದಾಯಕವೆಂದು ಅವನು ಭಾವಿಸಿದನು. ಆದರೆ ಇದಕ್ಕಾಗಿ ವಿಶೇಷ ಯೋಗ್ಯತಾ ಪತ್ರಗಳ ಅವಶ್ಯಕತೆಯಿತ್ತು. ಅವುಗಳನ್ನು ಪಡೆಯುವಷ್ಟು ವಿದ್ಯಾ ವ್ಯಾಸಂಗವನ್ನು ಅವನು ನಡೆಯಿಸಿರಲಿಲ್ಲ. ವಾಸ್ತವವಾಗಿ ಅವನು ಈ ದಿಕ್ಕಿನಲ್ಲಾಗಲಿ ಬೇರೆ ವಿಷಯದಲ್ಲಾಗಲಿ ಸಾಕಷ್ಟು ಹಿನ್ನೆಲೆ ಹೊಂದಿರದೆ ಕೇವಲ ಸಾಮಾನ್ಯದರ್ಜೆಯ ಕೆಲಸಕ್ಕೆ ಮಾತ್ರ ಅರ್ಹನಾಗಿದ್ದನು. ಅಂತಹ ಕೆಲಸದಲ್ಲಿರಲು ಅವನೇನೋ ಸಿದ್ಧನಾಗಿದ್ದನು. ಆದರೆ ಒಂದು ನಿಬಂಧನೆಯ ಮೇಲೆ: ಅಲ್ಲಿ ವಿಜ್ಞಾನ ವಿಷಯಗಳನ್ನು ಕುರಿತು ಆಲೋಚಿಸಲು ಸಾಕಷ್ಟು ವೇಳೆ, ಸ್ವಾತಂತ್ರ್ಯ ಅವನಿಗೆ ಬೇಕಿತ್ತು.

ಆಲ್ಬರ್ಟನ ತಂದೆತಾಯಿಗಳು ಅವನನ್ನು ಚೆನ್ನಾಗಿ ಬಲ್ಲರು. ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಆದರೆ ಅವರ ಪ್ರೀತಿ ಅವರು ತಮ್ಮ ಮಗನಲ್ಲಿದ್ದ ಲೋಪದೋಷಗಳನ್ನು ಕಾಣದಷ್ಟು ಕುರುಡರನ್ನಾಗಿ ಮಾಡಿರಲಿಲ್ಲ. ಅನೇಕ ಹುದ್ದೆಗಳಿಗೆ ಸಾಮಾನ್ಯವಾಗಿದ್ದ ನಿತ್ಯದ ಬವಣೆಯನ್ನು ಆಲ್ಬರ್ಟ್ ಅನುಭವಿಸಲಾರನೆಂದು ಅವರು ತಿಳಿದಿದ್ದರು. ಅವರ ದೃಷ್ಟಿಯಲ್ಲಿ ಆಲ್ಬರ್ಟ್ ಕನಸಿನ ಲೋಕದಲ್ಲಿ ವಿಹರಿಸುವವನು, ನಿಯಮಗಳಿಗೆ ಬೆಲೆಯನ್ನು ಕೊಡದೆ ಯಾವ ಆಶೆಯೂ ಇಲ್ಲದೆ ವಾಸ್ತವವನ್ನೇ ಮರೆತು ಬಾಳುವಂತಹ ವ್ಯಕ್ತಿ, ಎಂದೆಲ್ಲ ಇತ್ತು.

ಕೊನೆಗೆ ಆಲ್ಬರ್ಟ್ ಯಾವುದಾದರೊಂದು ತಾಂತ್ರಿಕ ವಲಯದಲ್ಲಿ ವೃತ್ತಿಯ ಅನ್ವೇಷಣೆ ನಡೆಸಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಕಾರಣ ಆಲ್ಬರ್ಟನ ಗಣಿತಶಾಸ್ತ್ರದಲ್ಲಿನ ಆಭಿರುಚಿ ಮತ್ತು ಅವನ ತಂದೆಯುವರ ವಿದ್ಯುತ್ ವ್ಯಾಪಾರ. ಅವನಿಗೆ ಜಿಮ್ನೇಸಿಯಮ್‌ನ ಡಿಪ್ಲೋಮಾ ದೊರೆತಿರಲಿಲ್ಲ, ನಿಜ. ಆದರೆ ಅವನ ಅಸಾಧಾರಣ ಗಣಿತ ಜ್ಞಾನ ಅವನು ತಾಂತ್ರಿಕ ಕಾಲೇಜಿಗೆ ಸೇರಲು ನೆರವಾಗುವುದೆಂದು ಅವನ ತಂದೆತಾಯಿಗಳು ಭರವಸೆಯಿಂದಿದ್ದರು. ಈ ಕಾಲೇಜ್ ಜರ್ಮನಿ ಹೊರತು ಮತ್ತೆಲ್ಲಿದ್ದರೂ ಆಲ್ಬರ್ಟ್ ಓದಲು ಸಿದ್ಧನಿದ್ದನು. ಜೂರಿಚ್‌ನಲ್ಲಿದ್ದ ಸ್ವಿಸ್ ಫೆಡರಲ್ ಪಾಲಿಟೆಕ್ನಿಕ್ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಕ್ಕಾಗಿ ಪ್ರಯತ್ನಿಸುವುದು ಯುಕ್ತವೆಂದವರು ತೀರ್ಮಾನಿಸಿದರು.

ಸ್ವಿಟ್ಸರ್‌ಲೇಂಡಿನ ಅವರ ಧನಿಕ ಸಂಬಂಧಿಕರೊಡನೆ ಪೇವಿಯಾದಿಂದ ಪತ್ರವ್ಯವಹಾರ ನಡೆಯಿತು. ತಿಂಗಳಿಗೆ ನೂರು ಸ್ವಿಸ್ ಫ್ರಾಂಕ್‌ಗಳನ್ನು ಆಲ್ಬರ್ಟ್‌ಗೆ ಕಳುಹಿಸುವುದಾಗಿ ನೆಂಟರೊಬ್ಬರು ಒಪ್ಪಿದರು. ಅವರ ಈ ಔದಾರ್ಯ ಮುಂದೆ ಎಂತಹ ಮಹತ್ಕಾರ್ಯಕ್ಕೆ ಬುನಾದಿಯಾಗುವುದೆಂದು ಅವರಿಗೇ ತಿಳಿದಿರಲಿಲ್ಲ. ಕೇವಲ ಮನೆತನದ ಹೊಣೆಗಾರಿಕೆಯ ದೃಷ್ಟಿಯಿಂದ ಅವರು ನೆರವು ನೀಡಲು ಸಮ್ಮತಿಸಿದ್ದರು. ಸುಮಾರು ನೂರು ರೂಪಾಯಿಗಳಿಗೂ ಕಡಿಮೆಯಿದ್ದ ಈ ಮೊಬಲಗು ಆ ಕಾಲದಲ್ಲಿಯೂ ಅಲ್ಪವೇ ಆಗಿತ್ತು. ಆದರೆ ಮಿತವ್ಯಯದಿಂದ ಆಲ್ಬರ್ಟ್ ದಿನ ಕಳೆಯಲು ಈ ಹಣ ಸಾಕಿತ್ತು.

ಇನ್ನುಳಿದ ಸಮಸ್ಯೆಯೆಂದರೆ ಅವನ ಮುಂದೆ ನಿಂತಿದ್ದ ಪ್ರವೇಶ ಪರೀಕ್ಷೆ. ಜೂರಿಚ್‌ನಲ್ಲಿಯೇ ಆ ಪರೀಕ್ಷೆಗೆ ಕುಳಿತುಕೊಳ್ಳಬೇಕಿತ್ತು. ಒಂದು ದಿನ ಆಲ್ಬರ್ಟ್ ಸ್ವಿಟ್ಸರ್‌ಲೇಂಡಿನತ್ತ ಪ್ರಯಾಣ ಬೆಳಸಿದನು. ಇಟಲಿಯನ್ನು ಬಿಟ್ಟು ಹೋಗಲು ಅವನಿಗೆ ವ್ಯಸನವಾಗಿತ್ತಾದರೂ ಆಲ್ಪ್ಸ್ ಪರ್ವತ ಶ್ರೇಣಿಗಳ ಪರಿಸರವನ್ನು ನೋಡುವ ಹಂಬಲವೂ ಇತ್ತು. ಪ್ರವೇಶ ಪರೀಕ್ಷೆಯ ಬಗೆಗೆ ಅವನೇನೂ ಅಷ್ಟಾಗಿ ಮನಸ್ಸಿಗೆ ಹಚ್ಚಿಕೊಂಡಿರಲಿಲ್ಲ. ಅದನ್ನು ತನ್ನ ಗಣಿತ ಶಾಸ್ತ್ರಜ್ಞಾನ ನೋಡಿಕೊಳ್ಳುವುದೆಂಬ ನಂಬಿಕೆ ಅವನಿಗಿತ್ತು.

ಪರೀಕ್ಷೆಗಳಿಗೆ ಕೂಡುವುದೆಂದರೆ ಆಲ್ಬರ್ಟನಿಗೆ ಎಲ್ಲಿಲ್ಲದ ಕೋಪ. ಪ್ರಶ್ನೆಗಳು ಅವನ ಮನಸ್ಸನ್ನು ಅಲ್ಲೊಂದೆಡೆ ಇಲ್ಲೊಂದೆಡೆ ಕುಕ್ಕುತ್ತಿದ್ದುವು. ತಾನು ಏನು ತಿಳಿದಿರುವೆನೆಂಬುದನ್ನು ಕಂಡುಹಿಡಿಯುವ ಸಲುವಾಗಿ ಅನೇಕ ಸಂಖ್ಯೆ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು ಅವನಿಗೆ ಅಸಹನೀಯವಾಗಿತ್ತು. ಪ್ರಥಮ ಪರೀಕ್ಷೆಯ ವೇಳೆಗಾಗಲೇ ಅವನ ಮನಸ್ಸು ಕದಡಿ ಪ್ರಕ್ಷುಬ್ಧತೆ ಪಸರಿಸಿತ್ತು.

ಪ್ರವೇಶ ಪರೀಕ್ಷೆಗಳು ಮುಗಿಯಲು ಸ್ವಲ್ಪ ಕಾಲ ಹಿಡಿಯಿತು. ಜೀವಶಾಸ್ತ್ರ, ಪ್ರಾಣಿಶಾಸ್ತ್ರ ವ್ಯಾಸಂಗಕ್ಕಾಗಿ ಆಲ್ಬರ್ಟ್ ಪ್ರಯಾಸಪಟ್ಟನು. ಭಾಷೆಗಳೊಂದಿಗಂತೂ ಆತನೊಂದು ಕದನವನ್ನೇ ಹೂಡಿದನು. ಆತ ಹೆಚ್ಚುಹೆಚ್ಚು ಚಿಂತಾಕ್ರಾಂತನಾದನು.

ಗಣಿತ ಮತ್ತು ಭೌತಶಾಸ್ತ್ರದಲ್ಲಿನ ಪರೀಕ್ಷೆಗಳು ಮಾತ್ರ ಅವನಿಗೆ ನೆಮ್ಮದಿ ತಂದುವು. ಭರವಸೆಯಿಂದಲೂ ಆನಂದದಿಂದಲೂ ಅವುಗಳನ್ನು ಮುಗಿಸಿದನು. ಅದಾದ ಬಳಿಕ ಬೇರಾವುದೂ ಇಲ್ಲದಿದ್ದುದರಿಂದ ಫಲಿತಾಂಶಕ್ಕಾಗಿ ಕಾಯುವುದೇ ಅವನ ಕೆಲಸವಾಯಿತು.

ಅವನು ಬಹಳ ದಿನವೇನೂ ಕಾಯಬೇಕಾಗಲಿಲ್ಲ. ಡೈರೆಕ್ಟರ್ ಹರ್ಟ್ಸಾಗ್‌ರವರು ಅಲ್ಬರ್ಟನನ್ನು ಕಾಣುವಂತೆ ಹೇಳಿ ಕಳುಹಿಸಿದರು. ತನ್ನ ಭವಿಷ್ಯವೇನೆಂಬುದನ್ನು ಊಹಿಸಲು ಧೈರ್ಯಸಾಲದೆ ಆಲ್ಬರ್ಟ್ ಅವರ ಕೋಣೆ ಹೊಕ್ಕನು.

ಡೈರೆಕ್ಟರರು ಯಾವ ವಿಳಂಬವೂ ಇಲ್ಲದೆ ನೇರವಾಗಿ ವಿಷಯವನ್ನು ಸೂಚಿಸಿದರು: "ಐನ್‌ಸ್ಟೈನ್, ನಿನ್ನನ್ನು ಈ ಶಾಲೆಗೆ ಸೇರಿಸುವುದು ಸಾಧ್ಯವಿಲ್ಲವೆಂದು ಪರೀಕ್ಷೆಗಳಿಂದ ತಿಳಿದು ಬಂದಿದೆ." ಅವರು ಸ್ವಲ್ಪ ವೇಗದಿಂದಲೇ ನುಡಿದಿದ್ದರು.

ಆಲ್ಬರ್ಟ್ ಸ್ತಂಭೀಭೂತನಾಗಿ ನಿಂತುಬಿಟ್ಟನು. ಅವನ ಮುಖದಲ್ಲಿ ಯಾವ ಉದ್ವೇಗವೂ ಕಾಣಬರಲಿಲ್ಲ; ಕಣ್ಣುಗಳು ನಿಸ್ತೇಜವಾಗಿದ್ದುವು. ಅವನು ಆಲೋಚಿಸುತ್ತಿದ್ದನು: ಮತ್ತೆ ಮತ್ತೆ ಹೀಗಾಗುತ್ತಿದೆ! ನಾನು ತಿಳಿಯಬೇಕೆನ್ನುವ ಸಂಗತಿಗಳಿಗೋಗಿ ಇಲ್ಲಿ ವ್ಯಾಸಂಗಕ್ಕೆ ಬರಲು ಅವಕಾಶವಿಲ್ಲ........ ನನ್ನನ್ನು ಹೊರದೂಡುತ್ತಿರುವುದಾ

ವುದು?......ಈ ಕ್ರಿಯಾಪದ, ನಾಮಪದ. ಈ ವ್ಯಾಕರಣವೇ ನನ್ನನ್ನು ಹೊರದೂಡುತ್ತಿರುವುದು. ದೊಡ್ಡ ಕೋತಿಯ ಅಸ್ಥಿಪಂಜರ ಸ್ವರೂಪ, ಅನಂತ ಕ್ರಾಂತಿಗಳ ಕೊನೆಯಿಲ್ಲದ ಇಸವಿಗಳು—ಇವೇ ಅದಕ್ಕೆ ಕಾರಣ. ಇವೇ ನನ್ನ ಪ್ರಗತಿಗೆ ಅಡ್ಡಿಬಂದಿರುವ ಅಡ್ಡ ಗೋಡೆಗಳು......

ಆಲ್ಬರ್ಟನ ದೀರ್ಘ ಮೌನವನ್ನು ಕಂಡು ಅವನಿಗೆಲ್ಲೋ ಆಸಕ್ತಿಯಿಲ್ಲವೆಂದು ಡೈರೆಕ್ಟರರು ತಿಳಿದರು. ಇದರಿಂದ ಅವರು ಕುಪಿತರಾಗಿ, "ವಾಸ್ತವವಾಗಿ ಹೇಳುವುದಾದರೆ, ನಿನ್ನ ಫಲಿತಾಂಶ ಬಹಳ ಕೆಳದರ್ಜೆಯದಾಗಿದೆ. ಇದಕ್ಕೆ ನೀನು ಪ್ರಯತ್ನಿಸಿದುದೇ ದಿಟ್ಟತನ" ಎಂದು ಸ್ವಲ್ಪ ಎತ್ತರದ ಧ್ವನಿಯಲ್ಲಿ ಗಡುಸಾಗಿಯೇ ಅಂದರು.

"ಮನ್ನಿಸಬೇಕು, ಡೈರೆಕ್ಟರ್" ಮೆಲುದ್ವನಿಯಲ್ಲಿ ಆಲ್ಬರ್ಟ್ ನುಡಿದನು. ಕ್ಷಣಕಾಲ ಮೌನದಿಂದಿದ್ದು, "ನಿಮ್ಮ ಸಹನೆಗೆ ನನ್ನ ವಂದನೆಗಳು" ಎಂದು ಹಿಂದಿರುಗಿ ಬಾಗಿಲತ್ತ ನಿಧಾನವಾಗಿ ತೆರಳಿದನು.

"ಒಂದು ನಿಮಿಷ ತಾಳು!" ಈ ಹುಡುಗನ ನಡೆವಳಿಕೆಯ ಯಾವುದೋ ಒಂದು ಗುಣಕ್ಕೆ ಡೈರೆಕ್ಟರರು ಮಾರುಹೋಗಿದ್ದರು. ಅವನ ಸರಳ ಗಾಂಭೀರ್ಯ ಮನೋಮೋಹಕವಾಗಿತ್ತು. "ಒಂದು ವಿಷಯ ಹೇಳಬೇಕೆಂದಿದ್ದೇನೆ, ಕೇಳು. ಗಣಿತ ಮತ್ತು ಭೌತಶಾಸ್ತ್ರದಲ್ಲಿನ ನಿನ್ನ ಪರೀಕ್ಷೆಗಳು ಅತ್ಯುತ್ತಮ ದರ್ಜೆಯ ಫಲಿತಾಂಶ ತಂದಿವೆ. ಇದರ ಬಲದ ಮೇಲೆ ನಾವು ನಿನ್ನನ್ನು ವಿದ್ಯಾರ್ಥಿಯಾಗಿ ಆಯ್ಕೆ ಮಾಡಿಕೊಳ್ಳುವೆವು. ಆದರೆ ಈ ತೇರ್ಗಡೆ ಹೊಂದದ ವಿಷಯಗಳಲ್ಲಿಯೂ ಕೂಡ ನೀನು ತೇರ್ಗಡೆ ಹೊಂದಿಬರಬೇಕು. ನೀನು ಪುನಃ ಕೆಳಗಿನ ಶಾಲೆಗೆ ಸೇರುವುದುತ್ತಮವೆಂದು ನಾನು ಸೂಚಿಸುತ್ತೇನೆ."

ಆಲ್ಬರ್ಟ್ ಬೇಸರದಿಂದ ತಲೆದೂಗಿದನು. "ಆಗಲಿ ಸರ್, ಬಹಳ ವಂದನೆಗಳು ಸರ್".

ಆಲ್ಬರ್ಟ್ ಬಾಗಿಲಿನತ್ತ ತೆರಳುತ್ತಿದ್ದಂತೆಯೇ ಡೈರೆಕ್ಟರರು ತಿರುಗಿ ಅವನನ್ನು ಕೂಗಿ ಹೇಳಿದರು. "ಅರೌ ಶಾಲೆಯಲ್ಲಿ ಪ್ರಯತ್ನ ಮಾಡು. ಪುನಃ ಹಿಂದಿನ ಶಾಲೆಗೆ ಸೇರು. "

ಪುನಃ ಹಿಂದಿನ ಶಾಲೆಗೆ ಸೇರು! ಮತ್ತೆ ಆ ಜಿಮ್ನೇಸಿಯಮ್‌ನ ಜೈಲುವಾಸ, ಆ ಬೇಸರದ ತರಗತಿಗಳು! ಅಹಂಕಾರಿ ಉಪಾಧ್ಯಾಯರ ಆಟೋಪದ ನುಡಿಗಳತ್ತ ಮತ್ತೆ!

ಅದನ್ನು ತಾನು ಮಾಡುವುದಿಲ್ಲವೆಂದು ಆಲ್ಬರ್ಟ್ ಮನಸ್ಸಿನಲ್ಲಿಯೇ ಅಂದುಕೊಂಡನು. ಈಗ ಅವನು ಸ್ವತಂತ್ರ. ಪುನ: ಅವನು ಜೈಲುವಾಸ ಸದೃಶವಾದ ಶಾಲೆಗೆ ಸೇರಲಾರ. ಆದರೆ ಅವನು ಆಯ್ಕೆ ಮಾಡಲು ಉಳಿದುದಾದರೂ ಏನು? ತಾನು ಬದುಕನ್ನು ಹೂಡುವವರೆಗೂ ಅವನು ಮನೆಗೆ ಹೋಗುವಂತಿರಲಿಲ್ಲ. ಸ್ವಿಟ್ಸರ್‌ಲೇಂಡಿನಲ್ಲಿ ಹುದ್ದೆ ಪಡೆಯುವುದಾದರೂ ಹೇಗೆ? ಅವನು ಆ ದೇಶದ ಪ್ರಜೆಯಾಗಿರಲಿಲ್ಲ. ಯಾವ ಉಪಯುಕ್ತ ಕೆಲಸ ಮಾಡಲೂ ಅವನು ಅರ್ಹತೆ ಪಡೆದಿರಲಿಲ್ಲ.

ಈ ವಿಚಾರಗಳ ಕದನ ಭೂಮಿಯಾಗಿತ್ತು ಅವನ ಮನಸ್ಸು. ಕೊನೆಗೆ ಅವನಿಗುಳಿದಿದ್ದ ಒಂದೇ ಒಂದು ಮಾರ್ಗವನ್ನು ಅವನು ಒಪ್ಪಬೇಕಾಯಿತು. ಅನಿವಾರ್ಯವಾದದ್ದಕ್ಕೆ ಅವನು ತಲೆಬಗ್ಗಿಸಲೇಬೇಕಾಯಿತು. ಮನಸ್ಸಿಲ್ಲದ ಮನಸ್ಸಿನಿಂದ ಜೂರಿಚ್‌ನಿಂದ ಮೂವತ್ತೈದು ಮೈಲಿ ದೂರದಲ್ಲಿದ್ದ ಆರೌಗೆ ಪ್ರಯಾಣ ಬೆಳಸಿ ಅಲ್ಲಿನ ಜಿಮ್ನೇಸಿಯಮನ್ನು ಸೇರಿದನು.

ಅವನ ಈ ನಿರ್ಧಾರ ಒಳ್ಳೆಯದೇ ಆಯಿತು. ಶಾಲಾ ವ್ಯಾಸಂಗ ಸಂತೋಷಕರವೂ ಆಗಿರಬಹುದೆಂಬುದನ್ನು ಅವನು ಮೊದಲ ಬಾರಿಗೆ ಅಚ್ಚರಿಯಿಂದ ಕಂಡುಕೊಂಡನು. ಆರೌನಲ್ಲಿ ಬೇಸರವಿರಲಿಲ್ಲ. ಹಾಡಿದ್ದೇ ಹಾಡುವ ಹವ್ಯಾಸವಿರಲಿಲ್ಲ. ತರಗತಿಯಲ್ಲಿ ವಿಷಯಗಳನ್ನು ಕುರಿತು ಚರ್ಚೆ ನಡೆಸಲಾಗುತ್ತಿತ್ತು. ವಿಚಾರ ವಿವಾದಗಳೂ ನಡೆಯುತ್ತಿದ್ದುವು. ಒಂದೇ ವಿಷಯಕ್ಕೆ ಹಲವು ಉಪಾಧ್ಯಾಯರಿರುತ್ತಿದ್ದರಲ್ಲದೆ ಅವರೆಲ್ಲರೂ ವಿದ್ಯಾರ್ಥಿಗಳಿಗೆ ಪ್ರಶ್ನೆ ಕೇಳಲು ಪ್ರೋತ್ಸಾಹ ನೀಡುತ್ತಿದ್ದರು. ವಿದ್ಯಾರ್ಥಿಗಳಿಗೆ ವಿಜ್ಞಾನ ವಿಭಾಗದ ಎಲ್ಲ ವಿಷಯಗಳಲ್ಲೂ ಸುಸಜ್ಜಿತವಾದ ಪ್ರಯೋಗಾಲಯಗಳನ್ನು ಬಳಸುವ ಅನುಕೂಲವೊದಗಿಸಲಾಗಿತ್ತು. ಆಲ್ಬರ್ಟ್ ತಾನು ಕಡೆಗಣಿಸಿದ್ದ ವಿಷ

ಯುಗಳಲ್ಲಿ ಕೂಡ ಪುನಃ ಆಸಕ್ತನಾಗುವಂತಾಯಿತು. ಸ್ವಲ್ಪದರಲ್ಲಿಯೇ ಅವನು ತೇರ್ಗಡೆಯಾಗದಿದ್ದ ವಿಷಯುಗಳಲ್ಲಿ ಉತ್ತಮ ಜ್ಞಾನ ಸಂಪಾದಿಸಿಕೊಳ್ಳಲು ಸಾಧ್ಯವೆಂದು ಅರಿತನು.

ಶ್ರದ್ಧಾಸಕ್ತಿಗಳಿಂದ ಶ್ರಮವಹಿಸಿ ಅಧ್ಯಯನ ಮಾಡುತ್ತಿದ್ದ ಈ ಮೌನಿ ತರುಣನಲ್ಲಿ ಉಪಾಧ್ಯಾಯರಲ್ಲೊಬ್ಬರಾದ ಪ್ರೊಫೆಸರ್ ವಿಂಟಲರ್‌ರವರು ಆಸಕ್ತಿ ತಳೆದಿದ್ದರು. ಒಂದು ದಿನ ಅವರು, "ಆಲ್ಬರ್ಟ್, ಈ ರಾತ್ರಿ ನಮ್ಮ ಮನೆಗೆ ಭೋಜನಕ್ಕೆ ಬಂದುಬಿಡು" ಎಂದು ಆಹ್ವಾನಿಸಿದರು. "ಒಂದು ಸಂಜೆಯಾದರೂ ಸಂಸಾರ ಜೀವನದಲ್ಲಿ ಬೆರೆಯುವುದರಿಂದ ನಿನಗೆ ಒಳ್ಳೆಯದು." ಹಾಗೆಂದು ನಗುತ್ತ ಹೇಳಿದರು, "ನನಗೆ ಸುಮಾರು ಸಂಸಾರವೇ ಇದೆ—ಏಳು ಜನ ಮಕ್ಕಳು!"

ಸ್ವಭಾವದಂತೆ ಆಲ್ಬರ್ಟ್ ನಾಚಿ ಆಹ್ವಾನವನ್ನು ನಿರಾಕರಿಸುವ ಪ್ರಯತ್ನ ಮಾಡಿದನಾದರೂ ಪ್ರೊಫೆಸರ್ ವಿಂಟಲರ್‌ರವರು ಬಲವಂತಪಡಿಸಿ ಸಂಜೆಯ ತರಗತಿಗಳ ಬಳಿಕ ಇಬ್ಬರೂ ಒಟ್ಟಿಗೇ ನಡೆದು ಹೋಗುವಂತೆ ಏರ್ಪಾಟು ಮಾಡಿದರು.

ಆ ಸಂಜೆಯ ಅನುಭವ ಅತಿ ಮಧುರವಾಗಿತ್ತು. ಸದಾ ಹರ್ಷಚಿತ್ತರಾಗಿರುತ್ತಿದ್ದ ವಿಂಟಲರರು ತಮ್ಮ ವಿಶಾಲವಾದ ಮನೆಯ ಒಂದು ಕೊಠಡಿಯನ್ನು ಆಲ್ಬರ್ಟ್‌ಗೆ ಕೊಟ್ಟು ಅವನು ಅಲ್ಲಿಯೇ ಬಂದಿರುವಂತೆ ಒತ್ತಾಯ ಪಡಿಸಿದರು. ಅತಿ ಸ್ವಲ್ಪಕಾಲದಲ್ಲಿಯೇ ಆಲ್ಬರ್ಟ್ ಆ ಸಂಸಾರದೊಂದಿಗೆ ಬೆರತು ಹೋದನು. ಗಂಭೀರ ಪ್ರವೃತ್ತಿಯ ಆಲ್ಬರ್ಟನನ್ನು ಅವರು ತಪ್ಪೆಣಿಸಲಿಲ್ಲ. ಅವನ ನಾಚಿಕೆಯ ಸ್ವಭಾವವನ್ನು ಸಂಘದ್ವೇಷವೆಂದು ತಿಳಿಯಲಿಲ್ಲ. ಏಕಾಂತವಾಸದಲ್ಲಿರಬೇಕೆಂಬ ಅವನ ಅಭಿಲಾಷೆಯನ್ನು ಅವರೆಲ್ಲ ಗೌರವಿಸುತ್ತಿದ್ದರು.

ಅವರ ಮನೆಯ ಹುಡುಗ ಹುಡುಗಿಯರು ಹೊರಸಂಚಾರಕ್ಕೋ ಪ್ರವಾಸಕ್ಕೋ ಹೋದಾಗ ಆಲ್ಬರ್ಟ್ ಕೂಡ ಕೆಲವೊಮ್ಮೆ ಅವರನ್ನು ಸೇರುತ್ತಿದ್ದನು. ಅದರೆ ಅದೆಲ್ಲಕ್ಕಿಂತ ಅವನಿಗೆ ಹೆಚ್ಚು ತೃಪ್ತಿಕರವಾಗಿರುತ್ತಿದ್ದುದು ಅವನ ಏಕಾಂತ ವಿಹಾರ. ತನ್ನ ಮನ

ಸ್ಸನ್ನು ಆಗಲೇ ತುಂಬಿ ಕಾಡುತ್ತಿದ್ದ ವಿಜ್ಞಾನ ವಿಷಯ ಸಮಸ್ಯೆಗಳ ಬಗೆಗೆ ಅವನು ಚಿಂತನ–ಮಂಥನ ನಡಸುತ್ತಿದ್ದುದು ಈ ಒಂಟಿ ವಿಹಾರಗಳಲ್ಲೇ. ಈ ಅಡ್ಡಾಟವೇ ಅವನ ಏಕೈಕ ವ್ಯಾಯಾಮವೂ ಅಗಿತ್ತು. ನಾಚಿಕೆ, ಸಂಕೋಚ ಸ್ವಭಾವದ ಅಲ್ಬರ್ಟ್ ಮೊದಲಿನಿಂದಲೂ ಯಾವ ಕ್ರೀಡೆಗಳಿಗೂ ಸೇರುತ್ತಿರಲಿಲ್ಲ. ಈಗಲಂತೂ ಅವನು ಆರೌ ಪರಿಸರದಲ್ಲಿ ಅಡ್ಡಾಡುವುದರ ಹೊರತಾಗಿ ಮಿಕ್ಕೆಲ್ಲ ರೀತಿಯ ವ್ಯಾಯಾಮಗಳನ್ನು ತ್ಯಜಿಸಿದ್ದನು. ಅವನದು ನಿಶ್ಶಬ್ದವಾದ ಮೆಲು ನಡೆಗೆಯಾದರೂ ಅದರಲ್ಲಿ ಶಕ್ತಿ ಮತ್ತು ಸ್ಥಿರತೆ ಎದ್ದು ಕಾಣುತ್ತಿದ್ದುವು.

ಆಲ್ಬರ್ಟ್ ತನ್ನ ಪಿಟೀಲನ್ನು ಆರೌಗೂ ತಂದಿದ್ದನು. ಚಿಕ್ಕವನಾಗಿದ್ದಾಗ ಸಂಗೀತ ಕಲಿಯಲು ಪ್ರಾರಂಭಿಸಿದ್ದರೂ. ಅವನು ಅಷ್ಟೇನೂ ಚೆನ್ನಾಗಿ ನುಡಿಸುವುದನ್ನು ಕಲಿತಿರಲಿಲ್ಲ. ಆ ಸರಳೆಗಳ ಅಭ್ಯಾಸ, ಹಾಡಿದ್ದನ್ನೇ ಹಾಡುವಿಕೆ, ಅವನಿಗೆ ಸಹಿಸಲಸಾಧ್ಯವಾಗಿತ್ತು. ಆದರೆ ವಿಂಟಲರರ ಮನೆಯಲ್ಲೂ "ಸಂಗೀತ ಸಂಜೆ"ಗಳು ಏರ್ಪಾಟಾಗಿರುತ್ತಿದ್ದುವು. ಗೆಳೆಯರೆಲ್ಲ ಕಲೆತು ಅಂದು ಸಂಗೀತ ಗೋಷ್ಠಿಯನ್ನೇ ನಡೆಯಿಸುತ್ತಿದ್ದರು. ಅವನಿಗೆ ಮೊಟ್ಸಾರ್ಟ್‌ರ ಸರಳ ಸಂಗೀತ ಕೃತಿಗಳ ಮಧುರ ಮೇಳ ಲಾಲಿತ್ಯದ ಅರಿವಾದುದು ಈ ಸಂದರ್ಭದಲ್ಲೇ. ಅವನೂ ಈ ಕಲಾ ವಿಲಾಸಿ ಗೋಷ್ಠಿಗಳೊಡನೆ ಸೇರಿ ತನ್ನ ಸರಳ ವಾದ್ಯಕೃತಿಗಳನ್ನು ಸುಬದ್ಧಗೊಳಿಸಲು ಯತ್ನಿಸಿದನು. ತನ್ನ ಏಕಾಂತ ವಿಹಾರಗಳಲ್ಲಿ ಯಾವ ಸುಖಾನುಭವವನ್ನು ಪಡೆಯುತ್ತಿದ್ದನೋ ಅದನ್ನೇ ಅವನು ಪಿಟೀಲು ನುಡಿಸುವುದರಲ್ಲಿಯೂ ಅನುಭವಿಸುತ್ತಿದ್ದನು. ಅವನ ಜೀವಿತ ಕಾಲದುದ್ದಕ್ಕೂ ಈ ಎರಡು ಚಟುವಟಿಕೆಗಳೇ ಅವನ ವಿರಾಮಕಾಲದ ನೈಜ ಮನೋರಂಜನೆಗಳಾದುವು.

ವಿಂಟಲರರ ಸಂಸಾರದೊಡನೆ ಆಲ್ಬರ್ಟ್ ಐನ್‌ಸ್ಟೈನ್ ನಿಕಟ ಗೆಳೆತನ ಬೆಳೆಸಿದನು. ಕೆಲವು ವರ್ಷಗಳನಂತರ ಆಲ್ಬರ್ಟ್‌ನ ಸೋದರಿ ಮಾಯಾ ವಿಂಟಲರರ ಪುತ್ರನೊಬ್ಬನನ್ನು ವಿವಾಹವಾದಾಗ ಅದು ಅನಿರೀಕ್ಷಿತವೆಂದೇನೂ ಅನಿಸಲಿಲ್ಲ.

೫. ವಿಶ್ವವಿದ್ಯಾನಿಲಯದ ದಿನಗಳು

ಒಂದು ವರ್ಷಕ್ಕೂ ಕಡಿಮೆ ಕಾಲದಲ್ಲಿ ಆಲ್ಬರ್ಟ್ ಡಿಪ್ಲೊಮ ಪಡೆದು ಜೂರಿಚ್‌ನ ಪಾಲಿಟೆಕ್ನಿಕ್ ವಿಶ್ವವಿದ್ಯಾನಿಲಯವನ್ನು ಸೇರಲು ಸಿದ್ಧನಾದನು. ವಿಂಟೆಲರರು ಸಂಸಾರಸಮೇತರಾಗಿ ಬಂದು ತಮ್ಮ ಸನ್ಮಿತ್ರನನ್ನು ಬೀಳ್ಕೊಡಲು ಬಂದರು. ಈ ಅಗಲಿಕೆಯಿಂದ ಸಂಕೋಚದ ಸ್ವಭಾವದ ಆಲ್ಬರ್ಟನಿಗೆ ಮನಃಕ್ಲೇಶವುಂಟಾಗಬಹುದೆಂದು ಅವನೊಡನೆ ನಿಲ್ದಾಣದಲ್ಲಿ ಬಂದು ಹಾಸ್ಯ ವಿನೋದಗಳನ್ನೂ, ತಮಾಷೆಯನ್ನೂ ಮಾಡುತ್ತಿದ್ದರು.

"ಮತ್ತೆ ಸಂಧಿಸೋಣ, ಆಲ್ಬರ್ಟ್!" ವಿಂಟೆಲರ್ ಅವನ ಕೈಕುಲುಕಿ, ಬೆನ್ನು ತಟ್ಟಿ ಪ್ರೀತಿಯಿಂದ ಆಲಿಂಗಿಸಿದರು. "ಮತ್ತೊಂದು ಭೇಟಿಗೆ ಪುನಃ ಬಂದುಬಿಡು.... ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ....." ರೈಲು ನಿಧಾನವಾಗಿ ನಿಲ್ದಾಣವನ್ನು ಬಿಡತೊಡಗಿದಾಗ ಅವರೆಲ್ಲ ಗಡಿಬಿಡಿಯಿಂದ ವಂದನೆ, ನಮಸ್ಕಾರ, ಶುಭಾಶಯಗಳ ವಿನಿಮಯ ನಡೆಸಿದರು.

ಆಲ್ಬರ್ಟ್ ಕಿಟಿಕಿಯಾಚೆ ಬಾಗಿನಿಂತನು. ನಗುತ್ತಾ ಬೀಳ್ಕೊಡುಗೆಯ ಸಂಕೇತವಾಗಿ ಕೈಬೀಸಿದನು. "ಪುನಃ ಮಿಲನವಾಗೋಣ!"

ಇಟೆಲಿಯಿಂದ ಆರೌಗೆ ಅವನು ನೆಚ್ಚಿಕೆಯನ್ನಿಟ್ಟುಕೊಂಡೇನೂ ಬಂದಿರಲಿಲ್ಲ. ಆತಂಕದ ಭಾವನೆಯಿಂದಲೇ ಬಂದಿದ್ದನು. ಆದರೆ ಅವನೀಗ ಉತ್ಸಾಹ ಹಾಗು ಉಲ್ಲಾಸಕರ ಮನಃಸ್ಥಿತಿಯಲ್ಲಿ ಹಿಂದಿರುಗುತ್ತಿದ್ದನು. ಆರೌನಲ್ಲಿ ತಂಗಿದ್ದ ಕಾಲದಲ್ಲಿ ಒಂದು ಡಿಪ್ಲೊಮಾಗಿಂತ ಹೆಚ್ಚಿನದನ್ನೇ ಆತ ಗಳಿಸಿದ್ದನು. ಅವನ ವಿಶೇಷ ಕುಶಲತೆ ಯಾವ ದಿಕ್ಕಿನಲ್ಲಿರುವುದೆಂಬುದನ್ನು ಕಂಡುಕೊಳ್ಳುವ ಅವಕಾಶವನ್ನು ಅದು ದೊರಕಿಸಿ ಕೊಟ್ಟಿತು.

ಆರೌನಲ್ಲಿದ್ದ ಕೊನೆಯ ಕೆಲವು ತಿಂಗಳುಗಳಲ್ಲಿ ಅವನು ತನ್ನ ಸಮಯವನ್ನು ಭೌತಶಾಸ್ತ್ರದ ಪ್ರಯೋಗಾಲಯದಲ್ಲೇ ಕಳೆದಿದ್ದನು. ಆಗ ವಿಖ್ಯಾತ ಭೌತ ಶಾಸ್ತ್ರಜ್ಞರ ಎಲ್ಲ ವೈಜ್ಞಾನಿಕ ಶೋಧಗಳನ್ನೂ ಅವನು ಅಧ್ಯಯನ ಮಾಡಿದ್ದನು. ಕಟ್ಟುನಿಟ್ಟು ನಿಯಮಗಳಿಗೆ ತಲೆ ಬಾಗಿ ಕಲಿಯುವುದನ್ನು ಆಲ್ಬರ್ಟ್ ದ್ವೇಷಿಸುತ್ತಿದ್ದುದರಿಂದಾಗಿ, ಜ್ಞಾಪಕ ಶಕ್ತಿಯಿಂದ ಸೂತ್ರಗಳನ್ನು ಕಂಠಪಾಠಮಾಡಬೇಕಾಗಿದ್ದ ಗಣಿತ ಶಾಸ್ತ್ರವನ್ನು ಅಷ್ಟಾಗಿ ಮನಸ್ಸಿಗೆ ಹಾಕಿಕೊಳ್ಳದೆ ಅವನು ಹೊಸ ವಿಷಯಗಳತ್ತ ತನ್ನ ಗಮನ ಹರಿಸಿದನು. ನೂತನ ಸಂಗತಿಗಳನ್ನು ತಿಳಿಯುವ, ಶೋಧಗಳಲ್ಲಿ ತೊಡಗುವ ಕಾತರತೆಯಿಂದ ಅವನ ಮನಸ್ಸು ಮುನ್ನುಗ್ಗುತ್ತಿತ್ತು. ನಿಸರ್ಗದ ನಿಗೂಢ ಸಮಸ್ಯೆಗಳಿಗೆ ಉತ್ತರ ಹುಡುಕುವುದರಲ್ಲಿ ಅವನು ಆಸಕ್ತನಾದನು. ಆದುದರಿಂದ ತನ್ನ ಜೀವನದ ಪ್ರಧಾನ ಆಸಕ್ತಿ ಭೌತಶಾಸ್ತ್ರದಲ್ಲಿರಬೇಕೆಂದು ಅವನು ಅರಿತನು.

ಗಣಿತದ ಸ್ಥಿರ ಆಧಾರದ ಮೇಲೆಯೇ ಭೌತಶಾಸ್ತ್ರಸೌಧವನ್ನು ನಿರ್ಮಿಸಲು ಸಾಧ್ಯ. ಮುಂದೆ ಐನ್‌ಸ್ಟೈನರು ಜಗತ್ತಿನ ಎಲ್ಲ ಕಾಲದ ಮಹಾ ವಿಜ್ಞಾನಿಗಳಲ್ಲಿ ಅಗ್ರಗಣ್ಯರೆಂದು ಪರಿಗಣಿತರಾದಾಗಲೂ ಅವರು ತಮ್ಮ ಭೌತಶಾಸ್ತ್ರದ ಸಮಸ್ಯೆಗಳ ಪರಿಹಾರದಲ್ಲಿ ತೊಡಗಿದ್ದಾಗ ಗಣಿತ ಶಾಸ್ತ್ರದಲ್ಲಿ ನಿಷ್ಣಾತರಾದವರಿಂದ ಜಟಿಲ ಲೆಕ್ಕಗಳನ್ನು ಮಾಡಿಸಿಕೊಂಡು ನೆರವು ಪಡೆಯುತ್ತಿದ್ದರು.

ಜೂರಿಚ್‌ನ ಪಾಲಿಟೆಕ್ನಿಕ್ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶವನ್ನು ಕೇಳಬಂದ ಐನ್‌ಸ್ಟೈನನನ್ನು ನೋಡಿ ಅವನು ಮುಂದೆ ಮಹಾ ವಿಜ್ಞಾನಿಯಾಗುವನೆಂದು ಪ್ರಾಯಶಃ ಯಾರಿಗೂ ಊಹಿಸಲು ಸಾಧ್ಯವಿರಲಿಲ್ಲ. ಅಲ್ಲಿನ ಡೈರಕ್ಟರುಗಳಿಗೆ ಅವನೊಬ್ಬ ಕೆದರಿದ ಕಪ್ಪು ತಲೆಗೂದಲಿನ, ಗಂಭೀರ ದೃಷ್ಟಿಯ, ಗುಂಡು ಭುಜಗಳುಳ್ಳ ಅಷ್ಟು ಚೆನ್ನಾಗಿ ಉಡುಪು ಧರಿಸದ ತರುಣನಾಗಿ ಕಂಡಿದ್ದನು. ಆತನ ಮಿತ ಸಂಭಾಷಣೆ ಮತ್ತು ಯಾರೊಡನೆಯೂ ಕಲೆಯದಿರುವ ಸ್ವಭಾವ ಅತನು ಏನೂ ತಿಳಿಯದವನೆಂಬ ಅಭಿಪ್ರಾಯವನ್ನು ತಿಳಿಸುತ್ತಿತ್ತು.

ಆದರೆ ಅವನ ಪ್ರವೇಶ ಸಂಬಂಧ ಪತ್ರಗಳೆಲ್ಲವೂ ಸರಿಯಾಗಿದ್ದುದರಿಂದ ಪಾಲಿಟೆಕ್ನಿಕ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿ ಅವನನ್ನು ಸೇರಿಸಿಕೊಳ್ಳಲಾಯಿತು. ಆಗ ಅವನಿಗಿನ್ನೂ ಹದಿನೇಳು ವರ್ಷ ಮಾತ್ರವಾಗಿತ್ತು.

ತಿಂಗಳಿಗೆ ನೂರು ಸ್ವಿಸ್ ಫ್ರಾಂಕ್‌ಗಳು ಹೆಚ್ಚೇನೂ ಆಗಿರಲಿಲ್ಲ. ಆಲ್ಬರ್ಟ್‌ಗೆ ಅದು ತಿಂಗಳಿಗೆ ಕೇವಲ ಎಂಭತ್ತು ಫ್ರಾಂಕ್‌ಗಳಾಗಿದ್ದುವು. ಏಕೆಂದರೆ ಹಣ ಬಂದ ಕೂಡಲೇ ಅವನು ಇಪ್ಪತು ಫ್ರಾಂಕ್‌ಗಳನ್ನು ಒತ್ತಟ್ಟಿಗಿಟ್ಟು ಬಿಡುತ್ತಿದ್ದನು. ಸ್ವದೇಶವಾದ ಜರ್ಮನಿಗಿಂತ ಸ್ವಿಟ್ಜರ್ಲೆಂಡಿನ ಜನತೆ ಅವನಿಗೆ ಹೆಚ್ಚು ಸ್ನೇಹಪರರಾಗಿ ಕಂಡದ್ದರಿಂದ ತಾನು ಆದಷ್ಟು ಬೇಗನೆ ಸ್ವಿಟ್ಜರ್ಲೆಂಡಿನ ಪ್ರಜೆಯಾಗಬೇಕೆಂದು ಆಶಿಸಿ ಅದಕ್ಕಾಗಿ ಅವನು ಹಣ ಕೂಡಿಡುತ್ತಿದ್ದನು.

ಜೂರಿಚ್ ವಿಶ್ವವಿದ್ಯಾನಿಲಯದ ಬಳಿಯ ಹಾಟಿನ್‌ಜೆನ್‌ನಲ್ಲಿ ಅತಿ ಕಡಮೆ ಬಾಡಿಗೆಯ ಒಂದು ಚಿಕ್ಕ ಕೊಠಡಿಯನ್ನು ಅವನು ತೆಗೆದುಕೊಂಡನು. ಉಳಿದ ಹಣದಲ್ಲಿ ಬಹುಪಾಲು ಎರಡನೆಯ ದರ್ಜೆಯ ಉಪಾಹಾರಗೃಹಗಳಲ್ಲಿಯೇ ಊಟಮಾಡುತ್ತ ಮಿತವ್ಯಯದ ಜೀವನ ನಡೆಸುತ್ತಿದ್ದನು. ಊಟ ಅವನಿಗೆ ಪ್ರಧಾನವಾಗಿರಲಿಲ್ಲ. ಅಲ್ಪಾಹಾರ ಸೇವನೆಯಿಂದ, ಕೆಲವು ಸಲ ಉಪವಾಸದಿಂದಲೇ, ಅವನು ದಿನ ಕಳೆಯುತ್ತಿದ್ದನು. ಅವನು ತನ್ನ ಓಡಾಟಕ್ಕೆಂದು ಒಂದು ಕಾಸೂ ಖರ್ಚು ಮಾಡಿದವನಲ್ಲ. ಏಕೆಂದರೆ ಎಲ್ಲ ಕಡೆಗೂ ಅವನು ನಡೆದುಕೊಂಡೇ ಹೋಗುತ್ತಿದ್ದನು. ಉಡುಪಿನ ಬಗೆಗಿದ್ದ ಅವನ ಮನೋಭಾವ ಆ ದಿಕ್ಕಿನಲ್ಲಿನ ಖರ್ಚನ್ನೂ ಕಡಮೆ ಮಾಡಿತ್ತು. ತನ್ನ ರೂಪ, ಅಲಂಕಾರಗಳಲ್ಲಿ ಅವನೆಂದೂ ಆಸಕ್ತಿ ತೋರಿದವನಲ್ಲ; ಉಳಿದವರಿಗೂ ಅದರಿಂದಾಗಬೇಕಾದುದೇನೂ ಇಲ್ಲವೆಂದು ಅವನು ನಂಬಿದ್ದನು.

ಜೂರಿಚ್ ಒಂದು ಹೆಸರುವಾಸಿಯಾದ ಶಿಕ್ಷಣ ಕೇಂದ್ರ. ಜಗತ್ತಿನ ವಿವಿಧ ಮೂಲೆಗಳಿಂದಲೂ ಜ್ಞಾನಾರ್ಜನೆಗಾಗಿ ವಿದ್ಯಾರ್ಥಿಗಳು ಬರುತ್ತಿದ್ದರು. ಇಂತಹ ವಾತಾವರಣದಲ್ಲಿ ಐನ್‌ಸ್ಟೈನ್ ತನ್ನಿಚ್ಛೆಯಿ

ದ್ದಂತೆ ಆಲೋಚನಾಪರನಾಗಬಹುದಿತ್ತು; ಶೋಧಗಳ ಬಗೆಗೆ ಚಿಂತಿಸಬಹುದಿತ್ತು. ತನ್ನಂತೆಯೇ ಉದ್ದೇಶ ಗುರಿಗಳನ್ನುಳ್ಳವರೊಡನೆ ಅವನು ಸಮಾಲೋಚನೆ ನಡೆಸಬಹುದಿತ್ತು. ಎಲ್ಲ ಉಪನ್ಯಾಸಗಳನ್ನೂ ಕೇಳುವುದಕ್ಕೆ ಅವನೇನೂ ಹೋಗುತ್ತಿರಲಿಲ್ಲ. ತನಗೆ ಅವಶ್ಯವೆಂದು ತಿಳಿದು ಬಂದ ಉಪನ್ಯಾಸಗಳನ್ನು ಮಾತ್ರ ಕೇಳಲು ಹೋಗುತ್ತಿದ್ದನು. ಅನಾವಶ್ಯಕ ಉಪನ್ಯಾಸಗಳಲ್ಲಿ ಅವನಿಗೆ ಅನಾಸಕ್ತಿ. ಅವನು ತನ್ನ ಬಹುಮಟ್ಟಿನ ವೇಳೆಯನ್ನು ಭೌತಶಾಸ್ತ್ರ ಪ್ರಯೋಗಾಲಯದಲ್ಲಿ ಕಳೆಯುತ್ತಿದ್ದನು. ಇಲ್ಲವೇ ಯಾವುದಾದರೂ ಅಧ್ಯಯನದಲ್ಲಿ ತೊಡಗಿರುತ್ತಿದ್ದನು.

ಜೂರಿಚ್‌ನ ಸಾಮಾಜಿಕ ಜೀವನದಲ್ಲಿ ಐನ್‌ಸ್ಟೈನ್ ಯಾವ ಪಾತ್ರವನ್ನೂ ವಹಿಸಲಿಲ್ಲ. ಗೆಳೆತನ ಮಾಡಿಕೊಳ್ಳುವುದರಲ್ಲಾಗಲೀ, ಮಿತ್ರರ ಮನೆಗೆ ಭೇಟಿ ಕೊಡುವುದರಲ್ಲಾಗಲೀ ಅವನು ಆಸ್ಥೆ ವಹಿಸಿರಲಿಲ್ಲ. ಗಂಭೀರವಂತರೂ ಆಲೋಚನಾಪರರೂ ಆದವರೊಡನೆ ಮಾತ್ರ ಅವನು ಪರಿಚಯ ಹೊಂದುತ್ತಿದ್ದನು. ಅಂತಹವರಿಗೆ ಐನ್‌ಸ್ಟೈನ್‌ನಲ್ಲೂ ಅಭಿಮಾನ; ಉಳಿದವರಿಗೆ ಅವನಲ್ಲಿ ಅಸಡ್ಡೆ. ಅವನ ಗಂಭೀರ ವ್ಯಕ್ತಿತ್ವ ಜನರನ್ನು ಆಕರ್ಷಿಸುವಂಥದ್ದಾಗಿರಲಿಲ್ಲ. ಆತನು ಮಾಡಬೇಕಾಗಿದ್ದ ಕೆಲಸವೂ ಮತ್ತು ಆತನ ಆಲೋಚನೆಗಳೂ ಬೇಕಾದಷ್ಟಿದ್ದುದರಿಂದ ತನ್ನ ಕಾರ್ಯದ ಹೊರತಾಗಿ ಬೇರಾವುದಕ್ಕೂ ಗಮನಕೊಡಲು ಆತನಿಗೆ ಸಾಧ್ಯವಿರಲಿಲ್ಲ.

ಆತನ ಜೀವನದಲ್ಲಿ ಸಂಗೀತ ಮಾತ್ರ ತನ್ನ ಏಕೈಕ ಸ್ಥಾನವನ್ನು ಉಳಿಸಿಕೊಂಡಿತ್ತು. ಆಗಾಗ್ಗೆ ಊಟಕ್ಕೆ ತಪ್ಪಿಸಿಕೊಂಡು ಹಾಗೆ ಉಳಿಸಿದ ಹಣದಿಂದ ಸಂಗೀತಮೇಳಗಳಿಗೆ ಅವನು ಹೋಗುತ್ತಿದ್ದನು. ಅವನ ಪಿಟೀಲು ಅವನಿಗೆ ಆಹ್ಲಾದವನ್ನುಂಟುಮಾಡುತಿತ್ತು. ಅದು ಆತನ ಭಾವನೆಗಳ ಹೊರೆಯನ್ನಿಳಿಸಿಕೊಳ್ಳುವುದಕ್ಕೂ ಸಹಾಯಕವಾಗಿತ್ತು.

ಪಾಲಿಟೆಕ್ನಿಕ್‌ನಲ್ಲಿದ್ದವರಾರೂ ತಮ್ಮ ನಡುವೆ ಒಬ್ಬ ಅಪ್ರತಿಮ ಪ್ರತಿಭೆಯ ವ್ಯಕ್ತಿಯಿರುವನೆಂದು ತಿಳಿದಿರಲಿಲ್ಲ. ಕೆಲವರಿಗೆ ಅವನು

ಅತಿ ಒಳ್ಳೆಯವನಾಗಿ ತೋರಿದ್ದನು. ಗಣಿತಶಾಸ್ತ್ರದ ಮೇಲೆ ಪ್ರೌಢ ಉಪನ್ಯಾಸಗಳನ್ನು ನೀಡುತ್ತಿದ್ದ ಪ್ರೊಫೆಸರ್ ಮಿಂಕೋವ್‌ಸ್ಕಿಯವರು ಐನ್‌ಸ್ಟೈನ್‌ನನ್ನು ತಮ್ಮ ತರಗತಿಗೆ ಬರುವಂತೆ ಬಲವಂತಪಡಿಸುತ್ತಿದ್ದರು. ಆದರೆ ಐನ್‌ಸ್ಟೈನ್‌ನಿಗೆ ಯಾಕೋ ಆ ವಿಷಯದಲ್ಲಿ ಆಸಕ್ತಿ ಕೆರಳಿರಲಿಲ್ಲ. ಮುಂದೆ ಈ ಪ್ರಾಧ್ಯಾಪಕರೇ ಐನ್‌ಸ್ಟೈನ್‌ನ ಕೆಲವು ಬಹುಮುಖ್ಯ ಗಣಿತಶಾಸ್ತ್ರ ಸಂಬಂಧ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ನೆರವಾದರು.

ಸಹಪಾಠಿಯಾಗಿದ್ದ ಮಾರ್ಸೆಲ್ ಗ್ರಾಸ್‌ಮಾನ್ ಎಂಬಾತನೂ ಸಹ ಐನ್‌ಸ್ಟೈನನಿಗೆ ಅನಿರೀಕ್ಷಿತ ನೆರವು ನೀಡಿದನು. ಒಂದು ದಿನ ಈ ತರುಣರಿಬ್ಬರೂ ಪುಸ್ತಕ ಮತ್ತು ಪತ್ರಗಳಿಂದ ಆವೃತವಾಗಿದ್ದ ಮಾರ್ಸೆಲ್‌ರ ಕೊಠಡಿಯಲ್ಲಿ ಕುಳಿತು ವಿಜ್ಞಾನ ವಿಷಯಗಳ ಬಗೆಗೆ ವಿಚಾರವಿನಿಮಯ ನಡೆಸುತ್ತಿದ್ದರು. ಆ ದಿನ ಆಲ್ಬರ್ಟ್ ನಿತ್ಯದಂತಿರದೆ ಅತಿ ಮೌನವಾಗಿ ಯಾವ ವಿಷಯದ ಬಗೆಗೂ ತನ್ನ ಭಾವನೆಗಳನ್ನು ತಿಳಿಸದೆ ಕುಳಿತುಬಿಟ್ಟಿದ್ದನು.

ಏಕಮುಖವಾಗಿ ನಡೆಯುತ್ತಿದ್ದ ತಮ್ಮ ಸಂಭಾಷಣೆ ವ್ಯರ್ಥವೆಂದು ಮಾರ್ಸೆಲ್ ಅರಿತನು. ಅಷ್ಟಕ್ಕೇ ಸುಮ್ಮನಿರದೆ ಆತ ಐನ್‌ಸ್ಟೈನನನ್ನು ಪ್ರಶ್ನಿಸಿದನು: "ನಿನಗೆ ಈ ದಿನ ಯಾವುದರಲ್ಲೂ ಆಸಕ್ತಿಯೇ ಇಲ್ಲ. ಮತ್ತೊಂದು ದಿನ ಮುಂದುವರಿಸೋಣ"

ಆಲ್ಬರ್ಟ್ ಮೌನದಿಂದಲೇ ತಲೆದೂಗಿದ.

ಮಾರ್ಸೆಲ್‌ಗೆ ಇದು ವಿಚಿತ್ರವೆನಿಸಿತು. ಪ್ರಾಯಶಃ ಆಲ್ಬರ್ಟ್‌ನ ಆರೋಗ್ಯ ಕೆಟ್ಟಿರಬೇಕೆಂದು ತಿಳಿದು, "ಐನ್‌ಸ್ಟೈನ್, ನಡೆ ಹೋಗೋಣ. ಹತ್ತಿರದ ಹೊಟೇಲಿನಲ್ಲಿ ಕಾಫಿ ಸೇವಿಸಿ ಬರೋಣ ಬಾ" ಎಂದು ಆಹ್ವಾನಿಸಿದನು, ಈಚೆಗೆ ಆಲ್ಬರ್ಟ್ ಊಟ ಮಾಡಿರಲಾರನೆಂಬ ಸಂಶಯದ ಭಾವನೆ ಅವನದಾಗಿತ್ತು.

ಹೊಟೇಲಿನಲ್ಲಿ ಅವರು ಕೇವಲ ಕಾಫಿ ಮಾತ್ರವಲ್ಲದೆ ಪುಷ್ಕಳವಾಗಿ ತಿಂಡಿ ತಿಂದರು. ಐನ್‌ಸ್ಟೈನ್ ಅನ್ಯಮನಸ್ಕನಾಗಿಯೇ ತಿಂಡಿ ಕಾಫಿಯನ್ನು ಮುಗಿಸುತ್ತಿದ್ದನು. ಏನಾದರೂ ಮಾತನಾಡಬೇ

ಕೆಂದು ಮಾರ್ಸಲ್, "ಸರಿಯೇ, ಮುಂದಿನ ವಾರದಿಂದ ನಾವು ಪರೀಕ್ಷೆಯನ್ನು ಎದುರಿಸಬೇಕಾಗಿದೆ" ಎಂನು ಲೋಕಾಭಿರಾಮವಾಗಿ ಅಂದನು.

ಆಲ್ಬರ್ಟ್ ಚಕಿತನಾದವನಂತೆ ಕತ್ತೆತ್ತಿ ನೋಡಿದನು. ಅವನ ಕಣ್ಣುಗಳಲ್ಲಿ ಹೊಳಪು ಮಿಂಚಿತು; "ಹೌದು, ಪರೀಕ್ಷೆ. ನನಗೆ ಅದನ್ನು ನೆನಸಿಕೊಂಡರೆ ಮೈ ಉರಿಯುತ್ತೆ. ಎಂತಹ ವಿಚಿತ್ರ ವ್ಯಾಪಾರ ಈ ಪರೀಕ್ಷೆಗಳದು. ಮನಸ್ಸಿನ ಆಲೋಚನೆಗಳೆಲ್ಲವನ್ನೂ ಕಸದಿಂದ ತುಂಬುವಂತೆ ಸಂಗತಿಗಳನ್ನು ಉರುಹೊಡೆದು ಮಿದುಳಿಗೆ ತುಂಬುವುದು! ಪರೀಕ್ಷೆಯೆಂಬ ಕೂರಲಗು ನೇತಾಡುತ್ತಿದೆ. ಅದು ನನ್ನ ಮೇಲೆ ಬಿದ್ದು ನನಗೂ ಪಾಲಿಟೆಕ್ನಿಕ್‌ಗೂ ಸಂಬಂಧವನ್ನು ಕಡಿದು ಹಾಕುತ್ತದೆ."

ಮಾರ್ಸಲ್ ಅಚ್ಚರಿಗೊಂಡನು. ಸಾಮಾನ್ಯವಾಗಿ ಮಿತಭಾಷಿಯೂ ಸಂಯಮಿಯೂ ಆಗಿದ್ದ ಐನ್‌ಸ್ಟೈನನ ಎಂತಹ ಉದ್ವೇಗ ಪೂರ್ಣ ಭಾಷಣ! ಮಾರ್ಸಲ್ ಯೋಚನಾಪರನಾದನು.

ಕೊನೆಗೆ ಅವನೆಂದ: "ಆಲ್ಬರ್ಟ್, ಎಲ್ಲ ಮುಗಿದ ಮೇಲೆ ನನ್ನ ಕೊಠಡಿಗೆ ಬಾ. ನಿನಗೆ ಏನನ್ನೋ ತೋರಿಸಬೇಕೆಂದಿದ್ದೇನೆ."

ಪುನಃ ಅವರು ಮಹಡಿ ಸೇರಿದ ಮೇಲೆ ಮಾರ್ಸಲ್ ಐನ್‌ಸ್ಟೈನನನ್ನು ಕುಳಿತುಕೊಳ್ಳುವಂತೆ ಹೇಳಿದನು. ಅವನ ಮುಂದೆ ಒಂದರ ಮೇಲೊಂದು ಪುಸ್ತಕಗಳನ್ನು ಪೇರಿಸಿದನು. ಅವೆಲ್ಲವೂ ಐನ್‌ಸ್ಟೈನ್ ಹೋಗದೆ ಇದ್ದ ಉಪನ್ಯಾಸಗಳ ಟಿಪ್ಪಣಿಗಳ ಸಂಗ್ರಹವಾಗಿತ್ತು. ಆಲ್ಬರ್ಟ್‌ಗೆ ನಿಧಿಯೇ ಸಿಕ್ಕಂತಾಯಿತು.

ಆಲ್ಬರ್ಟ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದನು. ಅವನು ಪಾಲಿಟೆಕ್ನಿಕ್‌ನಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿಯೂ ಮಾರ್ಸಲನ ಈ ಮುದ್ದಾದ ನೋಟ್ಸ್‌ಗಳು ಐನ್‌ಸ್ಟೈನನ ನೆರವಿಗೆ ಬಂದುವು. ಅವನಿಗಿಷ್ಟವಿಲ್ಲದ ಉಪನ್ಯಾಸಗಳನ್ನು ಕೇಳದಿರಲು ಈ ಪುಸ್ತಕಗಳು ಸಹಾಯಕವಾಗಿದ್ದುವು. ಅವನು ತನಗಿಷ್ಟವಿಲ್ಲದಿದ್ದ ಕೆಲಸವನ್ನು ತಪ್ಪಿಸಿಕೊಳ್ಳುವುದಕ್ಕೆ ಮಾತ್ರ ಹಾಗೆ ಮಾಡುತ್ತಿರಲಿಲ್ಲ. ಈ ವೇಳೆ

ಗಾಗಲೇ ಅವನು ತನ್ನ ಪ್ರಧಾನ ಕಾರ್ಯದತ್ತ ಸಾಗಿದ್ದನು; ಬೇರಾವುದೂ ಅವನ ಮನಸ್ಸನ್ನು ಸೆಳೆಯುವುದು ಸಾಧ್ಯವಾಗಿರಲಿಲ್ಲ.

ಆಲ್ಬರ್ಟನ ತರಗತಿಯೊಂದರಲ್ಲಿ ಸರ್ಬಿಯಾದಿಂದ ವಿಜ್ಞಾನ ಕಲಿಯಲು ಬಂದ ತರುಣಿಯೊಬ್ಬಳಿದ್ದಳು. ಆಲ್ಬರ್ಟನ ಭುಜದಷ್ಟು ಎತ್ತರಕ್ಕೂ ಇರದ, ಕಪ್ಪು ಕೇಶರಾಶಿಯ, ದುಂಡು ಮುಖದ ಈ ಕುಳ್ಳು ಹುಡುಗಿ ಸ್ವಲ್ಪ ಸ್ಥೂಲಕಾಯಳಾಗಿಯೇ ಇದ್ದಳು. ಅಪರೂಪದ ನಗು, ಗ್ಲಾನಿ ನೇತ್ರಗಳು ಅವಳ ಪ್ರಧಾನ ಲಕ್ಷಣಗಳು. ಆಕೆಯ ಹೆಸರು ಮಿಲೇವಾ ಮ್ಯಾರಿಟ್ಚ್. ಆಗಾಗ್ಗೆ ಸಮಾಲೋಚನೆಗಳಿಗಾಗಿ ಸಮಾವೇಶಗೊಳ್ಳುತ್ತಿದ್ದ ಆಲ್ಬರ್ಟನ ಗೆಳೆಯರ ಗುಂಪಿನಲ್ಲಿ ಆಕೆಯೂ ಒಬ್ಬಳಾದಳು. ತಾನೇನೂ ಹೇಳದಿದ್ದರೂ ಹೇಳುತ್ತಿದ್ದವರನ್ನು ಕುತೂಹಲದಿಂದ ಕೇಳುತ್ತಿದ್ದ ಆಕೆಯ ಗುಣ ಆಲ್ಬರ್ಟನನ್ನಾಕರ್ಷಿಸಿತ್ತು. ಆಕೆ ಆಲ್ಬರ್ಟನ ವ್ಯಕ್ತ ಆಲೋಚನೆಗಳನ್ನು ಪ್ರತಿಧ್ವನಿಗೈಯುತ್ತಿದ್ದಳು. ಕಪೋಲಗಳನ್ನು ತನ್ನ ಕೈಗಳಲ್ಲಿಟ್ಟು ಆಲ್ಬರ್ಟನ ಮಾತುಗಳನ್ನೇ ಕೇಳುತ್ತಾ, ನೋಡುತ್ತಾ ಕುಳಿತುಬಿಡುತ್ತಿದ್ದಳು. ಆಗೊಮ್ಮೆ ಈಗೊಮ್ಮೆ ಪ್ರಶ್ನೆ ಹಾಕಿ ಸ್ಫೂರ್ತಿಯನ್ನು ತುಂಬುತ್ತಿದ್ದಳು.

ಪಾಲಿಟೆಕ್ನಿಕ್‌ನ ಮೂರನೆಯ ವರ್ಷಕ್ಕೆ ಬಂದಾಗ ಆಲ್ಬರ್ಟ್ ಮತ್ತು ಮಿಲೇವಾ ತಾವು ವಿವಾಹವಾಗುವುದಾಗಿ ತಿಳಿಸಿದರು. ಆ ಮದುವೆ ಪಾಲಿಟೆಕ್ನಿಕ್‌ನಲ್ಲಿನ ವ್ಯಾಸಂಗಾನಂತರ ನಡೆಯುವುದೆಂದು ಅವರು ತಮ್ಮೊಳಗೇ ನಿರ್ಧರಿಸಿಕೊಂಡರು.

೬. ಹೊಟ್ಟೆಗಾಗಿ ಹುದ್ದೆಯ ಬೇಟೆ

ಹತ್ತೊಂಭತ್ತನೆಯ ಶತಮಾನ ಮುಗಿದು ಇಪ್ಪತ್ತನೆಯ ಶತಮಾನ ಆರಂಭವಾಗಿತ್ತು. ಈ ವೇಳೆಗೆ ಇಪ್ಪತ್ತೊಂದು ವರ್ಷ ವಯಸ್ಸಿನ ಆಲ್ಬರ್ಟ್ ಐನ್‌ಸ್ಟೈನ್ ಸ್ವಿಟ್ಜರ್‌ಲೇಂಡಿನ ಪ್ರಜೆಯಾಗಿದ್ದರು. ನಾಲ್ಕು ವರ್ಷಗಳ ವಿಶ್ವವಿದ್ಯಾನಿಲಯದ ವ್ಯಾಸಂಗ ಮುಗಿದಿತ್ತು. ಆ ನಾಲ್ಕು ವರ್ಷಗಳಲ್ಲಿ ಅವರು ಜ್ಞಾನಾರ್ಜನೆ ಮಾಡಿದುದೇ ಅಲ್ಲದೆ ತಮಗೆ ಅವಶ್ಯವೆನಿಸಿದ್ದ ರೀತಿಯಲ್ಲಿ ಸ್ವತಂತ್ರರಾಗಿ ಆಲೋಚನೆ ಮಾಡುವ ಪರಿಶ್ರಮವನ್ನೂ ಪಡೆದಿದ್ದರು. ವಿಜ್ಞಾನದ ಬಗೆಗೆ ತಮ್ಮ ದೃಷ್ಟಿಯನ್ನು ವಿಶಾಲಗೊಳಿಸಿಕೊಂಡುದೇ ಅಲ್ಲದೆ ವಿಜ್ಞಾನ ಮನೋಭಾವವನ್ನೂ ಬೆಳೆಸಿಕೊಂಡರು.

ಇತ್ತ ಪಾಲಿಟೆಕ್ನಿಕ್‌ನಲ್ಲಿ ತೇರ್ಗಡೆಹೊಂದಿದ ದಿನವೇ ಮನೆಯಿಂದ ಬೇರೊಂದು ಪತ್ರ ಬಂದಿತು. ಇನ್ನು ಮುಂದೆ ಅವರು ನೂರು ಫ್ರಾಂಕ್‌ಗಳ ಮಾಸಾಶನವನ್ನು ಪಡೆಯಲಾರರೆಂಬ ಕಹಿ ಸುದ್ದಿಯನ್ನು ಆ ಪತ್ರ ತಂದಿತ್ತು.

ವಾಸ್ತವ ಜೀವನವನ್ನು ಅವರೀಗ ಎದುರಿಸಬೇಕಾಯಿತು. ಅನ್ನ ವಸನಗಳೆಂದರೆ, ಜೀವನದ ಇತರ ಸೌಲಭ್ಯಗಳೆಂದರೆ ಅವರಿಗೆ ಆಸಕ್ತಿ ಇರಲಿಲ್ಲವೆಂಬುದೇನೋ ನಿಜ. ಆದರೆ ಮಾನವನಾಗಿ ಬಾಳುವುದಕ್ಕೆ ಅನ್ನಬಟ್ಟೆಗಳ ಆವಶ್ಯಕತೆಯುಂಟು. ಮತ್ತೆ ಮದುವೆಯಾಗುವ ಯೋಜನೆಯೂ ಇದ್ದರೆ ಶಾಶ್ವತವಾಗಿ ಹಣ ತರುವಂತಹ ಉದ್ಯೋಗವೂ ಬೇಕಾದೀತು. ಶ್ರೀಮತಿ ಐನ್‌ಸ್ಟೈನಳಾಗುವೆನೆಂಬ ನಿರ್ಧಾರದಿಂದ ಮಿಲೇವಾ ತನ್ನ ಮನೆಗೆ ತೆರಳಿದ್ದಳು. ಆ ಸುದಿನವನ್ನು ತವಕದಿಂದಲೇ ಆಕೆ ಕಾಯುತ್ತಿದ್ದಳು.

ಐನ್‌ಸ್ಟೈನರ ಮುಂದಿದ್ದ ಅತಿ ಸಹಜ ಮಾರ್ಗವೆಂದರೆ ಪಾಲಿ

ಟೆಕ್ನಿಕ್ ವಿಶ್ವವಿದ್ಯಾನಿಲಯ ಭೌತಶಾಸ್ತ್ರ ಪ್ರಾಧ್ಯಾಪಕರುಗಳ ಬಳಿ ಸಹಾಯಕರಾಗಿ ವೃತ್ತಿ ಹಿಡಿಯುವುದೇ ಆಗಿತ್ತು. ಪದವಿ ಪಡೆದು ತನ್ನ ಆಯ್ಕೆಯ ವಿಭಾಗದಲ್ಲಿ ಕಾರ್ಯ ಮುಂದುವರಿಸಲಾಶಿಸುವ ಮೇಧಾವಿ ಯುವಕನಿಗೆ ಇದೇ ಸಹಜ ಮಾರ್ಗವಾಗಿತ್ತು. ಸ್ವಲ್ಪ ಕಡಿಮೆ ವೇತನ ಬರುತ್ತಿದ್ದರೂ ತೃಪ್ತ ಜೀವನ ನಡೆಸಲು ಅದು ಸಾಕಾಗುತ್ತಿತ್ತು. ಹಣಕ್ಕಿಂತಲೂ ಹೆಚ್ಚಾಗಿ ಅಂತಹವರು ಮುಂದೆ ಪ್ರಾಧ್ಯಾಪಕರಾಗುವ ಸಾಧ್ಯತೆಯೂ ಇರುತ್ತಿತ್ತು.

ಪ್ರಾಧ್ಯಾಪಕರಿಗೆ ಸಹಾಯಕರಾಗುವ ಹುದ್ದೆ ತಮಗೇ ದೊರೆಯುವುದೆಂಬ ಭರವಸೆ ಐನ್‌ಸ್ಟೈನ್‌ರವರದಾಗಿತ್ತು. ಅವರ ಪ್ರಾಧ್ಯಾಪಕರುಗಳೂ ಸಹ ಐನ್‌ಸ್ಟೈನ್‌ರವರ ಭೌತಶಾಸ್ತ್ರದಲ್ಲಿನ ಕಾರ್ಯ ಅಂತಹ ಹುದ್ದೆಗೆ ಯೋಗ್ಯರನ್ನಾಗಿ ಮಾಡಿದೆಯೆಂದು ಯಾವಾಗಲೂ ಹೇಳುತ್ತಿದ್ದರು. ಆದರೆ ಇದ್ದಕ್ಕಿದ್ದಂತೆಯೇ ಅವರ ಆಶಾಸೌಧ ಕುಸಿದುಬಿದ್ದಿತ್ತು. ಎಲ್ಲ ಕೇಳಿದರೂ, ಯಾರನ್ನು ಕೇಳಿದರೂ ಐನ್‌ಸ್ಟೈನರಿಗೆ ನಕಾರದ ಉತ್ತರವೇ ದೊರೆಯುತ್ತಿತ್ತು. ಕೆಲವೆಡೆಗಳಲ್ಲಿ ಅವರನ್ನು ಒರಟಾಗಿಯೇ ಹೊರಹಾಕುತ್ತಿದ್ದರು. ಮತ್ತೆ ಕೆಲವರು ಭವಿಷ್ಯದ ಆಸೆಯನ್ನು ಅವರಲ್ಲಿ ತುಂಬಿ ಮುಂದೆ ಸಾಗಹಾಕಿದ್ದರು. ಆದರೆ ಸದ್ಯಕ್ಕೆ ಅವರ ಪಾಲಿಗೆ ಸಿಕ್ಕಿದ್ದುದು ಸೊನ್ನೆಯೇ.

ಐನ್‌ಸ್ಟೈನ್ ನಿರಾಶರಾದರು. ಇದಕ್ಕೆಲ್ಲ ಕಾರಣವಾದರೂ ಏನೆಂದು ಚಿಂತಿಸತೊಡಗಿದರು. ತಾವು ಬಯಸಿದ್ದ ಹುದ್ದೆಗೆ ತಮಗಿಂತ ಅರ್ಹರಿರಲಿಲ್ಲವೆಂದು ಅವರು ತಿಳಿದಿದ್ದರು. “ಪ್ರಾಯಶಃ ನನ್ನನ್ನು ಅವರು ಪರದೇಶೀಯನೆಂದು ಕಡೆಗಣಿಸಿರುವರೇನು?...ಆದರೆ ನಾನು ಸ್ವಿಸ್ ಪ್ರಜೆಯೆನ್ನಲು ಪತ್ರಗಳಿರುವುದಲ್ಲಾ?....ಹೌದು. ನಾನೊಬ್ಬ ಯಹೂದ್ಯ. ಈ ಸ್ವತಂತ್ರ ನಾಡಿನಲ್ಲಿಯೂ ಅದನ್ನು ಪರಿಗಣಿಸಬಹುದು ....” ಅವರ ಯೋಚನಾತರಂಗ ಈ ತೆರನಾಗಿ ಸಾಗಿತು.

ಬಹುಶಃ ಅವರು ಯಹೂದ್ಯರಾಗಿದ್ದುದರಿಂದ ಅವರಿಗೆ ನೌಕರಿ ದೊರಕದಿದ್ದಿರಬಹುದು. ಅಥವಾ ಅವರ ಪ್ರಾಧ್ಯಾಪಕರುಗಳಿಗೆ ತಮ್ಮನ್ನೇ ಮೀರಿಸಬಹುದಾದ ಮೇಧಾವಿ ತರುಣನನ್ನು ಸೇರಿಸಿ

ಕೊಳ್ಳಲು ಇಷ್ಟವಿಲ್ಲದಿದ್ದುದ್ದೂ ಸಾಧ್ಯ. ವೈಯಕ್ತಿಕ ವಿಷಯಗಳಲ್ಲಿ ಸೌಮ್ಯ ಸಭ್ಯವರ್ತನೆಯಿಂದಿರುತ್ತಿದ್ದ ಐನ್‌ಸ್ಟೈನರು ವೈಜ್ಞಾನಿಕ ವಿಷಯಗಳಲ್ಲಿ ಅವರುಗಳಿಗೆ ಪ್ರತಿಸವಾಲು ಹಾಕಲು ಎಂದೂ ಹಿಂದೆ ಗೆಯುತ್ತಿರಲಿಲ್ಲ. ಈ ಸೂಕ್ಷ್ಮ ವೈಜ್ಞಾನಿಕ ಜ್ಞಾನ ಪ್ರಾಧ್ಯಾಪಕರುಗಳಿಗೆ ವಿಸ್ಮಯವನ್ನುಂಟುಮಾಡುತ್ತಿತ್ತು.

ಅಲ್ಬರ್ಟರನ್ನು ದೂರವಿಟ್ಟಿದ್ದುದರಿಂದ ಅವರ ಪರಿಸ್ಥಿತಿಯಲ್ಲೇನೂ ಬದಲಾವಣೆಯಾಗಲಿಲ್ಲ. ಕೆಲವು ವರ್ಷಗಳನಂತರ ಈ ಪ್ರಾಧ್ಯಾಪಕರುಗಳೆಲ್ಲರಿಗಿಂತ ಉನ್ನತ ಸ್ಥಾನವನ್ನು ಆ ಯುವಕನಿಗಿತ್ತು ತುರ್ತು ಆಹ್ವಾನ ಕೊಟ್ಟು ಅವರನ್ನು ಕರೆಸಿಕೊಂಡದ್ದನ್ನು ಅವರೆಲ್ಲ ನೋಡಬೇಕಾಯಿತು.

ಪ್ರಸ್ತುತದಲ್ಲಂತೂ ಐನ್‌ಸ್ಟೈನ್ ಕೆಲಸಕ್ಕಾಗಿ ಬೀದಿಬೀದಿಗಳಲ್ಲಿ ಅಲೆದರು; ವೃತ್ತಪತ್ರಿಕೆಗಳ ಜಾಹೀರಾತುಗಳೆಲ್ಲಕ್ಕೂ ಅರ್ಜಿ ಸಲ್ಲಿಸಿದರು. ಬೇಟೆನಾಯಿಯಂತೆ ಎಲ್ಲಿ ಹುದ್ದೆಯಿರುವುದೆಂದು ಸುದ್ದಿತಿಳಿದರೂ ಅಲ್ಲಿಗೆ ಧಾವಿಸುತ್ತಿದ್ದರು. ಕೊನೆಗೆ ಐನ್‌ಸ್ಟೈನ್‌ರವರಿಗೆ ಅವರ ಪ್ರಥಮ ಹುದ್ದೆ ಸಿಕ್ಕಿತು. ವಿಂಟರ್‌ಹುರ್ ನಗರದ ಟೆಕ್ನಿಕಲ್ ಶಾಲೆಯೊಂದರಲ್ಲಿನ ಭೌತಶಾಸ್ತ್ರದ ಉಪಾಧ್ಯಾಯರು ಹಾಸಿಗೆ ಹಿಡಿದುದರಿಂದ ಅವರ ಸ್ಥಾನದಲ್ಲಿ ಐನ್‌ಸ್ಟೈನರನ್ನು ನೇಮಿಸಲಾಯಿತು.

ಉಪಾಧ್ಯಾಯ ವೃತ್ತಿಯ ಅವರ ಪ್ರಥಮಾನುಭವ ಹರ್ಷದಾಯಕವೇನೂ ಆಗಿರಲಿಲ್ಲ. ಅವರು ತರಗತಿಗೆ ಸೇರಿದೊಡನೆಯೇ ಮೌನ ವಾವರಿಸಿತು. ಅಲ್ಲೊಬ್ಬ ಇಲ್ಲೊಬ್ಬ ಹುಡುಗನ ಮುಖದಲ್ಲಿ ಹುಸಿನಗೆ ಮಿಂಚುತ್ತಿತ್ತು. ಅಲ್ಲಿನ ಅನೇಕ ವಿದ್ಯಾರ್ಥಿಗಳು ಅವರಿಗಿಂತ ಹೆಚ್ಚಿನ ವಯಸ್ಸಿನವರಾಗಿದ್ದರಲ್ಲದೆ ಅವರಿಗಿಂತಲೂ ಉತ್ತಮ ಉಡುಪು ಧರಿಸಿದ್ದರು. ದರಿದ್ರರಂತೆ ಉಡುಪು ಧರಿಸಿದ್ದ ಈ ಮೂರ್ಖ ಮೇಷ್ಟರನ್ನು ಕೀಟಲೆ, ಕುಚೋದ್ಯಮಾಡಲು ಸುಯೋಗವೆಂದು ಆ ವಿದ್ಯಾರ್ಥಿಗಳು ಭಾವಿಸಿದರು. ಅಯ್ಯೋ! ಈ ಪ್ರಾಧ್ಯಾಪಕನೆಂತಹ ಮಂಕುಕತ್ತೆ!

ಐನ್‌ಸ್ಟೈನ್ ನಾಚಿಕೆ ಸಂಕೋಚದಿಂದಲೇ "ಸುಪ್ರಭಾತ, ವಿದ್ಯಾರ್ಥಿಗಳೇ!" ಎಂದರು.

ಹುಡುಗರಲ್ಲೊಬ್ಬ ಗುಟುರಿದ. ಕಾಲುಗಳು ಸಪ್ಪಳ ಮಾಡ ತೊಡಗಿದುವು. ಕಾಗದದ ಸುರುಳಿಯೊಂದು ಉಪಾಧ್ಯಾಯರ ಹತ್ತಿರ ಹಾರಿ ಬಂತು.

ಐನ್‌ಸ್ಟೈನ್ ಕಪ್ಪು ಹಲಗೆಯತ್ತ ತಿರುಗಿ ಸೀಮೆ ಸುಣ್ಣದ ಚೂರೊಂದನ್ನು ತೆಗೆದುಕೊಂಡರು. ಅವರನ್ನು ನೇಮಿಸಿದ್ದಾದರೂ ವಿದ್ಯಾರ್ಥಿಗಳಿಗೆ ಭೌತ ಶಾಸ್ತ್ರವನ್ನು ಬೋಧಿಸುವುದಕ್ಕೆ. ಅವರು ಕೆಲವು ವಿಷಯಗಳನ್ನು ತಿಳಿಸುವವರಿದ್ದರು. ಇಷ್ಟವಿದ್ದರೆ ಹುಡುಗರು ಕೇಳಬಹುದು, ಇಲ್ಲವಾದರೆ ಸುಮ್ಮನಿರಬಹುದು. ಹೀಗೆ ಆಲೋಚಿಸಿ ತಾವು ಹೇಳಬೇಕೆಂದಿದ್ದ ವೈಜ್ಞಾನಿಕ ವಿಷಯವನ್ನು ಐನ್‌ಸ್ಟೈನ್ ಚಿತ್ರ ಬರೆದು ವಿವರಿಸತೊಡಗಿದರು. ಈಗ ಅವರ ಸ್ಥಾನ ಸುಭದ್ರವಾಗಿತ್ತು. ಏಕೆಂದರೆ ಅವರು ಭೌತ ಶಾಸ್ತ್ರವನ್ನು ಕುರಿತು ಮಾತನಾಡತೊಡಗಿದಾಗ ಅವರಿಗೆ ಬಾಹ್ಯ ಪ್ರಪಂಚದ ಪರಿಜ್ಞಾನವೇ ಇರುತ್ತಿರಲಿಲ್ಲ.

ತರಗತಿಯಲ್ಲಿ ಕ್ರಮೇಣ ಮೌನವಾವರಿಸಿತು. ಉಪಾಧ್ಯಾಯರ ಸ್ಪಷ್ಟ ಮೆಲುದನಿ ಅವರಿಗೆ ಕೇಳಿಸತೊಡಗಿತು. ಹುಡುಗರು ತಮ್ಮಿಚ್ಛೆಯಿಲ್ಲದೆಯೇ ಉಪಾಧ್ಯಾಯರ ಬೋಧನೆಯತ್ತ ಗಮನವಿತ್ತಿದ್ದರು. ದಿನದ ಆ ತರಗತಿ ಮುಗಿಯುವ ವೇಳೆಗೆ ವಿದ್ಯಾರ್ಥಿಗಳಲ್ಲಿ ಉಪಾಧ್ಯಾಯರ ಬಗೆಗೆ ಗೌರವ, ಆಸಕ್ತಿ ಅಂಕುರಿಸಿತು. ಅವರ ಹಿಂದಿನ ಉಪಾಧ್ಯಾಯರು ಬಂದು ಐನ್‌ಸ್ಟೈನರ ಸ್ಥಾನವನ್ನು ಪುನಃ ಪಡೆದಾಗ ವಿದ್ಯಾರ್ಥಿಗಳು ಅವರನ್ನು ಬಹಳ ವ್ಯಥೆಯಿಂದ ಬಿಟ್ಟುಕೊಟ್ಟರು.

ಉಳಿದಿದ್ದ ಒಂದಿಷ್ಟು ಪುಡಿಗಾಸಿನೊಂದಿಗೆ ಅವರು ಪುನಃ ನೌಕರಿಯ ಅನ್ವೇಷಣೆಯಲ್ಲಿ ತೊಡಗಿದರು. ಕೆಲವು ದಿನಗಳ ಉಪವಾಸವನ್ನೂ ಅವರು ಅನುಭವಿಸಿದರು. ಇದೇ ಸಮಯಕ್ಕೆ ಷಾಫ್‌ಹೌಸನ ಬೋರ್ಡಿಂಗ್ ಶಾಲೆಯೊಂದರ ಇಬ್ಬರು ಹುಡುಗರಿಗೆ ಪಾಠ ಹೇಳಿಕೊಡುವ ಕೆಲಸ ದೊರೆಯಿತು. ಐನ್‌ಸ್ಟೈನ್‌ರವರಿಗೂ ಆ ಕೆಲಸ ಹಿಡಿಸಿತು; ಹುಡುಗರ ಪ್ರಗತಿಯೂ ಪ್ರಶಂಸನೀಯವಾಗಿತ್ತು. ಇದರಿಂದ ಉತ್ಸಾಹಿತರಾದ ಐನ್‌ಸ್ಟೈನ್ ಅವರ ಎಲ್ಲ ಬೋಧನೆ

ಯನ್ನೂ ತಮ್ಮದೇ ಆದ ರೀತಿಯಲ್ಲಿ ನಡೆಸಲು ಆಶಿಸಿ ಅಪ್ಪಣೆ ಕೇಳಿದರು. ಹಾಗೆ ಕೇಳುವುದೇ ಮಹಾ ಕ್ರಾಂತಿಕರವಾಗಿ ಕಂಡದ್ದರಿಂದ ಆ ಕ್ರಾಂತಿಕಾರಿ ಉಪಾಧ್ಯಾಯರನ್ನು ಕೂಡಲೇ ಕೆಲಸದಿಂದ ತೆಗೆದು ಹಾಕಲಾಯಿತು.

ಐನ್‌ಸ್ಟೈನ್ ಜೂರಿಚ್‌ಗೆ ಮರಳಿ ಪುನಃ ತಮ್ಮ ನೌಕರಿಯ ಅನ್ವೇಷಣೆಯಲ್ಲಿ ತೊಡಗಿದರು. ಹಲವು ದಿನಗಳ ಉಪವಾಸದಿಂದ ಈ ಸಲ ಅವರಲ್ಲಿ ನಿಶ್ಶಕ್ತಿಯೂ ಕಾಣಿಸಿಕೊಂಡಿತು. ಯಾವ ಕೆಲಸ ಸಿಕ್ಕಿದರೂ ಸಾಕೆಂದು ಅವರು ಹಾತೊರೆಯುತ್ತಿದ್ದರು. ಆದರೆ ರೋಗಿಯಂತೆ ಕಾಣುತ್ತಿದ್ದ, ಹರಕುಬಟ್ಟೆ ಧರಿಸಿದ್ದ, ಸ್ವಿಸ್‌ನಾಡಿನಲ್ಲಿ ಜನ್ಮವೆತ್ತಿರದಿದ್ದ ಈ ತರುಣನಿಗೆ ನೌಕರಿ ಬಿಸಿಲುಕುದುರೆಯಾಯಿತು.

ಅವರು ಹತಾಶರಾದರು; ಬೇಸರ ಹೊಂದಿದರು. "ಇದೇ ಬೇಟೆ. ಯಾವ ಬೇಟೆಯನ್ನು ನಾನಾಡಬಾರದೆಂದಿದ್ದೆನೋ—ಹಣದ ಬೇಟೆ, ಕೀರ್ತಿಯ ಬೇಟೆ—ಅದೇ ಇದು. ನನಗೇನೂ ಬೇಡ. ಅತ್ಯಂತ ಸರಳ ಜೀವನಕ್ಕೆ ಎಷ್ಟೋ ಅಷ್ಟು—ಕೊನೆಗೆ ನಾನು ಬದುಕಿರುವುದಕ್ಕಾಗಿ ಒಬ್ಬ ಮೋಚಿಯ ಕೆಲಸ ಸಾಕು. ಹೊರ ಆಕಾಶದಲ್ಲಿ ಒಂದು ದ್ವೀಪವಿದ್ದು ಅದರಲ್ಲಿ ನಾನೊಬ್ಬನೇ ಇರುವಂತಿದ್ದರೆ....ಯಾವ ವೈಯಕ್ತಿಕ ಆವಶ್ಯಕತೆಯೂ ಇಲ್ಲದಿದ್ದರೆ......ಅಲ್ಲಿನ ಜೀವನದ ಪ್ರಧಾನ ಗುಣ ಕೇವಲ ಆಲೋಚನೆ, ಚಿಂತನ, ಮಂಥನವಾಗಿದ್ದರೆ...ಎಷ್ಟು ಚೆನ್ನಾಗಿರುತ್ತಿತ್ತು......" ಐನ್‌ಸ್ಟೈನ್ ತಮ್ಮ ಭಾವನಾರಥವೇರಿದ್ದರು.

ಐನ್‌ಸ್ಟೈನ್ ಆಗಾಗ್ಗೆ ತಮ್ಮ ಹಳೆಯ ಸಹಪಾಠಿಗಳನ್ನು ಕಾಣುತ್ತಿದ್ದರು. ಆದರೆ ಅವರಾರೂ ಸಹಾಯ ಮಾಡುವ ಸ್ಥಿತಿಯಲ್ಲಿರಲಿಲ್ಲ. ಐನ್‌ಸ್ಟೈನರ ಈ ದುರ್ಭರಸ್ಥಿತಿ ಹೇಗೋ ಮಾರ್ಸೆಲ್ ಗ್ರಾಸ್‌ಮಾನ್‌ರವರ ಕಿವಿಗೆಬಿದ್ದಿತು. ಮಾರ್ಸೆಲರ ತಂದೆಗೆ ಸರ್ಕಾರಿವಲಯಗಳಲ್ಲಿ ಪ್ರಭಾವವಿದ್ದುದರಿಂದ ಅವರು ಬರ್ನ್‌ನಲ್ಲಿದ್ದ ಪೇಟೆಂಟ್ ಕಚೇರಿಯ ಡೈರೆಕ್ಟರನ್ನು ಐನ್‌ಸ್ಟೈನ್ ಕಾಣುವಂತೆ ವ್ಯವಸ್ಥೆ ಮಾಡಿದರು. ಸ್ವಿಟ್ಸರ್‌ಲೇಂಡಿನ ರಾಜಧಾನಿಗೆ ತೆರಳಲು ತಗಲುವ ರೈಲು ವೆಚ್ಚವನ್ನೂ ಮಾರ್ಸೆಲ್ ಐನ್‌ಸ್ಟೈನ್‌ರವರಿಗಿತ್ತರು.

ಬೇರೆ ಯಾರಾದರೂ ಆಗಿದ್ದರೆ ಈ ಸಂದರ್ಭದಲ್ಲಿ ಠೀವಿಯಿಂದ ಸಂದರ್ಶಿಸಲು ಪ್ರಯತ್ನಿಸುತ್ತಿದ್ದರು. ಆದರೆ ಐನ್‌ಸ್ಟೈನ್‌ರವರಿಗೆ ತಮ್ಮ ಬಟ್ಟೆಯನ್ನು ಬದಲಾಯಿಸುವ ಮತ್ತು ಆಕಾರವನ್ನು ಅಂದಗೊಳಿಸಿಕೊಳ್ಳುವ ಯೋಚನೆಯೇ ಬರಲಿಲ್ಲ ಮಸುಕು ಹಿಡಿದು ಮುಡಿಕೆ ಬಿದ್ದಿದ್ದ ತಮ್ಮ ಉಡುಪನ್ನೇ ಧರಿಸಿ ಪೊದರಿನಂತೆ ಕೆದರಿ ಹಾರುತ್ತಿದ್ದ ತಲೆಗೂದಲಿನೊಂದಿಗೆ ಅವರು ಡೈರೆಕ್ಟರರ ಕಚೇರಿಯನ್ನು ಹೊಕ್ಕು ತಮಗೆ ತೋರಿಸಿದ ಆಸನದಲ್ಲಿ ಕುಳಿತರು.

ಇವರನ್ನು ಕಂಡ ಡೈರೆಕ್ಟರರಿಗೆ ಆಶಾಭಂಗವಾಗಿತ್ತು. ಸಾಮಾನ್ಯವಾಗಿ ಗ್ರಾಸ್‌ಮಾನ್‌ರವರ ಶಿಫಾರಸಿನಿಂದ ಬಂದವರು ಅಚ್ಚುಕಟ್ಟಾದ ಚೂಟಿ ಚುರುಕಿನ ತರುಣರಾಗಿರುತ್ತಿದ್ದರು. ಅದರೆ ಈತ...

"ಸನ್ನದುಗಳ ಬಗ್ಗೆ ನಿಮಗೇನು ಗೊತ್ತು?" ಹಾಲರ್ ಥಟ್ಟನೆ ಕೇಳಿದರು.

ಆಲ್ಬರ್ಟ್ ಅವರನ್ನೇ ನಿಸ್ತೇಜರಾಗಿ ನೋಡುತ್ತಾ, "ಏನೂ ಗೊತ್ತಿಲ್ಲ" ಎಂದರು.

ಹಾಲರ್‌ರವರು ವಿಸ್ಮಯದಿಂದ ಚಕಿತರಾದರು. ಈ ಮನುಷ್ಯನಿಗೆ ನಿಜಕ್ಕೂ ನೌಕರಿ ಬೇಕೆ? ಗ್ರಾಸ್‌ಮಾನ್‌ರವರೇನೋ ಆಲ್ಬರ್ಟರಿಗೆ ನೌಕರಿ ಬೇಕೆಂದು ಹೇಳಿದ್ದರು. ನೋಡಿದರೂ ಹಾಗೆಯೇ ಕಾಣುತ್ತಿದ್ದರು. ಆದರೆ ಇವರು ಎಲ್ಲ ನೌಕರಿ ಅನ್ವೇಷಣಾಕಾರರಂತೆ ಚುರುಕಾಗಿದ್ದು ಅಧಿಕಾರಿಗಳನ್ನು ತೃಪ್ತಿಗೊಳಿಸುವ ಗೀಳಿರುವವರರಂತೆ ಕಾಣಲಿಲ್ಲ. ಅವರು ಬಹುಮಟ್ಟಿಗೆ ನಿರಾಸಕ್ತರಂತೆ ಕಂಡರು. ಗ್ರಾಸ್‌ಮಾನ್‌ರೇನೋ ಈ ವ್ಯಕ್ತಿ ಅಸಾಧಾರಣ ವಿಜ್ಞಾನಿ ಎಂದು ಹೇಳಿದ್ದರು. ಹಾಗಾದರೆ......

"ಐನ್‌ಸ್ಟೈನ್‌ರವರೇ, ಒಬ್ಬ ವ್ಯಕ್ತಿ ತಾನು ಕಂಡುಹಿಡಿದ ಶೋಧದ ಬಗೆಗೆ ಸನ್ನದು ಪಡೆಯಲು ಅರ್ಜಿ ಸಲ್ಲಿಸುತ್ತಾನೆ. ಅವನು ಅದನ್ನು ಕುರಿತು ಒಂದು ತಾಂತ್ರಿಕ ವರದಿಯನ್ನು ನಮ್ಮ ಕಚೇರಿಗೆ ಕಳುಹಿಸುತ್ತಾನೆ. ಸಾಮಾನ್ಯವಾಗಿ ನಕ್ಷೆಗಳೂ ಚಿತ್ರಗಳೂಅದರಲ್ಲಿರುವುದುಂಟು. ಅವನ ಅರ್ಜಿಯನ್ನು ಪರಿಶೀಲಿಸಿ, ಅವನ ಶೋಧ

ನಿಜವಾಗಿಯೂ ಕಾರ್ಯರೂಪಕ್ಕೆ ತರಬಹುದಾದುದೇ ಎಂದು ತಿಳಿದು ಅನಂತರ ಆ ಅರ್ಜಿಯನ್ನು ಸರಳಭಾಷೆಯಲ್ಲಿ ಸುಲಭಗ್ರಾಹ್ಯವಾಗುವಂತೆ ಬರೆಯುವುದೇ ಈ ಕಚೇರಿಯ ಕೆಲಸ."

ತಮ್ಮ ವಿವರಣೆ ತರುಣನ ಮೇಲೆ ಏನು ಪರಿಣಾಮ ಬೀರುತ್ತಿದೆಯೆಂದು ನೋಡಲು ಹಾಲರ್‌ರವರು ಮಾತನ್ನು ಕ್ಷಣಕಾಲ ನಿಲ್ಲಿಸಿದರು. ಐನ್‌ಸ್ಟೈನರು ಯಾವ ಮಾತನ್ನೂ ಆಡದೆ ಅಚಲರಾಗಿ ಕುಳಿತಿದ್ದರು. ನಿಡುಸುಯ್ದು ಹಾಲರ್ ಮುಂದುವರಿಸಿ, "ನಾನು ಈಗ ವಿವರಿಸಿದ ಬಗೆಯ ಕೆಲಸವನ್ನು ಮಾಡಬಲ್ಲಿರಾ?" ಎಂದು ಪ್ರಶ್ನಿಸಿದರು.

ಐನ್‌ಸ್ಟೈನ್ ಒಂದು ಕ್ಷಣ ಹಾಗೆಯೇ ಮೌನದಿಂದ ಕುಳಿತರು. ಇವರ ಮೌನದಿಂದ ಇನ್ನೇನು ಹಾಲರ್ ರವರು ಕೋಪಾವಿಷ್ಟರಾಗಬೇಕೆನ್ನುವ ವೇಳೆಗೆ ಐನ್‌ಸ್ಟೈನ್ ತಲೆಯೆತ್ತಿ, "ಆ ಕೆಲಸವನ್ನು ಮಾಡಬಲ್ಲೆನೆಂಬ ಭರವಸೆ ನನಗಿದೆ" ಎಂದರು. ಅವರು ಅಷ್ಟು ದೃಢವಾಗಿ ವ್ಯಕ್ತಪಡಿಸಿದ ಭಾವನೆ, ಆ ಹೃತ್ಪೂರ್ವಕ ನಗು, ಡೈರೈಕ್ಟರರಿಗೆ ಅಮಿತಾನಂದವನ್ನುಂಟುಮಾಡಿತು.

ಕೆಲವು ಕಾಲ ಅವರು ಪರಸ್ಪರ ಮಾತನಾಡತೊಡಗಿದರು. ಬಳಿಕ ಹಾಲರ್, "ಐನ್‌ಸ್ಟೈನ್, ಈ ಹುದ್ದೆಯನ್ನು ನಿಮಗೆ ಕೊಡುವೆನೆಂದು ಹೇಳುವ ಮೊದಲು ಒಂದೆರಡು ಪ್ರಶ್ನೆಗಳನ್ನು ಕೇಳಬೇಕಾಗಿದೆ" ಎಂದರು.

ಐನ್‌ಸ್ಟೈನ್‌ರವರ ಉತ್ಸಾಹ ಕುಗ್ಗಿತು. ಇಲ್ಲಿಯೂ ಇದೇ ಗತಿಯೇ ಎಂದು ಅವರು ಆಲೋಚಿಸಿದರು ತಮ್ಮನ್ನು ಅವರು ಸ್ವಿಸ್ ದೇಶದಲ್ಲಿಯೇ ಜನ್ಮ ತಳೆದವನೇ ಅಥವಾ ಯಹೂದ್ಯನೇ ಎಂದು ಕೇಳಬಹುದು.

"ನೀವು ಸ್ವಿಟ್ಸರ್‌ಲೇಂಡಿನ ಪ್ರಜೆಯೇ?"

"ಹೌದು." ಐನ್‌ಸ್ಟೈನ್ ತಮ್ಮ ಜೇಬಿನಿಂದ ಪತ್ರಗಳನ್ನು ಹೊರತೆಗೆದರು. ಅದರಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದಿತ್ತು: ಸ್ವಿಸ್ ದೇಶೀಯ; ಜನ್ಮ–ಜರ್ಮನಿ.

"ಒಳ್ಳೆಯದು."

ಕ್ಷಣಕಾಲ ನೀರವ.

"ಈ ಕೂಡಲೇ ನಿಮ್ಮನ್ನು ವರ್ಷಕ್ಕೆ ಮೂರು ಸಾವಿರ ಫ್ರಾಂಕ್‌ಗಳ ವೇತನದಲ್ಲಿ ನೇಮಿಸಬಲ್ಲೆ. ಒಪ್ಪಿಗೆಯೇನು?"

"ಆಗಬಹುದು. ಬಹಳ ವಂದನೆಗಳು"

ಕಷ್ಟದಲ್ಲಿ ತೊಳಲಾಡುತ್ತಿದ್ದ ಅನೇಕ ವಿಜ್ಞಾನಿಗಳಿಗೆ ಇದು ನಿಧಿ ರೂಪವೇ ಆಗಿರುತ್ತಿತ್ತೇನೊ. ಆದರೆ ಇವರು ಆಲ್ಬರ್ಟ್ ಐನ್‌ಸ್ಟೈನ್. ಅವರಲ್ಲಿ ಯಾವ ದುಗುಡದ ಉದ್ರೇಕವೂ ಕಂಡುಬರಲಿಲ್ಲ; ಕೃತಜ್ಞತೆಯ ವಾಕ್ಯಗಳೂ ವ್ಯಕ್ತವಾಗಲಿಲ್ಲ. ಅವರಿಗೆ ಹುದ್ದೆಯೊಂದನ್ನು ನೀಡಲಾಗಿತ್ತು; ಅದನ್ನವರು ಮಾತೆತ್ತದೆ ಸ್ವೀಕರಿಸಿದ್ದರು, ಅಷ್ಟೆ.

೭ ಯಾರೀ ಸಣ್ಣದು ಗುಮಾಸ್ತೆ?

ಬರ್ನ್ ನಗರದ ನಾಲ್ಕಂತಸ್ತಿನ ಕಟ್ಟಡದ ಮೇಲ್ಮಹಡಿಯಲ್ಲಿ ಆಲ್ಬರ್ಟ್ ಮತ್ತು ಮಿಲೇವಾ ತಮ್ಮ ವೈವಾಹಿಕಜೀವನವನ್ನು ಸ್ಥಾಪಿಸಿದ್ದರು. ಅವರ ಆವಾಸಸ್ಥಾನ ಚಿಕ್ಕದಾದರೂ ಚೊಕ್ಕವಾಗಿ ಸಜ್ಜಾಗಿತ್ತು. ಅಲ್ಲಿಂದ ಆರ್ ನದಿ ಪ್ರವಹಿಸುತ್ತಿರುವುದನ್ನೂ, ಮೋಡವಿಲ್ಲದ ದಿನಗಳಲ್ಲಿ ದೂರದ ಸುಂದರ ಆಲ್ಪ್ಸ ಪರ್ವತ ಶೃಂಗಗಳನ್ನೂ ನೋಡಬಹುದಿತ್ತು.

ಪೇಟೆಂಟ್ ಕಚೇರಿಯ ಕಾರಕೂನರಾಗಿ ಐನ್‌ಸ್ಟೈನ್ ಸಂತೋಷದಿಂದಲೇ ಇದ್ದರು. ಇನ್ನೂ ಅನೇಕ ಮಂದಿ ಇಂಜಿನಿಯರ್‌ಗಳೊಡನೆ ಕಲೆತು, ಶೋಧಗಳ ಬಗೆಗೆ ಯೋಜನೆಗಳನ್ನೂ, ರೂಪರೇಷೆಗಳನ್ನೂ ಪರಿಶೀಲಿಸುವುದರಲ್ಲಿ ದಿನವೆಲ್ಲ ಕಳೆಯುತ್ತಿದ್ದರು. ಈ ಕೆಲಸ ಅವರಲ್ಲಿ ಸಂತತ ಆಸಕ್ತಿಯನ್ನುಂಟುಮಾಡಿತ್ತು. ಹಿಂದೆ ಸ್ವಾಮ್ಯ ಪಡೆದ ಶೋಧಗಳ ಅನುಕರಣೆ ನಡೆದಿರುವುದೇ ಇಲ್ಲವೇ ಎಂಬುದನ್ನು ಕಂಡು ಹಿಡಿಯಲು ಜಾಗರೂಕತೆಯಿಂದಿರುವುದೂ ಮತ್ತು ಶೋಧಕ ಏನನ್ನು ತೋರಿಸಲು ಹೊರಟಿರವನೆಂದು ಅರ್ಥಮಾಡಿಕೊಳ್ಳುವ ವಿವೇಕ ಪ್ರಜ್ಞೆ ಇರುವುದೂ ಅತ್ಯಾವಶ್ಯಕವಾಗಿತ್ತು. ಸ್ವಲ್ಪ ದಿನಗಳಲ್ಲಿಯೇ ಹಾಲರ್ ತಮ್ಮ ಹೊಸ ನೌಕರನ ಕೌಶಲವನ್ನು ಕಂಡುಕೊಂಡಿದ್ದರು. ಎಂತಹ ಜಟಿಲ ಸಮಸ್ಯೆಯ ಸ್ವರೂಪವನ್ನೂ ಐನ್‌ಸ್ಟೈನ್ ಅತಿ ಶೀಘ್ರದಲ್ಲಿಯೇ ಅರಿತುಕೊಳ್ಳುತ್ತಿದ್ದರು. ಯಾವುದೂ ಅವರಿಗೆ ಬ್ರಹ್ಮಗಂಟಾಗಿರಲಿಲ್ಲ; ಯಾವುದನ್ನೂ ಅವರು ಸಾಧ್ಯವಾಗಲಾರದೆಂದೋ ನಗೆಪಾಟಲಾಗುವುದೆಂದೋ ತುಚ್ಛೀಕರಿಸುತ್ತಿರಲಿಲ್ಲ. ಅವರ ಪರಿಶೀಲನೆಗೆ ಬಂದ ಪ್ರತಿಶೋಧವೂ ಒಬ್ಬ ವ್ಯಕ್ತಿಯ ಕೃತಿಯಾಗಿರುತ್ತಿತ್ತು. ಐನ್‌ಸ್ಟೈನ್ ಅದನ್ನು ಗೌರವದಿಂದ ಕಾಣುತ್ತಿದ್ದರು.

ಸ್ವಲ್ಪ ಕಾಲದ ಬಳಿಕ ಸಾಮಾನ್ಯವಾಗಿ ಒಂದು ದಿನದಲ್ಲಿ ಮಾಡ

ಬಹುದಾದ ಕೆಲಸವನ್ನು ಕೇವಲ ಎರಡು ಅಥವಾ ಮೂರು ಗಂಟೆಗಳಲ್ಲಿಯೇ ಮುಗಿಸಬಹುದೆಂದು ಅವರು ಕಂಡುಕೊಂಡರು. ಆದರೆ ಇನ್ನೂ ನಿಧಾನವಾಗಿಯೂ ಶ್ರಮಪಹಿಸಿಯೂ ಕೆಲಸಮಾಡುತ್ತಿದ್ದ ಅವರ ಸಹೋದ್ಯೋಗಿಗಳ ಸಲುವಾಗಿ ಐನ್‌ಸ್ಟೈನ್ ಇದನ್ನು ಹಾಲರ್‌ರವರಿಗೆ ತಿಳಿಸಿರಲಿಲ್ಲ. ಹೀಗೆ ತಮಗುಳಿದ ವೇಳೆಯಲ್ಲಿ ಅವರು ತಮ್ಮ ವಿಜ್ಞಾನ ವಿಷಯಗಳನ್ನು ಕುರಿತ ಕಾರ್ಯಾವೇಸಗುತ್ತಿದ್ದರು. ತಮ್ಮ ಮೇಜಿನ ಡ್ರಾಯರಿನಲ್ಲಿ ಅವರೊಂದು ಫೈಲನ್ನಿಟ್ಟಿರುತ್ತಿದ್ದರು. ಯಾರಾದರೂ ಅವರನ್ನು ಸಮೀಪಿಸುತ್ತಿದ್ದಂತೆಯೇ ತಾವು ಬರೆಯುತ್ತಿದ್ದ ಕಾಗದವನ್ನು ಫೈಲಿನೊಳಗೆ ತುರುಕಿಬಿಡುತ್ತಿದ್ದರು.

ಭೌತಶಾಸ್ತ್ರ ತಮ್ಮ ಜೀವನದ ಪ್ರಧಾನ ಕಾರ್ಯಕ್ಷೇತ್ರವಾಗಬೇಕೆಂದು ಅವರು ಎಂದು ನಿರ್ಧರಿಸಿದರೋ ಅಂದಿನಿಂದ ಸುಪ್ತವಾಗಿದ್ದ ಅಭಿಲಾಷೆ ಈಗ ಮತ್ತೂ ತೀವ್ರವಾಯಿತು. ಜೀವನದ ಅವಶ್ಯಕತೆಗಳನ್ನು ಪೂರೈಸಲು ಹುದ್ದೆಯೊಂದಿತ್ತು. ಅದನ್ನುಳಿದ ಮೇಲೆ, ಅವರನ್ನು ಬಹು ಹಿಂದಿನಿಂದಲೂ ಕಾಡುತ್ತಿದ್ದ ಹಲವು ವೈಜ್ಞಾನಿಕ ವಿಷಯಗಳತ್ತ ಅವರ ಆಲೋಚನೆಗಳೂ, ಪ್ರಯತ್ನಗಳೂ ಕೇಂದ್ರೀಕೃತವಾಗಿದ್ದುವು. ಬೆಳಕು, ಬಾಹ್ಯಾಕಾಶ ಮತ್ತು ಚಲನೆಯ ಬಗೆಗೆ ವಿಚಿತ್ರವಾದ ನೂತನ ಭಾವನೆಗಳು ಅವರ ಮನಸ್ಸಿನಲ್ಲಿ ಮೂಡಿದ್ದುವು. ಅವುಗಳಿಗೆ ಹೆಸರೇ ಇಲ್ಲದಿದ್ದಷ್ಟು ಅಸಾಧಾರಣ ಭಾವನೆಗಳಾಗಿದ್ದುವು ಅವು. ಐನ್‌ಸ್ಟೈನ್‌ರವರು ತಮ್ಮ ಕೃತಿಯನ್ನು ಕುರಿತು ಮಾತನಾಡುವಾಗಲೆಲ್ಲ ಕ್ರಮೇಣವಾಗಿ 'ಸಾಪೇಕ್ಷ' ಎಂಬ ಪದವನ್ನು ಬಳಸತೊಡಗಿದರು. ಈ ಪದವೇ ಮುಂದೆ ವಿಜ್ಞಾನ ಜಗತ್ತಿನಲ್ಲಿ ಮಾತ್ರವಲ್ಲದೆ ಪ್ರತಿನಿತ್ಯದ ಆಗುಹೋಗುಗಳಲ್ಲಿಯೂ ಸುಪ್ರಸಿದ್ಧ ಸಂಕೇತವಾಗುವುದೆಂದು ಆಗ ಅವರು ತಿಳಿದಿರಲಿಲ್ಲ.

ಕಾಲಚಕ್ರ ಉರುಳಿದಂತೆ ಅವರು ತಮ್ಮ ಸಾಪೇಕ್ಷವಾದವನ್ನು ಕುರಿತಾ ಆಲೋಚನೆಗಳಿಗೆ ಹೆಚ್ಚುಹೆಚ್ಚು ಕಾಲ ವಿನಿಯೋಗಿಸತೊಡಗಿದರು. ಆರ್ ನದಿಯನ್ನು ಎದುರುನೋಡುತ್ತಿದ್ದ ಅವರ ವಸತಿ ತಮ್ಮಂತೆಯೇ ವಿಜ್ಞಾನ ವಿಚಾರಗಳಲ್ಲಿ ಆಸಕ್ತರಾಗಿದ್ದ ತರುಣ ವಿಜ್ಞಾನಿಗಳ

ಸಮಾವೇಶ ಕೇಂದ್ರವಾಯಿತು. ಬೆಸ್ಸೋ ಎಂಬ ಇಟಲಿಯ ಇಂಜಿನಿಯರ್, ಸೋಲೊವಿನ್ ಎಂಬ ರುಮೇನಿಯದ ವಿದ್ಯಾರ್ಥಿ, ಸ್ವಿಸ್ ಗಣಿತ ಶಾಸ್ತ್ರಜ್ಞ ಕಾನ್ರಾಡ್ ಹಾಬಿಚ್ಟ್–ಇವರೆಲ್ಲ ಒಂದೆಡೆ ಸೇರುತ್ತಿದ್ದರು. ಇನ್ನೂ ತರುಣರಾಗಿದ್ದು ಸೃಜನಾತ್ಮಕ ಆಸಕ್ತಿಯಿಂದಿದ್ದ ಅವರೆಲ್ಲರೂ ಐನ್‌ಸ್ಟೈನ್‌ರವರ ಭಾವನೆಗಳು ಗೌರವಾನ್ವಿತ ಹಿರಿಯ ವಿಜ್ಞಾನಿಗಳ ಭಾವನೆಗಳಿಗೆ ವಿರೋಧವಾಗಿದ್ದು ವಿವಾದ ಕಾರಣಗಳಾಗುತ್ತವೆಂದು ತಿಳಿದಿದ್ದರೂ ಅವರ ನೂತನ ಸಿದ್ಧಾಂತವನ್ನು ಒಪ್ಪಿದ್ದರು.

ಆಲ್ಬರ್ಟನಿಗೆ ಪುತ್ರಸಂತಾನವಾದ ಬಳಿಕ, ಚರ್ಚೆಗಾಗಿ ಸೇರುತ್ತಿದ್ದ ಈ ವಿಜ್ಞಾನಿಗಳು ಹಜಾರದಲ್ಲಿ ತೂಗುಹಾಕಿರುತ್ತಿದ್ದ ಕೂಸಿನ ಬಟ್ಟೆಯ ಸಾಲುಗಳನ್ನು ನುಸುಳಿಕೊಂಡು ಒಳಗೆ ಬರಬೇಕಿತ್ತು. ಅನೇಕ ವೇಳೆ ಐನ್‌ಸ್ಟೈನ್ ತಮ್ಮ ಮಗುವನ್ನು ದೀರ್ಘ ಗಾಳಿಸಂಚಾರಗಳಿಗೆ ಕರೆದೊಯ್ಯುತ್ತಿದ್ದರು ತಮ್ಮ ಕಚೇರಿಯಲ್ಲಿ ಕುಳಿತು ಎಷ್ಟು ಏಕಾಗ್ರತೆಯಿಂದ ಆಲೋಚನೆ ನಡೆಯಿಸುತ್ತಿದ್ದರೋ ಮಕ್ಕಳ ತಳ್ಳುಬಂಡಿಯನ್ನು ನೂಕುತಿದ್ದಾಗಲೂ ಅಷ್ಟೇ ಏಕಾಗ್ರತೆಯಿಂದ ಆಲೋಚಿಸುತ್ತಿದ್ದರು. ಹಸನ್ಮುಖಿಯಾದ ವ್ಯಕ್ತಿಯೊಂದು ನಿದ್ರೆಮಾಡುತ್ತಿರುವ ಮಗುವನ್ನು ನಿಧಾನವಾಗಿ ತಳ್ಳುಬಂಡಿಯಲ್ಲಿ ನೂಕುತ್ತಾ ಹೋಗುತ್ತಿದ್ದುದು ಆ ನೆರೆಹೊರೆಯವರಿಗೆ ನಿತ್ಯದ ನೋಟವಾಗಿತ್ತು.

ದ್ವಿತೀಯ ಪುತ್ರ ಎಡ್ವರ್ಡನ ಜನನದ ಕಾಲಕ್ಕಾಗಲೇ ಐನ್‌ಸ್ಟೈನ್ ತಮ್ಮ ವೈಜ್ಞಾನಿಕ ವಿಷಯಗಳಲ್ಲಿ ಆಳವಾಗಿ ಮುಳುಗಿಹೋಗಿದ್ದರು. ಪೇಟೆಂಟ್ ಕಚೇರಿಯ ಕೆಲಸ ಅವರಿಗೆ ಬದಲಾವಣೆ ನೀಡುತ್ತಿದ್ದ ವಿರಾಮದ ಹುದ್ದೆಯಾಯಿತು. ಎಚ್ಚರವಾಗಿದ್ದ ತಮ್ಮ ಉಳಿದೆಲ್ಲ ವೇಳೆಗಳಲ್ಲಿ ಅವರ ಮನಸ್ಸು ಬಿಡಿಸಲಾರದ ಸಮಸ್ಯೆಯೊಂದಿಗೆ ಸೆಣಸಾಡುತ್ತಿತ್ತು. ಅವರು ಮಹಾ ವಿಜ್ಞಾನಿಗಳ ಕಾರ್ಯಗಳನ್ನು ಅಧ್ಯಯನಮಾಡಿ ಅವುಗಳಲ್ಲಿನ ಕೆಲವು ಭಾವನೆಗಳನ್ನು ವಿರೋಧಿಸಿದರು. ಬೆಸ್ಸೋ, ಹಾಬಿಚ್ಟ್ ಮತ್ತಿತರ ಮಿತ್ರರೊಡನೆ ಅದನ್ನು ಕುರಿತು ಚರ್ಚಿಸಿದ್ದರು. ವಿಜ್ಞಾನ ಜಗತ್ತು ಅತ್ಯಂತ ಗೌರವದಿಂದ ಕಾಣುತ್ತಿದ್ದ ಅಭಿಪ್ರಾಯಗಳನ್ನು ವಿರೋಧಿಸಬೇಕಾಗಿ ಬಂದದು ಪೇಚಾಟಕ್ಕಿಟ್ಟುಕೊಂಡಿತು.

ತಿಂಗಳುಗಳು ಕಳೆದಂತೆ ಐನ್‌ಸ್ಟೈನ್‌ರವರ ಮಾನಸಿಕ ಪರಿಶ್ರಮ ಮತ್ತೂ ಕೇಂದ್ರೀಕೃತವಾಯಿತು. ಕೆಲವು ವಿಜ್ಞಾನಿಗಳು ತಮ್ಮ ಭಾವನೆಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷಿಸುತ್ತಾರೆ. ಆದರೆ ಐನ್‌ಸ್ಟೈನ್ ತಮ್ಮ ಭಾವನೆಗಳನ್ನು ಹೆಚ್ಚುಹೆಚ್ಚು ಆಲೋಚಿಸುವುದರ ಮೂಲಕ ಪರೀಕ್ಷಿಸುತ್ತಿದ್ದರು. ಅವರ ಮನಸ್ಸೇ ಅವರಿಗೆ ಪ್ರಯೋಗಾಲಯವಾಗಿತ್ತು. ಅಲ್ಲಿನ ಅವರ ಕಾರ್ಯ ಅದ್ಭುತವಾದುದು. ವೈಯಕ್ತಿಕ ಜೀವನದಲ್ಲಿ ಅವರು ಸೌಮ್ಯವಾಗಿಯೂ ಉದಾಸೀನರಾಗಿಯೂ, ಪ್ರಾಪಂಚಿಕ ವಿಷಯಗಳಲ್ಲಿ ಸಂಪೂರ್ಣ ಅನಾಸಕ್ತರಾಗಿಯೂ ಇರುತ್ತಿದ್ದರು. ವೈಜ್ಞಾನಿಕ ಜೀವನದಲ್ಲಿ ಅವರು ದೃಢವಾಗಿಯೂ, ಪ್ರಭಾವಯುತರೂ, ನಿರ್ಭಯರೂ ಆಗಿದ್ದರು.

ಸಾವಿರದ ಒಂಭೈನೂರೈದನೆಯ ಇಸವಿ ಜೂನ್ ತಿಂಗಳ ಒಂದು ದಿನ. ಅಂದು ಕೆದರಿದ ತಲೆಕೂದಲಿನ ತರುಣನೊಬ್ಬ ಬರ್ನ್ ಅಂಚೆ ಕಚೇರಿಗೆ ಬಂದು ಅಲ್ಲಿನ ಕಾರಕೂನನಿಗೆ ತೂಕಮಾಡಿ ಅಂಚೆ ಚೀಟಿ ಹಚ್ಚಲು ಒಂದು ದಪ್ಪ ಲಕೋಟೆಯನ್ನು ಕೊಟ್ಟನು. ಜರ್ಮನಿಯ ಲೈಪ್‌ಸಿಗ್ ನಗರದ ಸುಪ್ರಸಿದ್ಧ ವೈಜ್ಞಾನಿಕ ಪತ್ರಿಕೆ "ಅನಲೆನ್ ಡೆರ್ ಫಿಸಿಕ್"ನ ವಿಳಾಸವನ್ನು ಅದರ ಮೇಲೆ ನಮೂದಿಸಲಾಗಿತ್ತು. ಲಕ್ಕೋಟೆಯಲ್ಲಿದ್ದುದು ಸಣ್ಣ ಅಕ್ಷರದಲ್ಲಿ ಬರೆದಿದ್ದ ಮುವ್ವತ್ತು ಹಾಳೆಗಳ ಲೇಖನ. ಅದನ್ನು ಕಳುಹಿಸಲು ಅಂಚೆ ವೆಚ್ಚ ಸ್ವಲ್ಪ ಹೆಚ್ಚೇ ಆಗಿತ್ತು. ಆ ತರುಣ ತೆರಬೇಕಿದ್ದ ಹಣವನ್ನು ಎಣಿಸಿಕೊಟ್ಟು ಹಿಂದಿರುಗುತ್ತ ಬೇಸರದ ನಗೆ ಬೀರಿದ್ದನು.

ಐನ್‌ಸ್ಟೈನರು ತಾವು ಕಳೆದ ಕೆಲವು ವರ್ಷಗಳಿಂದ ಮಾಡಿದ್ದ ಆಲೋಚನೆಗಳ ಫಲಿತಾಂಶದ ವೈಜ್ಞಾನಿಕ ವರದಿಯನ್ನು ಅದೇ ತಾನೆ ಕಳುಹಿಸಿದ್ದರು. ದೇಶ, ಕಾಲ ಮತ್ತು ವಿಶ್ವಗಳ ಬಗೆಯನ್ನು ಕುರಿತು ತಾವು ವಿಕಸನಗೊಳಿಸಿದ ಭಾವನೆಗಳನ್ನು ಸುಲಭಗ್ರಾಹ್ಯವಾಗುವಂತೆ ಅದರಲ್ಲಿ ಸರಳವಾಗಿ ನಿರೂಪಿಸಿದ್ದರು. ಭವಿಷ್ಯದ ವಿಜ್ಞಾನಪಥವನ್ನು ಅದು ಸಂಪೂರ್ಣವಾಗಿ ಮಾರ್ಪಡಿಸುವುದೆಂದು ಅವರೂ ಕೂಡ ಊಹಿಸಿರಲಿಲ್ಲ.

ಅಂದು ನಾಲ್ಕನೆಯ ಮಹಡಿಯ ಮೇಲಿದ್ದ ತನ್ನ ಮನೆಗೆ ನಿಧಾನವಾಗಿ ಮೆಟ್ಟಿಲುಗಳನ್ನು ಹತ್ತುತ್ತಿದ್ದ ಐನ್‌ಸ್ಟೈನ್ ತುಂಬ ದಣಿದಿದ್ದರು. ಮಕ್ಕಳು ನಿದ್ದೆ ಮಾಡಿದ್ದರು. ಐನ್‌ಸ್ಟೈನ್ ಹಾಗೆಯೇ ಹಾಸಿಗೆಯ ಮೇಲೆ ಉರುಳಿದುದನ್ನು ಮಿಲೇವಾ ಮೌನ ಮುನಿಸಿ ನಿಂದಲೇ ನೋಡಿದಳು. ಎಂದೂ ಅವಳು ದುಮ್ಮಾನ, ದುಗುಡ ಗಳಿಂದ ಅಪ್ರಸನ್ನಳಾಗಿಯೇ ಇರುತ್ತಿದ್ದಳು. ಬರ್ನ್‌ನಲ್ಲಿ ಅವರಿದ್ದ ದಿನಗಳಲ್ಲಿ ಅವಳು ಜಗಳಗಂಟಿಯೂ ಆಗಿದ್ದಳು. ಆಲ್ಬರ್ಟ್ ನಪ್ಮ ಸುತ್ತಮುತ್ತಲ ಪ್ರತಿ ದಿನದ ಕಾರ್ಯಕಲಾಪಗಳಲ್ಲಿ ತೋರುತ್ತಿದ್ದ ಅನಾಸಕ್ತಿ, ಅಸಡ್ಡೆಯೇ ಅವರ ಪತ್ನಿಯ ಕೋಪಾವೇಶಕ್ಕೆ ಕಾರಣ ವಾಗಿತ್ತು.

"ನಿಮಗೆ ದೇಹಾಲಸ್ಯವಾಗಿದೆ. ನಾನು ವೈದ್ಯರನ್ನು ಕರೆಯು ತ್ತೇನೆ." ಆಕೆ ಸಿಡಿಗುಟ್ಟಿದಳು.

"ಬೇಡ, ಬೇಡ," ಐನ್‌ಸ್ಟೈನ್ ಪಿಸುನುಡಿದರು. "ನನಗೆ ದಣಿವು ಅಷ್ಟೆ. ಬರೀ ದಣಿವು....ಸ್ವಲ್ಪ ವಿರಾಮ ಪಡೆಯಲು ನನ್ನನ್ನು ಬಿಡು".

ಅವರಿಗೆ ಯಾವ ಉದ್ರೇಕಭಾವನೆಯೂ ಇರಲಿಲ್ಲ. ಹಿಡಿದ ಕೆಲಸ ವನ್ನು ತೃಪ್ತಿಕರವಾಗಿ ನಡೆಸಿದುದಕ್ಕಾಗಿ ಉಂಟಾಗುವ ಪ್ರಶಾಂತ ಚಿತ್ತವೂ ಇರಲಿಲ್ಲ. ಅದೇ ತಾನೇ ಅವರು ಅಂಚೆಯ ಮೂಲಕ ಕಳುಹಿಸಿದ ಪ್ರೌಢ ಲೇಖನದಲ್ಲಿ ಹಲವು ವರ್ಷಗಳ ಮಾನಸಿಕ ತುಮುಲ, ಪ್ರಯತ್ನಗಳ ಫಲಿತಾಂಶಗಳು ಅಡಕವಾಗಿದ್ದುವು. ಈ ಪರಿಶ್ರಮ ಅವರ ಶಕ್ತಿಯನ್ನು ತಿಂದುಬಿಟ್ಟಿತ್ತು. ಕಲ್ಲಿದ್ದಲು ಗಣಿ ಯಲ್ಲಿ ಕೆಲಸ ಮಾಡಿದವರಷ್ಟೇ ದಣಿದಿದ್ದರು ಅವರು.

ಐನ್‌ಸ್ಟೈನ್ ಆಯಾಸವನ್ನು ಕಳೆಯಲು ಕೆಲಕಾಲ ಪೇಟೆಂಟ್ ಕಚೇರಿಗೆ ಹೋಗುತ್ತಿರಲಿಲ್ಲ. ಆದರೂ ಅವರ ಮಾನಸಿಕ ಕಾರ್ಯ ನಡೆದೇ ಇತ್ತು. ಅವರು ಮುಂದೆ ಮಾಡಬೇಕಾದದ್ದೂ ಬಹಳವಾ ಗಿತ್ತು. ವಿಜ್ಞಾನ ಜಗತ್ತು ತಮ್ಮ ಕಾರ್ಯವನ್ನು ಎಂತು ಪರಿಗಣಿಸು ವುದೆಂಬ ಭಾವನೆಯನ್ನು ಅವರು ಲೆಕ್ಕಿಸಿರಲಿಲ್ಲ. ತಮ್ಮ ಪ್ರೌಢಲೇಖ ವನ್ನು ಪ್ರಕಟಣೆಗೆ ಕಳುಹಿಸುವಾಗಲೇ ಅದು ಸರಿ ಎಂದು ತಿಳಿದಿದ್ದರು.

ಅವರ ಅಧ್ಯಯನದಲ್ಲಿ ಕೆಲವು ಸಂಗತಿಗಳು ಸತ್ಯವೆಂದು ಗೋಚರವಾಗಿದ್ದುವು—ಶುದ್ಧ ಸ್ಫಟಿಕದಂತೆ. ಬೇರಾವುದೂ ಅದನ್ನು ಬದಲಾಯಿಸುವಂತಿರಲಿಲ್ಲ.

ಐನ್‌ಸ್ಟೈನ್‌ರವರ ವಾದವನ್ನು ಪತ್ರಿಕೆ ಪ್ರಕಟಿಸಿತು. ಲಂಡನ್, ಬರ್ಲಿನ್, ಪ್ಯಾರಿಸ್—ಏಕೆ, ಇಡೀ ಯೂರೋಪಿನಲ್ಲಿಯೇ—ವಿಜ್ಞಾನಿಗಳು ಅತ್ಯಾಶ್ಚರ್ಯದಿಂದ ಅದನ್ನು ಓದಿದರು ಹಿಂದಿನ ನಂಬಿಕೆಗಳಿಂದ ತೀರ ಪ್ರತ್ಯೇಕವಾಗಿದ್ದ ನೂತನ ಕ್ರಾಂತಿಕಾರಿ ಭಾವನೆಯೊಂದು ಅವರ ಮುಂದಿತ್ತು. ಭೌತವಿಜ್ಞಾನಿಗಳು ಯಾರು ಈ ಐನ್‌ಸ್ಟೈನ್ ಎಂದು ತಿಳಿಯಲು ಕುತೂಹಲಿಗಳಾದರು. ಇಷ್ಟು ದಿಟ್ಟನಾಗಿ ಆಲೋಚಿಸಿರುವ ಆ ವ್ಯಕ್ತಿ ಯಾರಿರಬಹುದು? ಯಾವ ವಿದ್ಯಾಸಂಸ್ಥೆಯಲ್ಲಿ ಆತ ಬೋಧಿಸುತ್ತಿರುವನು? ಅವನು ತನ್ನ ಶೋಧವನ್ನು ಯಾವ ಪ್ರಯೋಗಾಲಯದಲ್ಲಿ ನಡೆಸಿದನು? ಇಂತಹ ಕೆಲಸ ಮಾಡಿದವನ ಹೆಸರನ್ನು ತಾವು ಮೊದಲೇ ಏಕೆ ಕೇಳಿರಲಿಲ್ಲ?

"ಈ ಐನ್‌ಸ್ಟೈನ್" ಬರ್ನ್‌ನ ಪೇಟೆಂಟ್ ಕಚೇರಿಯಲ್ಲಿ ಅಜ್ಞಾತ ಗುಮಾಸ್ತನಾಗಿದ್ದನು. ಪ್ರತಿದಿನವೂ ತನ್ನ ಕಚೇರಿಗೆ ತೆರಳಿ, ಸಣ್ಣದು ಅರ್ಜಿಗಳನ್ನು ಪರಿಶೀಲಿಸಿ, ಏನನ್ನೊ ಗೀಚಿದ್ದ ಹಾಳೆಗಳನ್ನು ಗುಪ್ತವಾಗಿ ತನ್ನ ಮೇಜಿನಲ್ಲಡಗಿಸಿದ್ದ ಫೈಲಿನಲ್ಲಿ ಶೇಖರಿಸಿಡುತ್ತಿದ್ದನು.

ಬರ್ಲಿನ್ ವಿಶ್ವವಿದ್ಯಾಲಯದ ಜಗದ್ವಿಖ್ಯಾತ ಭೌತ ವಿಜ್ಞಾನಿಯೊಬ್ಬರು ಸಾಪೇಕ್ಷವಾದದ ವರದಿಯನ್ನು ಓದಿ ಅದರ ಕರ್ತೃವನ್ನು ಕಾಣುವ ನಿರ್ಧಾರ ಮಾಡಿದರು. ಪ್ರೊಫೆಸರ್ ಮ್ಯಾಕ್ಸ್‌ಪ್ಲಾನ್ ಲವೆ ರೈಲು ಹತ್ತಿ ನೇರವಾಗಿ ಬರ್ನ್ ಸೇರಿದರು. ರೈಲ್ವೆ ನಿಲ್ದಾಣದ ಬಳಿಯೇ ಇದ್ದ ಚಿಕ್ಕ ಉಪಾಹಾರ ಗೃಹದಲ್ಲಿ ಅವರು ಐನ್‌ಸ್ಟೈನ್‌ರವರನ್ನು ಸಂದರ್ಶಿಸುವ ಏರ್ಪಾಟು ಮಾಡಿದರು.

ತಮ್ಮನ್ನು ಭೇಟಿಯಾಗಲು ಬಂದ ವ್ಯಕ್ತಿಯನ್ನು ಕಂಡ ಪ್ರೊಫೆಸರ್ ಪ್ಲ್ಯಾನ್‌ಲವೆ ಅತ್ಯಾಶ್ಚರ್ಯಪಟ್ಟರು. ಇನ್ನೂ ಹುಡುಗನಂತೆಯೇ ಇರುವ ವ್ಯಕ್ತಿ! ಆದರೆ ವಿಜ್ಞಾನದಲ್ಲಿ ವಯಸ್ಸು ರೂಪು ಆಕಾರಗಳು ಪ್ರಧಾನವಲ್ಲ. ಬರ್ಲಿನ್‌ನಿಂದ ಬಂದ ವಿಖ್ಯಾತ ಪ್ರೊಫೆಸರರೂ

ಪೇಟೆಂಟ್ ಕಚೇರಿಯ ಸಾಮಾನ್ಯವಾದ ಗುಮಾಸ್ತೆಯೂ ಕೂಡಿ ಕಲೆತು ಪರಸ್ಪರ ಸೌಹಾರ್ದ ಸನ್ನಿವೇಶಗಳಲ್ಲಿ ಮಾತುಕತೆ ನಡೆಯಿಸಿದರು.

ಆಸ್ಟ್ರಿಯಾದ ಸಾಲ್ಸ್‌ಬರ್ಗ್‌ನಲ್ಲಿ ಸದ್ಯದಲ್ಲಿಯೇ ಸಮಾವೇಶಗೊಳ್ಳಲಿದ್ದ ಯೂರೋಪಿನ ವಿಖ್ಯಾತ ವಿಜ್ಞಾನಿಗಳ ಸಮ್ಮೇಳನದಲ್ಲಿ ಮಾತನಾಡಲು ಐನ್‌ಸ್ಟೈನ್‌ರನ್ನು ಆಹ್ವಾನಿಸಲಾಯಿತು. ಇಂತಹವರ ಮುಂದೆ ತಮ್ಮ ಕಾರ್ಯವನ್ನು ವಿವರಿಸುವುದು ಐನ್‌ಸ್ಟೈನರಿಗೆ ತುಂಬ ಪ್ರಿಯವಾದ ಕೆಲಸವಾದುದರಿಂದ ಅವರು ಸಂತೋಷದಿಂದ ಒಪ್ಪಿದರು. ಮಹತ್ವದ ವೈಜ್ಞಾನಿಕ ಗೋಷ್ಠಿಯ ಮುಂದೆ ಇದೇ ಮೊದಲ ಬಾರಿಗೆ ಅವರು ನಿಲ್ಲುತಿದ್ದುದು.

ಮಹಾಪಂಡಿತರ ಸಮ್ಮುಖದಲ್ಲಿ ಅವರು ವೇದಿಕೆಯನ್ನೇರಿದಾಗ ಮುದುರಿಹೋಗಿದ್ದ ಅವರ ಸೂಟು ಭುಜದಿಂದ ಅವಲಕ್ಷಣವಾಗಿ ನೇತಾಡುತ್ತಿತ್ತು; ಅವರ ಕಪ್ಪು ಕೂದಲು ಮುಂಗರುಳುಗಳಾಗಿ ಚದುರಿದವು. ಅವರು ಮಾತನಾಡುವುದಕ್ಕೆ ಮೊದಲು ಮಾಡಿದ ಕೂಡಲೆ ನಿರ್ದಿಷ್ಟ ಪ್ರತಿಭೆ ಶ್ರೋತೃಗಳನ್ನು ಸೆರೆಹಿಡಿಯಿತು. ನಿಸರ್ಗದ ಅತಿ ನಿಗೂಢ ಸಮಸ್ಯೆಗಳಲ್ಲಿ ಕೆಲವನ್ನು ಬಿಡಿಸಿದ ಮಹಾ ಮೇಧಾವಿ ತರುಣ ತಮ್ಮ ಮುಂದಿರುವನೆಂದು ಆ ವಿಜ್ಞಾನಿಗಳು ತಿಳಿದಿದ್ದರು. ಮಾನವನ ಮನಸ್ಸು ಹಿಂದೆಂದೂ ಮುನ್ನುಗ್ಗಿರದಿದ್ದ ಪ್ರದೇಶವನ್ನು ಶೋಧಿಸುವ ಅನ್ವೇಷಣೆಯಲ್ಲಿ ತೊಡಗಿರುವುದರ ಅರಿವು ಅವರಿಗಿತ್ತು. ಅಂದಿನ ಸಭೆಯಲ್ಲಿ ಹಾಜರಿದ್ದ ಯಾರೂ ಆ ಅನುಭವವನ್ನು ಮರೆಯಲಿಲ್ಲ.

ಐನ್‌ಸ್ಟೈನ್ ಪುನಃ ತಮ್ಮ ಪೇಟೆಂಟ್ ಕಚೇರಿಯ ಕೆಲಸಕ್ಕೆ ಹಾಜರಾದರು. ಆ ಕೆಲಸವನ್ನು ಅವರು ಮೆಚ್ಚಿದ್ದುದರಿಂದ ಅದನ್ನು ಬಿಡುವ ಯೋಚನೆ ಅವರಿಗಿರಲಿಲ್ಲ. ಸಾಮಾನ್ಯ ಮನುಷ್ಯನಿಗೆ ಅವರ ಸಾಪೇಕ್ಷವಾದದಲ್ಲಿ ಯಾವ ಆಸಕ್ತಿಯೂ ಇರಲಿಲ್ಲ. ಏಕೆಂದರೆ ಆ ಕಾಲದ ಜನ ಸಾಮಾನ್ಯವಾಗಿ ವಿಜ್ಞಾನ ವಿಷಯಗಳತ್ತ ಗಮನವನ್ನೇ ನೀಡುತ್ತಿರಲಿಲ್ಲ. ವಿದ್ವತ್‌ಪ್ರಪಂಚದಲ್ಲಿ ಮಾತ್ರ ಐನ್‌ಸ್ಟೈನ್‌ರವರ

ಭಾವನೆಗಳು ಕ್ಷೋಭೆಯನ್ನೇ ಉಂಟುಮಾಡಿದ್ದುವು. ಜೂರಿಚ್‌ನಲ್ಲಿ ಕಳವಳವೇ ಆಗಿತ್ತು. ಈ ವ್ಯಕ್ತಿ ಪಾಲಿಟೆಕ್ನಿಕ್‌ನ ಪದವಿಯನ್ನು ಪಡೆದಿದ್ದ. ಆದರೆ ಈಗೇಕೆ ಅದರ ಪ್ರಾಧ್ಯಾಪಕರಲ್ಲೊಬ್ಬನಾಗಿಲ್ಲ? ತಮ್ಮಲ್ಲಿಯೇ ಇದ್ದ ಆತನನ್ನು ಬಳಿಕ ಬಿಟ್ಟುಕೊಟ್ಟದು ಅವರ ಪಾಲಿಗೆ ನಾಚಿಕೆಗೇಡಾಗಿತ್ತು.

ಜೂರಿಚ್ ವಿಶ್ವವಿದ್ಯಾನಿಲಯು ಪಾಲಿಟೆಕ್ನಿಕ್‌ನಷ್ಟು ದೊಡ್ಡ ಸಂಸ್ಥೆಯಾಗಿರಲಿಲ್ಲ. ಆದರ ಡೈರೆಕ್ಟರು ಐನ್‌ಸ್ಟೈನ್‌ರವರ ಕಾರ್ಯ ವನ್ನು ಕಂಡು ಸಂಭ್ರಮಪಟ್ಟಿದ್ದರು. ತಮ್ಮ ಭೌತವಿಜ್ಞಾನ ಶಾಖೆ ಯಲ್ಲಿ ಉಪಪ್ರಾಧ್ಯಾಪಕರ ವೃತ್ತಿಯೊಂದು ಖಾಲಿ ಇರುವುದು ತಮ್ಮ ಅದೃಷ್ಟವೆಂದೇ ಅವರು ತಿಳಿದರು. ಅದರ ಅಧ್ಯಕ್ಷ ಡಾ॥ ಕ್ಲೈನರ್ ಆ ಹುದ್ದೆಗೆ ಐನ್‌ಸ್ಟೈನರನ್ನು ಆಹ್ವಾನಿಸಿದರು.

ಆದರೆ ಅದರಲ್ಲಿ ಎಡರುತೊಡರುಗಳಿದ್ದುವು. ನಿಯಮಗಳ ಪ್ರಕಾರ ಯಾರೂ ನೇರವಾಗಿ ಪ್ರಾಧ್ಯಾಪಕರಾಗುವಂತಿರಲಿಲ್ಲ. ಸಂಪ್ರ ದಾಯದಂತೆ ಅವರು ಕೆಲವು ಕಾಲ ಉಪಅಧ್ಯಾಪಕರಾಗಿ ಕೆಲಸ ಮಾಡಬೇಕಿತ್ತು. ಈ ಕೆಲಸಕ್ಕೆ ವಿಶ್ವವಿದ್ಯಾನಿಲಯದಿಂದ ಯಾವ ವೇತನವೂ ದೊರಕುತ್ತಿರಲಿಲ್ಲ. ಬದಲು ಅವರ ಉಪನ್ಯಾಸಗಳನ್ನು ಕೇಳಲು ಬಂದ ವಿದ್ಯಾರ್ಥಿಗಳು ಅವರಿಗೆ ಶುಲ್ಕವೀಯುತ್ತಿದ್ದರು.

ತಮ್ಮ ಕಾರ್ಯದಿಂದ ವಿಜ್ಞಾನವಲಯಗಳಲ್ಲಿ ಅಲ್ಲೋಲಕ ಲ್ಲೋಲ ಉಂಟಾಗಿದ್ದರೂ ಐನ್‌ಸ್ಟೈನ್‌ರವರು ಮಾತ್ರ ಯಾವ ಉದ್ರೇಕಕ್ಕೂ ತುತ್ತಾಗದೆ ಸಮಾಹಿತರಾಗಿದ್ದರು. ಕೂಡಲೇ ಜೂರಿ ಚ್‌ಗೆ ತೆರಳಿ ಅಲ್ಲಿನ ಉಪಅಧ್ಯಾಪಕ ವೃತ್ತಿಯನ್ನು ಸೇರುವುದು ಅವ ರಿಗೆ ಸಾಧ್ಯವಿರಲಿಲ್ಲ. ಆ ಹುದ್ದೆಯನ್ನು ಸೇರಲು ಅವರು ಸಮರ್ಥ ರಿರಲಿಲ್ಲ. ಅವರು ಒಂದು ಸಂಸಾರವನ್ನು ನಿರ್ವಹಿಸಬೇಕಿತ್ತು. ಪೇಟೆಂಟ್ ಕಚೇರಿಯ ಕೆಲಸದಲ್ಲೇ ಅವರು ತೃಪ್ತರಾಗಿದ್ದರು. ವೈಯು ಕ್ತಿಕವಾಗಿ ಅವರು ಯಾವ ಅಭಿಲಾಷೆಯನ್ನೂ ಹೊಂದಿರಲಿಲ್ಲ. ತಮ್ಮಷ್ಟಕ್ಕೆ ತಮ್ಮನ್ನು ಬಿಟ್ಟರೆ ಅವರಿಗೆ ಸಾಕಾಗಿತ್ತು. ಹಿಂದಿನಂತೆ ಅವರು ತಮ್ಮ ಕೆಲಸವನ್ನು ಮುಂದುವರಿಸುವ ಆಶೆಹೊಂದಿದ್ದರು.

ಆದರೆ ಜೂರಿಚ್ ವಿಶ್ವವಿದ್ಯಾನಿಲಯ ಅವರನ್ನು ಬಲಾತ್ಕರಿಸು ತಿತ್ತು. ಕೊನೆಗೆ ಅವರು ಬರ್ನ್‌ನಲ್ಲಿ ವಿಶ್ವವಿದ್ಯಾನಿಲಯದ ಪೂರ್ಣ ಕಾಲವಲ್ಲದ ಅಧ್ಯಾಪಕರಾಗಿಯಾದರೂ ಕೆಲಸಮಾಡುವಂತೆ ಡಾ॥ ಕ್ಲೆಯಿನರ್ ಅವರನ್ನು ಒಪ್ಪಿಸಿದರು. ಹೀಗೆ ಮಾಡುವುದರಿಂದ ಅವರು ತಮ್ಮ ಪೇಟೆಂಟ್ ಕಚೇರಿಯನ್ನೇನೂ ಬಿಡಬೇಕಾಗಿರಲಿಲ್ಲ. ಮುಂದೆ ಜೂರಿಚ್‌ನಲ್ಲಿ ಪ್ರಾಧ್ಯಾಪಕರಾಗುವುದಕ್ಕೂ ಅವರು ಸಿದ್ಧರಾಗಬಹು ದಿತ್ತು.

ಉಪನ್ಯಾಸವೀಯುವುದೇನೂ ಅಷ್ಟು ಪ್ರತಿಫಲ ನೀಡುವ ಕೆಲಸ ವಲ್ಲವೆಂಬುದು ಅವರಿಗೆ ವೇದ್ಯವಾಯಿತು. ಅವರು ಹೊಸ ಶೋಧಗ ಳಲ್ಲಿ ಆಸಕ್ತರಾಗಿದ್ದುದರಿಂದ ಉಷ್ಣ ವಿಜ್ಞಾನವನ್ನು ಕುರಿತು ಉಪ ನ್ಯಾಸ ನೀಡುವುದೆಂದರೆ ಅವರ ಗಮನವನ್ನು ಬೇರೆಡೆ ಸೆಳೆದಂತೆ ಆಗು ತ್ತಿತ್ತು. ಆದರೆ ಇಬ್ಬರು ವಿದ್ಯಾರ್ಥಿಗಳು ಮಾತ್ರ ತಪ್ಪದೇ ಅವರ ಉಪನ್ಯಾಸ ಕೇಳಲು ಬರುತ್ತಿದ್ದರು. ಒಬ್ಬ ಟೆಲಿಗ್ರಾಫ್ ಕಚೇರಿಯ ನೌಕರ, ಸ್ವಯಾರ್ಜನೆಯಿಂದ ಭೌತವಿಜ್ಞಾನದಲ್ಲಿ ವಿಶೇಷ ಪಾಂಡಿತ್ಯ ಪಡೆದಿದ್ದವ. ಮತ್ತೊಬ್ಬ ವಿದ್ಯಾರ್ಥಿ ಐನ್‌ಸ್ಟೈನರ ಮಿತ್ರ ಬೆಸ್ಸೋ. ಅಧಿಕೃತವಾಗಿ ಅವರನ್ನು ಉಪಅಧ್ಯಾಪಕರೆಂದು ಕರೆಯಲು ಈ ಇಬ್ಬರು ವಿದ್ಯಾರ್ಥಿಗಳೇ ಸಾಕಿತ್ತು.

ಉಪನ್ಯಾಸಗಳು ಅವರಿಗೆ ನಿಮಿತ್ತ ಮಾತ್ರವಾಗಿದ್ದುವು. ಐನ್ ಸ್ಟೈನ್ ತಮ್ಮಿಬ್ಬರು ಮಿತ್ರರೊಡನೆ ಸಂಭಾಷಣೆ ನಡೆಯಿಸಿ ವಿಷಯವನ್ನು ಕುರಿತು ತಮ್ಮ ಭಾವನೆಗಳನ್ನು ವಿವರಿಸುತ್ತಿದ್ದರು. ಒಂದು ದಿನ ಅವರು ಉಪನ್ಯಾಸಕ್ಕೆಂದು ಬಂದಾಗ ಮೂರನೆಯವರೊಬ್ಬರನ್ನು ಕಂಡರು. ಜೂರಿಚ್ ವಿಶ್ವವಿದ್ಯಾನಿಲಯದ ಡಾ॥ ಕ್ಲೈನರ್! ತರುಣ ಉಪನ್ಯಾಸಕ ಇದರಿಂದೇನೂ ಕಳವಳಗೊಳ್ಳಲಿಲ್ಲ. ಅವರು ಎಂದಿ ನಂತೆಯೇ ಪ್ರಶಾಂತತೆಯಿಂದ, ಅನೌಪಚಾರಿಕವಾಗಿ, ಸ್ವಲ್ಪ ನಿರ್ಲ ಕ್ಷ್ಯದಿಂದಲೇ ತಮ್ಮ ಮಾತನ್ನು ಮುಂದುವರಿಸಿದರು.

ಇದರಿಂದ ಡಾ॥ ಕ್ಲೈನರ್ ಅಸಮಾಧಾನಗೊಂಡಿದ್ದರು. ಭವಿ ಷ್ಯದ ಪ್ರೊಫೆಸರರು ಬೋಧಿಸುವ ರೀತಿ ಇದಾಗಿರಲಿಲ್ಲ. ಅದರಲ್ಲಿ

ಘನತೆ ಗಾಂಭೀರ್ಯವಾಗಲೀ ಮೆರುಗಾಗಲೀ ಇರಲಿಲ್ಲ. ಅವರು ಐನ್‌ಸ್ಟೈನ್‌ರೊಡನೆ ಆ ಬಳಿಕ ಮಾತನಾಡಿದರು. "ನಿಜಕ್ಕೂ, ಡಾಕ್ಟರ್, ನಿಮ್ಮ ಉಪನ್ಯಾಸಗಳು ವಿಶ್ವವಿದ್ಯಾನಿಲಯ ನಿರೀಕ್ಷಿಸುವ ಮಟ್ಟದ್ದಾಗಿಲ್ಲವೆಂದು ನಾನು ಸೂಚಿಸಬಯಸುತ್ತೇನೆ. ಇದರಲ್ಲಿ ಆಸಕ್ತಿಯೇ ನಿಮಗೆ ಇಲ್ಲವೆಂದು ತೋರುತ್ತದೆ.........ಕೇವಲ ಇಬ್ಬರೇ ವಿದ್ಯಾರ್ಥಿಗಳು. ಪ್ರಾಯಶಃ ನೀವು ಸ್ವಲ್ಪ ಪ್ರಚೋದಕ ರೀತಿಯಲ್ಲಿ...."

ಐನ್‌ಸ್ಟೈನ್ ನಡುವೆ ಬಾಯಿಹಾಕಿದರು. "ನೀವು ಹೇಳುವುದು ಸರಿ, ಪ್ರೊಫೆಸರ್ ಕ್ಲೈನರ್. ನಾನು ಈ ಬಗೆಯ ಬೋಧನೆಯಲ್ಲಿ ಹೇಳಿಕೊಳ್ಳುವಂತಹವನಲ್ಲ. ನಾನು ಪ್ರಾಧ್ಯಾಪಕ ಪದವಿಯನ್ನು ಕೇಳುವುದೂ ಇಲ್ಲ. ಬೇರೊಬ್ಬರನ್ನು ನೀವು ಚುನಾಯಿಸಿಕೊಳ್ಳಿರೆಂದು ನಾನು ಸೂಚಿಸುತ್ತೇನೆ." ಐನ್‌ಸ್ಟೈನ್ ಕೋಪಾವಿಷ್ಟರಾಗಿಯಾಗಲೀ ಅಸಮಾಧಾನದಿಂದಾಗಲೀ ಹಾಗೆಂದಿರಲಿಲ್ಲ. ನಿಜಕ್ಕೂ ಅವರು ತಮ್ಮ ಪೇಟೆಂಟ್ ಕಚೇರಿಯನ್ನು ಬಿಟ್ಟು ಹೋಗಲಾಶಿಸಿರಲಿಲ್ಲ.

ಕೆರಳಿದ ಡಾ। ಕ್ಲೈನರ್ ಇದನ್ನು ಜೂರಿಚ್‌ಗೆ ವರದಿಮಾಡಿದರು. ಉಪಪ್ರಾಧ್ಯಾಪಕರ ಹುದ್ದೆಯನ್ನು ಹೇಗಾದರೂ ತುಂಬಬೇಕಿತ್ತು. ಉಳಿದ ಒಬ್ಬರೇ ಸ್ಪರ್ಧಿ ವಿಯನ್ನದ ಡಾ। ಫ್ರೆಡ್‌ರಿಕ್ ಆಡ್ಲರ್‌ರವರು. ಆದರೆ ಈ ವಿಷಯವನ್ನು ತಿಳಿದ ಆಡ್ಲರ್‌ರವರು ಹೀಗೆ ಬರೆದರು: "ಆ ಹುದ್ದೆಗೆ ನನ್ನನ್ನು ಪರಿಗಣಿಸುವ ಗೌರವ ತೋರಿದುದಕ್ಕೆ ನನ್ನ ವಂದನೆಗಳು. ಆದರೆ, ಐನ್‌ಸ್ಟೈನರನ್ನೇನಾದರೂ ಪಡೆಯುವ ಸಾಧ್ಯತೆಯಿದ್ದರೆ ಅವರಂತಹ ಕೌಶಲ, ಯೋಗ್ಯತೆಯುಳ್ಳವರಿಗೆ ನಾನು ಪ್ರತಿಸ್ಪರ್ಧಿಯಾಗಬಯಸುವುದಿಲ್ಲ."

ಅನೇಕ ವರ್ಷಗಳ ಕಾಲ ವಿವಿಧ ಕೆಳ ದರ್ಜೆಗಳಲ್ಲಿದ್ದು ಉಪಪ್ರಾಧ್ಯಾಪಕರ ಹುದ್ದೆಗೇರುವುದು ರೂಢಿಯಿದ್ದಾಗ ಜೂರಿಚ್ ವಿಶ್ವವಿದ್ಯಾನಿಲಯ, ಇನ್ನೂ ತಮ್ಮ ಮೂರನೆಯ ದಶಕದಲ್ಲಿದ್ದ ಐನ್‌ಸ್ಟೈನರನ್ನು ಆ ಹುದ್ದೆಗೆ ಔಪಚಾರಿಕವಾಗಿ ಆಹ್ವಾನಿಸಿತು.

೮. ವಿಚಿತ್ರ ತರುಣ ಪ್ರಾಧ್ಯಾಪಕ

"ಅಮ್ಮ, ನಿನ್ನ ಮಂಕು ಮಗ ಈಗ ನಿಜವಾದ ಪ್ರೊಫೆಸರ್ ಆಗಲಿದ್ದಾನೆ! ನೆನೆಸಿಕೋ ಆ ಚಿತ್ರವನ್ನು!" ಪ್ರತಿಸಲದ ತಮ್ಮ ಸೋಲಿನ ಕಥೆಯ ಬದಲು ಆಕೆಗೆ ಸಂತೋಷ ತರುವ ಸುದ್ದಿಯನ್ನು ತಿಳಿಸಲು ಐನ್‌ಸ್ಟೈನ್ ತಮ್ಮ ಹೊಸ ಹುದ್ದೆಯನ್ನು ಕುರಿತು ಆನಂದದಿಂದ ಹೀಗೆ ಹಾಸ್ಯವಾಡಿ ತಾಯಿಗೆ ಕಾಗದ ಬರೆದರು.

ಇದರಿಂದ ಐನ್‌ಸ್ಟೈನ್‌ರವರಿಗೆ ವೈಯಕ್ತಿಕ ಹೆಮ್ಮೆಯೇನೂ ಬಂದಿರಲಿಲ್ಲ. ತಾವು ಬಯಸಿದ ಭೌತ ವಿಜ್ಞಾನ ವಿಭಾಗಕ್ಕೆ ಪೂರ್ಣಕಾಲವನ್ನು ವಿನಿಯೋಗಿಸಲು ಸಾಧ್ಯವಾದುದೇ ಅವರ ಏಕೈಕ ಆಲೋಚನೆಯಾಗಿತ್ತು. ಇದುವರೆಗೂ ಅವರ ಕಲ್ಪನೆಯನ್ನು ಕೆರಳಿಸಿ ಆಲೋಚನೆಗಳನ್ನು ಸೆರೆಹಿಡಿದಿದ್ದ ಕೆಲಸವನ್ನು ಅವರು ಒಂದು ಹವ್ಯಾಸವಾಗಿ ನಡೆಯಿಸಿದ್ದರು. ತಮ್ಮ ಆಸಕ್ತಿಗಳಲ್ಲಿ ಪಾಲ್ಗೊಳ್ಳುವವರ ಮತ್ತು ತಮ್ಮನ್ನು ಅರ್ಥಮಾಡಿಕೊಳ್ಳುವವರ ನಡುವೆ ತಾವೂಸ್ಥಾನ ಪಡೆಯುವ ದಿನವನ್ನು ಕಾಣಲು ಅವರು ಕಾಯುತ್ತಿದ್ದರು.

ಅವಳಿಗೆ ಸಹಜವಾದ ಮೌನ ಹಾಗು ದುಮ್ಮಾನದಿಂದ ಮಿಲೇವಾ ಈ ಬದಲಾವಣೆಯಿಂದ ಸಂತಸ ಹೊಂದಿದಳು. ಅದರಿಂದ ತಾವು ಪುನಃ ಜೂರಿಚ್‌ಗೆ ಮರಳುವುದಂತೂ ಖಚಿತವಾಗಿತ್ತು. ಬರ್ನ್‌ನಲ್ಲಂತೂ ತೃಪ್ತಿ ಕಂಡಿರಲಿಲ್ಲ. ತಾವು ವಿದ್ಯಾರ್ಜನೆ ಮಾಡಿದ ನಗರವಾದರೂ ತನಗೆ ಹರ್ಷದಾಯಕವಾಗಬಲ್ಲದೇನೋ ಎಂಬ ಪ್ರತೀಕ್ಷೆ ಆಕೆಯದು.

ಅವರು ಇನ್ನೂ ಸಂಸಾರ ಹೂಡಿ ಹೆಚ್ಚು ದಿನಗಳಾಗಿರಲಿಲ್ಲ. ಆಗಲೇ ಮಿಲೇವಾ ಮತ್ತು ಆಲ್ಬರ್ಟ್ ಐನ್‌ಸ್ಟೈನರು ತಮ್ಮ ನೂತನ ಜೀವನಕ್ಕೆ ಒಗ್ಗುವಂತೆ ತಮ್ಮ ಅಭಿಪ್ರಾಯಗಳನ್ನು ತಿದ್ದಿಕೊಳ್ಳಬೇಕಾಯಿತು. ಪ್ರಾಧ್ಯಾಪಕರಾದುದರಿಂದುಂಟಾದ ಸಾಮಾಜಿಕ ಕರ್ತ

ವ್ಯಗಳು ಅವರನ್ನು ಹೆಚ್ಚಿನ ಜವಾಬ್ದಾರಿಗೆ ಗುರಿಮಾಡಿದುವು. ಬರ್ನ್‌ನಂತೆ ಅವರು ಮೇಲಿನ ಮಹಡಿಯಲ್ಲಿ ವಾಸಿಸದೆ ವಿಶಾಲವಾದ ಮನೆಯಲ್ಲಿ ವಾಸಿಸಬೇಕಾಯಿತಲ್ಲದೆ ಅವರ ಇನ್ನಿತರ ಸಾಂಸಾರಿಕ ವೆಚ್ಚಗಳೂ ವರ್ಧಿಸಿದುವು. ಆದರೆ ಐನ್‌ಸ್ಟೈನ್‌ರ ವೇತನ ಅವರು ಪೇಟೆಂಟ್ ಕಚೇರಿಯಲ್ಲಿ ಪಡೆಯುತ್ತಿದ್ದುದಕ್ಕಿಂತಲೂ ಹೆಚ್ಚೇನಿರಲಿಲ್ಲ. ತಮ್ಮ ಅಲ್ಪ ಗಳಿಕೆಯಲ್ಲಿಯೇ ಅವರು ಸಂಸಾರವನ್ನು ನಿರ್ವಹಿಸಬೇಕಾಯಿತು, ಕಾರ್ಪಣ್ಯ ಕಲಿಯಬೇಕಾಯಿತು.

ಸಾಮಾಜಿಕ ಜೀವನ, ಬದುಕಿನ ಸಮಸ್ಯೆಗಳೇನೂ ಐನ್‌ಸ್ಟೈನ್‌ರವರಿಗೆ ಹೊರೆಯಾಗಿರಲಿಲ್ಲ. ಅವಾವುವೂ ಅವರನ್ನು ಸಮೀಪಿಸಿಯೇ ಇರಲಿಲ್ಲ. ತಾವು ಮಾಡುತ್ತಿದ್ದ ಅರ್ಥಪೂರ್ಣ ವೈಜ್ಞಾನಿಕ ಕಾರ್ಯದೊಡನೆ ಹೋಲಿಸಿದಾಗ ಬೇರಾವುದೂ ಅವರಿಗೆ ಪ್ರಧಾನವೆನಿಸಿರಲಿಲ್ಲ. ತಾವು ತಿಳಿಯಬೇಕೆಂದಿದ್ದ ಸಂಗತಿಗಳನ್ನು ತಿಳಿಯಲಾಗದಿದ್ದಾಗ ತಮ್ಮ ತಾರುಣ್ಯದಲ್ಲಿ ಉಂಟಾಗುತ್ತಿದ್ದ ಮನೋವ್ಯಥೆಯೇನೂ ಅವರಿಗಾಗುತ್ತಿರಲಿಲ್ಲ. ಈಗ ಅವರಲ್ಲಿ ಆಂತರಿಕ ತೃಪ್ತಿಯುಂಟಾಗಿತ್ತು; ತಾವು ಮಾಡುತ್ತಿರುವ ಕೆಲಸದಲ್ಲಿ ನಂಬುಗೆ ಭರವಸೆಗಳಿದ್ದವು. ಇವು ಅವರನ್ನು ಪ್ರತಿನಿತ್ಯದ ಕಿರಿಕಿರಿಯಿಂದ ಹಿಂದೆಂದಿಗಿಂತಲೂ ದೂರವಿಟ್ಟಿದ್ದುವು.

ಇಂತಹ ಮನೋಭಾವವುಳ್ಳ ಐನ್‌ಸ್ಟೈನರಿಗೆ ಇತರರೆಲ್ಲರಿಗೂ ಪ್ರಧಾನವಾಗಿದ್ದ ಉಡುಪಿನ ಬಾಹ್ಯಾಡಂಬರವಾಗಲಿ ಸಾಂಪ್ರದಾಯಿಕ ನಡವಳಿಕೆಯಾಗಲಿ ಮುಖ್ಯವಾಗಿ ತೋರುವುದು ಅಸಾಧ್ಯವಾಗಿತ್ತು. ಇವೆಲ್ಲ ಅವರಿಗೆ ಹಾಸ್ಯಾಸ್ಪದವಾಗಿದ್ದುವು. ಮಿಕ್ಕೆಲ್ಲ ಪ್ರಾಧ್ಯಾಪಕರು ಬಳಸುವಂತಹ ಹೊಸ ಔಪಚಾರಿಕ ಉಡುಪನ್ನು ಕೊಂಡುಕೊಳ್ಳುವಂತೆ ಮಿಲೇವಾ ಹೇಳಿದಾಗ ಅವರು ನಕ್ಕರು. "ಚೀಲದೊಳಗಿನ ಆಹಾರಕ್ಕಿಂತ ಚೀಲವೇ ಹೆಚ್ಚು ಬೆಲೆಯುಳ್ಳದ್ದಾದಾಗ ಎಂತಹ ಅಚಾತುರ್ಯವಾಗುತ್ತದೆ! ಇಲ್ಲ, ಇಲ್ಲ, ಮಿಲೇವಾ, ಉತ್ತಮ ಉಡುಪು ನನ್ನ ಕಾರ್ಯವನ್ನೇನೂ ಉನ್ನತಗೊಳಿಸುವುದಿಲ್ಲ. ನನ್ನ ಹಳೆಯ ಉಡುಪುಗಳೇ ನನಗೆ ಹೆಚ್ಚು ಆಹ್ಲಾದಕರವಾಗಿರುತ್ತವೆ".

ತಿಂಗಳುಗಳು ಕಳೆದಂತೆ, ಉಪಪ್ರಾಧ್ಯಾಪಕರ ವೃತ್ತಿ ತಾವು ಬಯಸಿದಂತಿಲ್ಲವೆಂದು ಐನ್‌ಸ್ಟೈನ್‌ರವರಿಗೆ ಅರಿವಾಯಿತು. ಉಪನ್ಯಾಸಗಳಿಗಾಗಿ ತಯಾರಾಗುವುದು, ವಿದ್ಯಾರ್ಥಿಗಳೊಡನೆ ಸಮಾಲೋಚನೆ ಮತ್ತು ಕಚೇರಿಯಲ್ಲಿ ಕೆಲಸ ಮಾಡುವುದು–ಇವೆಲ್ಲ ಅವರ ಬಹಳ ವೇಳೆಯನ್ನು ತೆಗೆದುಕೊಳ್ಳುತ್ತಿತ್ತು. ತಮ್ಮ ಸಂಶೋಧನಾ ಕಾರ್ಯಕ್ಕೆ ಬೇಕಾಗಿದ್ದ ಏಕಾಂತತೆ ಮತ್ತು ಕಾಲ ಅತಿ ಕಡಿಮೆಯಾಗತೊಡಗಿತು. ಬರ್ನ್‌ನಲ್ಲಿದ್ದಾಗ ತಾವು ಮಾಡಿದ ವೈಜ್ಞಾನಿಕ ಕಾರ್ಯದ ಬಳಿಕ ಮನಸ್ಸನ್ನು ಕೊರೆಯುತ್ತಿದ್ದ ಹೊಸ ಆಲೋಚನೆಗಳಿಗೆ ರೂಪ ಕೊಡಲು ಅವರ ಮನಸ್ಸು ಹಾತೊರೆಯುತ್ತಿತ್ತು.

ಇದು ವರೆಗೂ ಅವರ ಸಾಪೇಕ್ಷವಾದ ಮನೆ ಕಟ್ಟುವುದಕ್ಕಾಗಿ ಎಬ್ಬಿಸಿದ್ದ ಗೋಡೆ ಮಾಳಿಗೆಗಳಂತೆ ಮಾತ್ರ ಕಂಡಿತ್ತು. ಅದೊಂದು ಸ್ಥೂಲಚಿತ್ರಣವಾಗಿತ್ತು. ಅಳತೆ, ಆಕಾರಗಳೆಲ್ಲವೂ ಅಚ್ಚುಕಟ್ಟಾಗಿದ್ದುವು. ಆದರೆ ಅವರ ವಾದ ಪೂರ್ಣ ಹಾಗು ನಿರ್ದುಷ್ಟವೆನಿಸಲು ಅವರು ಮಾಡಬೇಕಾದ ಗಾರೆ ಬಣ್ಣಗಳ ಕೆಲಸ ಇನ್ನೂ ಇತ್ತು. ಬರ್ನ್‌ನ ಪೇಟೆಂಟ್ ಕಚೇರಿಯಲ್ಲಿ ನಿರ್ಬಂಧಿತರಾಗಿ ತಮ್ಮ ಕಾರ್ಯದ ಬಗೆಗೆ ಚಿಂತನ–ಮಂಥನ ನಡೆಯಿಸುತ್ತಿದ್ದು, ರಾತ್ರಿಯ ವೇಳೆಗೆ ತಮ್ಮ ಸರಳ ಸಜ್ಜಿತ ಸಣ್ಣ ಮಹಡಿ ಸೇರುತ್ತಿದ್ದ ನೆಮ್ಮದಿಯ ಆ ದಿನಗಳನ್ನು ನೆನೆದು ಈರ್ಷ್ಯೆ ಪಡುತ್ತಿದ್ದರು.

ಸಂಪೂರ್ಣ ವಿನಯವೆಂಬುದು ಐನ್‌ಸ್ಟೈನ್‌ರವರ ವ್ಯಕ್ತಿತ್ವವಾಗಿತ್ತು. ಅವರಿಗೆ ಬೇಕಾಗಿದ್ದುದಾದರೂ ತಮ್ಮ ಕಾರ್ಯವನ್ನು ಮುಂದುವರಿಸಲು ತಮ್ಮ ಪಾಡಿಗೆ ತಮ್ಮನ್ನು ಬಿಟ್ಟರೆ ಸಾಕಾಗಿತ್ತು. ಆದರೆ ಅವರ ಸಾಧನೆ, ಅವರ ಕೀರ್ತಿ, ಕುರುಚಲು ಪೊದೆಯಲ್ಲಿ ಪಸರಿಸುವ ಜ್ವಾಲೆಯಂತೆ, ನಿಧಾನವಾಗಿ ಆದರೆ ನಿಸ್ಸಂದಿಗ್ಧವಾಗಿ ಹರಡತೊಡಗಿತು. ಯೂರೋಪಿನ ಎಲ್ಲೆಡೆಯಿಂದಲೂ ಅವರಿಗೆ ಗೌರವ, ಸನ್ಮಾನಗಳು ಬರತೊಡಗಿದುವು; ಅನೇಕ ವೈಜ್ಞಾನಿಕ ಸಂಸ್ಥೆಗಳು ಅವರನ್ನು ಉಪನ್ಯಾಸಕ್ಕಾಗಿ ಆಹ್ವಾನಿಸಿದವು. ತಮ್ಮ ಕೆಲಸವನ್ನು ಬಿಟ್ಟು ದೂರದ ಪ್ರಯಾಣಗಳಿಗಾಗಿ ಕಾಲ ವೆಚ್ಚ

ಮಾಡಲಾಶಿಸದೆ ಅವರು ಕೇಲವೇ ಆಹ್ವಾನಗಳಿಗೆ ಮನ್ನಣೆಯೀಯು ತ್ತಿದ್ದರು.

ಎಲ್ಲಿ ಅವರ ಭಾಷಣವೆಂದರೂ ಸರಿಯೆ ಜಗತ್ತಿನ ಖ್ಯಾತ ವಿಜ್ಞಾನಿಗಳು ಅದನ್ನು ಕೇಳಲು ಬರುತ್ತಿದ್ದರು. ಜೂರಿಚ್‌ನ ನೂತನ ಪ್ರಾಧ್ಯಾಪಕರನ್ನು ಆಲಿಸಲು ಪ್ಯಾರಿಸ್ಸಿನಲ್ಲಿ ಮೇಡಮ್ ಕ್ಯೂರಿ ತಮ್ಮ ಪ್ರಯೋಗಾಲಯವನ್ನು ಬಿಟ್ಟುಬಂದರು. ಐನ್‌ಸ್ಟೈನ್ ಬ್ರಸೆಲ್ಸ್‌ನಲ್ಲಿ ಭಾಷಣ ಮಾಡಿದಾಗ ಅವರ ಶ್ರೋತೃಗಳಲ್ಲಿ ಆ ಕಾಲದ ವಿಖ್ಯಾತ ಭೌತ ವಿಜ್ಞಾನಿ ಮ್ಯಾಕ್ಸ್ ಪ್ಲಾಂಕ್‌ರವರಿದ್ದರು. ಉಪನ್ಯಾಸಾನಂತರ ಪ್ಲಾಂಕ್ ಮತ್ತು ಐನ್‌ಸ್ಟೈನ್ ದೀರ್ಘಸಮಾಲೋಚನೆ ನಡೆಸಿದರು. ಎತ್ತರದ ಗೌರವಾನ್ವಿತ ಜರ್ಮನ್ ಶ್ರೀಮಂತ ಮತ್ತು ಕೆದರಿದ ತಲೆಗೂದಲಿನ ಹರಕು ಉಡುಪಿನ ಈ ತರುಣ ಬಹಳ ಆಸ್ಥೆಯಿಂದ, ಅಷ್ಟೇ ತೃಪ್ತಿಯಿಂದ, ಮಾತುಕತೆ ನಡೆಸಿದರು. ತಮ್ಮ ಆಲೋಚನಾ ಜಗತ್ತಿನಲ್ಲಿ ಅವರು ಸಮಾನ ಸೋದರರಾಗಿದ್ದರು.

ಜೀವನ ಪರ್ಯಂತ ಅವರನ್ನು ಕಾಡಿದ ಜಗದ್ವ್ಯಾಪಕ ಕೀರ್ತಿ ಐನ್‌ಸ್ಟೈನ್‌ರವರಿಗೆ ಬರಲಾರಂಭಿಸಿದುದು ಈ ಸಮಯದಲ್ಲೇ. ಸಧ್ಯಕ್ಕೆ ಅವರ ಕಾರ್ಯ ಕೇವಲ ವಿಜ್ಞಾನಿಗಳಿಗೆ ಮಾತ್ರ ಪರಿಚಯವಿದ್ದು ಅವರು ಮಾತ್ರ ಆಸಕ್ತಿ ಮತ್ತು ಗೌರವದ ಭಾವನೆಗಳಿಂದ ಐನ್‌ಸ್ಟೈನರನ್ನು ಅರಸುತ್ತಿದ್ದರು. ಉಳಿದ ಜಗತ್ತಿಗೆ ಅವರಿನ್ನೂ ಅಜ್ಞಾತಪುರುಷರಾಗಿಯೇ ಇದ್ದರು.

ಜೂರಿಚ್‌ನಲ್ಲಿ ಇನ್ನೂ ಬಹಳಕಾಲ ಕಳೆದಿರಲಿಲ್ಲ, ಅಗಲೇ ಪ್ರಾಗ್ ವಿಶ್ವವಿದ್ಯಾನಿಲಯ ಅವರನ್ನು ಪೂರ್ಣ ಪ್ರಾಧ್ಯಾಪಕ ಹುದ್ದೆಗೆ ಆಹ್ವಾನಿಸಿತು. ಸ್ವಲ್ಪವೂ ಹಿಂಜರಿಯದೆ ಐನ್‌ಸ್ಟೈನ್ ಅದನ್ನು ಒಪ್ಪಿದರು. ಅನುದಿನದ ಕರ್ತವ್ಯಗಳ ಕೀಟಲೆಗಳಿಂದ ವರ್ಜಿತವಾಗಿದ್ದ ಈ ಹುದ್ದೆ ಹೆಚ್ಚಿನ ಸಂಬಳವನ್ನೂ ನೀಡುತ್ತಿದ್ದುದರಿಂದ ಐನ್‌ಸ್ಟೈನ್‌ರವರ ಸಾಂಸಾರಿಕ ಜೀವನವೂ ಹೆಚ್ಚು ಸೌಕರ್ಯದಿಂದ ನಡೆಯಬಹುದಾಗಿತ್ತು. ಯೂರೋಪಿನ ಹಳೆಯ ವಿಶ್ವವಿದ್ಯಾನಿಲಯಗಳಲ್ಲೊಂದಾಗಿದ್ದು ಪ್ರಾಗ್ ವಿಶ್ವವಿದ್ಯಾನಿಲಯದ ಅಧ್ಯಾಪಕ ವರ್ಗವು ತನ್ನ ಎಲ್ಲ

ವ್ಯಾಸಂಗಕ್ಷೇತ್ರಗಳಲ್ಲೂ ವಿದ್ವಾಂಸರನ್ನೇ ಪಡೆದಿತ್ತು. ಆ ವಿದ್ವತ್ ಪೂರ್ಣ ವಾತಾವರಣದಲ್ಲಿ ಕೆಲಸ ಮಾಡಲು ಜಗತ್ತಿನ ವಿವಿಧ ಭಾಗ ಗಳಿಂದ ಶ್ರದ್ಧಾಸಕ್ತ ವಿದ್ಯಾರ್ಥಿಗಳು ಬರುತ್ತಿದ್ದರು.

ಅವರು ಜೂರಿಚ್‌ಗೆ ಪ್ರಯಾಣ ಬೆಳೆಸಿದ್ದಕ್ಕಿಂತಲೂ ಪ್ರಾಗ್‌ಗೆ ತೆರಳಿದುದು ಸುಲಭವಾಗಿತ್ತು. ಐನ್‌ಸ್ಟೈನ್ ದಂಪತಿಗಳು ಹೆಚ್ಚು ಅನುಭವಶಾಲಿಗಳಾಗಿದ್ದು ಏನನ್ನು ನಿರೀಕ್ಷಿಸಬಹುದೆಂದು ತಿಳಿದಿದ್ದರು. ಆದರೂ ಅವರಿನ್ನೂ ಸರಿಯಾಗಿ ನೆಲಸುತ್ತಿದ್ದಂತೆಯೇ ಪ್ರತಿ ಹೊಸ ಸದಸ್ಯನೂ ವಿಶ್ವವಿದ್ಯಾನಿಲಯದ ವಿವಿಧ ಶಾಖೆಗಳ ಅಧ್ಯಾಪಕ ವರ್ಗ ದವರ ಮನೆಗೆ ಭೇಟಿ ಕೊಡಬೇಕೆನ್ನುವ ಸಂಪ್ರದಾಯವೊಂದಿರುವು ದನ್ನು ಐನ್‌ಸ್ಟೈನ್‌ರವರಿಗೆ ತಿಳಿಸಿದರು. ಈ ಬಗೆಯ ಔಪಚಾರಿಕ ಆಚಾರವನ್ನು ಕಡೆಗಣಿಸುತ್ತಿದ್ದ ಐನ್‌ಸ್ಟೈನ್‌ರವರಿಗೆ ಇದು ಮೂರ್ಖ ತನವೆಂದೆಣಿಸಿತು. ಆದರೂ ಅವರು ಎಲ್ಲರ ವಿಳಾಸದ ಪಟ್ಟಿಯೊಂ ದನ್ನು ಮಾಡಿ ವಾರಕ್ಕೆ ಒಂದು ಅಪರಾಹ್ನವನ್ನು ಮುಡುಪಾಗಿಟ್ಟು ತಮ್ಮ ಭೇಟಿಯನ್ನು ಸುಸ್ವಭಾವದಿಂದಲೇ ಪ್ರಾರಂಭಿಸಿದರು.

"ಈ ಪ್ರಯಾಸಕರ ಭೇಟಿ ಮಾಡಬೇಕಾಗಿರುವುದರಿಂದ ಈ ಸುಂದರ ನಗರವನ್ನಾದರೂ ನೋಡಿದಂತಾಗುವುದು" ಎಂದ, ಅವರು ಆಲೋಚಿಸಿದರು. ಅವರ ಮೊದಲ ಭೇಟಿಗಳಿಗೆ ಪಟ್ಟಣದ ಅತ್ಯಂತ ಚರಿತ್ರಾರ್ಹ ಸ್ಥಳಗಳಲ್ಲಿರುವ ಮನೆಗಳನ್ನು ಆಯ್ಕೆ ಮಾಡಿಕೊಂಡರು. ಪ್ರಾಗ್ ನಗರದ ರೋಮಾಂಚಕ ಹೆಗ್ಗುರುತುಗಳನ್ನೂ, ಚಿತ್ರಯೋಗ್ಯ ಪ್ರದೇಶಗಳನ್ನೂ ನೋಡುತ್ತ ಕಾಲೆಳೆದುಕೊಂಡು ನಡೆದರು. ಅವ ರಿಗೆ ಆಸಕ್ತಿಯಾಗಿದ್ದ ಎಲ್ಲವನ್ನೂ ನೋಡಿದ ಬಳಿಕ ಇದ್ದಕ್ಕಿದ್ದಂತೆಯೇ ಈ ಭೇಟಿಗಳನ್ನು ನಿಲ್ಲಿಸಿಬಿಟ್ಟರು.

ಯಾವ ಪ್ರಾಧ್ಯಾಪಕರುಗಳನ್ನು ನೋಡದೆ ನಿರ್ಲಕ್ಷಿಸಿದ್ದರೋ ಅವರೆಲ್ಲರಿಗೂ ಇದು ಒಗಟಾಯಿತು; ಮುಖಭಂಗವೂ ಆಯಿತು. ನಗರದ ಅನಾಸಕ್ತ ಪ್ರದೇಶದಲ್ಲಿದ್ದುದರಿಂದ ಐನ್‌ಸ್ಟೈನ್ ತಮ್ಮನ್ನು ಕಾಣಲು ಬರಲಿಲ್ಲವೆನ್ನುವುದನ್ನು ತಿಳಿಯುವ ಯಾವ ಮಾರ್ಗವೂ ಅವರುಗಳಿಗಿರಲಿಲ್ಲ. ಐನ್‌ಸ್ಟೈನ್‌ರವರು ಬಾರದಿದ್ದುದಕ್ಕೆ ಆ ಅಧ್ಯಾ

ಪಕರುಗಳ ಸಂಸಾರ ವರ್ಗ ಕುಪಿತರಾದರು. ಈ ವೇಳೆಗಾಗಲೇ ಅವರು ಕೀರ್ತಿಯು ಸಾಕಷ್ಟು ಹಂತವೇರಿದ್ದುದರಿಂದ ಅವರನ್ನು ಭೇಟಿ ಮಾಡಿ ಈ ಉದಯೋನ್ಮುಖ ತರುಣ ವಿಜ್ಞಾನಿ ತಮ್ಮ ಅತಿಥಿಯಾಗಿದ್ದರೆಂದು ಹೇಳಿಕೊಳ್ಳಬೇಕೆಂಬ ಕುತೂಹಲ, ಕಾತುರ ಅವರಿಗಿತ್ತು.

ಬೋಧಕ ಪ್ರಾಧ್ಯಾಕಪನ ಹುದ್ದೆಗೆ ಸಂಬಂಧಿಸಿದ ಕರ್ತವ್ಯಗಳನ್ನೆಲ್ಲ ಸಂಪೂರ್ಣವಾಗಿ ಮಾಡುತ್ತಿದ್ದಾಗ್ಯೂ ಅವರು ತಮ್ಮ ಸಂಶೋಧನೆಗಳನ್ನು ಮುಂದುವರೆಸಿದ್ದರು. ಅವರ ಚಿತ್ ಪ್ರಯೋಗಾಲಯದಲ್ಲಿ ಗಡಿಯಾರಕ್ಕೆ ಸ್ಥಾನವಿರಲಿಲ್ಲ. ಅವರ ಸೃಜನಾತ್ಮಕ ಮನಸ್ಸು ಸುತ್ತಲಿನ ಯಾವುದರಿಂದಲೂ ಸೋಂಕಿತವಾಗದೆ ಅವರೆಲ್ಲಿದ್ದರೂ ಸರಿಯೆ—ಉದ್ಯಾನದಲ್ಲಿ ಗಾಳಿ ಸಂಚಾರ ಮಾಡುತ್ತಿರುವಾಗಲಾಗಲಿ, ವಿಶ್ವವಿದ್ಯಾನಿಲಯದ ತಮ್ಮ ಸ್ಥಾನದಲ್ಲಿ ಕುಳಿತಾಗಲಾಗಲಿ, ಅಳುವ ಮಗುವಿನ ತೊಟ್ಟಿಲನ್ನು ತೂಗಿ ಮಲಗಿಸುವಾಗಲಾಗಲಿ—ತನ್ನ ಕೆಲಸವನ್ನು ನಡೆಸುತ್ತಿತ್ತು. ಅವರ ಚಿತ್ತೈಕಾಗ್ರತೆ ಅಪಾರವಾದುದು.

ಮೊದಮೊದಲು ಅವರ ವಿದ್ಯಾರ್ಥಿಗಳು ಅವರಿಂದ ಸಹಾಯವನ್ನಪೇಕ್ಷಿಸಲು ಹಿಂಜರಿಯುತ್ತಿದ್ದರು. ಗಾಢ ಆಲೋಚನೆಯಲ್ಲಿ ತೊಡಗಿದ್ದಾಗ ತಮ್ಮ ಪರಿಸರದಲ್ಲಿನ ಯಾವ ಕ್ರಿಯೆಯನ್ನೂ ಅರಿಯದಂತೆ ಬಹುದೂರವಿರುವಂತೆ ಭಾಸವಾಗುತ್ತಿದ್ದ ಈ ಮೃದುಸ್ವಭಾವದ ತರುಣ ಪ್ರಾಧ್ಯಾಪಕರನ್ನು ಕಂಡು ಅವರು ಮಂತ್ರಮುಗ್ಧರಾಗಿ ನಿಂತು ಬಿಡುತ್ತಿದ್ದರು.

ಆದರೆ ಅವರೇ ತಮ್ಮ ವಿದ್ಯಾರ್ಥಿಗಳಿಗೆ ಹೇಳಿದರು: "ಯಾವಾಗ ನಿಮಗೆ ಬೇಕೆನಿಸಿದರೂ ನನ್ನನ್ನು ಅಡ್ಡಯಿಸಿರಿ. ನನ್ನ ಕೆಲಸವೆಲ್ಲವೂ ಇಲ್ಲಿದೆ," ಎಂದು ಬೆರಳಿನಿಂದ ತಮ್ಮ ತಲೆಯನ್ನು ಕುಟ್ಟಿ, ನಕ್ಕು, "ನೀವು ಬಿಟ್ಟ ಕೂಡಲೇ ಸಾವಧಾನದಿಂದ ಕಾಯುತ್ತಿರುವ ಆ ಸ್ಥಳಕ್ಕೆ ನಾನು ಪುನಃ ಹೋಗಬಹುದು."

ಯೂರೋಪಿನ ಇನ್ನಿತರ ವಿಶ್ವವಿದ್ಯಾನಿಲಯಗಳಿಂದ ಅವರಿಗೆ ಆಹ್ವಾನ ಬಂದಿತ್ತಾದರೂ ಐನ್‌ಸ್ಟೈನ್ ಒಂದು ಹುದ್ದೆಯಿಂದ

ಮತ್ತೊಂದು ಹುದ್ದೆಗೆ ಹಾರುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಭಾವಿಸಿದರು. ರಾಜಕೀಯ ಪ್ರಕ್ಷುಬ್ಧತೆಯು ಅವರನ್ನು ಕಳವಳಕ್ಕೀಡುಮಾಡಿತ್ತು. ಯೂರೋಪಿನ ಕೆಲವು ಸ್ಥಳಗಳಲ್ಲಿ ತಾವು ಸ್ವತಂತ್ರವಾಗಿ ಕೆಲಸ ಮಾಡುವುದೂ ಸಾಧ್ಯವಿಲ್ಲವೆಂದು ಅವರು ತಿಳಿದರು. ಬಾಲ್ಕನ್ ಪ್ರದೇಶಗಳಲ್ಲಿ ನಡೆಯುತ್ತಿದ್ದ ಸಣ್ಣಪುಟ್ಟ ಕದನಗಳು ಜಾಗತಿಕ ಯುದ್ಧವಾಗಿಯೇ ಪರಿಣಮಿಸಬಹುದೆಂಬ ಭೀತಿಯೂ ಇತ್ತು. ಜರ್ಮನಿಯ ಹೊಸ ಸಾರ್ವಭೌಮ ಎರಡನೆಯ ವಿಲಿಯಂ, ದೊಡ್ಡ ಸೈನ್ಯ ಮತ್ತು ನೌಕಾದಳವನ್ನು ರಚಿಸಿ ಹೊಸ ವಸಾಹತುಗಳನ್ನಪೇಕ್ಷಿಸುವ ಬುಡ ಭದ್ರವಿಲ್ಲದ ರಾಜನಾಗಿದ್ದನು. ಹೊಸ ಜರ್ಮನಿಯ ಈ ಯುದ್ಧ ಬೆದರಿಕೆಯ ಕ್ರಿಯೆಗಳು ಯೂರೇಪಿನ ಇತರ ರಾಜ್ಯಗಳಲ್ಲಿ ಕ್ಷೋಭೆಯನ್ನುಂಟುಮಾಡಿದುವು.

ಮಧ್ಯ ಯುರೋಪಿನ ಅಶಾಂತಿಯು ಪ್ರಾಗ್ ನಗರವನ್ನೂ ತಟ್ಟಿದ್ದುದರಿಂದ ಶಾಂತಿಗೆ ಧಕ್ಕೆಯುಂಟಾಗುವುದೆಂದು ಐನ್‌ಸ್ಟೈನ್ ಭವಿಷ್ಯವನ್ನು ಗ್ರಹಿಸಿದರು. ಅವರು ಎಲ್ಲ ಬಗೆಯ ಹಿಂಸೆಯನ್ನು ದ್ವೇಷಿಸುತ್ತಿದ್ದರಲ್ಲದೆ ಜನರು ಬಲಪ್ರಯೋಗವಿಲ್ಲದೆಯೇ ತಮ್ಮ ವ್ಯತ್ಯಾಸಗಳನ್ನು ಬಗೆಹರಿಸಿಕೊಳ್ಳದಿರುವುದಕ್ಕಾಗಿ ಖೇದಗೊಂಡಿದ್ದರು.

ಈ ವೇಳೆಗೆ ಅವರ ಹಳೆಯ ಶಾಲೆಯಾದ ಫೆಡರಲ್ ಪಾಲಿಟೆಕ್ನಿಕ್ ಅವರನ್ನು ಪೂರ್ಣ ಪ್ರಾಧ್ಯಾಪಕ ಹುದ್ದೆಗೆ ಆಹ್ವಾನಿಸಿತು. ಅವರು ಮಿಲೇವಾರೊಡನೆ ಇದನ್ನು ಕುರಿತು ಚರ್ಚಿಸಿದರು. "ಈ ಆಹ್ವಾನವೆಲ್ಲವನ್ನೂ ಅವ್ಯವಸ್ಥೆಗೊಳಿಸುತ್ತೇನೆ ಎಂದು ಆಕೆಗೆ ಹೇಳಿದರು "ಈಗ ಜೂರಿಚ್‌ಗೆ ಪುನಃ ಹಿಂದಿರುಗಬೇಕಾದ ಕಾರಣವೇನಿಲ್ಲ. ನಾನು ಇಲ್ಲಿಯೇ ತೃಪ್ತಿಯಿಂದಿದ್ದೇನೆ; ನನ್ನ ಕೆಲಸವನ್ನೂ ಮಾಡಬಲ್ಲೆ."

ಮಿಲೇವಾಳ ಕಣ್ಣುಗಳು ಮಿಂಚಿದುವು. "ಈ ಆಹ್ವಾನ ನನಗೆ ಬಹಳ ಸಂತೋಷವಾಗಿದೆ......ಬಹಳ ಸಂತೋಷ. ಈ ಧೂಳಿನ ಕೊಂಪೆಯನ್ನು ಬಿಟ್ಟು ಹೋಗುವುದೆಂದರೆ ನನಗೆ ಬಹಳ ಸಂತೋಷ."

"ಆದರೆ ನೀನು ಇಲ್ಲಿಯೂ ಸಂತೋಷವಾಗಿರಬಲ್ಲೆ! ನಿನಗೆ ಬೇಕಾದುದೆಲ್ಲವೂ ಇಲ್ಲಿದೆ."

"ನಾನು ಎಂದೂ ಇಲ್ಲಿ ಸುಖವಾಗಿರಲಾರೆ. ಜೂರಿಚನ್ನು ಬಿಟ್ಟರೆ ನಾನು ಮತ್ತೆಲ್ಲಿಯೂ ಸುಖ ಕಾಣಲಾರೆ. ಅದೊಂದೇ ಕಡೆ ನನಗೆ ಸ್ವಲ್ಪ ಶಾಂತಿ ಸಿಕ್ಕಿದ್ದು."

ಐನ್‌ಸ್ಟೈನ್ ನಿಡುಸುಯ್ದರು. "ಆದರೆ ನಾವಿನ್ನೂ ಇಲ್ಲಿ ಸರಿಯಾಗಿ ನೆಲೆಸಿಯೇ ಇಲ್ಲ......"

"ನಾನು ಜೂರಿಚ್‌ಗೆ ಹಿಂದಿರುಗಬಯಸುತ್ತೇನೆ!" ದೃಢ ನಿರ್ಧಾರದ ಸಂಕೇತವೆಂಬಂತೆ ಮಿಲೇವಾಳ ತೆಳ್ಳನೆಯ ತುಟಿಗಳು ಭದ್ರವಾಗಿ ಒಂದಕ್ಕೊಂದು ಅಂಟಿಕೊಂಡಿದ್ದಂತೆಯೇ ಆಕೆ ಕೊಠಡಿಯಾಚೆ ಧಾವಿಸಿದಳು.

ತಾವು ೧೯೧೨ರ ಬೇಸಿಗೆ ವ್ಯಾಸಂಗ ಕಾಲದ ಬಳಿಕ ಹುದ್ದೆಯನ್ನು ಬಿಡುವುದಾಗಿ ಐನ್‌ಸ್ಟೈನ್ ಪ್ರಾಗ್ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ತಿಳಿಸಿದರು. ಐನ್‌ಸ್ಟೈನರ ಸಂಸಾರ—ಆಲ್ಬರ್ಟ್, ಮಿಲೇವಾ, ಪುಟ್ಟ ಆಲ್ಬರ್ಟ್ ಮತ್ತು ಎಡ್ವರ್ಡ್-ಮನೆಯ ಸಾಮಾನುಗಳನ್ನು ಗಂಟು ಮೂಟೆ ಕಟ್ಟಿ ಪುನಃ ಜೂರಿಚ್‌ಗೆ ತೆರಳಿತು.

ಪ್ರಾಗ್ ಬಿಟ್ಟು ಹೋಗುತ್ತಿದ್ದ ಐನ್‌ಸ್ಟೈನ್ ಇದರಿಂದ ತಾವು ರಾಷ್ಟ್ರ ಕಚೇರಿಯಲ್ಲೊಂದೆಡೆ ಅಲ್ಪ ಸ್ವಲ್ಪ ಅವ್ಯವಸ್ಥೆಯನ್ನುಂಟು ಮಾಡಿ ಹೋಗುತ್ತಿರುವೆವೆಂಬುದನ್ನು ತಿಳಿಯಲಿಲ್ಲ. ದೇಶವನ್ನು ಬಿಟ್ಟು ಹೋಗುವ ಪ್ರತಿ ನೌಕರನೂ ತೊಡಕಿನ ಒಂದು ತಃಖ್ತೆಯನ್ನು ತುಂಬಬೇಕಿತ್ತು. ಸಂಪ್ರದಾಯಶರಣರಲ್ಲದ ಐನ್‌ಸ್ಟೈನ್ ಎಂದಿನಂತೆ ಅದನ್ನೂ ತುಂಬದೆ ಹೋಗಿದ್ದರು. ಅನೇಕ ವರ್ಷಗಳ ನಂತರ ಜಗದ್ವಿಖ್ಯಾತ ವ್ಯಕ್ತಿಯಾಗಿ ಅವರು ಪ್ರಾಗ್‌ನಲ್ಲಿ ವಿಶೇಷ ಉಪನ್ಯಾಸವೊಂದನ್ನು ಕೊಡಲು ಬಂದಾಗ ಅವರ ಸಹೋದ್ಯೋಗಿಗಳೊಬ್ಬರು "ಐನ್‌ಸ್ಟೈನ್ ಅಪೂರ್ಣ" ಎಂಬ ಶಿರೋನಾಮೆಯ ಫೈಲಿನ ಕತೆಯನ್ನು ನಗುತ್ತಾ ತಿಳಿಸಿದರು.

"ಅಯ್ಯೋ! ನನ್ನ!" ಎಂದು ಉದ್ಗಾರವೆಳೆದು, ನಗುತ್ತಾ, "ಅದನ್ನು ಖಂಡಿತವಾಗಿಯೂ ನಾನು ತಿದ್ದಲೇಬೇಕು. ಆ ಕಾರಕೂನನನ್ನು ಕೂಡಲೆ ಚಿಂತೆಯಿಂದ ವಿಮುಕ್ತನನ್ನಾಗಿಸಬೇಕು!" ಅವರು

ನುಡಿದರು. ಅನೇಕ ಗಣ್ಯ ಮಹನೀಯರು ಅವರಿಗಾಗಿ ಕಾಯುತ್ತಿರಲು ಐನ್‌ಸ್ಟೈನ್ ಆ ಕಚೇರಿಗೆ ಹೋಗಿ ತಮ್ಮ ತಃಖ್ತೆಯನ್ನು ಭರ್ತಿ ಮಾಡಿದ ಮೇಲೆ ಕಾರಕೂನನು ಆ ಫೈಲನ್ನು "ಐನ್‌ಸ್ಟೈನ್ ಸಂಪೂರ್ಣ" ಎಂದು ಮುದ್ರೆಯೊತ್ತುವುದನ್ನು ಕಂಡು ಸಂತುಷ್ಟರಾದರು.

ತಮ್ಮ ಹಳೆಯ ಶಾಲೆಯ ಅಧ್ಯಾಪಕ ವರ್ಗಕ್ಕೆ ಪ್ರಸಿದ್ಧ ಪುರುಷರಾಗಿ ಹಿಂತಿರುಗಿದ ಐನ್‌ಸ್ಟೈನ್‌ರವರ ಕಣ್ಣು ಹೊಳೆದುದೇ ಆದಲ್ಲಿ ಅದು ಒಪ್ಪತಕ್ಕುದೇ. ಯಾವ ಪ್ರಾಧ್ಯಾಪಕರು ಅವರನ್ನು ಅಲಕ್ಷ್ಯ ಸ್ವಭಾವದವ, ಮಂದಬುದ್ಧಿಯುವ ಎಂದು ಆರಂಭದ ಕೆಲಸವನ್ನು ನೀಡಿರಲಿಲ್ಲವೋ ಅವರೇ ಐನ್‌ಸ್ಟೈನ್‌ರು ಹಜಾರವನ್ನು ಹಾದುಹೋಗುತ್ತಿದ್ದಾಗ ದೈನ್ಯದಿಂದ ತಲೆ ತಗ್ಗಿಸುತ್ತಿದ್ದರು.

ಈ ಕ್ಷುಲ್ಲಕ ಸಂಗತಿಗಳಿಗೆ ಐನ್‌ಸ್ಟೈನ್ ಮನಸ್ಸುಕೊಟ್ಟವರೇ ಅಲ್ಲ. ತಮ್ಮ ಸಾಪೇಕ್ಷವಾದದಲ್ಲಿ ಉದ್ಭವಿಸಿದ್ದ ನೂತನ ಸಮಸ್ಯೆಗಳಲ್ಲಿ ಅವರು ಸಿಲುಕಿಕೊಂಡಿದ್ದರು. ಅವರು ಪ್ರಾಗ್‌ನಲ್ಲಿದ್ದ ಕಾಲಕ್ಕೆ ಹಿಂದೆಂದೂ ಆಸಕ್ತಿ ಕೆರಳಿಸದಿದ್ದಂತಹ ಫಲಿತಾಂಶಗಳನ್ನು ಪ್ರಕಟಿಸಿದ್ದರು. ಆದರೂ ಅವರು ಮಾಡಬೇಕಾಗಿದ್ದ ಕೆಲಸ ಬಹಳವಿತ್ತು. ಈ ವ್ಯಕ್ತಿಯಿಂದ ಮೂಡಿಬಂದ ಅದ್ಭುತಭಾವನೆಗಳನ್ನು ಕಂಡು ಭೌತಜ್ಞರಿಗೆ ಬೆರಗು ಬಡಿದಿತ್ತು. ಆದರೆ ತಮ್ಮನ್ನು ಮುಂದುವರಿಸುವಂತೆ ಪ್ರೇರೇಪಿಸುತ್ತಿದ್ದ ನೂತನ ಸಂಶೋಧನೆಗಳು ಮಾತ್ರವೇ ಐನ್‌ಸ್ಟೈನ್‌ರ ಕಣ್ಣಿನ ಮುಂದಿದ್ದುವು.

ಜೂರಿಚ್‌ನಲ್ಲಿ ಅವರು ಅನಿರೀಕ್ಷಿತವಾಗಿ ಸಹಾಯಕನೊಬ್ಬನನ್ನು ಸಂಪಾದಿಸಿದರು. ಮಾರ್ಸೆಲ್ ಗ್ರಾಸ್‌ಮಾನ್‌ರವರು ಅಲ್ಲಿದ್ದರು. ಹಳೆಯ ಗೆಳೆಯರಿಬ್ಬರೂ ಪುನಃ ಕೂಡಿ ಕೆಲಸಮಾಡುವುದರಲ್ಲಿ ತೃಪ್ತಿ ಕಂಡರು. ಗ್ರಾಸ್‌ಮಾನ್‌ರವರ ವಿಶ್ವಾಸನೀಯ ಲೆಕ್ಕಾಚಾರಗಳು ಐನ್‌ಸ್ಟೈನ್‌ರವರನ್ನು ಗಣಿತದ ಗೊಂದಲದಿಂದ ಬಿಡಿಸಿದ್ದುವು. ಅವರ ಕಾರ್ಯ ಶ್ರದ್ಧಾಪೂರ್ವಕವಾಗಿ ತೀವ್ರಗತಿಯಿಂದ ಸಾಗಿ ಅವರು ಜೂರಿಚ್‌ನಲ್ಲಿರುವಾಗಲೇ ಮತ್ತೊಂದು ವರದಿಯನ್ನು ಪ್ರಕಟಿಸಿದರು.

ಆದರೆ ಅವರು ಜೂರಿಚ್‌ನಲ್ಲಿ ಬಹಳ ದಿನವಿರಲಿಲ್ಲ. ವರ್ಷ

ಕೂಡ ತುಂಬಿರದಿದ್ದಾಗ ಬರ್ಲಿನ್ನಿನ ಪ್ರಷ್ಯಾದ ವಿಜ್ಞಾನಿಗಳ ಅಕಾಡೆಮಿಯು ಸದಸ್ಯ ಸ್ಥಾನಕ್ಕೆ ಅವರನ್ನು ಆಹ್ವಾನಿಸಿತು. ನಿಜಕ್ಕೂ ಇದು ತೀವ್ರಾಲೋಚನೆಯಿಂದಲೇ ಪರಿಗಣಿಸಬೇಕಿದ್ದ ಆಹ್ವಾನವಾಗಿತ್ತು. ಬೋಧನೆಯಾಗಲಿ ಮತ್ತಾವುದೇ ಕೆಲಸವಾಗಲಿ ಇರದೆ ಐನ್‌ಸ್ಟೈನ್ ತಮ್ಮ ಎಲ್ಲ ವೇಳೆಯನ್ನೂ ಸಂಶೋಧನೆಗೇ ವಿನಿಯೋಗಿಸಬಹುದಿತ್ತು. ಅವರಿಂದ ಮತ್ತೇನನ್ನೂ ಅಪೇಕ್ಷಿಸುತ್ತಿರಲಿಲ್ಲ. ಅಕಾಡೆಮಿಯ ಡೈರೆಕ್ಟರರಾದ ಮ್ಯಾಕ್ಸ್ ಪ್ಲಾಂಕ್ ಮತ್ತಿತರ ಜಗದ್ವಿಖ್ಯಾತ ವಿಜ್ಞಾನಿಗಳು ಅವರ ಸಹೋದ್ಯೋಗಿಗಳಾಗಿರುತ್ತಿದ್ದರು.

ವಾಸ್ತವದಲ್ಲಿ ಐನ್‌ಸ್ಟೈನ್‌ರರಿಗೆ ಜೂರಿಚನ್ನು ಬಿಟ್ಟು ಹೋಗುವ ಅಪೇಕ್ಷೆಯಿರಲಿಲ್ಲ. ಅಲ್ಲಿಯೇ ಅವರು ಸಂತೃಪ್ತರಾಗಿದ್ದರು. ಜರ್ಮನಿಯಲ್ಲಿನ ತಮ್ಮ ಬಾಲ್ಯದ ದಿನಗಳ ಕಹಿ ಅನುಭವಗಳನ್ನು ಸ್ಮರಿಸಿ ಪುನಃ ಅಲ್ಲಿ ಹೋಗಿ ಬಾಳಲು ಅವರ ಮನಸ್ಸು ಹಿಂಜರಿಯುತ್ತಿತ್ತು. ಆದರೆ ಅವರ ಕಾರ್ಯ ಅವರಿಗೆ ಪ್ರಧಾನವಾಗಿತ್ತು. ಸ್ವತಂತ್ರವಾಗಿದ್ದು ಸಂಶೋಧನೆ ಹೊರತಾಗಿ ಮತ್ತೇನನ್ನೂ ಮಾಡದಿರುವ ಸುಸಮಯವೊದಗಿತ್ತು. ಅದನ್ನವರು ಒಪ್ಪಲೇ ಬೇಕಾಯಿತು.

ಅವರು ಒಂದೇ ಒಂದು ಕೋರಿಕೆಯನ್ನು ಬೇಡುವವರಿದ್ದರು— ತಾವು ಸ್ವಿಸ್ ಪ್ರಜೆಯಾಗಿ ಉಳಿಯುವಂತೆ ಬಿಡಬೇಕು ಎಂದು. ಐನ್‌ಸ್ಟೈನ್‌ರವರನ್ನು ಬರ್ಲಿನ್ನಿಗೆ ಸಂಪಾದಿಸಿಕೊಳ್ಳಬೇಕೆಂಬ ಉತ್ಕಟಾಕಾಂಕ್ಷೆಯಿಂದ ಅಕಾಡೆಮಿಯ ಡೈರೆಕ್ಟರರು ಇದಕ್ಕೂ ಒಪ್ಪಿದರು. ಅಭಿಮಾನಿ ಜರ್ಮನರು ಅಪೂರ್ವ ವಿನಾಯಿತಿಯೊಂದನ್ನು ಮಾಡಿದರು-ಪ್ರಷ್ಯಾದ ಅಕಾಡೆಮಿಯ ಸದಸ್ಯ ಪರದೇಶದ ಪ್ರಜೆಯಾಗಿರುವುದು! ಆದರೆ, ಅದೆಂತಹ ವಿನಾಯಿತಿಯಾದರೂ ಸರಿಯೆ, ಅವರಿಗೆ ಐನ್‌ಸ್ಟೈನ್ ಬೇಕಿದ್ದರು.

ಆದರೆ ಅವರಿಗೆ ಬೇರೆಡೆಯಿಂದ ತೊಂದರೆ ಕಾದಿತ್ತು. "ನಾನು ಮತ್ತೆ ಜೂರಿಚ್ ಬಿಡುವುದಿಲ್ಲ" ಎಂದು ತನ್ನ ಪತಿಗೆ ದೊರೆತಿದ್ದ ಅವಕಾಶವನ್ನು ಕೇಳಿದಾಗ ಮಿಲೇವಾ ದೃಢಸಂಕಲ್ಪದಿಂದ ಹೇಳಿದಳು.

"ಐನ್‌ಸ್ಟೈನ್ ಆಕೆಯೊಡನೆ ವಿವೇಚಿಸುವ ಪ್ರಯತ್ನಮಾಡಿದರು.

"ನಿನಗಿದು ಅರ್ಥವಾಗಲೇ ಬೇಕು – ನೀನೂ ಒಬ್ಬ ವಿಜ್ಞಾನಿ. ಇಂಥ ಸದವಕಾಶವೆಂದರೇನೆಂದು ನಿನಗೆ ತಿಳಿಯದೆ"?

ಆದರೆ ಮಿಲೇವಾ ತನ್ನ ಪತಿಯ ಕಾರ್ಯದಲ್ಲಿ ಆಸಕ್ತಿಯ ನಟನೆಯನ್ನು ತೋರಿಸಿಯೂ ಕೂಡ ಅನೇಕ ವರ್ಷಗಳಾಗಿದ್ದುವು. ಗಾಢಾಲೋಚನೆಯಲ್ಲಿ ಆವೃತರಾಗಿರುತ್ತಿದ್ದ ಐನ್‌ಸ್ಟೈನರನ್ನು ಅರಿತುಕೊಳ್ಳಲು ಆಕೆಯ ಕಹಿ ಸ್ವಭಾವ ಎಡೆಗೊಡುತ್ತಿರಲಿಲ್ಲ. ಅತೃಪ್ತಿ ಅವಳಲ್ಲಿ ಎಂದೂ ತಾಂಡವವಾಡುತ್ತಿತ್ತು.

ತಮ್ಮ ಹೊಸ ಹುದ್ದೆಗೆ ಹೊರಡುವ ಕಾಲ ಸಮೀಪಿಸಿದಾಗ ಐನ್‌ಸ್ಟೈನ್ ಒಂಟಿಯಾಗಿಯೇ ತೆರಳಿದರು. ಬರ್ಲಿನ್‌ಗೆ ತನ್ನನ್ನನುಸರಿಸಿ ಆಕೆ ಎಂದೂ ಬರುವವಳಲ್ಲವೆಂದು ಐನ್‌ಸ್ಟೈನ್ ಮತ್ತು ಮಿಲೇವಾರಿಬ್ಬರಿಗೂ ತಿಳಿದಿತ್ತು.

೯. ಯುದ್ಧದ ದಿನಗಳು

ಸಾವಿರದ ಒಂಭೈನೂರ ಹದಿನಾಲ್ಕನೆಯ ವರ್ಷದ ವಸಂತ ಕಾಲ. ಉಂಟರ್ ಡೆನ್ ಲಿಂಡೆನ್ ಉದ್ಯಾನದಲ್ಲಿನ ಮರಗಳಲ್ಲಿ ಹೃದಯಾಕಾರದ ಎಲೆಗಳು ಮೂಡತೊಡಗಿ ಉದ್ಯಾನದ ಹೆಸರನ್ನು ಅನ್ವರ್ಥಗೊಳಿಸಿದ್ದುವು. ರಾಷ್ಟ್ರೀಯ ಪುಸ್ತಕಭಂಡಾರದ ಬೃಹತ್ ಕಟ್ಟಡವು ಈ ಉದ್ಯಾನದಲ್ಲಿಯೇ ಇದ್ದಿತು. ಪ್ರಷ್ಯಾದ ವಿಜ್ಞಾನಿಗಳ ಅಕಾಡೆಮಿಗಾಗಿ ಈ ಭವನದ ಮುಂಭಾಗವೆಲ್ಲವನ್ನೂ ಬಳಸಿಕೊಳ್ಳಲಾಗಿತ್ತು. ರಸ್ತೆಯ ಆ ಪಕ್ಕಕ್ಕಿದ್ದ ಬರ್ಲಿನ್ ವಿಶ್ವವಿದ್ಯಾನಿಲಯದ ಕಟ್ಟಡದ ಮೇಲೆ ಸೂರ್ಯರಶ್ಮಿ ಬೆಳಗುತ್ತಿರುವುದನ್ನು ಐನ್‌ಸ್ಟೈನ್ ಸಮ್ಮೇಳನ ಕೊಠಡಿಯ ಕಿಟಕಿಯ ಬಳಿ ನಿಂತು ಎವೆಯಿಕ್ಕದೆ ನೋಡುತ್ತ ನಿಂತರು.

ಇಲ್ಲಿನ ಅವರ ಬದುಕು ಅವರು ಅಶಿಸಿದಂತೆಯೇ ಇತ್ತು. ಬಹಳ ದಿನಗಳಾಗಿರದಿದ್ದರೂ ಅವರು ಬರ್ಲಿನ್‌ನಲ್ಲಿ ಅಚ್ಚುಕಟ್ಟಾಗಿ ನೆಲೆಸಿಬಿಟ್ಟಿದ್ದರು. ಕೋಣೆಯೊಂದನ್ನು ಬಾಡಿಗೆಗೆ ತೆಗೆದುಕೊಂಡು ಅವರು ತಮ್ಮ ವೈಯಕ್ತಿಕ ಆವಶ್ಯಕತೆಗಳನ್ನು ಅಲ್ಪತಮಕ್ಕಿಳಿಸಿಕೊಂಡು, ತಮ್ಮೆಲ್ಲ ಆಲೋಚನೆಗಳನ್ನೂ ವಿಜ್ಞಾನ ಕಾರ್ಯಕ್ಕೆ ಸಂಪೂರ್ಣವಾಗಿ ವಿನಿಯೋಗಿಸುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು.

ಮಿಲೇವಾ ಮತ್ತು ಹುಡುಗರು ಇಲ್ಲದಿರುವುದು ಕಷ್ಟಕರವಾಗಿದ್ದರೂ ಐನ್‌ಸ್ಟೈನ್‌ರವರ ಆಸಕ್ತಿಯೆಲ್ಲವೂ ತಮ್ಮ ಕೆಲಸದಲ್ಲಿ ಕೇಂದ್ರೀಕೃತವಾಗಿದ್ದುದರಿಂದ ಅವರೇನೂ ವಿಷಾದಪಟ್ಟಿರಲಿಲ್ಲ. ಅವರು ಒಂಟಿಯಾಗಿದ್ದಿರಬಹುದು; ಆದರೆ ಏಕಾಂತವೇ ಬಾಳ್ವೆಯ ಸಜೀವ ಚೈತನ್ಯವೆಂದು ಅವರು ತಿಳಿದಿದ್ದರು. ವಿದ್ಯಾರ್ಥಿಯಾಗಿದ್ದಾಗ, ಅವರು ಎಲ್ಲರಿಂದಲೂ ಬೇರ್ಪಟ್ಟಿದ್ದರು. ವಿಜ್ಞಾನಿಯಾ

ದಾಗ, ಅವರ ಮಹಾ ಮನಸ್ಸು ವಿಶಾಲ ಆಲೋಚನೆಯಲ್ಲಿ ಏಕಾಂಗಿಯಾಗಿ ದುಡಿಯಬೇಕಾಯಿತು. ಇವೆಲ್ಲ ಅವರಿಗೆ ಏಕಾಕಿ ಜೀವನದ ಹೊರೆಯನ್ನು ಹಗುರಗೊಳಿಸಿತ್ತಲ್ಲದೆ ಸಿಡುಕು ಅಥವಾ ಹೆಮ್ಮೆಗೆ ಎಳ್ಳಷ್ಟೂ ಎಡೆಕೊಟ್ಟಿರಲಿಲ್ಲ.

ಹಿಂದೆಂದಿಗಿಂತಲೂ ಈಗ ಅವರು ತಮ್ಮ ಉಡುಪನ್ನು ಅಲಕ್ಷಿಸಿದರು. ಕಂಠಬಂಧ, ಕ್ಷೌರ, ಟೊಪ್ಪಿಗೆ ಮೊದಲಾದ ನಿರರ್ಥಕಗಳ ಆವಶ್ಯಕತೆ ಅವರಿಗೇಕೆ! ಪ್ರತಿದಿನದ ಮುಜಗರಗಳು ಅವರನ್ನು ಮುಟ್ಟಿರಲಿಲ್ಲ. ಬೇರಾರನ್ನಾದರೂ ಚಿಂತೆಗೀಡುಮಾಡುತ್ತಿದ್ದ ಅಪ್ರಿಯ ಘಟನೆಗಳನ್ನು ತಮ್ಮ ಆಹ್ಲಾದಕರ ಕಿರುನಗೆಯಿಂದ ಅಥವಾ ಆಳವಾದ ಗುಡುಗಿನಂತಹ ನಗುವಿನಿಂದ ಅವರು ಒತ್ತಟ್ಟಿಗೆ ತಳ್ಳಿಬಿಡುತ್ತಿದ್ದರು. ಬರ್ಲಿನ್ನಿನಲ್ಲಿ ಅವರ ಮನಸ್ಸು ಅತ್ಯುನ್ನತ ಮಟ್ಟಕ್ಕೇರಿ ಸಾಪೇಕ್ಷವಾದವು ಪೂರ್ಣಗೊಳ್ಳುವುದು ಸನ್ನಿಹಿತವಾದಂತೆ ಕಂಡಿತು.

ಆಲ್ಬರ್ಟ್ ಮತ್ತು ಮಿಲೇವಾ ಐನ್‌ಸ್ಟೈನ್ ಈಗ ದಾಂಪತ್ಯವಿಚ್ಛೇದನ ಪಡೆದು ಶಾಶ್ವತವಾಗಿ ಪ್ರತ್ಯೇಕಗೊಂಡಿದ್ದರು. ಐನ್‌ಸ್ಟೈನ್ ತಂದೆ ಮರಣ ಹೊಂದಿದ್ದರು. ವಿಂಟೆಲರರ ಮಕ್ಕಳಲ್ಲೊಬ್ಬರನ್ನು ಮದುವೆಯಾಗಿದ್ದ ಮಾಯಾಳ ಬಳಿ ಅವರ ತಾಯಿ ಇದ್ದರು. ಆಕೆ ಬರೆದಳು, “ಇದೀಗ ನೀನು ಬರ್ಲಿನ್ನಲ್ಲಿರುವುದರಿಂದ ಹೇಬರ್‌ಲಾಂಡ್ ಸ್ಟ್ರಾಸೆಯ ೫ನೇ ನಂಬರಿನ ಮನೆಯಲ್ಲಿರುವ ರೂಡಿಮಾವನನ್ನು ಭೇಟಿಮಾಡು.”

ತನ್ನ ಸೋದರಳಿಯ ಬರ್ಲಿನ್‌ಗೆ ಬಂದಿದ್ದುಕ್ಕಾಗಿ ರೂಡಿ ಮಾವ ಆನಂದಿತರಾದರು. ಅದಕ್ಕಾಗಿ ಅವರು ಸಮೀಪದಲ್ಲಿದ್ದ ತಮ್ಮ ಸಂಸಾರದ ಎಲ್ಲರನ್ನೂ ಒಂದು ರಾತ್ರಿ ಭೋಜನಕೂಟಕ್ಕೆ ಆಹ್ವಾನಿಸಿದರು. ಆಲ್ಬರ್ಟರನ್ನು ಕನಸುಗಣ್ಣಿನವನೆಂದೂ, 'ಸೋಮಾರಿಯುವಕನೆಂದೂ ತಿಳಿದಿದ್ದ ಅವರೆಲ್ಲರೂ ತಮ್ಮ ಈ ನೆಂಟನನ್ನು ನೋಡಲು ಕುತೂಹಲಿತರಾಗಿದ್ದರು. ಅಕಾಡೆಮಿಯಲ್ಲಿ ಜಗತ್ತಿನ ಪ್ರಮುಖ ವಿಜ್ಞಾನಿಗಳ ನಡುವೆ ಸ್ಥಾನಪಡೆದ ತಮ್ಮ ಮೂವತ್ನಾಲ್ಕು ವರ್ಷದ ನೆಂಟನನ್ನು ಅವರೆಲ್ಲರೂ ಹೆಮ್ಮೆಯಿಂದ ಕಂಡು ಪುಟ್ಟ ಗಲಭೆಯನ್ನೇ ಎಬ್ಬಿಸಿಬಿಟ್ಟರು.

ಎಲ್ಸಾ ಕೂಡ ಅಲ್ಲಿದ್ದಳು. ಈಗ ಅವಳು ವಿಧವೆಯಾಗಿದ್ದು ತನ್ನೆರಡು ಹೆಣ್ಣು ಮಕ್ಕಳೊಡನೆ ತಂದೆಯ ಮನೆಯಲ್ಲಿ ವಾಸಿಸುತ್ತಿದ್ದಳು. ಮ್ಯೂನಿಚ್ ವಿಹಾರಗಳಲ್ಲಿ ಜಿಗಿದಾಡುತ್ತಿದ್ದ ಪುಟ್ಟ ಹುಡುಗಿ ಈಗ ಬೆಳೆದು ದೊಡ್ಡ ಹೆಂಗಸಾಗಿದ್ದಳು. ಅವಳ ಚಲನವಲನಗಳಲ್ಲಿ ತಾಯ್ತನ ತುಂಬಿತ್ತು.

ಸಂಸಾರದವರೊಂದಿಗೆ ಒಂದು ಸಂಜೆ ಕಳೆಯುವುದು ಐನ್‌ಸ್ಟೈನ್‌ರವರಿಗೆ ಒಳಿತೇ ಆಗಿತ್ತು. ಅವರ ಪ್ರೀತಿಯ ಸಾಸೆಜ್ ಅನ್ನು ಅಂದು ಬಡಿಸಲಾಯಿತು. ಸಂಜೆಗೆ ಕಜ್ಜಾಯ ಮತ್ತು ಕಾಫಿಯನ್ನು ಸೇವಿಸಿದರು.

"ಇದು ಬಹಳ ರುಚಿಕರವಾಗಿದೆ". ದ್ರಾಕ್ಷಿ, ದಾಲ್ಚಿನ್ನಿಯಿಂದ ಮಾಡಿದ್ದ ಸುವರ್ಣ ಬಣ್ಣದ ಕಜ್ಜಾಯದ ತುಂಡೊಂದನ್ನು ಕುರುಕುತ್ತಾ ಅವರೆಂದರು, "ಅಮ್ಮ ಮಾಡುತ್ತಿದ್ದಂತೆಯೇ ಇದೆ".

"ಅದು ಹಾಗಿರಲೇಬೇಕು." ನಗುತ್ತ ಎಲ್ಸಾ ಅಂದಳು, "ಪಾಲಿನ್ ಅತ್ತೆಮ್ಮನಿಂದಲೇ ಅದನ್ನು ಮಾಡಲು ಕಲಿತದ್ದು!"

ಐನ್‌ಸ್ಟೈನ್ ತಮ್ಮ ಪಿಟೀಲನ್ನು ತಂದಿದ್ದರು. ಅನಿರೀಕ್ಷಿತ ಗಾನಗೋಷ್ಠಿಯೂ ಅವರಿಂದ ನಡೆಯಿತು. ಅವರ ನೆಂಟರಲ್ಲೊಬ್ಬರು ಪಿಯಾನೋ ನುಡಿಸಿದರು. ಮೋಟ್ಸಾರ್ಟ್‌ರ ಸುಮಧುರ ಗಾನ ಐನ್‌ಸ್ಟೈನ್‌ರವರ ಪಿಟೀಲಿನಿಂದ ತರಂಗತರಂಗವಾಗಿ ಹರಿಯತೊಡಗಿತು.

ಐನ್‌ಸ್ಟೈನ್ ಹೊರಡಲನುವಾದಾಗ ಎಲ್ಸಾ ಅವರನ್ನು ಬಾಗಿಲವರೆಗೂ ಬಿಡಲು ಬಂದಳು. "ಗಾಡಿಯನ್ನು ತರಿಸೋಣ. ಆಗಲೇ ವೇಳೆಯಾಗಿದೆ. ನೀವು ದೂರ ಬೇರೆ ಹೋಗಬೇಕಾಗಿದೆ."

"ಹಹಾ! ಈ ನನ್ನೆರಡು ಕಾಲಿಗಿಂತ ಉತ್ತಮವಾದ ಗಾಡಿಯಾವುದಿದೆ? ಈ ಪ್ರಶಾಂತ ಸಂಜೆಯಲ್ಲಿ ನಡೆದರೆ ಆಲೋಚನೆಗಳಿಗೂ ಅವಕಾಶವಿರುತ್ತದೆ. ಒಳ್ಳೆಯದು!"

"ಒಳ್ಳೆಯದು ಹೋಗಿಬನ್ನಿ, ಆಲ್ಬರ್ಟಲ್! ಪುನಃ ಬೇಗ ಬನ್ನಿ!"

ಆಲ್ಬರ್ಟಲ್! ಹಾಗೆಂದು ಕರೆಸಿಕೊಂಡು ಬಹಳ ದಿನವಾಗಿತ್ತೆಂದು ಅವರು ಆ ಕತ್ತಲ ರಸ್ತೆಗಳಲ್ಲಿ ನಡೆಯುತ್ತಾ ಆಲೋಚಿಸಿದರು.

ಆಗಲೇ ಅವರ ಮನಸ್ಸು ತಮ್ಮ ಕಾರ್ಯದ ಸಮಸ್ಯೆಗಳತ್ತ ಅವರನ್ನು ಸೆಳೆಯುತ್ತಿತ್ತು.

ಹೇಬರ್‌ಲಾಂಡ್ ಸ್ಟ್ರಾಸೆಯ ವಾಸಸ್ಥಾನಕ್ಕೆ ಅವರು ಆಗಾಗ್ಗೆ ಬಂದು ಹೋಗಿ ಮಾಡುತ್ತಿದ್ದರು. ಬಹುಮಟ್ಟಿಗೆ ಅವರ ಊಟೋಪಚಾರವೆಲ್ಲ ಅಲ್ಲಿಯೇ ನಡೆಯುತ್ತಿತ್ತು. ಅವರ ಆರೋಗ್ಯದ ದೃಷ್ಟಿಯಿಂದ ಇದು ಅವರಿಗೆ ಒಳ್ಳೆಯದೇ ಆಗಿತ್ತು. ಏಕೆಂದರೆ ಅವರು ತಮ್ಮ ಊಟದ ಬಗೆಗೆ ಚಿಂತಿಸುತ್ತಲೇ ಇರಲಿಲ್ಲ. ಹಾಗೇನಾದರೂ ಚಿಂತಿಸಿದರೂ ಯಾವುದೋ ಒಂದು ಉಪಾಹಾರ ಗೃಹದಲ್ಲಿ ಅಷ್ಟಿಷ್ಟು ತಿನ್ನುವುದು. ಯಾರಾದರೂ ಅವರಿಗೆ ಜ್ಞಾಪಿಸದಿದ್ದರೆ ಅದನ್ನೂ ಅವರು ಮರೆತುಬಿಡುತ್ತಿದ್ದರು.

ಯಾವುದಾದರೂ ಗಣ್ಯಸಭೆಯ ಮುಂದೆ ಉಪನ್ಯಾಸಕ್ಕಾಗಿ ತೆರಳುವುದಿದ್ದಾಗ ಅಥವಾ ಆಹ್ವಾನಿಸಲ್ಪಟ್ಟ ಸಮಾರಂಭಗಳಿಗೆ ಅವಶ್ಯವಾಗಿ ಹೋಗಲೇಬೇಕಾದಾಗ ಐನ್‌ಸ್ಟೈನ್ ತಮ್ಮ ಉಡಿಗೆತೊಡಿಗೆಗಳನ್ನು ಸಮಯೋಚಿತವಾಗಿ ಧರಿಸುವಂತೆ ಎಲ್ಸಾ ನೋಡಿಕೊಳ್ಳುತ್ತಿದ್ದಳು. ಆದರೆ ನಸು ನೀಟಾಗಿ ವಸ್ತ್ರ ಧರಿಸಿ ಬಂದ ಗಣ್ಯ ಮಹನೀಯರ ನಡುವೆ ತಮ್ಮ ದೊಗಲೆ ಷರಾಯಿ ಮತ್ತು ಹೊಳಪಿಲ್ಲದ ಪಾದರಕ್ಷೆಗಳಿಂದ ಬರುವುದು ಅವರ ಪ್ರವೃತ್ತಿಯಾಗಿತ್ತು. ಆಡಂಬರದ ತೋರ್ಕೆಗೆ ಬೆಲೆಕೊಡುತಿದ್ದ, ವೈಭವದ ಮಹಾಬಿರುದುಗಳನ್ನು ಪ್ರದರ್ಶಿಸುತ್ತಿದ್ದ, ಹೆಮ್ಮೆಯ ಜರ್ಮನರ ಪ್ರತಿಷ್ಠೆಗೆ ಇದು ಧಕ್ಕೆಯುಂಟು ಮಾಡಿತ್ತು.

ಐನ್‌ಸ್ಟೈನ್ ಇದಾವುದನ್ನೂ ಗಮನಿಸುತ್ತಿರಲಿಲ್ಲ. ಮೇಯರರ ಬಗೆಗೆ ಅವರ ನಿಲುವು ಏನಿತ್ತೋ ಅದೇ ನಿಲುವೇ ಬಚ್ಚಲು ತೊಳೆಯುವಾಕೆಯ ಬಗೆಗೂ ಇತ್ತು. ಉಳಿದವರು ತಮ್ಮ ಕಾಲ ಮತ್ತು ಆಲೋಚನೆಗಳನ್ನು ಷೋಕಿನ ಬಟ್ಟೆಗಳಲ್ಲಿ ಔಪಚಾರಿಕ ಸಮಾರಂಭಗಳಲ್ಲಿ ದುರ್ವಿನಿಯೋಗಗೊಳಿಸುವುದಾದರೆ ಅದು ಅವರಿಗೆ ಸರಿಯೇ. ಆದರೆ ಆತನ ಪಾಲಿಗೆ ಅದಾವುದೂ ಬೇಕಿರಲಿಲ್ಲ.

ಅವರ ಎಲ್ಲ ಪ್ರಯತ್ನಗಳೂ ಸಂಶೋಧನೆಯತ್ತ ಕೇಂದ್ರೀಕೃತ

ವಾಗಿದ್ದು ಕೇವಲ ಒಂದು ವರ್ಷದೊಳಗಾಗಿ ಅವರು ತಮ್ಮ ಸಾಪೇಕ್ಷ ವಾದಕ್ಕೆ ಸೇರಿದಂತೆ ಅತಿ ಮುಖ್ಯವಾದ ಕೆಲವು ಅಂಶಗಳನ್ನು ಪ್ರಕಟಿಸಿದರು. ಸಾಮಾನ್ಯ ಸನ್ನಿವೇಶದಲ್ಲಿ ಇದು ಬರ್ನ್‌ನಲ್ಲಿ ಅವರು ಪ್ರಕಟಿಸಿದ ಫಲಿತಾಂಶಗಳೆಬ್ಬಿಸಿದ ಅಲ್ಲೋಲಕಲ್ಲೋಲವನ್ನೂ ಮೀರಿಸುತ್ತಿತ್ತು. ಆದರೆ ಜಗತ್ತಿನ ಎಲ್ಲ ಗಮನವನ್ನೂ ಬೇರೆಡೆಗೆ ಸೆಳೆದಿದ್ದ ಘಟನೆಯೊಂದು ನಡೆದಿತ್ತು. ಜರ್ಮನಿ ತನ್ನ ನೆರೆರಾಷ್ಟ್ರಗಳಾದ ಬೆಲ್ಜಿಯಂ ಮತ್ತು ಫ್ರಾನ್ಸ್‌ಗಳನ್ನು ಆಕ್ರಮಿಸಿತ್ತು. ರೋಷಾವೇಶದಿಂದಲೇ ಪ್ರಥಮ ಜಾಗತಿಕ ಯುದ್ಧ ಪ್ರಾರಂಭವಾಗಿತ್ತು.

ಯುದ್ಧವನ್ನು ಸಂಪೂರ್ಣವಾಗಿ ದ್ವೇಷಿಸುತ್ತಿದ್ದ ಐನ್‌ಸ್ಟೈನ್ ಈಗ ಯುದ್ಧದಲ್ಲಿ ತೊಡಗಿದ್ದ ರಾಷ್ಟ್ರದ ರಾಜಧಾನಿಯಲ್ಲಿಯೇ ಇದ್ದರು. ಅಂಥ ಸನ್ನಿವೇಶದಲ್ಲಿ ಅವರು ಅಸಹಾಯಕರಾಗಿದ್ದರಾದ್ದರಿಂದ ಎಲ್ಲ ಸಾರ್ವಜನಿಕ ಚಟುವಟಿಕೆಗಳಿಂದಲೂ ಸಂಪೂರ್ಣವಾಗಿ ಹಿಮ್ಮೆಟ್ಟಿ ತಮ್ಮ ಕಾರ್ಯದಲ್ಲಿ ಪೂರ್ಣಮಗ್ನರಾದರು. ಒಂದು ದಿವಸ ಎಲ್ಸಾ ಮತ್ತು ಆಲ್ಬರ್ಟರು ಯಾವ ವಿಶೇಷ ಆಡಂಬರವೂ ಇಲ್ಲದೆ ವಿವಾಹವಾಗಿ ಹೇಬರ್‌ಲಾಂಡ್ ಸ್ಟ್ರಾಸೆ ಕಟ್ಟಡದಲ್ಲಿಯೇ ಬೇರೊಂದೆಡೆ ಎಲ್ಸಾರ ಇಬ್ಬರು ಪುತ್ರಿಯರೊಡನೆ ಸಂಸಾರಹೂಡಿದರು.

ಈ ಭಯಂಕರ ಯುದ್ಧದಿಂದುಂಟಾದ ನಾಶ, ಸಾವುನೋವುಗಳಿಂದ ಜನರೆಲ್ಲರೂ ದಿಗ್ಭ್ರಮೆಗೊಂಡಿದ್ದರು. ಜರ್ಮನಿಯ ಕೆಲವು ಸ್ವಾಭಿಮಾನಿ ಪ್ರಮುಖ ವ್ಯಕ್ತಿಗಳು ಜರ್ಮನಿಯ ತಪ್ಪೇನೂ ಇಲ್ಲವೆಂಬಂತೆ ತೋರಿಸಲು ಪ್ರಯತ್ನಿಸಿದರು. ಜರ್ಮನಿಯ ಮಿಲಿಟರಿ ಚಟುವಟಿಕೆಗಳನ್ನು ಸಮರ್ಥಿಸಿ ಕದನದಿಂದುಂಟಾದ ಕೇಡಿಗೆ ಅದು ಕಾರಣವಲ್ಲವೆಂಬ ಹೇಳಿಕೆಗೆ ರಾಷ್ಟ್ರದ ಅತ್ಯುತ್ತಮ ವಿಜ್ಞಾನಿಗಳನೂ ಮತ್ತು ಕಲೆಗಾರರನ್ನೂ ಕಲೆತುಹಾಕಿ ಅವರ ಸಹಿ ಪಡೆದರು.

೯೨ ಜನ ಅದಕ್ಕೆ ಸಹಿಹಾಕಿದರು. ಐನ್‌ಸ್ಟೈನ್ ಆ ಪತ್ರದ ಗೊಡವೆಗೇ ಹೋಗುವವರಾಗಿರಲಿಲ್ಲ. "ತಪ್ಪು ಯಾರದೆಂದು ಹೊಣೆಹೊರಸುವ ಕಾಲ ಈಗ ಮಿಂಚಿಹೋಗಿದೆ. ನಿಮ್ಮ ಪ್ರಯತ್ನಗಳನ್ನು ಪುನಃ ಶಾಂತಿ ತರುವ ಕಾರ್ಯಕ್ಕೆ ವಿನಿಯೋಗಿಸಿ" ಎಂದು ಅವರಿಗೆ ಹೇಳಿದರು.

ಇದರಿಂದ ಅಧಿಕಾರಿಗಳು ದಿಗ್ಭ್ರಮೆಗೊಂಡರು. ಇದುವರೆಗೂ ಅವರು ಐನ್‌ಸ್ಟೈನ್‌ರವರನ್ನು ತಮ್ಮ ಅತ್ಯಂತ ಮೆಚ್ಚುಗೆಯ ವ್ಯಕ್ತಿಯೆಂದು ಪರಿಗಣಿಸಿದ್ದರು. ಜಗತ್ತಿನ ಸುಪ್ರಸಿದ್ಧ ವಿಜ್ಞಾನಿ ತಮ್ಮ ಕಡೆಯಿರುವರೆಂದು ಅವರು ತಿಳಿದಿದ್ದರು. ಆದರೆ ಐನ್‌ಸ್ಟೈನ್ ಯುದ್ಧ ಅನಾವಶ್ಯಕವೆಂದೂ, ಅಮಾನುಷವೆಂದೂ ಹೃತ್ಪೂರ್ವಕವಾಗಿ ನಂಬಿ, "ನಾನು ನುಚ್ಚುನೂರಾದರೂ ಸರಿಯೆ ಇಂತಹ ಕಾರ್ಯಗಳಲ್ಲಿ ಪಾಲ್ಗೊಳ್ಳುವುದಿಲ್ಲ" ಎಂದರು.

ಜರ್ಮನರು ಅವರನ್ನು ಸಂಶಯದಿಂದ ಕಾಣಲಾರಂಭಿಸಿದರು. ಅವರನ್ನು ದ್ವೇಷಿಸಲು ಈಗ ಅವರಿಗೆ ಮೂರು ಮುಖ್ಯ ಕಾರಣಗಳು ದೊರೆತುವು. ತಮ್ಮ ಯುದ್ಧವನ್ನು ಅವರು ಒಪ್ಪಿರಲಿಲ್ಲ. ತಮ್ಮ ನಡುವೆ ಅವರು "ಪರದೇಶೀಯರು"; ಮತ್ತೆ ಅವರು ಯೆಹೂದ್ಯರು. ಅವರನ್ನು "ದೇಶದ್ರೋಹಿ" ಎಂದು ಕರೆಯುವುದಕ್ಕೆ ಕೂಡ ಹೇಸುತ್ತಿರಲಿಲ್ಲ. ಆದರೆ ಕಾನೂನಿನಂತೆ ಅವರು ಜರ್ಮನಿಯವರೇ ಆಗಿರಲಿಲ್ಲ. ಅವರು ಬುದ್ಧಿವಂತಿಕೆಯಿಂದ ಸ್ವಿಸ್ ಪ್ರಜೆಯಾಗಿಯೇ ಉಳಿದಿದ್ದರು.

ಐನ್‌ಸ್ಟೈನ್ ತಮ್ಮವರಲ್ಲೊಬ್ಬರಾಗಿಯೇ ಉಳಿದುಕೊಂಡುದರಿಂದ ಸ್ವಿಸ್ ಜನತೆ ಹರ್ಷಗೊಂಡಿದ್ದರು. ಯುದ್ಧ ಹರಡುತ್ತಿದ್ದ ಈ ಸಮಯದಲ್ಲಿ ಅವರು ಐನ್‌ಸ್ಟೈನರನ್ನು ಮರೆತಿರಲಿಲ್ಲ. ನಿಯತವಾಗಿ ಆಹಾರದ ಪೊಟ್ಟಣಗಳನ್ನು ಅವರಿಗೆ ಕಳುಹಿಸುತ್ತಿದ್ದರು. ಎಲ್ಸಾ ಇದಕ್ಕಾಗಿ ಬಹಳ ಕೃತಜ್ಞರಾಗಿದ್ದರು. ಬರ್ಲಿನ್ನಿನಲ್ಲಾದರೊ ಆಹಾರ ದೊರಕುವುದೇ ಕಷ್ಟವಾಗಿತ್ತು. ದೊರಕುತ್ತಿದ್ದರೂ ಒಳ್ಳೆಯ ಆಹಾರವಾಗಿರಲಿಲ್ಲ. ಎಲ್ಸಾ ತಮ್ಮ ಪತಿಗೆ ಒಳ್ಳೆಯ ಆಹಾರವಿತ್ತು ಅವರ ಆರೋಗ್ಯ ಕೆಡದಂತೆ ನೋಡಿಕೊಳ್ಳಲು ಬಹಳ ಪ್ರಯಾಸ ಪಡುತ್ತಿದ್ದರು. ಏಕೆಂದರೆ ಜೂರಿಚ್‌ನಲ್ಲಿ ಕೆಲಸವಿಲ್ಲದಿದ್ದ ಕಾಲದಿಂದ ಅವರ ಹೊಟ್ಟೆ ಅತಿ ಸೂಕ್ಷ್ಮವಾಗಿ ಹೋಗಿತ್ತು.

೧೦. ಕೀರ್ತಿಯ ಹೊರೆ

ಐನ್‌ಸ್ಟೈನರ ಸಾಪೇಕ್ಷವಾದವು ಕಾಲ, ದೇಶ, ವಸ್ತು ಮತ್ತು ಶಕ್ತಿಗಳ ನಡುವಣ ಸಂಬಂಧವನ್ನು ಕುರಿತು ಹೇಳುತ್ತದೆ. ಸುಶಿಕ್ಷಿತನಾದ ವಿಜ್ಞಾನಿ ಹೊರತು ಇತರರು ಯಾರೂ ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದು ಅಸಾಧ್ಯವಾಗಿರುವಷ್ಟು ತೊಡಕಾದ ಭಾವನೆಗಳಿಂದ ತುಂಬಿದೆ ಆ ವಾದ. ಆ ಸಮಸ್ಯೆಗಳನ್ನು ಕುರಿತ ಅಧ್ಯಯನ ನಡೆಯಿಸುವ ಭೌತ ವಿಜ್ಞಾನಿಗಳಿಗೂ ಕೂಡ ಈ ವಾದದ ಹಲವು ಭಾಗಗಳು ಕೆಲವೊಮ್ಮೆ ಅರ್ಥವಾಗದೆ ಅವರನ್ನು ಸಂದಿಗ್ಧರನ್ನಾಗಿಸಿ ಭ್ರಮೆಯುಂಟುಮಾಡುತ್ತದೆ. ಅದು ಪ್ರಕಟವಾದಾಗ ಅವರಿಗೆ ತಿಳಿದಿದ್ದ ವೈಜ್ಞಾನಿಕ ಭಾವನೆಗಳಿಂದ ಅದು ಎಷ್ಟು ಬದಲಾವಣೆ ಹೊಂದಿತ್ತೆಂದರೆ ಇಂತಹ ವಾದಗಳು ನಿಜವಾದ ಸಾಧನೆಯ ಬೆಂಬಲವಿಲ್ಲದೆ ಒಂದೇ ವ್ಯಕ್ತಿಯ ಮನಸ್ಸಿನಿಂದ ಮೂಡಿ ವಿಕಸಿತವಾಗುವುದು ಸಾಧ್ಯವೇ ಎಂದು ಅನೇಕ ವಿಜ್ಞಾನಿಗಳು ಸಂಶಯತಾಳಿದರು.

ಅದನ್ನು ಪ್ರಮಾಣಿಸುವುದು ಸಾಧ್ಯವಿತ್ತು. ಐನ್‌ಸ್ಟೈನರ ವಾದ ಸರಿಯಾಗಿದ್ದರೆ ಸೂರ್ಯನ ದಿಕ್ಕಿನಲ್ಲಿ ಕಾಣುವ ನಕ್ಷತ್ರಗಳು ತಮ್ಮ ನಿಜಸ್ಥಾನದಿಂದ ಸ್ವಲ್ಪ ಪಲ್ಲಟವಾಗಿರುವಂತೆ ತೋರಬೇಕು. ಆದರೆ ಪ್ರಜ್ವಲಿಸುವ ಸೂರ್ಯಬಿಂಬದ ಸಮೀಪ ಕಾಣುವ ನಕ್ಷತ್ರಗಳನ್ನು ಖಗೋಳ ವಿಜ್ಞಾನಿಗಳು ನೋಡುವ ಬಗೆಯೆಂತು? ಪೂರ್ಣ ಗ್ರಹಣ ಕಾಲದಲ್ಲಿ ಚಂದ್ರ ಸೂರ್ಯನ ಮುಂದೆ ಅಡ್ಡ ಬಂದು ಅದನ್ನು ಭೂಮಿಯಿಂದ ಮರೆಮಾಡುತ್ತಾನೆ. ಇದರಿಂದ ಸೂರ್ಯನ ಝಳ ಕಡಮೆಯಾಗಿ ಕತ್ತಲಾಕಾಶದಲ್ಲಿ ಸೂರ್ಯಬಿಂಬದ ಸಮೀಪವಿರುವ ನಕ್ಷತ್ರಗಳನ್ನು ನೋಡಬಹುದು.

ಯುದ್ಧ ೧೯೧೮ರಲ್ಲಿ ಮುಕ್ತಾಯವಾಯಿತು. ಮಾರನೆಯ

ವರ್ಷದ ಮಾರ್ಚ್ ತಿಂಗಳಲ್ಲಿ ಪೂರ್ಣ ಸೂರ್ಯಗ್ರಹಣ ಸಂಭವಿಸುವುದಿತ್ತು. ಜಗತ್ತಿನ ಪ್ರಮುಖ ವೈಜ್ಞಾನಿಕ ಸಂಸ್ಥೆಯುಲ್ಲೊಂದಾದ ಇಂಗ್ಲೆಂಡಿನ ರಾಯಲ್ ಸೊಸೈಟಿ ಗ್ರಹಣ ಚೆನ್ನಾಗಿ ಗೋಚರಿಸಲಿದ್ದ ಆಫ್ರಿಕ ಮತ್ತು ಬ್ರೆಜಿಲ್ ದೇಶಗಳಿಗೆ ಅನ್ವೇಷಣಾ ತಂಡಗಳನ್ನು ಕಳುಹಿಸಲು ನಿರ್ಧರಿಸಿತು. ಖಗೋಳ ವಿಜ್ಞಾನಿಗಳು ಅನೇಕ ಛಾಯಾಚಿತ್ರ ಸಲಕರಣೆಗಳನ್ನು ತಮ್ಮೊಡನೆ ಕೊಂಡೊಯ್ದರು. ಎರಡು ನಿಮಿಷ ಕಾಲ ಗೋಚರಿಸುವ ಪೂರ್ಣ ಗ್ರಹಣಕಾಲದಲ್ಲಿ ಮೋಡಗಳು ತಮ್ಮ ವೀಕ್ಷಣೆಗೆ ಅಡ್ಡಬಾರದಿರಲೆಂದು ಅವರು ಆಶಿಸಿದರು.

ಈ ಯೋಜನೆಗಳಿಗೂ ಐನ್‌ಸ್ಟೈನರಿಗೂ ಯಾವ ಸಂಬಂಧವೂ ಇರಲಿಲ್ಲ. ಅವರು ಪ್ರಷ್ಯಾದ ಅಕಾಡೆಮಿಯಲ್ಲಿ ತಮ್ಮ ದಿನಚರಿಯನ್ನು ಮುಂದುವರಿಸುತ್ತ, ಶ್ರಮವಹಿಸಿ ಕೆಲಸ ಮಾಡುತ್ತಿದ್ದರು.

ಒಂದು ಬೆಳಿಗ್ಗೆ ಎಲ್ಸಾ ಅವರ ಮೇಜಿನ ಮೇಲೆ ಅಂಚೆ ಭಾಂಗಿಯೊಂದನ್ನು ತಂದಿಟ್ಟರು. "ರಾಯಲ್ ಸೊಸೈಟಿಯ ಗ್ರಹಣ ದಂಡೆಯಾತ್ರೆಯಿಂದ ಬಂದ ಛಾಯಾಚಿತ್ರಗಳಿವು", ಆಕೆ ವಿವರಿಸಿದರು. "ವಿಶೇಷ ದೂತನೊಬ್ಬನು ಇದೇ ತಾನೇ ಅವುಗಳನ್ನು ತಂದ".

"ಆಹಾ! ಹೌದೆ?!" ಎಲ್ಸಾ ಆ ಕಟ್ಟನ್ನು ಬಿಚ್ಚುತ್ತಿರುವಂತೆ ಐನ್‌ಸ್ಟೈನ್ ಆನಂದಾಶ್ಚರ್ಯ ಸೂಚಿಸಿದರು. ಒಂದಾದ ಮೇಲೊಂದರಂತೆ ಆ ದೊಡ್ಡ ಛಾಯಾಚಿತ್ರಗಳನ್ನು ಎತ್ತಿಹಿಡಿದು ಈಕ್ಷಿಸತೊಡಗಿದರು. ಎಲ್ಸಾ ಅವರ ಭುಜದ ಹಿಂದೆ ನಿಂತು ಇಣಿಕಿನೋಡುತ್ತ ನಿಂತರು. ಕಪ್ಪು ಹಿನ್ನೆಲೆಯ ಮಧ್ಯೆ ಕಪ್ಪುಬಿಂಬದ ಸುತ್ತ ಬೆಳಕಿನ ಜೂಲುಜೂಲು ಕಂಕಣದಿಂದ ಪರಿವೃತವಾಗಿದ್ದ ಚಿತ್ರಗಳನ್ನು ಮಾತ್ರ ಆಕೆ ಕಂಡರು. ಆಕೆಗೆ ಅದೇನೂ ಅರ್ಥವಾಗದೆ ಐನ್‌ಸ್ಟೈನರು ಮಾತನಾಡುವುದನ್ನೇ ಕಾಯುತ್ತಿದ್ದರು.

ದೀರ್ಘ ಮೌನವಾವರಿಸಿತ್ತು.

"ಅದ್ಭುತ!" ಪಿಸುಮಾತಿನಂತೆ ನುಡಿದರು. "ಆಶ್ಚರ್ಯ!"

"ಹೌದು, ಅದು ಆಶ್ಚರ್ಯಕರವಾಗಿದೆ", ಮೆದುವಾಗಿ ಎಲ್ಸಾ ಒಪ್ಪಿದರು. "ಮತ್ತೆ, ನಿಮ್ಮ ವಾದಕ್ಕೀಗ ಪ್ರಮಾಣ ದೊರಕಿತು".

ಐನ್‌ಸ್ಟೈನರು ತಮ್ಮ ಪತ್ನಿಯತ್ತ ಪ್ರಶ್ನಾರ್ಥಕವಾಗಿ ಕತ್ತೆತ್ತಿ ನೋಡಿದರು "ಪ್ರಮಾಣ? ನೀನು ಹೇಳುತ್ತಿರುವುದೇನು?"

"ಏಕೆ. ನಿಮ್ಮ ಸಾಪೇಕ್ಷವಾದ ಸರಿಯೆನ್ನುವುದಕ್ಕೆ ಪ್ರಮಾಣ. ಆ ಕೆಲವು ವಿಜ್ಞಾನಿಗಳು ನಿಮ್ಮ ಕೆಲಸದ ಬಗ್ಗೆ ಮುಂದೆಂದೂ ಪ್ರಶ್ನಿಸಲಾರರು".

ದೂರದ ರೈಲಿನ ಗಡಗಡ ಶಬ್ದದಂತೆ ನಗು ಅವರ ಪತಿಯ ಗಂಟಲನಾಳದಿಂದ ಪ್ರಾರಂಭವಾಗಿ ನಗುವಿನ ಗುಡುಗಿನಂತೆ ಅಲೆ ಅಲೆಯಾಗಿ ಉರುಳಿಹೋಯಿತು.

ಪೇಚಾಟಕ್ಕೆ ಸಿಕ್ಕಿದ ಎಲ್ಸಾರ ಮುಖ ಕೆಂಪೇರಿತು. "ಆ.. ಆ ...ಆ...ಆದರೆ........ನೀವು ಹೇಳಿದಿರಿ. ಅದ್ಭುತ, ಆಶ್ಚರ್ಯ ಅಂತ ......ಪ್ರಮಾಣ ಸಿಕ್ಕಿದುದರಿಂದ ನಿಮಗೆ ಸಂತೋಷವಾಯಿತೇನೋ ಎಂದು ನಾನು ತಿಳಿದೆ.........."

"ಪ್ರಮಾಣ! ಪ್ರಮಾಣ!" ಐನ್‌ಸ್ಟೈನ್ ನಗುತ್ತಲೇ ಇದ್ದರು. "ಅಲ್ಲ, ಎಲ್ಸಾ. ನನಗೆಂದೂ ಪ್ರಮಾಣ ಬೇಕಿರಲಿಲ್ಲ, ಅದು "ಅವರಿಗೆ" ಬೇಕಿತ್ತು!"

ಎಂದೂ ಅವರು ಖಚಿತವಾಗಿಯೇ ಇದ್ದರು. ಗ್ರಹಣಯಾತ್ರೆಯಲ್ಲಾಗಲೀ ಅದರ ಫಲಿತಾಂಶಗಳಲ್ಲಾಗಲೀ ಅವರು ಆಸಕ್ತರಾಗಿರಲಿಲ್ಲ. ವೀಕ್ಷಕರು ಏನನ್ನು ಕಂಡುಹಿಡಿಯುವರೆಂಬುದನ್ನು ಅವರು ಮೊದಲೇ ತಿಳಿದಿದ್ದರು.

"ಆಶ್ಚರ್ಯ" ಮತ್ತೆ ಅವರು ಗೊಣಗುಟ್ಟಿದರು. ಅಂದರೆ ಛಾಯಾಚಿತ್ರ ಆಶ್ಚರ್ಯಕರವಾಗಿರುವುದೆಂದೇ ಅವರ ಅರ್ಥ. ಕಪ್ಪು ಆಕಾಶದಲ್ಲಿದ್ದ ಸಣ್ಣ ಚುಕ್ಕೆ ನಕ್ಷತ್ರಗಳನ್ನೂ ಕೂಡ ಚಿತ್ರ ತೆಗೆಯಬಲ್ಲ ಪರಿಣತರ ಕೆಲಸವನ್ನು ಅವರು ಶ್ಲಾಘಿಸಿದರು.

ತಮ್ಮ ಜೀವನದ ಈ ಸಮಯದಲ್ಲಿ ಅವರು ಯಾವುದನ್ನು ಬಹುವಾಗಿ ಬಯಸಿ ಕಾಪಾಡಿಕೊಂಡು ಬಂದಿದ್ದರೋ ಅದನ್ನು ಪುನಃ ಎಂದೂ ಪಡೆಯದಂತೆ ಕಳೆದುಕೊಂಡರು--ಅವರ ಏಕಾಂತತೆಯನ್ನು. ಇಷ್ಟು ಹೊತ್ತಿಗೆ ಅವರ ಸಾಧನೆಗಳು ಕೇವಲ ವಿಜ್ಞಾನಿಗಳಿಗೆ ಮಾತ್ರ

ತಿಳಿದಿರಲಿಲ್ಲ; ಇಡೀ ಜಗತ್ತಿನ ಕುತೂಹಲ, ಆಸಕ್ತಿಗಳನ್ನು ಅವು ಕೆರಳಿಸಿದ್ದುವು. ಎಲ್ಲ ದೇಶಗಳಲ್ಲೂ ಅನೇಕ ಭಾಷೆಗಳಲ್ಲಿ ವೃತ್ತಪತ್ರಿಕೆಗಳು ಅವರ ಬಗೆಗೆ ಕಥೆಗಳನ್ನು ಪ್ರಕಟಿಸಿದುವು. ವಿಶ್ವವಿದ್ಯಾನಿಲಯಗಳಿಂದ, ಸ್ತ್ರೀಸಂಘಗಳಿಂದ, ವಾಣಿಜ್ಯ ಸಂಸ್ಥೆಗಳಿಂದ – ಎಲ್ಲೆಡೆಯಿಂದಲೂ ಉಪನ್ಯಾಸ ಕೊಡುವಂತೆ ಬೇಡಿಕೆಗಳು ಬಂದುವು. ಅವರೆಂದೂ ಕಂಡುಕೇಳಿರದಿದ್ದ ಮಕ್ಕಳಿಗೆ ಅವರ ಹೆಸರನ್ನೇ ಇಡಲಾಯಿತು. ಅವರ ಗೌರವಾರ್ಥವಾಗಿ ಪದಕಗಳನ್ನು ರಚಿಸಲಾಯಿತು. ಅವರ ಸಹಿಗಾಗಿ ಹಸ್ತಾಕ್ಷರ ಬೇಟೆಗಾರರು ಹಾದಿಯಲ್ಲಿ ಅಡ್ಡಹಾಕಿದರು. ಚುಟ್ಟಾ ತಯಾರಕರೊಬ್ಬರು ತಮ್ಮ ಒಂದು ಚುಟ್ಟಾವನ್ನು ಆಡಂಬರದಿಂದ ಸಾಪೇಕ್ಷತ್ವ ('Relativity') ಎಂದು ನಾಮಕರಣ ಮಾಡಿದರು.

ಅವರ ಮನೆಗೆ ಮೂಟೆಗಟ್ಟಲೆ ಪತ್ರ ಬರತೊಡಗಿತು. ಅವುಗಳನ್ನು ಪ್ರತ್ಯೇಕಿಸಿ ತಪಶೀಲಾಗಿ ವಿಚಾರ ಮಾಡಿ ಉತ್ತರ ಬರೆಯುವುದಕ್ಕೆ ಎಲ್ಸಾಗೆ ಸಹಾಯಕ ಬೇಕಾಯಿತು. ಈ ಗಡಿಬಿಡಿಯುದ್ದಕ್ಕೂ ಐನ್‌ಸ್ಟೈನರೇನೋ ಪ್ರಶಾಂತಚಿತ್ತದಿಂದ ಸಾಗಿದ್ದರು. "ಭಾವಪರವಶಳಾಗಿ ಇದರಲ್ಲಿಯೇ ಮುಳುಗಿಹೋಗಬೇಡ, ಎಲ್ಸಾ", ಎಂದು ಆಕೆಗೆ ಅವರು ಭರವಸೆ ಕೊಡುತ್ತಿದ್ದರು. "ಪ್ರಾಸಂಗಿಕವಾಗಿ ಇದೊಂದು ಸಾರ್ವಜನಿಕ ಬಯಲಾಗಿದೆ. ಮೂರು ತಿಂಗಳೊಳಗಾಗಿ ಅವರು ನನ್ನನ್ನೂ ನನ್ನ ವಾದವನ್ನೂ ಮರೆತುಬಿಟ್ಟಿರುತ್ತಾರೆ. ಆ ಬಳಿಕ ನಮ್ಮ ಜೀವನ ಹಿಂದಿನಂತೆಯೇ ಸಾಗುತ್ತದೆ." ಆದರೆ ಆ ಮಹಾ ಮೇಧಾವಿ ಇಲ್ಲಿಯೇ ಅಪರೂಪಕ್ಕೊಂದು ತಪ್ಪೆಣಿಕೆ ಮಾಡಿದುದು.

ಕಾಲ ಉರುಳಿದಂತೆ, ಎಲ್ಸಾ ಪ್ರಸಿದ್ಧ ಪುರುಷನ ಪತ್ನಿಯ ಪಾತ್ರವನ್ನು ನಿರ್ವಹಿಸುವುದನ್ನು ಕಲಿತರು. ಪರ್ವತಗಳಂತೆ ಸೇರುತ್ತಿದ್ದ ಪತ್ರಗಳಿಂದ ಅವರು ಐನ್‌ಸ್ಟೈನ್‌ರವರು ಓದಬೇಕಾದುದಂತಹುವನ್ನು ಮಾತ್ರ ಆಯ್ಕೆಮಾಡುತ್ತಿದ್ದರು. ತಮ್ಮ ಪತಿಯನ್ನು ನಿರಂತರವಾಗಿ ಕಾಡುತ್ತಿದ್ದು ಪ್ರಸಿದ್ಧರ ಭೇಟಿಗಾಗಿ ವಿನಾ ಕಾರಣ ಬರುತ್ತಿದ್ದವರನ್ನು ಆಕೆ ಕೌಶಲ್ಯದಿಂದ ಕಳುಹಿಸಿಬಿಡುತ್ತಿದ್ದರು ತನ್ನ ಪತಿಯ ಏಕಾಂತ

ಜೀವನವನ್ನು ಭೇದಿಸಬೇಕೆಂದು ಸತತವಾಗಿ ಪ್ರಯತ್ನಿಸುತ್ತಿದ್ದ ಪ್ರಚಾರಕ ಕಾರ್ಯಕ್ರಮದಿಂದ ಅವರನ್ನು ರಕ್ಷಿಸುವ ಕವಚವಾಗಿದ್ದರು ಆಕೆ.

ಜಗತ್ತಿನ ಗಮನದಿಂದ ಉದ್ವೇಗಗೊಳ್ಳದೆ ಐನ್‌ಸ್ಟೈನ್ ತಮ್ಮ ಕಾರ್ಯವನ್ನು ಮುಂದುವರಿಸಿದರು. ತಮ್ಮ ಪದ್ಧತಿಗಳಲ್ಲಿ, ಭಾವನೆಗಳಲ್ಲಿ ಅವರೇನೂ ಬದಲಾಗಲಿಲ್ಲ. ಇದೆಲ್ಲವೂ ಯಾರೋ ಬೇರೊಬ್ಬ ವ್ಯಕ್ತಿಗೆ ನಡೆಯುತ್ತಿರುವಂತೆ ಅವರು ನಡೆದುಕೊಂಡರು. ಪತ್ರಿಕೆಗಳಲ್ಲಿ ತಮ್ಮ ಭಾವಚಿತ್ರವನ್ನು ಕಂಡಾಗ ಅವರು ನಗುತ್ತಿದ್ದರು. "ಈ ವಿಚಿತ್ರ ಮೂಗಿನ, ದಪ್ಪ ಮುಖದ ಮನುಷ್ಯನಾರು?"ಎಂದು ಹಾಸ್ಯ ಮಾಡುತ್ತಿದ್ದರು.

ವೈಜ್ಞಾನಿಕ ಸಂಘಗಳಲ್ಲಿ ಉಪನ್ಯಾಸ ಕೊಡುವ ಸಲುವಾಗಿ ಅವರು ಬೇರೆಬೇರೆ ನಗರಗಳಿಗೆ ಪ್ರಯಾಣಮಾಡಿದರು. ಈ ಪ್ರಯಾಣಗಳಲ್ಲಿ ತಾವೂ ಅವರೊಡನೆ ಹೋಗದಿದ್ದ ಕಾಲದಲ್ಲಿ ಎಲ್ಸಾ ಕಳವಳಗೊಳ್ಳುತ್ತಿದ್ದರು. ಒಂದು ಸಲ ಅವರ ಬಟ್ಟೆಗಳನ್ನು ಹುಷಾರಾಗಿ ಭರ್ತಿಮಾಡಿ ಅವರಿಗೆ ಎಚ್ಚರಿಕೆಯಿತ್ತರು: "ನೀವು ಭಾಷಣ ಮಾಡುವ ದಿನ ಸಂಜೆ ಈ ಕಪ್ಪು ಸೂಟನ್ನು ಧರಿಸಿಕೊಳ್ಳಬೇಕು. ನೋಡಿ, ಮರೆಯಬೇಡಿ. ಸ್ವಚ್ಛವಾಗಿರುವ ಷರಟನ್ನು ಹಾಕಿಕೊಳ್ಳಿ. ಒಳ್ಳೆಯ ಕಂಠಬಂಧ – ಮತ್ತೆ ದಯವಿಟ್ಟು, ದಯವಿಟ್ಟು, ಕಾಲುಚೀಲಗಳು!"

"ಪುಟ್ಟ ಪ್ರಿಯೆ ಎಲ್ಸಾ, ಮುಖ್ಯವಲ್ಲದ ವಿಷಯಗಳ ಬಗೆಗೆ ನೀನು ಬಹಳ ಚಿಂತಿಸುತ್ತೀಯೆ", ಅವರು ಆಕೆಯನ್ನು ನೋಡಿ ನಗುತ್ತಾ ಕರ್ತವ್ಯನಿಷ್ಠೆಯಿಂದ, ಸೂಟ್‌ಕೇಸನ್ನು ಕೈಯಲ್ಲಿ ಹಿಡಿದು ಹೊರಟರು.

ಅವರು ಪುನಃ ಬಂದಾಗ ಎಲ್ಸಾ ಅವರ ಪೆಟ್ಟಿಗೆಯನ್ನು ಬಿಚ್ಚಿದರು. ಸೂಟು, ಷರಟು, ಕಾಲುಚೀಲ....ಎಲ್ಲವೂ ಹಾಗೆಯೇ ಇದ್ದುವು. "ಆಲ್ಬರ್ಟ್! ಭಾಷಣಕ್ಕೆಂದು ಹೇಳಿದ ಬಟ್ಟೆಗಳನ್ನು ನೀವು ಹಾಕಿಕೊಳ್ಳಲೇ ಇಲ್ಲ!"

"ಅಯ್ಯೋ, ದೇವರೇ! ಹೌದು...... ನನಗೆ ಮರೆತೇಹೋಯಿತೆಂದು ಕಾಣುತ್ತೆ". ತಿಂಡಿಯ ಜಾಡಿಗೆ ಕೈಹಾಕಿ ಸಿಕ್ಕಿಬಿದ್ದ ಪೋರ

ಬಾಲಕನಂತೆ ಆಕೆಯತ್ತ ಐನ್‌ಸ್ಟೈನ್ ವಿಷಾದದ ನಗೆಬೀರಿದರು. "ಆದರೆ ಅವರು ನಾನೇನು ಹೇಳುವೆನೋ ಅದನ್ನು ಕೇಳಲು ಬಂದರೆ ವಿನಹ ನಾನು ಸೊಗಸಾಗಿ ಉಡುಪು ಹಾಕಿರುವೆನೋ ಇಲ್ಲವೋ ಎಂಬುದನ್ನು ನೋಡುವುದಕ್ಕಲ್ಲ. ಅಲ್ಲವೇ?" ಅವರು ಬಳಸಿರದಿದ್ದ ಸೂಟನ್ನು ನೇತುಹಾಕುತ್ತ ಭುಜ ಹಾರಿಸಿ ಅವರತ್ತ ಆಕೆ ಅಸಹಾಯಕ ನಗೆಬೀರಿದರು.

ತಾನೊಬ್ಬ ಪ್ರಮುಖ ವ್ಯಕ್ತಿಯೆಂದು ಪರಿಗಣಿತನಾಗಿದ್ದೇನೆಂಬುದು ಅವರ ಪೂರ್ಣ ಗಮನಕ್ಕೆ ಬಂದಿರಲೇ ಇಲ್ಲ. ಪ್ಯಾರಿಸ್ ಸಮೀಕ್ಷಾಲಯವು ಅವರನ್ನು ಸುಪ್ರಸಿದ್ಧ ಫ್ರೆಂಚ್ ವಿಜ್ಞಾನಿಗಳ ಸಮ್ಮುಖದಲ್ಲಿ ಭಾಷಣ ಮಾಡಲು ಆಹ್ವಾನಿಸಿದಾಗ ಅವರು ಮೂರನೆ ತರಗತಿಯ ರೈಲುಗಾಡಿಯಲ್ಲಿ ಪ್ರಯಾಣಮಾಡಿದರು. ಅಲ್ಲಿಗೆ ಬಂದ ಕೂಡಲೆ ಅವರು ಸುಮಾರು ದೂರದ ಸಮೀಕ್ಷಾಲಯದತ್ತ ವಾಪು ಗಾಲಿಕ್ಕುತ್ತ ಬಿರುಬಿರನೆ ನಡೆದರು. ಪಾಪ, ರೈಲಿನ ಪ್ರಥಮದರ್ಜೆಯ ಬೋಗಿಗಳೆಲ್ಲವನ್ನೂ ಹುಡುಕಿ ಐನ್‌ಸ್ಟೈನರನ್ನು ಕಾಣದೆ ಕಳವಳಗೊಂಡು ಹತಾಶರಾದ ಸ್ವಾಗತ ಸಮಿತಿಯವರನ್ನು ತಾವು ಹಿಂದೆಬಿಟ್ಟು ಬಂದುದು ಐನ್‌ಸ್ಟೈನರಿಗೆ ಹೇಗೆ ತಿಳಿಯಬೇಕು!

ಯಾವ ವಿಶೇಷ ಮನ್ನಣೆಯನ್ನೂ ಸ್ವೀಕರಿಸದೆ ಎಲ್ಲರಂತೆಯೇ ತಮ್ಮನ್ನೂ ಕಾಣುವಂತೆ ಐನ್‌ಸ್ಟೈನ್ ಬಲವಂತಪಡಿಸುತ್ತಿದ್ದರು. ಒಂದು ದಿನ ತಮ್ಮ ಸಹ ಪ್ರಾಧ್ಯಾಪಕರೊಬ್ಬರನ್ನು ಯಾವುದೋ ನಿಗದಿಯಾದ ಸೇತುವೆಯ ಬಳಿ ತಾವು ಭೇಟಿಮಾಡುವುದಾಗಿಯೂ ಆ ಬಳಿಕ ಹೋಗಬೇಕಿದ್ದ ಸ್ಥಳಕ್ಕೆ ಇಬ್ಬರೂ ಕೂಡಿಯೇ ನಡೆದು ಹೋಗುವುದೆಂದೂ ಅವರು ಸೂಚಿಸಿದರು.

ಪ್ರಾಧ್ಯಾಪಕರು ಮೊದಲು ಇದನ್ನು ಸಮ್ಮತಿಸಲಿಲ್ಲ. "ನಾನು ವಿಳಂಬವಾಗಿ ಬರಬೇಕಾದೀತೆಂದು ಕಾಣುತ್ತದೆ. ಆದ್ದರಿಂದ ನಾನಿಲ್ಲದೆಯೇ ನೀವು ಮುಂಚೆ ಹೋಗುವುದು ಉತ್ತಮ. ಸೇತುವೆಯ ಬಳಿ ನನಗಾಗಿ ನೀವು ಕಾಯುವುದನ್ನು ಒಪ್ಪಲಾರೆ," ಎಂದರು.

"ಅದರಿಂದೇನು ವ್ಯತ್ಯಾಸವಾಗುತ್ತದೆ"? ಎಂದು ಭುಜವನ್ನು

ಹಾರಿಸುತ್ತ ಐನ್‌ಸ್ಟೈನ್ ಪ್ರಶ್ನಿಸಿದರು. "ನಾನು ಮಾಡುವಂತಹ ಕೆಲಸವನ್ನು ಎಲ್ಲಿ ಬೇಕಾದರೂ ಮಾಡಬಹುದು. ನನ್ನ ಸಮಸ್ಯೆಗಳನ್ನು ಕುರಿತು ನಾನು ನನ್ನ ಮೇಜಿನ ಮುಂದೆ ಕುಳಿತು ಹೇಗೋ ಸೇತುವೆಯ ಮೇಲೂ ಹಾಗೇ ಆಲೋಚಿಸಬಲ್ಲೆ".

ತಮ್ಮ ಅಭಿಪ್ರಾಯಗಳು ಸಾರ್ವಜನಿಕರ ಮೇಲೆ ಪ್ರಭಾವ ಬೀರುವಂತಹ ಸ್ಥಾನದಲ್ಲಿ ತಾವಿರುವುದನ್ನು ಐನ್‌ಸ್ಟೈನ್ ಅರಿತಿದ್ದರು. ಆದುದರಿಂದಲೇ ಅವರು ಬಹಳ ಜಾಗರೂಕರಾಗಿದ್ದರು. ಆದರೆ ಸದುದ್ದೇಶಕ್ಕಾಗಿ ಸಹಾಯಕವಾಗಬಲ್ಲಂತೆ ತಮ್ಮ ಪ್ರಭಾವವನ್ನು ಬಳಸುವ ಹೊಣೆಗಾರಿಕೆಯೂ ತಮ್ಮದೆಂದು ಅವರು ತಿಳಿದಿದ್ದರು. ತಮ್ಮ ಹೆಸರನ್ನು ಬಳಸಿಕೊಳ್ಳಲು ಅಪ್ಪಣೆ ದೊರಕಿದರೆ ಯಾವುದೇ ಧರ್ಮ ಸಂಸ್ಥೆಯು ವಿಶೇಷ ಹಣ ಗಳಿಸಬಹುದಾಗಿತ್ತು. ಹೊಸ ಭಾವನೆಗಳ, ಶೋಧಗಳ, ರಾಜಕೀಯ ಪಕ್ಷಗಳ ಬೆಂಬಲಕ್ಕಾಗಿ ಸಹಾಯದ ಬೇಡಿಕೆಗಳು ಅನೇಕವಾಗಿ ಬಂದರೂ ಅವರು ಮಾನವಕುಲ ಅಥವಾ ವಿಜ್ಞಾನಕ್ಕಾಗಿ ಮಾತ್ರ ತಮ್ಮ ನೆರವು ನೀಡುತ್ತಿದ್ದರು.

ಇದೇ ಸಮಯಕ್ಕೆ, ಅನೇಕ ವರ್ಷಗಳ ಬರ್ಲಿನ್ ವಾಸಾನಂತರ ತಾವು ಪ್ರಷ್ಯಾನ್ ಪ್ರಜೆಯಾಗಲು ಒಪ್ಪುವ ನಿರ್ಧಾರ ತಳೆದರು. ಜಗತ್ತಿನ ಗಮನ ತಮ್ಮ ಮೇಲಿರುವುದೆಂದು ತಿಳಿದುಕೊಂಡೇ ಅವರು ಆಡಂಬರರಹಿತ ಸರಳ ಜೀವನವನ್ನು ಮುಂದುವರಿಸಿದ್ದರು. ಮನೆಯಿಂದ ಸಂಪೂರ್ಣವಾಗಿ ಬೇರ್ಪಟ್ಟು ಹಲವು ಮೆಟ್ಟಲುಗಳನ್ನೇರಿ ಹೋಗಬೇಕಿದ್ದ ಗೋಪುರ ಉಪ್ಪರಿಗೆಯಲ್ಲಿ ಪುಸ್ತಕಗಳ ಸಾಲುಗಳಿಂದ ಆವೃತವಾಗಿದ್ದ ಕೊಠಡಿಯಲ್ಲಿ ತಮ್ಮ ಕೆಲಸ ನಡೆಯಿಸುತ್ತಿದ್ದರು. ರಸ್ತೆಯಲ್ಲಿ ತಮ್ಮನ್ನು ಹಿಂಬಾಲಿಸುತ್ತಿದ್ದ ತೀಕ್ಷ್ಣ ನೋಟಗಳನ್ನು ಗಮನಿಸದೆ ಅವರು ತಮ್ಮ ಎಂದಿನ ದೀರ್ಘ ಗಾಳಿಸಂಚಾರದಿಂದ ಆನಂದಿತರಾಗುತ್ತಿದ್ದರು. ಈ ವೇಳೆಗೆ ಅವರ ಕೆದರಿದ ಕೂದಲಿನ ಉಜ್ವಲ ಮುಖ ಎಲ್ಲರಿಗೂ ಚಿರಪರಿಚಿತವಾಗಿತ್ತು.

ವರ್ಷಗಳುರುಳಿದಂತೆ, ಜರ್ಮನಿಯಲ್ಲಿ ಯೆಹೂದಿ ವಿರುದ್ಧ ಭಾವನೆಗಳು ವರ್ಧಿಸತೊಡಗಿದುವು. ಕೆಲವು ಜರ್ಮನ್ ವಿಜ್ಞಾನಿ

ಗಳು ಸಾಪೇಕ್ಷವಾದವನ್ನು "ಯೆಹೂದ್ಯ ವಿಜ್ಞಾನ"ವೆಂದು ಕರೆದು ಆ ಭಾವನೆಗಳನ್ನೇ ಖಂಡಿಸಲು ಪ್ರಯತ್ನಿಸತೊಡಗಿದರು. ಐನ್‌ಸ್ಟೈನ ರಿಗೆ ಇದರಿಂದ ಬಹಳ ವ್ಯಥೆಯಾಯಿತು—ತಮ್ಮ ವಾದವನ್ನು ಖಂಡಿ ಸಿದುದಕ್ಕಲ್ಲ; ವಿಜ್ಞಾನಿಗಳು ವಿಜ್ಞಾನವನ್ನು ತಮ್ಮ ವೈಯಕ್ತಿಕ ಭೇದ ಭಾವನೆಗಳಿಂದ ಪ್ರತ್ಯೇಕಿಸದಿದ್ದುದಕ್ಕಾಗಿ. ಕೆಲವು ಸಲ ಅವರು ತಮ್ಮ ಕೆಲಸವನ್ನು ಒಪ್ಪದವರ ಭಾಷಣವನ್ನು ಕೇಳಲು ಹೋಗುತ್ತಿದ್ದರು. ಆಗ ಭಾಷಣಕಾರ ಯಾರೋ ಅಪರಿಚಿತನ ಕಾರ್ಯವನ್ನು ಛಿದ್ರಗೊಳಿಸುತ್ತಿರುವನೋ ಎಂಬಂತೆ ಅವರು ಆಗ್ರಹಗೊಳ್ಳದೆ, ಆಗಾಗ್ಗೆ ತಲೆಯಾಡಿಸುತ್ತ, ಆಸ್ಥೆಯಿಂದ ಆಲಿಸುತ್ತಿದ್ದರು.

ವಿಶೇಷ ಉಪನ್ಯಾಸಗಳಿಗಾಗಿ ಜರ್ಮನಿಯಾಚೆ ಹೋಗುತ್ತಿದ್ದುದು ಅವರಿಗೆ ಆರಾಮದ ಬದಲಾವಣೆಗಳಂತಿದ್ದುವು. ತಮ್ಮ ದೇಶದಲ್ಲಿಯೇ ಹೊಗೆಯಾಡುತ್ತಿದ್ದ ಅಶಾಂತ ವಾತಾವರಣದಿಂದ ಕೆಲವು ಕಾಲವಾದರೂ ಹೊರಗಿರುವುದು ಎಷ್ಟೋ ಹಿತವೆನಿಸುತ್ತಿತ್ತು. ಹೊಸ ದೇಶ, ಹೊಸ ವಿಜ್ಞಾನಿಗಳನ್ನು ಭೇಟಿ ಮಾಡುವುದು ಎಷ್ಟೋ ಆಹ್ಲಾದಕರವಾಗಿತ್ತು. ಅವರು ಎಲ್ಲಿ ಹೋದರೂ ಜನರ ಗುಂಪೇ ಅವರನ್ನು ನೋಡಲು, ಕೇಳಲು ಬರುತ್ತಿತ್ತು. ಹಾಲೆಂಡಿನ ಲೈಡನ್ ವಿಶ್ವವಿದ್ಯಾನಿಲಯ ಅವರನ್ನು ಪೂರ್ಣಕಾಲದ ಪ್ರಾಧ್ಯಾಪಕರಾಗಿ ನಿಯಮಿಸಿದ್ದರೂ ವರ್ಷದಲ್ಲಿ ಕೆಲವು ವಾರಗಳು ಮಾತ್ರ ಅವರು ಅಲ್ಲಿನ ಪ್ರೌಢ ವ್ಯಾಸಂಗದ ವಿದ್ಯಾರ್ಥಿಗಳಿಗೆ ಉಪನ್ಯಾಸ ಕೊಡುತ್ತಿದ್ದರು. ಅರ್ಥ ಮಾಡಿಕೊಳ್ಳುವ ಒಳ್ಳೆಯ ಗೆಳೆಯರೊಂದಿಗೆ ಪ್ರಶಾಂತ ಹಾಗು ಆಹ್ಲಾದಕರ ನಾಡಿನಲ್ಲಿ ಕಳೆಯುತ್ತಿದ್ದ ಈ ಅಲ್ಪ ವಿರಾಮಕಾಲಗಳು ಅವರಿಗೆ ಅತ್ಯಾನಂದದಾಯಕವಾಗಿದ್ದುವು.

ವಿಶೇಷ ಉಪನ್ಯಾಸಕ್ಕೆಂದು ೧೯೨೧ರಲ್ಲಿ ಐನ್‌ಸ್ಟೈನ್ ಪ್ರಾಗ್ ವಿಶ್ವವಿದ್ಯಾನಿಲಯಕ್ಕೆ ಹಿಂತಿರುಗಿದ್ದರು. ಸಾರ್ವಜನಿಕ ಸ್ವಾಗತದಿಂದುಂಟಾಗಬಹುದಾದ ಸಂಭ್ರಮದ ಗಲಿಬಿಲಿ ಗೊಂದಲಗಳನ್ನು ತಪ್ಪಿಸುವುದಕ್ಕಾಗಿ ಅವರ ಬರುವಿಕೆಯನ್ನು ಪ್ರಕಟಿಸಲೇ ಇಲ್ಲ. ವರ್ಷಗಳ ಹಿಂದಿನಿಂದ ಪ್ರಾಗ್‌ನಲ್ಲಿ ಐನ್‌ಸ್ಟೈನರ ಸ್ಥಳದಲ್ಲಿದ್ದ ಪ್ರೊಫೆಸರ್

ಫಿಲಿಪ್ ಫ್ರಾಂಕ್‌ರವರು ಅವರನ್ನು ರೈಲು ನಿಲ್ದಾಣದಲ್ಲಿ ಭೇಟಿಮಾಡಿದರು. ರೈಲಿನ ಬರುವಿಕೆಯನ್ನು ಕಾಯುತ್ತಿದ್ದಾಗ ಪ್ರೊಫೆಸರ್ ಫ್ರಾಂಕ್‌ರವರು ಐನ್‌ಸ್ಟೈನರ ಸೌಮ್ಯ ಹಾಗು ಆಡಂಬರರಹಿತ ವ್ಯಕ್ತಿತ್ವವನ್ನು ನೆನೆಸಿಕೊಂಡು, ಜಗದ್ವ್ಯಾಪಕ ಕೀರ್ತಿಯಲ್ಲಿ ಕಳೆದ ವರ್ಷಗಳು ಅವರಲ್ಲಿ ಏನು ಮಾರ್ಪಾಟು ಮಾಡಿರಬಹುದೆಂದು ಹಾಗೆಯೇ ಯೋಚಿಸತೊಡಗಿದರು.

ಮುದುರಿದ ಓವರ್‌ಕೋಟು, ತಲೆಯ ಮೇಲಿನ ಹರಕಲು ಟೊಪ್ಪಿಗೆ, ಕೈಯಲ್ಲಿ ಪಿಟೀಲುಪೆಟ್ಟಿಗೆ—ರೈಲಿನಿಂದಿಳಿದ ಈ ವೇಷಧಾರಿಯು ಜಗತ್ಪ್ರಸಿದ್ಧ ವ್ಯಕ್ತಿಯಂತೆ ಕಾಣುತ್ತಲೇ ಇರಲಿಲ್ಲ. ಆ ಹೃತ್ಪೂರ್ವಕ ನಗು ಹೊಳಪಿನ ಕಣ್ಣುಗಳು ಮಾತ್ರ ಹಿಂದಿನಂತೆಯೇ ಇದ್ದುವು.

ಆ ಸಂಜೆ ಸಭಾಂಗಣದಲ್ಲಿ ಜನ ಕಿಕ್ಕಿರಿದು ನಿಂತಿದ್ದರು. ಐನ್‌ಸ್ಟೈನರು ಏನು ಹೇಳುವರೆಂಬುದನ್ನು ಪ್ರಾಯಶಃ ಅರ್ಥಮಾಡಿಕೊಳ್ಳಲಾರದ ಅನೇಕರು ಅಲ್ಲಿದ್ದರು. ಆದರೆ ಅವರೆಲ್ಲ ಆ ಮಹಾವ್ಯಕ್ತಿಯ ದರ್ಶನದ ಅನುಭವಕ್ಕಾಗಿ ಅಲ್ಲಿಗೆ ಬಂದಿದ್ದರು.

ಆ ಬಳಿಕ, ತಮ್ಮ ಗೃಹದಲ್ಲಿ ಐನ್‌ಸ್ಟೈನರನ್ನು ಭೇಟಿ ಮಾಡಲು ವಿಶ್ವವಿದ್ಯಾನಿಲಯದ ಅಧ್ಯಕ್ಷರು ಕೆಲವು ಗೆಳೆಯರನ್ನು ವಿಶೇಷವಾಗಿ ಆಹ್ವಾನಿಸಿದರು. ಹಾರ್ದಿಕ ಸ್ವಾಗತಭಾಷಣಗಳಾದ ನಂತರ ತಮ್ಮನ್ನುದ್ದೇಶಿಸಿ ಐನ್‌ಸ್ಟೈನರು ನಾಲ್ಕು ಮಾತನಾಡುವಂತೆ ಅವರು ಕೇಳಿಕೊಂಡರು.

ಅವರು ಉತ್ತರಿಸಿದರು; "ಅದರ ಬದಲು ನಾನು ನಿಮಗಾಗಿ ಸಂಗೀತ ನುಡಿಸುವುದು ಪ್ರಾಯಶಃ ಅರ್ಥಪೂರ್ಣವೂ ಆನಂದದಾಯಕವೂ ಆಗಿರುತ್ತದೆ." ತಮ್ಮ ಪಿಟೀಲನ್ನು ತೆಗೆದು ಈ ಗುಣಗ್ರಾಹೀ ಚಿಕ್ಕ ಗುಂಪಿನ ಮುಂದೆ ಮೋಟ್ಸಾರ್ಟರ ಸ್ವರಮೇಳಗಳನ್ನು ಸುಶ್ರಾವ್ಯವಾಗಿ ನುಡಿಸತೊಡಗಿದರು.

೧೧. ಅಮೇರಿಕಕ್ಕೆ ಪ್ರಥಮ ಭೇಟಿ

ಯೂರೋಪಿನಿಂದ ಹೊರಟ ರಾಟರ್‌ಡಾಂ ಜಹಜು ವಿಶೇಷ ಘಟನೆಗಳೇನೂ ಇಲ್ಲದೆ ಸಾಗರವನ್ನೂ ದಾಟಿ ೧೯೨೧ರ ಏಪ್ರಿಲ್‌ನಲ್ಲಿ ಒಂದು ದಿನ—ಮಂಜು ಕವಿದಿದ್ದ ಆ ದಿನ—ನಿಧಾನವಾಗಿ ನ್ಯೂಯಾರ್ಕ್ ಬಂದರನ್ನು ಸೇರುತ್ತಿತ್ತು. ಆ ಜಹಜಿನ ಕಂಬಿಗೆ ಒರಗಿ ಕೊಂಡು ನಿಶ್ಚಲವಾಗಿ ನಿಂತಿದ್ದ ಒಂದು ವ್ಯಕ್ತಿ ಮಂಜಿನ ತೆರೆಯನ್ನು ತೂರಿಕೊಂಡು ಕಾಣಿಸುತ್ತಿದ್ದ ಸ್ವಾತಂತ್ರ್ಯದೇವಿಯ ಪ್ರತಿಮೆಯನ್ನು ವೀಕ್ಷಿಸುತ್ತಿತ್ತು. ಜಹಜು ಕ್ರಮೇಣ ಮುಂದೆ ಸರಿದಂತೆ ಪ್ರತಿಮೆ ಕಣ್ಮರೆಯಾಯಿತು.

ತಲೆಗೆ ಯಾವ ಟೊಪ್ಪಿಗೆಯನ್ನೂ ಆ ವ್ಯಕ್ತಿಯು ಧರಿಸಿರಲಿಲ್ಲವಾದ್ದರಿಂದ ಗಾಳಿಯು ಅವರ ವಿಶಾಲ ಹಣೆಯ ಹಿಂಭಾಗದಲ್ಲಿ ಉದ್ದುದ್ದವಾಗಿ ಬೆಳೆದಿದ್ದ, ಅಲ್ಲಲ್ಲಿ ನರೆತಿದ್ದ ಕಪ್ಪು ಕೂದಲನ್ನು ಹಾರಿಸುತ್ತಿತ್ತು. ಅವರ ಷರಟಿನ ಚಿಕ್ಕ ಕಂಠಪಟ್ಟಿಯ ತುದಿಗಳ ಕೆಳಗೆ ಸುಮಾರು ಗಾತ್ರದ ಕಂಠಬಂಧದ ಗಂಟಿದ್ದಿತು. ಕನಸು ಕಾಣುತ್ತಿದ್ದಂತಿದ್ದ ಅವರ ಕಂದು ಬಣ್ಣದ ಕಣ್ಣುಗಳು ಸ್ವಾತಂತ್ರ್ಯದೇವಿಯ ಪ್ರತಿಮೆಯನ್ನು ಅದು ಮರೆಯಾಗುವವರೆಗೂ ನೋಡುತ್ತಿದ್ದುವು. ಅದು ಅದೃಶ್ಯವಾದಾಗ ಅವರ ತುಟಿಗಳು ಮಂದಹಾಸದಿಂದ ಬಿಗಿದುವು.

"ಆಲ್ಬರ್ಟ್!" ಅವರ ಹೆಸರನ್ನು ಯಾರೋ ಮೆಲುದನಿಯಲ್ಲಿ ಕೂಗಿದಂತಾಗಿ ಹಿಂತಿರುಗಿ ನೋಡಲು ಅವರ ಪತ್ನಿಯು ಕೈಸನ್ನೆ ಮಾಡಿ ಅವರನ್ನು ಕರೆಯುತ್ತಿದ್ದುದು ಕಾಣಿಸಿತು. "ಬನ್ನಿ, ನಾವು ಹಡಗಿನ ಬೇರೆ ಅಟ್ಟಕ್ಕೆ ಹೋಗಬೇಕು" ಎಂದು ಅವರ ಭುಜದ ಮೇಲೆ ಕೈಯಿಡುತ್ತ ಅವರೆಂದರು, "ವರದಿಗಾರರು ನಿಮ್ಮನ್ನು ಅಲ್ಲಿ ಭೇಟಿಮಾಡುವರೆಂದು ಅವರು ಹೇಳುತ್ತಾರೆ."

ಐನ್‌ಸ್ಟೈನ್ ತಲೆದೂಗಿ ಆಕೆಯನ್ನು ಹಿಂಬಾಲಿಸಲು ತಿರುಗಿದರು. ಯಾವ ದೇಶದ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವವನ್ನು ಅವರು ಅನವರತವೂ ಮೆಚ್ಚಿದ್ದರೋ ಆ ಅಮೇರಿಕದ ಸಂಯುಕ್ತ ಸಂಸ್ಥಾನಗಳಿಗೆ ಇದು ಅವರ ಪ್ರಥಮ ಭೇಟಿಯಾಗಿತ್ತು. ಜಹಜಿನ ಮುಖ್ಯಾಧಿಕಾರಿಯು ವರದಿಗಾರರ ಭೇಟಿಯು ಯಾವ ಆತಂಕ ಅಡಚಣೆಯೂ ಇಲ್ಲದೆ ಸಾಗುವಂತೆ ಅವರಿಗಾಗಿ ಅಟ್ಟದ ಒಂದು ಭಾಗವನ್ನು ಹಗ್ಗಗಳಿಂದ ಪ್ರತ್ಯೇಕಿಸಿದ್ದರು.

ಹಡಗು ಇಳಿದಾಣಕ್ಕೆ ತಲಪುವುದೇ ತಡ ಛಾಯಾಗ್ರಾಹಕರು ಮತ್ತು ವರದಿಗಾರರು ಹಡಗನ್ನೇ ಹತ್ತಿದ್ದರು. ತಮಗಾಗಿ ಪ್ರತ್ಯೇಕವಾಗಿ ಮೀಸಲಿದ್ದ ಸ್ಥಳವನ್ನಾಕ್ರಮಿಸಿದ ಕೂಡಲೇ ಅವರ ಕಾರ್ಯಾರಂಭವಾಗಿತ್ತು.

"ಎಲ್ಲಿ! ಹೀಗೆ ನೋಡಿ ಸರ್, ಹಾಗೆ! ಎಲ್ಲಿ, ಈಗ ಹಾಗೇ ನೋಡಿ!..... ಸ್ವಲ್ಪ ನಗುವಿರಾ?........ ಸ್ವಲ್ಪ ಮೇಲೆ ನೋಡಿ!........ ಸ್ವಲ್ಪ ಕೆಳಗೆ ನೋಡಿ........ ಕುಳಿತುಕೊಳ್ಳಿ!......... ದಯವಿಟ್ಟು ಎದ್ದೇಳುವಿರಾ ?...... ಎಲ್ಲಿ, ನಿಮ್ಮ ಕೈ ಬೀಸಿರಿ! ದಯವಿಟ್ಟು ಮತ್ತೊಮ್ಮೆ ಹಾಗೆ...... ಹಾಗೇ!...... ವಂದನೆಗಳು!........"

ಛಾಯಾಗ್ರಾಹಕರು ನೂಕಿ, ನುಗ್ಗಿ, ಕಂಬಿಯನ್ನೇರಿ ಅವರನ್ನು ವಿವಿಧ ಭಂಗಿಗಳಲ್ಲಿ ಪಡೆಯಲು ಅವಾಂತರದ ಪ್ರಯತ್ನ ನಡೆಸಿದರು. ಈ ಎಲ್ಲ ಗಮನದ ಕೇಂದ್ರವಾಗಿದ್ದ ಐನ್‌ಸ್ಟೈನ್ ಪ್ರಶಾಂತರಾಗಿ ಅವರು ಹೇಳಿದಂತೆ ನಕ್ಕು, ತಲೆಯಾಡಿಸಿ ಕೈಬೀಸುತ್ತಿದ್ದರು. ಕೆಲವೊಮ್ಮೆ ಅವರ ಮುಖಭಂಗಿಯು ಪ್ರಶ್ನಾರ್ಥಕ ಚಿಹ್ನೆಯಾಗುತ್ತಿತ್ತು; ಒಮ್ಮೆ ಅವರು ಎಲ್ಲಾರತ್ತ ಕಣ್ಣು ಹೊರಳಿಸಿ, "ಓ ದೇವರೇ! ನಾನು ಗೀತನಾಟಕದ ಪ್ರಧಾನ ಗಾಯಕಿ ಇರಬೇಕೆಂದನ್ನಿಸುತ್ತಿದೆ ನನಗೆ!" ಎಂದು ಪಿಸುನುಡಿದರು.

ಕೊನೆಗೆ ಛಾಯಾಗ್ರಾಹಕರು ತಮ್ಮ ಕಾರ್ಯದಲ್ಲಿ ತೃಪ್ತಿ ಹೊಂದಿ ವರದಿಗಾರರಿಗೆ ತಮ್ಮ ಸ್ಥಾನವನ್ನು ಬಿಟ್ಟುಕೊಟ್ಟರು. ಪುಸ್ತಕ,

ಪೆನ್ಸಿಲ್ ಹಿಡಿದು ಪ್ರಶ್ನೆ ಕೇಳುತ್ತ, ಅವಸರದಿಂದ ಗೀಚುತ್ತ ಅವರೆಲ್ಲ ಐನ್‌ಸ್ಟೈನರನ್ನು ಮುತ್ತಿದರು.

"ಅಮೆರಿಕದ ಬಗೆಗೆ ನಿಮ್ಮ ಅಭಿಪ್ರಾಯವೇನು?"

"ಆದರೆ ನಾನಿನ್ನೂ ಅದನ್ನು ನೋಡಿಯೇ ಇಲ್ಲವಲ್ಲ........"

"ನೀವು ಎಷ್ಟುಕಾಲ ಇಲ್ಲಿರುವಿರಿ?"

"ನನಗೆ ಅದಿನ್ನೂ ತಿಳಿದಿಲ್ಲ........"

"ಸಾಪೇಕ್ಷವಾದವನ್ನು ಒಂದೇ ವಾಕ್ಯದಲ್ಲಿ ವಿವರಿಸಬಲ್ಲಿರಾ?"

"ಇಲ್ಲ"

"ಪ್ರಪಂಚದಲ್ಲಿ ಎಷ್ಟು ಜನ ನಿಮ್ಮ ವಾದವನ್ನು ಅರ್ಥಮಾಡಿಕೊಳ್ಳಬಲ್ಲರು?"

"ಅದನ್ನು ಅಧ್ಯಯನ ಮಾಡುವ ಭೌತಶಾಸ್ತ್ರಜ್ಞ ಯಾವನಾದರು ಅರ್ಥಮಾಡಿಕೊಳ್ಳಬಲ್ಲನು."

"ಅಂತಹವುಗಳನ್ನು ಅರ್ಥಮಾಡಿಕೊಳ್ಳಲಾಗದವರೂ, ವಿಜ್ಞಾನ ವಿಷಯಗಳಲ್ಲಿ ಆಸಕ್ತಿಯಿಲ್ಲದವರೂ ನಿಮ್ಮ ಈ ಕಾರ್ಯದಲ್ಲಿ ಇಷ್ಟೊಂದು ಆಸ್ಥೆವಹಿಸಿ ಆಶ್ಚರ್ಯ ಸೂಚಿಸುವುದಕ್ಕೆ ನೀವು ವಿವರಣೆ ನೀಡಬಲ್ಲಿರಾ?"

ಐನ್‌ಸ್ಟೈನ್ ತಮ್ಮ ಭುಜವನ್ನು ಹಾರಿಸಿದರು: "ಅಂತಹ ವಿಚಿತ್ರ ಪ್ರತಿಕ್ರಿಯೆಗೆ ನಿಜಕಾರಣವನ್ನು ವೈಜ್ಞಾನಿಕವಾಗಿ ಶೋಧನೆ ನಡೆಯಿಸಿ ಕಂಡುಹಿಡಿಯಬೇಕು......"

"ಸ್ತ್ರೀಯರೇಕೆ ಸಾಪೇಕ್ಷವಾದದ ಬಗ್ಗೆ ಅಷ್ಟೊಂದು ಉದ್ರೇಕಗೊಂಡಿದ್ದಾರೆ?"

ಐನ್‌ಸ್ಟೈನ್ ತಮ್ಮ ತಲೆಯನ್ನು ಹಿಂದಕ್ಕೆಸೆದು ನಕ್ಕರು. "ಏಕೆಂದರೆ, ಅವರು ಪ್ರತಿವರ್ಷವೂ ಹೊಸಹೊಸ ಮಾದರಿಗಳಲ್ಲಿ ಆಸಕ್ತರಾಗಿರುತ್ತಾರೆ. ಸಾಪೇಕ್ಷವಾದದಲ್ಲಿ ಆಸಕ್ತರಾಗಿರುವುದು ಅವರ ಈ ವರ್ಷದ ಫ್ಯಾಷನ್........"

ಸದಾ ಹಿಂಬದಿಯಲ್ಲಿಯೇ ಸುಳಿದಾಡುತ್ತಿದ್ದ ಎಲ್ಸಾರ ಕಡೆ ಒಬ್ಬ ವರದಿಗಾರರು ತಿರುಗಿ, "ಶ್ರೀಮತಿ ಐನ್‌ಸ್ಟೈನರೇ, ತಾವು ಪರಿಣತ ಗಣಿತ ಶಾಸ್ತ್ರಜ್ಞರೇನು?" ಎಂದು ಪ್ರಶ್ನಿಸಿದರು.

"ಇಲ್ಲ, ಇಲ್ಲ!" ಆಕೆ ತಲೆಯಾಡಿಸಿ ಅಂದರು. ಈ ವೇಳೆಗಾಗಲೇ ಅವರು ಪ್ರಶ್ನೆಗಳಿಂದ ಜಾರಿಕೊಳ್ಳುವ ಜಾಣತನದಲ್ಲಿ ನಿಷ್ಣಾತರಾಗಿದ್ದರು. "ಗಣಿತ ಶಾಸ್ತ್ರದಲ್ಲಿನ ನನ್ನ ಆಸಕ್ತಿ ಮನೆಯ ಆಯ ವ್ಯಯದ ಲೆಕ್ಕಗಳನ್ನು ಸರಿನೋಡುವಷ್ಟರವರೆಗೆ ಮಾತ್ರ."

"ನಿಮಗೆ ಸಾಪೇಕ್ಷವಾದವು ಅರ್ಥವಾಗಿರುವುದೇ?"

ಮೂಗು ಮುರಿದು ಅವರು ನಕ್ಕಿದ್ದರು. "ನನ್ನ ಸೌಖ್ಯಕ್ಕೆ ಸಾಪೇಕ್ಷವಾದ ಅರ್ಥವಾಗುವುದು ಆವಶ್ಯಕವಲ್ಲ."

ಕೊನೆಗೆ ಈ ಪತ್ರಿಕಾ ವರದಿಗಾರರ ಭೇಟಿ ಮುಗಿಯಿತು. ಐನ್‌ಸ್ಟೈನ್ ದಂಪತಿಗಳು ಹಡಗಿನ ತಮ್ಮ ಕೋಣೆಗೆ ಹೊರಟು ಹಡಗಿನಿಂದಿಳಿಯಲು ಸಿದ್ಧ ಮಾಡಿಕೊಳ್ಳತೊಡಗಿದರು. ಹಡಗುಕಟ್ಟೆಯಲ್ಲಿ ಅವರನ್ನು ಆಧಿಕೃತ ನಿಯೋಗವೊಂದು ಭೇಟಿಮಾಡಿತು. ಪ್ರಾರಂಭದ ಔಪಚಾರಿಕ ಸ್ವಾಗತವಾದ ನಂತರ ಹೊರಗಡೆಯಿದ್ದ ತೆರೆದ ಮೋಟಾರಿಗೆ ಅವರನ್ನು ಕರೆದೊಯ್ಯಲಾಯಿತು. ಅನಂತರ ಐನ್‌ಸ್ಟೈನರ ಮೋಟಾರು ಮುಂದೆ ಸಾಗಿತು. ಅದರ ಹಿಂದೆ ಮೋಟಾರುಗಳ ಮೆರವಣಿಗೆ ಸಾಲು ಪುರಭವನದತ್ತ ಚಲಿಸತೊಡಗಿತು.

ಮೆರವಣಿಗೆ ನಿಧಾನವಾಗಿ ಚಲಿಸಿತು. ಭುಜಕ್ಕೆ ಭುಜ ಒತ್ತಿಕೊಂಡು ಅಸಂಖ್ಯಾತ ಜನರು ದಾರಿಯುದ್ದಕ್ಕೂ ನಿಂತಿದ್ದರು. ಈ ವ್ಯಕ್ತಿಯ ದರ್ಶನ ಪಡೆಯುವ ಸಲುವಾಗಿ ಅವರು ಅನೇಕ ಗಂಟೆಗಳ ಕಾಲ ಕಾದಿದ್ದರು. ಐನ್‌ಸ್ಟೈನರ ಮೋಟಾರು ಹಾದುಹೋಗುತ್ತಲೇ ಅವರು ಆನಂದಾತಿರೇಕರಾಗಿ ಚೀರಾಟ ಚೀತ್ಕಾರಗಳಿಂದ ಕೈಬೀಸುತ್ತಿದ್ದರು. ಕಚೇರಿಯ ಕೆಲಸಗಾರರು ತಮ್ಮ ಗಗನಚುಂಬಿ ಸೌಧಗಳ ಕಿಟಕಿಯಲ್ಲಿ ಅಡಕಿಕೊಂಡು ವಿವಿಧ ವರ್ಣರಂಜಿತ ಕಾಗದಗಳನ್ನು ಮೋಟಾರು ಹಾದುಹೋಗುವ ದಾರಿಯಲ್ಲಿ ಎರಚಿದರು.

ಐನ್‌ಸ್ಟೈನ್ ಮೋಟಾರಿನಲ್ಲಿ ನಿಂತು ಕೆಲವೊಮ್ಮೆ ತಲೆಯಾಡಿ

ಸುತ್ತ ಮತ್ತೆ ಕೆಲವೊಮ್ಮೆ ಕೈಬೀಸುತ್ತ ಸಾಗಿದ್ದರು. ಕೆಲವೊಮ್ಮೆ ಅನು ದ್ವೇಗದ ಹುಸಿನಗೆ ಬೀರುತ್ತಿದ್ದರು. ಸಣ್ಣ ಪುಟ್ಟ ಕಾಗದಗಳು ಅವರ ತಲೆಗೂದಲಿನಲ್ಲಿ ಮನೆ ಮಾಡಿದುವಾದರೆ ಉದ್ದನೆಯ ಟೇಪಿನ ಪಟ್ಟಿ ಗಳು ಅವರ ಹೆಗಲುಗಳ ಮೇಲೆ ಸವಾರಿ ಮಾಡುತ್ತಿದ್ದುವು.

ಇದೆಲ್ಲವನ್ನೂ ಅವರು ಪ್ರಶಾಂತಚಿತ್ತರಾಗಿ ಅನುಭವಿಸಿದರು. ಉತ್ತರವೇ ಕಾಣದಿದ್ದ ಸಮಸ್ಯೆಗಳನ್ನೆದುರಿಸುವ ಅಭ್ಯಾಸ ಅವರಿಗಾಗಿ ತ್ತಾದರೂ, ಈ ಬಗೆಯ ಉದ್ರಿಕ್ತ ಸಾರ್ವಜನಿಕ ಸತ್ಕಾರವು ಅವರಿ ಗರ್ಥವಾಗದ ಒಂದು ಸಮಸ್ಯೆಯಾಗಿತ್ತು. ಅವರ ಸರಳ ಸಹಜ ಸ್ವಭಾ ವಕ್ಕೆ ಗೆಳೆತನ, ಕರುಣೆಯಿಂದ ಸ್ವಾಗತ ಪಡೆಯುವುದು ಅಷ್ಟರಿಂದಲೇ ಆನಂದವುಂಟಾಗುತ್ತಿತ್ತು. ಗೊಂದಲ ಗಲಭೆಗಳಲ್ಲಿ ಜನರ ಗುಂಪು ತೊಡಗಿದಾಗ ಅವರು ಅಂತರ್ಮುಖರಾಗಿ, ತಾವೂ ಒಬ್ಬ ವೀಕ್ಷಕ ರಾಗಿ ಬಿಡುತ್ತಿದ್ದರೇ ಹೊರತು ಅದರ ಕೇಂದ್ರವಾಗುತ್ತಿರಲಿಲ್ಲ. ಸಾರ್ವ ಜನಿಕ ಗಮನವನ್ನು ಅಥವಾ ಹೊಗಳಿಕೆಯನ್ನು ತರಬಹುದಾದಂತಹ ಯಾವ ಕೆಲಸವನ್ನಾಗಲಿ, ಹೇಳಿಕೆಯನ್ನಾಗಲೀ ಅವರು ಉದ್ದೇಶ ಪೂರ್ವಕವಾಗಿ ಮಾಡುತ್ತಿರಲಿಲ್ಲ.

ಪುರಭವನದಲ್ಲಿ ಐನ್‌ಸ್ಟೈನರನ್ನು ಮೇಯರರು ಸ್ವಾಗತಿಸಿದರು. ಇಡೀ ನ್ಯೂಯಾರ್ಕ್ ನಗರವೇ ಅವರ ಅತಿಥೇಯರೆಂಬುದರ ಸಂಕೇತ ವಾಗಿ ಅವರಿಗೆ ಮೇಯರರು ಬೀಗದ ಕೈಯೊಂದನ್ನು ಅರ್ಪಿಸಿದರು. ಆರು ವಾರಗಳ ಕಾಲದ ನಿಬಿಡ ಸಂಚಾರ, ಸತ್ಕಾರ ಸಮಾರಂಭ, ಭಾಷ ಣಗಳಿಗೆ ಇದೇ ಆದಿಯಾಯಿತು. ಎಲ್ಲಿ ಹೋದರೂ ಜನಸ್ತೋಮ ಅವರನ್ನು ಸ್ವಾಗತಿಸಿತು. ವಾಷಿಂಗ್‌ಟನ್ನಿನ ಶ್ವೇತಭವನದಲ್ಲಿ ಅಧ್ಯಕ್ಷ ವಾರನ್ ಹಾರ್ಡಿಂಗ್‌ರವರು ಅವರನ್ನು ಸ್ವಾಗತಿಸಿದರು. ಪ್ರಿನ್ಸ್‌ಟನ್ ಹಾರ್ವಾರ್ಡ್ ಮತ್ತು ಕೊಲಂಬಿಯ ವಿಶ್ವವಿದ್ಯಾನಿಲಯಗಳಲ್ಲಿ ಅವರು ಉಪನ್ಯಾಸವಿತ್ತರು.

ಮೇ ತಿಂಗಳ ಕೊನೆಯ ಭಾಗದಲ್ಲಿ, ಐನ್‌ಸ್ಟೈನ್ ಸ್ವದೇಶಕ್ಕೆ ಮರಳುವ ಹಿಂದಿನ ದಿನ, ನ್ಯೂಯಾರ್ಕಿನ ಆಸ್ಟರ್ ಹೊಟೇಲಿನಲ್ಲಿ ಅವರಿಗೆ ಅನುಪಮ ಹಾರ್ದಿಕ ಬೀಳ್ಕೊಡುಗೆಯ ಸತ್ಕಾರಕೂಟವನ್ನೇ

ರ್ಪಡಿಸಲಾಗಿತ್ತು. ಅದರಲ್ಲಿ ಅಮೇರಿಕದ ಅನೇಕ ಗಣ್ಯ ಯೆಹೂದ್ಯರು ಭಾಗವಹಿಸಿದ್ದರು. ಅಂದಿನ ಭೋಜನಕೂಟದಿಂದ ಬಂದ ಲಾಭವನ್ನು ಪ್ಯಾಲಿಸ್ಟೈನಿನಲ್ಲಿ ವಿಶ್ವವಿದ್ಯಾನಿಲಯದ ಭವನವನ್ನು ರಚಿಸುವ ಸಲುವಾಗಿ ಉಪಯೋಗಿಸುವಂತೆ ಏರ್ಪಾಡಾಗಿತ್ತು. ಈ ಯೋಜನೆಯಲ್ಲಿ ಐನ್‌ಸ್ಟೈನರು ಅತ್ಯಾಸಕ್ತಿ ವಹಿಸಿ ಅದರ ಪರವಾಗಿ ಆಸ್ಥೆಯಿಂದ ಮಾತನಾಡಿದರು.

ವರದಿಗಾರರೊಡನೆ, "ಜರ್ಮನಿ ಮತ್ತಿತರ ಯೂರೋಪಿನ ದೇಶಗಳಲ್ಲಿ ಯೆಹೂದ್ಯರು ಉತ್ತಮ ವಿದ್ಯಾಭ್ಯಾಸ ಪಡೆಯುವುದು ಬಹಳ ಕಷ್ಟವಾಗಿದೆ. ಎಂದಾದರೊಮ್ಮೆ ಈ ಉದ್ದೇಶಕ್ಕಾಗಿ ಅವರು ಸ್ವತಂತ್ರವಾಗಿ ಮುಚ್ಚುಮರೆಯಿಲ್ಲದೆ ಒಂದು ಸ್ಥಳಕ್ಕೆ ಹೋಗಬಲ್ಲರೆಂಬುದು ನನ್ನ ಭರವಸೆ" ಎಂದಿದ್ದರವರು.

ಅದಕ್ಕೆ, "ನೀವು ವಿಜ್ಞಾನಿಗಳು. ನಿಮ್ಮ ಕಾರ್ಯಕ್ಕೂ, ದಾನ ಧರ್ಮ ಕಾರ್ಯಕ್ಕೂ ಯಾವ ಸಂಬಂಧವಿದೆ?" ಎಂದು ವರದಿಗಾರರಲ್ಲೊಬ್ಬರು ಪ್ರಶ್ನಿಸಿದರು.

ಆ ವರದಿಗಾರರತ್ತ ಬೆರಳು ತೋರಿಸುತ್ತ ಐನ್‌ಸ್ಟೈನರೆಂದರು: "ನಾನೂ ಒಬ್ಬ ಮನುಷ್ಯನೆಂಬುದನ್ನು ನೀವು ಮರೆತಂತಿದೆ. ಮಾನವತೆ ಮೊದಲು, ವಿಜ್ಞಾನ ಆಮೇಲೆ."

"ಕಾಲೇಜ್ ಶಿಕ್ಷಣ ನಿಜಕ್ಕೂ ಆವಶ್ಯಕವೆಂದು ತಮಗನಿಸುತ್ತದೆಯೇ? ಎಲ್ಲ ಉಪಯುಕ್ತ ವಿಷಯಗಳನ್ನೂ ಪುಸ್ತಕಗಳಿಂದಲೇ ಪಡೆಯಲು ಸಾಧ್ಯವಿಲ್ಲವೇ ?"

"ಪಠ್ಯಪುಸ್ತಕಗಳಲ್ಲಿ ದೊರಕಬಹುದಾದಂತಹ ಸರಳ ಸಂಗತಿಗಳಿಂದ ನನ್ನ ತಲೆ ತುಂಬಿಸಿ ನನ್ನ ಸ್ಮರಣಶಕ್ತಿಗೆ ನಾನೇನೋ ಭಾರ ಹೊರಿಸುವುದಿಲ್ಲ. ಆದರೆ ಕಾಲೇಜ್ ಶಿಕ್ಷಣದ ನಿಜ ಉದ್ದೇಶವಾದರೂ ಚಿಂತಿಸುವ ಕ್ರಮವನ್ನು ಮನಸ್ಸಿಗೆ ಕಲಿಸಿಕೊಡುವುದೇ ಆಗಿರುತ್ತದೆ. ಆ ಕಾರಣದಿಂದಾಗಿ ಅದು ಅತ್ಯಮೂಲ್ಯವಾದುದು."

ಮಾರನೆಯ ದಿನ ಹಡಗು ಹತ್ತಿದ ಐನ್‌ಸ್ಟೈನ್ ದಂಪತಿಗಳು ತುಂಬ ಬಳಲಿದ್ದರೂ, ಹರ್ಷಚಿತ್ತರಾಗಿದ್ದರು. ಐನ್‌ಸ್ಟೈನ್ ಅಮೇರಿಕ

ಸಂಯುಕ್ತ ಸಂಸ್ಥಾನಗಳನ್ನು ಬಹುಮಟ್ಟಿಗೆ ವರ್ಣರಂಜಿತ ಟೇಪುಗಳ ತೋರಣಗಳ ಮೂಲಕ, ಚೀತ್ಕರಿಸುವ ಜನಸಮುದಾಯ ತಲೆಗಳ ಮೇಲಿಂದ ಮತ್ತು ರೈಲುಗಾಡಿಯ ಕಿಟಿಕಿಗಳ ಮೂಲಕ ಕಂಡಿದ್ದ ರಾದರೂ, ಆ ದೇಶದ ಅಮೂಲ್ಯ ಸ್ವಾತಂತ್ರ್ಯದ ಅರಿವಾಗುವಷ್ಟನ್ನೂ ಅವರು ಕಂಡಿದ್ದರು. ಅವರ ಆಲೋಚನೆಗಳ ಅಂತರ್ಯದಲ್ಲೆಲ್ಲೋ ಒಂದೆಡೆ ಎಂದಾದರೊಂದು ದಿನ ಅದು ತಮ್ಮ ಆವಾಸದ ನಾಡಾಗ ಬಹುದೆಂಬ ಭಾವನೆಯಿತ್ತು. ಜರ್ಮನಿಗೆ ವಿಪತ್ತು ಸಮೀಪಿಸುತ್ತಿರು ವುದನ್ನು ಅವರು ಬಹುಕಾಲದಿಂದಲೂ ಕಂಡಿದ್ದರು. ಆದರೀಗ ಅವಶ್ಯಬಿದ್ದರೆ, ಅಮೇರಿಕದಲ್ಲಿ ತಾವು ಆಶ್ರಯ ಪಡೆಯಬಹುದೆಂಬು ದರ ಅರಿವು ಅವರಿಗಾಗಿತ್ತು.

೧೨. ವಿನಯಶೀಲ ಪ್ರಸಿದ್ಧ ಪುರುಷ

ಐನ್‌ಸ್ಟೈನ್ ದಂಪತಿಗಳು ಅಮೇರಿಕದಿಂದ ನೇರವಾಗಿ ಜರ್ಮನಿಗೆ ಹಿಂದಿರುಗಲಿಲ್ಲ. ಕಿಂಗ್ಸ್ ಕಾಲೇಜಿನಲ್ಲಿ ಸಾಪೇಕ್ಷತ್ವದ ಬಗ್ಗೆ ಮಾತನಾಡುವುದಾಗಿ ಕೊಟ್ಟಿದ್ದ ವಚನವನ್ನು ಪಾಲಿಸಲು ಅವರು ಲಂಡನ್ನಿನಲ್ಲಿ ಅನೇಕ ದಿನಗಳು ತಂಗಿದ್ದರು.

ತಾವು ಖ್ಯಾತ ಲಾರ್ಡ್ ಹಾಲ್ಡೇನ್‌ರವರ ಅತಿಥಿಗಳಾಗಿರುವರೆಂಬುದರ ಹೊರತಾಗಿ ತಮಗಾಗಿ ಉಳಿದ ವ್ಯವಸ್ಥೆಗಳೇನೆಂಬುದು ಅವರಿಗೆ ಗೊತ್ತಿರಲಿಲ್ಲ. ಹೊಳೆಯುವ ರೋಲ್ಸ್ ರಾಯ್ಸ್ ಮೋಟಾರು ಪರ್‌ಗುಟ್ಟುತ್ತಾ, ಅವರನ್ನು ೨೮ ಕ್ವೀನ್ ಆನ್ ಗೇಟ್‌ನ ಸುಂದರ ನಿವಾಸಕ್ಕೆ ಕರೆದೊಯ್ಯಿತು. ಮುಖಮಂಟಪದಡಿಯಲ್ಲಿ ಅವರು ಬಂದುನಿಂತಾಗ ವಿಶಿಷ್ಟ ಪೋಷಾಕಿನ ಸೇವಕ ಬಾಗಿಲಿನತ್ತ ಜಿಗಿದು ಅದನ್ನು ತೆಗೆದನು. ಐನ್‌ಸ್ಟೈನ್ ತಮ್ಮ ಪಿಟೀಲು ಪೆಟ್ಟಿಗೆಯನ್ನು ತೆಗೆದುಕೊಳ್ಳಹೋದಾಗ ತಮ್ಮ ಸಾಮಾನುಗಳನ್ನು ಆಳುಗಳಾಗಲೇ ಇಳಿಸುತ್ತಿದ್ದುದನ್ನು ಕಂಡರು.

ಲಾರ್ಡ್ ಹಾಲ್ಡೇನರು ಅವರನ್ನು ಔಪಚಾರಿಕವಾಗಿ ಸ್ವಾಗತಿಸಿದ ಮೇಲೆ ಐನ್‌ಸ್ಟೈನ್ ದಂಪತಿಗಳು ಪೋಷಾಕಿನ ಸೇವಕನನ್ನು ಹಿಂಬಾಲಿಸಿ ಸುತ್ತುಸುತ್ತಿನ ಮೆಟ್ಟಲುಗಳನ್ನೇರಿ ಎತ್ತರವಾದ ವಿಶಾಲ ಹಜಾರವನ್ನು ಸೇರಿದರು. ಸೇವಕ ಬಾಗಿಲೊಂದನ್ನು ತೆರೆದು ಐನ್‌ಸ್ಟೈನ್ ದಂಪತಿಗಳು ಒಳಹೋಗಲೆಂದು ಹಿಂದೆ ಸರಿದು ನಿಂತ. ಅನುಮಾನಿಸುತ್ತಲೇ ಅವರು ಕಮಾನಿನ ದ್ವಾರದ ಮೂಲಕ ತೆರಳಿದರು.

ಆದರೆ ಅದು ಅವರು ನಿರೀಕ್ಷಿಸಿದ್ದ ಮಲಗುವ ಕೊಠಡಿಯಾಗಿರಲಿಲ್ಲ. ಅಚ್ಚರಿಯಿಂದ ದೊಡ್ಡದಾಗಿ ಸುತ್ತಲೂ ಕಣ್ಣುಬಿಡುತ್ತ ಈ ಸರಳಜೀವಿಗಳು ಅದು ನಿಜವಾಗಿಯೂ ನೃತ್ಯದ ಮಹಾ ಮಂದಿರ

ವಿರಬೇಕೆಂದುಕೊಂಡರು. ಆದರೆ ಆ ಭವ್ಯ ಮಂದಿರದ ಮಧ್ಯೆ ಯಃಕಶ್ಚಿತವಾಗಿ ಕಾಣುತ್ತಿದ್ದ ಅವರ ಸಣ್ಣ ಸಾಮಾನುಗಳು ಆ ಕೊಠಡಿಯ ಮಧ್ಯದಲ್ಲಿಯೇ ಇದ್ದುವು.

ಓಹೋ!......ಅವರ ಪಿಟೀಲು, ಅವರಿಗೆ ಅತ್ಯಾನಂದವೀಯು ತ್ತಿದ್ದ ಅವರ ಪಿಟೀಲು! ಐನ್‌ಸ್ಟೈನ್ ಕೊಠಡಿಯನ್ನು ಹಾದು ಪಿಟೀಲು ಪೆಟ್ಟಿಗೆಯನ್ನು ಅಭಿಮಾನದಿಂದ ಎತ್ತಿಕೊಂಡರು.

"ಅಪ್ಪಣೆ ನೀಡಿರಿ, ಮಹಾಸ್ವಾಮಿ......" ಸೇವಕ ಅವರ ಪಕ್ಕಕ್ಕೆ ಹಾರಿಬಂದು ಅವರ ಕೈಯಿಂದ ಪೆಟ್ಟಿಗೆಯನ್ನು ತೆಗೆದುಕೊಂಡು ವಿನಯವಾಗಿ ಕುರ್ಚಿಯ ಮೇಲಿಟ್ಟು ಬಿಚ್ಚಿದನು.

ಐನ್‌ಸ್ಟೈಸ್ ಎಲ್ಸಾರತ್ತ ಸಂಕಟದ ನೋಟವನ್ನು ಬೀರಿದರು. ತಮ್ಮ ಪೇಚಾಟವನ್ನು ತೋರಿಸದಿರಲು ಆಕೆ ತಮ್ಮೊಂದು ಸೂಟು ಕೇಸನ್ನು ತೆಗೆದುಕೊಳ್ಳಲು ಉದ್ಯುಕ್ತರಾದರು.

"ಶ್ರೀಮತಿಯವರೆ ಅಪ್ಪಣೆ ಕೊಡಿರಿ!" ಎನ್ನುತ್ತಾ ಸೇವಕ ಅವರ ಕೈಯಿಂದ ಸೂಟುಕೇಸನ್ನು ತೆಗೆದುಕೊಂಡ. "ಕ್ಲಾರಾ ಅದನ್ನು ಬಿಚ್ಚುತ್ತಾಳೆ ಶ್ರೀಮತಿಯವರೆ" ಎಂದು ಎಲ್ಸಾರಿಗೆ ಮಣಿದನು. "ನಿಮ್ಮ ಪೆಟ್ಟಿಗೆಗಳನ್ನು ನಾನು ಬಿಚ್ಚುತ್ತೇನೆ," ಎಂದು ಆತ ಐನ್‌ಸ್ಟೈನ ರಿಗೆ ಬಾಗಿ ನಮಸ್ಕರಿಸಿದ.

ಐನ್‌ಸ್ಟೈನ್ ಎಲ್ಸಾರನ್ನು ಎವೆಯಿಕ್ಕದೆ ನೋಡುತ್ತ ತಮ್ಮ ಸಾಮಾನು ಪೆಟ್ಟಿಗೆಗಳ ಮುಂದೆ ಅಲ್ಲಾಡದೆ ನಿಂತರು. ಎಲ್ಸಾ ಅಸಹಾಯಕರಾಗಿ ಸೇವಕನನ್ನು ನೋಡಿದರು. ಸೇವಕ ಜಾಗ್ರತ ನಾಗಿ ನೆಟ್ಟಗೆ, ನೆಗೆಯಲು ಸಿದ್ಧನಾಗಿರುವಂತೆ ಸೆಟೆದು ನಿಂತು ಸೂಟುಕೇಸುಗಳತ್ತ ಹಾರಲು ಕಾಯುತ್ತಿದ್ದ.

ದೀರ್ಘ ಮೌನದ ಭಾರ ಕೊಠಡಿಯನ್ನು ಕವಿದಿತ್ತು. ಐನ್‌ಸ್ಟೈನ್ ಹತ್ತಿರದ ಕುರ್ಚಿಯ ಮೇಲೆ ಕುಸಿದು "ಅವನು ಹೊರಟು ಹೋಗಲಿ! ನಾನಿದನ್ನು ತಡೆಯಲಾರೆ" ಎಂದು ಗುರುಗುಟ್ಟಿದರು. ಐನ್‌ಸ್ಟೈನರನ್ನು ಸಮಾಧಾನಗೊಳಿಸಲು ಆಕೆ ಗಂಟಲಿನಲ್ಲಿಯೇ ಶಬ್ದ ಮಾಡಿ ಬೇಡವಾಗಿದ್ದ ಸೇವಕನತ್ತ ತಿರುಗಿದರು.

"ದಯವಿಟ್ಟು.......ನಾವು ಆ ಮೇಲೆ ಕರೆಯುತ್ತೇವೆ...... ಸಧ್ಯಕ್ಕೆ ಹೋಗಿ.......ಬಹಳ ವಂದನೆಗಳು" ಎಂದು ಇಂಗ್ಲೀಷಿನಲ್ಲಿ ತಡೆದುತಡೆದು ಹೇಳಿದರು.

ಸೇವಕ ಬಾಗಿ ನಮಸ್ಕರಿಸಿದ. "ವಂದನೆಗಳು ಶ್ರೀಮತಿ ಯವರೆ. ನಾನು ಪುನಃ ಬರಬೇಕೆಂದು ನೀವು ಅಪೇಕ್ಷಿಸಿದಾಗ ಈ ಗಂಟೆಯನ್ನು ಬಾರಿಸಿರಿ" ಎಂದು ಹಗ್ಗಕ್ಕೆ ನೇತುಹಾಕಿದ ಗಂಟೆ ಯೊಂದನ್ನು ತೋರಿಸಿ ಹಿಂದಕ್ಕೆ ಸರಿದು ನಿಶ್ಶಬ್ದದಿಂದ ಬಾಗಿಲನ್ನು ಎಳೆದುಕೊಂಡು ನಿಷ್ಕ್ರಮಿಸಿದ.

ಕ್ಷಣಕಾಲ ಈ ಮನೋಹರ ಕೊಠಡಿಯನ್ನು ರುದ್ರಮೌನ ವಾವರಿಸಿತು. ಐನ್‌ಸ್ಟೈನರ ಬೇಗುದಿಯ ಮುಖಭಾವ ಕ್ರಮೇಣ ಮಂದಸ್ಮಿತವಾಗಿ ತಕ್ಷಣವೇ ಹಾರ್ದಿಕ ನಗುವಿನ ತರಂಗಗಳ ನಾದ ಹೊರಟಿತು. ಇದರೊಡನೆ ಎಲ್ಲಾರ ನಗುವಿನ ಕಿರುದೆರೆಗಳೂ ಸೇರಿ ಅವರ ಹರ್ಷನಾದದಿಂದ ಕೊಠಡಿಯ ವಾತಾವರಣ ಬೆಚ್ಚಗೆ ಹಿತಕರ ವಾದಂತೆ ಭಾಸವಾಗುತ್ತಿತ್ತು.

ಆ ರಾತ್ರಿಯ ಭೋಜನಕೂಟ ವೈಭವಪೂರ್ಣ ಸಮಾರಂಭ ವಾಗಿತ್ತು. ಇಂಗ್ಲೆಂಡಿನ ವಿಖ್ಯಾತ ಮಹನೀಯರು ಅಂದು ದಯ ಮಾಡಿಸಿದ್ದರು: ರಾಯಲ್ ಸೊಸೈಟಿಯ ಅಧ್ಯಕ್ಷ ಪ್ರೊಫೆಸರ್ ಎಡ್ಡಿಂಗ್, ಟನ್, ಪ್ರಖ್ಯಾತ ನಾಟಕಕಾರ ಜಾರ್ಜ್ ಬರ್ನಾರ್ಡ್ ಷಾ, ಕ್ಯಾಂಟರ್ ಬರಿಯ ಆರ್ಚ್ ಬಿಷಪ್ ಮತ್ತು ಇನ್ನೂ ಅನೇಕರು. ಸಂಭಾಷಣೆ ಗಳು ವಿಶಾಲವೂ ಉಜ್ವಲವೂ ಉತ್ಕೃಷ್ಟವೂ ಆಗಿದ್ದು ಅನೇಕ ವೇಳೆ ಐನ್‌ಸ್ಟೈನರ ಕೆಲಸವನ್ನು ಕುರಿತಾಡಿದುದೂ ಉಂಟು.

ಐನ್‌ಸ್ಟೈನರ ಪಕ್ಕದಲ್ಲಿ ಆಸೀನರಾಗಿದ್ದ ಆರ್ಚ್ ಬಿಷಪ್ ಈ ಭೇಟಿಗಾಗಿಯೇ ಕಾಯುತ್ತಿದ್ದರು. ಸಾಪೇಕ್ಷವಾದವನ್ನು ಅರ್ಥ ಮಾಡಿಕೊಳ್ಳಲಾಗಿರದಿದ್ದದ್ದಕ್ಕಾಗಿ ಅವರು ತೀವ್ರ ಕಳವಳ ಹೊಂದಿ ದ್ದರು. ಆ ವಿಷಯದ ಮೇಲಣ ಅನೇಕ ಗ್ರಂಥಗಳನ್ನು ಓದಿದ ಮೇಲಂತೂ ಅವರು ಮತ್ತೂ ಭ್ರಾಂತರಾಗಿದ್ದರು. ಇಂಗ್ಲೆಂಡಿನ ಚರ್ಚಿನ ಪರಮಾಧಿಕಾರಿಗಳಾದುದರಿಂದ ಧರ್ಮ ಸಂಬಂಧವಾದ

ಎಲ್ಲ ವಿಷಯಗಳ ಪರಿಜ್ಞಾನವೂ ಇರಬೇಕಾದದ್ದು ತಮ್ಮ ಕರ್ತವ್ಯ ವೆಂದು ಅವರು ತಿಳಿದಿದ್ದರು. ತಾವು ಬುದ್ಧಿವಂತರೆಂಬ ನಂಬಿಕೆಯಿದ್ದರೂ ಈ ನೂತನ ವಾದದ ಅರ್ಥ ಮಾಡಿಕೊಳ್ಳಲು ಪ್ರಥಮ ಪ್ರಯತ್ನ ಮಾಡವುದಕ್ಕೂ ಅವರಿಗಾಗಿರಲಿಲ್ಲ.

"ಪ್ರೊಫೆಸರ್ ಐನ್‌ಸ್ಟೈನರೇ, ಸಾಪೇಕ್ಷತ್ವಕ್ಕೂ ಧರ್ಮಕ್ಕೂ ಏನಾದರೂ ಸಂಬಂಧವಿದೆಯೇ, ಹೇಳುವಿರಾ?" ಬಿಷಪ್ ಕೇಳಿದರು.

ಐನ್‌ಸ್ಟೈನ್ ಗಂಭೀರದಿಂದ ನೇರ ಉತ್ತರವಿತ್ತರು, "ಏನೇನೂ ಇಲ್ಲ."

ಆರ್ಚ್ ಬಿಷಪ್‌ರಿಗೆ ಹೊರೆ ಇಳಿಸಿದಂತಾಗಿ ಉಲ್ಲಾಸದಿಂದ ನಿಡುಸುಯ್ದರು. ಭಯಂಕರ ಹಾಗು ಕಳವಳಕಾರಿ ವಿಷಯವನ್ನು ಅರ್ಥ ಮಾಡಿಕೊಳ್ಳದುದಕ್ಕಾಗಿ ಅವರು ಮುಂದೆಂದೂ ಪರಿತಪಿಸಬೇಕಿರಲಿಲ್ಲ.

ಮಾರನೆಯ ಸಂಜೆ ಉಪನ್ಯಾಸದ ಸಭಾಂಗಣ ಕಿಕ್ಕಿರಿದು ನೆರೆದಿತ್ತು. ಐನ್‌ಸ್ಟೈನರನ್ನು ಸಾರ್ವಜನಿಕರು ಎಂತು ಸ್ವಾಗತಿಸುವರೆಂಬ ಬಗ್ಗೆ ಸ್ವಲ್ಪ ಆತಂಕವಿತ್ತು. ಜರ್ಮನಿಯೊಡನಾಗಿದ್ದ ಯುದ್ಧದಿಂದ ಇಂಗ್ಲೆಂಡ್ ಇನ್ನೂ ಯಾತನೆಯನ್ನು ಅನುಭವಿಸುತ್ತಿತ್ತು. ವಿಜ್ಞಾನದ ಜರ್ಮನ್ ಪ್ರತಿನಿಧಿಯನ್ನು ಕೆಲವು ಜನ ಸ್ವಾಗತಿಸಲಾರರೆಂಬ ಶಂಕೆಯೂ ಇತ್ತು.

ಸಭಿಕರಲ್ಲಿ ಮೌನ ಸಂಭ್ರಮ ಎದ್ದು ಕಾಣುತ್ತಿತ್ತು. ಐನ್‌ಸ್ಟೈನ್ ಮತ್ತು ಲಾರ್ಡ್ ಹಾಲ್ಡೇನ್ ವೇದಿಕೆಯ ಒಂದು ಪಕ್ಕದ ನೇರಬೆನ್ನಿನ ಕುರ್ಚಿಗಳಲ್ಲಿ ಕುಳಿತಾಗ ಕಿಕ್ಕಿರಿದು ತುಂಬಿದ್ದ ಸಭೆಯೇ ಜೇರುಂಡೆಯಂತೆ ಸದ್ದುಗದ್ದಲದ ಶಬ್ದ ಮಾಡತೊಡಗಿತು. ಘಂಟೆ ಹೊಡೆದದ್ದಕ್ಕೆ ಸರಿಯಾಗಿ ಪ್ರಸಿದ್ಧ ಇಂಗ್ಲಿಷ್ ಮಹನೀಯ ಲಾರ್ಡ್ ಹಾಲ್ಡೇನ್ ವೇದಿಕೆಯ ಮಧ್ಯಕ್ಕೆ ನಿಧಾನವಾಗಿ ಬಂದರು. ಸರಸರದ ಸಂಭ್ರಮ ಸದ್ದುಗದ್ದಲಗಳು, ನೀರಿನಲ್ಲಿ ಬಿದ್ದ ಕೆಂಡದಂತೆ, ಕೂಡಲೇ ನಿಶ್ಶಬ್ದವಾದುವು.

ಲಾರ್ಡ್ ಹಾಲ್ಡೇನ್ ಶ್ರೋತೃ ಮಹಾಸಭೆಯನ್ನೊಮ್ಮೆ ವೀಕ್ಷಿ

ಸಿದರು. ಈ ಪ್ರಸಿದ್ಧ ವಿಜ್ಞಾನಿ ಜರ್ಮನರಾದುದಕ್ಕಾಗಿ ಈ ಜನ ದ್ವೇಷ ಹೊಂದಿರುವರೇ? ಅವರಿಗೆ ಗೌರವವನ್ನು ಸೂಚಿಸಲು ಬಂದಿರುವರೆ? ಅವರೆಲ್ಲರೂ ನಿಜವಾಗಿಯೂ ಕ್ಲಿಷ್ಟವಾದ ಸಾಪೇಕ್ಷವಾದದಲ್ಲಿ ಆಸಕ್ತಿ ಹೊಂದಿರುವರೆ? ಅಥವಾ ಅವರೆಲ್ಲ ಗಲಭೆ ಮಾಡಲು ಬಂದಿರುವರೋ?

ಅವರು ಪ್ರಾರಂಭಿಸಿದರು. "ಈ ರಾತ್ರಿ ಪ್ರತಿಭಾವಂತ ವ್ಯಕ್ತಿಯೊಬ್ಬರಿಗೆ ಬ್ರಿಟಿಷರಿಗೆ ಸಹಜವಾದ ಸ್ವಾಗತವನ್ನು ನೀಡುವ ಸಲುವಾಗಿ ನಾವಿಲ್ಲಿ ಸೇರಿದ್ದೇವೆ." ಮೃದು ಕರತಾಡನದ ಬಳಿಕ ಮತ್ತೆ ಮೌನವಾವರಿಸಿತು. ಲಾರ್ಡ್ ಹಾಲ್ಡೇನರು ತಮ್ಮ ಸ್ವಾಗತಭಾಷಣವನ್ನು ಬೇಗ ಮುಗಿಯಿಸಿ ತಮ್ಮ ಅತಿಥಿಯನ್ನು ಮುಂದೆ ತಂದರು. ರಾಜ್ಯದಲ್ಲಿ ಇನ್ನೂ ಜರ್ಮನ್ ವಿರುದ್ಧ ಭಾವನೆಗಳಿರುವುದೆಂದು ಐನ್‌ಸ್ಟೈನ್ ತಿಳಿದಿದ್ದರು. ಮತ್ತು ಶ್ರೋತೃಗಳಲ್ಲಿದ್ದ ಒಂದು ಬಗೆಯ ಶೈತ್ಯವನ್ನೂ ಅವರು ಗ್ರಹಿಸಿದರು.

ಮೃದುವಾಗಿ ಮೆತ್ತಗೆ ಅವರು ಮಾತನಾಡಲಾರಂಭಿಸಿದುದರಿಂದ ಕೊನೆಯಲ್ಲಿರುವವರಿಗೆ ಅದು ಕೇಳಿಸುತ್ತಲೇ ಇರಲಿಲ್ಲ. ಎಲ್ಲರೂ ಅವರ ಭಾಷಣವನ್ನು ಕೇಳಲು ಕಾತುರದಿಂದ ಕಿವಿ ಮುಂದೆ ಮಾಡಿದರು.

ವಿಖ್ಯಾತ ವಿಜ್ಞಾನಿಗಳಲ್ಲೊಬ್ಬರೆನಿಸಿದ ಸರ್ ಐಸಾಕ್ ನ್ಯೂಟನ್ನರನ್ನು ಜಗತ್ತಿಗಿತ್ತ ನಾಡಿನಲ್ಲಿ ಬಂದು ಭಾಷಣ ಮಾಡಲು ತಮಗೆ ಸಂತೋಷವಾಗುವುದಾಗಿ ಅವರು ತಿಳಿಸಿದರು. ರಾಜ್ಯಗಳ ಪರಿಮಿತಿಗಳನ್ನು ವಿಜ್ಞಾನ ತಿಳಿಯದೆಂದು ಅವರು ಮುಂದುವರಿಸಿದರು. ವಿಜ್ಞಾನ ಎಲ್ಲರದೂ—ಎಲ್ಲಿಯದೂ. ಮತ್ತೆ ಜಗತ್ತಿನ ಎಲ್ಲರ ಉಪಯೋಗಕ್ಕಾಗಿ ನ್ಯೂಟನ್‌ರವರೇ ಅನೇಕ ಶೋಧಗಳನ್ನು ಮಾಡಿದರು. ತಮ್ಮ ದೇಶದವನನ್ನು ಕುರಿತ ಈ ಹೃತ್ಪೂರ್ವಕ ಶ್ಲಾಘನೆ ಸ್ವಾಭಿಮಾನಿ ಶ್ರೋತೃಗಳಲ್ಲಿ ಅಭ್ಯಾಗತರ ಬಗ್ಗೆ ಮೆಚ್ಚುಗೆಯುಂಟುಮಾಡಿತು. ಅವರ ಆದರಣೆಯು ವ್ಯಕ್ತಿತ್ವ ಸಭಿಕರಲ್ಲಿದ್ದಿರಬಹುದಾದ ದ್ವೇಷಾಸೂಯೆಗಳನ್ನು ಒತ್ತಟ್ಟಿಗೆ ನೂಕಿತು.

ಐನ್‌ಸ್ಟೈನ್ ಸಾಪೇಕ್ಷತ್ವ ಮತ್ತಿತರ ವಿಜ್ಞಾನ ವಿಷಯಗಳನ್ನು ಕುರಿತು ಮಾತನಾಡಿದರು. ತಾವು ಜರ್ಮನರೆಂಬುದನ್ನೂ, ಸಭಿಕರು ಇಂಗ್ಲಿಷರೆಂಬುದನ್ನೂ ಅವರು ಮರೆತಿದ್ದರು. ಏಕೆ ಅವರು ತಮ್ಮನ್ನೇ ಮರೆತಿದ್ದರು. ವಿಜ್ಞಾನ ವಿಷಯಗಳನ್ನು ಕೇಳಲು ಬಂದಿದ್ದವ ರೊಂದಿಗೆ ಮಾತನಾಡುತ್ತಿದ್ದ ವಿಜ್ಞಾನಿ ಅವರಾಗಿದ್ದರು. ಅವರ ಚುರುಕು ಬುದ್ಧಿ ಸಭಿಕರನ್ನು ಮುಗ್ಧಗೊಳಿಸಿತ್ತು. ಆ ರಾತ್ರಿ ಯಾವ ಬಗೆಯ ಅಹಿತಕರ ಗೊಂದಲವೂ ನಡೆಯಲಿಲ್ಲ. ಅದಕ್ಕೆ ಬದಲಾಗಿ ಅವರ ಇರುವಿಕೆಯು ಎರಡು ರಾಷ್ಟ್ರಗಳ ಜನತೆಯನ್ನು ಒಟ್ಟುಗೂಡಿ ಸುವ ಒಂದು ಶಕ್ತಿವಿಶೇಷವಾಗಿತ್ತು.

ಕೊನೆಗೆ, ತಮ್ಮ ಸ್ವದೇಶಾಭಿಮುಖ ಪ್ರಯಾಣದ ಕೊನೆಯ ಹಂತವಾಗಿ, ಐನ್‌ಸ್ಟೈನ್ ದಂಪತಿಗಳು ಇಂಗ್ಲಿಷ್ ಕಾಲುವೆಯನ್ನು ದಾಟಿದರು. ದೀರ್ಘಕಾಲದ ವಿದೇಶಪ್ರವಾಸಗಳ ನಂತರ ತಮ್ಮ ತೃಪ್ತಿಕರ ಚಿರಪರಿಚಿತ ಹೇಬರ್‌ಲಾಂಡ್ ಸ್ಟ್ರಾಸೆಯ ಆವಾಸ ಸ್ಥಾನಕ್ಕೆ ಹಿಂದಿರುಗುವುದು ಎಷ್ಟು ಆನಂದದಾಯಕ!

ಐನ್‌ಸ್ಟೈನರ ಮನೆಯ ಹಜಾರದಲ್ಲಿ ಸೂಟ್‌ಕೇಸುಗಳು ತಮ್ಮ ಸ್ವಸ್ಥಾನ ಸೇರಿದಂತೆ ಕಂಡುವು. ಶ್ವೇತ ಪರದೆಯಿಂದ ಕೂಡಿದ ಕಿಟಕಿ ಗಳಿಂದಲಂಕೃತವಾದ ಆವರ ದಿವಾನಖಾನೆ, ಆ ದೀಪಸ್ತಂಭಗಳು, ಆ ಪಿಯಾನೋ—ಎಲ್ಲವೂ ಅವರನ್ನು ಸ್ವಾಗತಿಸಿದುವು. ಎಲ್ಸಾ ಸೋಫಾ ಮೆತ್ತೆಯ ಮೇಲೆ ಕೃತಜ್ಞತೆಯಿಂದ ಕುಳಿತರು. ಸಂಜೆಯ ಮಬ್ಬು ಅದೇ ತಾನೆ ಕವಿಯುತ್ತಿತ್ತು. ಈ ಮೌನ ಅರೆಗತ್ತಲೆ ಅವರಿಗೆ ಅನಿ ರ್ವಚನೀಯ ಸಂತೃಪ್ತಿಯನ್ನು ತಂದಿತು.

ಕ್ರಮೇಣ ಕೊಠಡಿಯನ್ನು ಮೊಟ್ಸಾರ್ಟ್‌ರ ಸ್ವರಮೇಳದ ಮೃದು ಗಾನ ತುಂಬುತ್ತಿದ್ದುದರ ಅರಿವು ಆಕೆಗಾಯಿತು. ಆಕೆ ಕತ್ತೆತ್ತಿ ನೋಡಿ ದರು. ಅವರ ಪತಿ ತಮ್ಮ ಕೋಟನ್ನೂ ಕೂಡ ಕಳಚಿರಲಿಲ್ಲ. ಅವರು ತಮ್ಮ ದೊಡ್ಡ ಆರಾಮಾಸನದಲ್ಲಿ ಕುಳಿತು ತಮ್ಮ ಪ್ರೀತಿಯ ಪಿಟೀಲನ್ನು ನುಡಿಸುತ್ತಿದ್ದರು. ಅವರ ಕಣ್ಣುಗಳಲ್ಲಿ ದೂರನೋಟದ ಶಾಂತಿ ಲಾಸ್ಯ ವಾಡುತ್ತಿತ್ತು.

೧೩. ಲೋಕ ಸಂಚಾರಿ

ಐನ್‌ಸ್ಟೈನ್ ದಂಪತಿಗಳೇನೋ ಶಾಂತಿಯ ಆವಾಸಸ್ಥಾನ ದಂತಿದ್ದ ಮನೆಗೆ ಹಿಂತಿರುಗಿದರು. ಆದರೆ ಅವರ ಸುತ್ತಲಿನ ಬರ್ಲಿನ್ ಮತ್ತು ಇಡೀ ಜರ್ಮನಿಯಲ್ಲಿದ್ದ ಪ್ರಕ್ಷುಬ್ಧ ಪರಿಸ್ಥಿತಿಯಿಂದೇನೂ ಅವರು ರಕ್ಷಣೆ ಪಡೆದಿರಲಿಲ್ಲ. ಯುದ್ಧದ ದುಷ್ಕೃತ್ಯಗಳಿಂದ ನಾಡು ಕಗ್ಗೊಲೆಯ ಬೀಡಾಗಿತ್ತು. ಮಾಡಲು ಕೆಲಸವೇನೂ ಇಲ್ಲದೆ ವೃತ್ತಿ ಕುಶಲರೂ, ಕಾರ್ಮಿಕರೂ, ಬೀದಿಬೀದಿಗಳಲ್ಲಿ ಭಿಕ್ಷೆ ಬೇಡುವಷ್ಟು ನಿರುದ್ಯೋಗ ತಾಂಡವವಾಡುತ್ತಿತ್ತು.

ಒಮ್ಮೆ ಪ್ರತಿಷ್ಠೆಯಿಂದಿದ್ದು ಈಗ ಬಡತನದಿಂದ ಹತಾಶರಾದ ಜರ್ಮನರು ತಮ್ಮ ದೋಷ ದೌಷ್ಟ್ಯಗಳಿಂದಲೇ ತಮಗೀಗತಿಯೊದಗಿ ತೆನ್ನುವುದನ್ನು ನಂಬುತ್ತಿರಲಿಲ್ಲ. ತಮ್ಮ ದುರವಸ್ಥೆಗೆ ತಮ್ಮನ್ನೇ ದೂಷಿಸಿಕೊಳ್ಳಲಾರದೆ ಅವರು ಅದಕ್ಕಾಗಿ ಬೇರೊಂದು ಬಲಿಪಶು ವನ್ನು ಹುಡುಕತೊಡಗಿದರು. ಯೆಹೂದ್ಯರು ಅವರ ಆಗ್ರಹಕ್ಕೆ ತುತ್ತಾದ ಪ್ರಥಮ ಪಶುವಾಗಿದ್ದರು. ಬರುಬರುತ್ತ ಯೆಹೂದ್ಯರು ಜೀವನ ನಡೆಸುವುದೇ ಕಷ್ಟವಾಗತೊಡಗಿತು. ಅವರ ಜೀವನದ ಮತ್ತು ಕಾರ್ಯದ ಎಲ್ಲ ಮುಖಗಳಲ್ಲೂ ವರ್ಧಿಸುತ್ತಿದ್ದ ದ್ವೇಷಾ ಸೂಯೆಗಳ ಒತ್ತಡವನ್ನು ಅವರು ಅನುಭವಿಸತೊಡಗಿದರು.

ಐನ್‌ಸ್ಟೈನರ ಬಗೆಗಿದ್ದ ಜಗತ್ತಿನ ಗೌರವಾದರಗಳು ಈ ಬೇಗುದಿ ಆಕ್ರೋಶಗಳಿಂದ ಅವರನ್ನು ಕೆಲವುಕಾಲ ರಕ್ಷಿಸಿದ್ದುವು. ಆದರೆ ಅವರು ಯೆಹೂದ್ಯರು. ಇತರ ಯೆಹೂದ್ಯರಿಗೆ ಕೊಡುತ್ತಿದ್ದ ಕಿರುಕುಳದಿಂದಾಗಿ ಅವರಲ್ಲಿ ಸಹಾನುಭೂತಿಯುಂಕುರಿಸಿತ್ತು. ತಮ್ಮ ಜೀವನದಲ್ಲಿ ಪ್ರಥಮ ಬಾರಿಗೆ ಅವರು ಯೆಹೂದ್ಯ ಕುಲವನ್ನು ಶಾಸ್ತ್ರೋಕ್ತವಾಗಿ ಸೇರಿದರು; ಪ್ರಥಮ ಬಾರಿಗೆ ತೊಂದರೆಗೀಡಾದ

ತಮ್ಮ ಜನಕ್ಕೆ ಸಹಾಯನೀಡಲು ತಮ್ಮ ಅಧಿಕಾರ ಪ್ರಭಾವಗಳನ್ನು ಬಳಸಲು ಯತ್ನಿಸಿದರು.

ಆದರೆ ಇದರಿಂದೇನೂ ಪ್ರಯೋಜನವಾಗಲಿಲ್ಲ. ಇದರಿಂದ ಕೆಲವು ಜರ್ಮನರ ಕ್ರೋಧ ಐನ್‌ಸ್ಟೈನರತ್ತಲೂ ತಿರುಗಿತು, ಅಷ್ಟೆ. ಅವರಿಗೆ ಅನೇಕ ಬೆದರಿಕೆಯ ಪತ್ರಗಳು ಬರತೊಡಗಿದುವು. ಆಗೊಮ್ಮೆ ಈಗೊಮ್ಮೆ ಅವರ ಉಪನ್ಯಾಸಗಳಲ್ಲಿ ಯಾರಾದರೊಬ್ಬರು ನಿಷ್ಕರುಣೆಯ ಕೂಗು ಹಾಕುತ್ತಿದ್ದರು.

ಅವರಲ್ಲಿ ಹೆಚ್ಚಿನ ಹಣವೇನಿರಲಿಲ್ಲ. ಅವರ ಸಂಬಳ ಅಲ್ಪವೇ ಆಗಿತ್ತು. ದ್ರವ್ಯಸಹಾಯ, ಶುಲ್ಕಗಳನ್ನು ಅವರೆಂದೂ ತೆಗೆದುಕೊಳ್ಳು ತ್ತಿರಲಿಲ್ಲ. ಆದರೀಗ ಅವರು ದಾನಧರ್ಮದ ಸಲುವಾಗಿ ಸಮಾರಂಭ ಗಳಲ್ಲಿ ಭಾಗವಹಿಸಲು ಒಪ್ಪುತ್ತಿದ್ದರು. ಏಕೆಂದರೆ ಅವರೆಲ್ಲಿ ಹಾಜರಿರು ವರೆಂದರೂ ಇನ್ನೂ ಜನರ ಗುಂಪು ಸೇರಿಬಿಡುತ್ತಿತ್ತು. ಒಂದು ಸಲ ಬಡಬಗ್ಗರಿಗೆ ಸಹಾಯಮಾಡುವ ಸಲುವಾಗಿ ಅವರು ಸಂಗೀತಗೋ ಷ್ಠಿಯಲ್ಲಿ ಭಾಗವಹಿಸಲು ಮಧ್ಯ ಜರ್ಮನಿಗೆ ಪ್ರಯಾಣ ಬೆಳಸಿದರು. ಇದನ್ನು ವರದಿ ಮಾಡುವಂತೆ ಒಬ್ಬ ತರುಣ ಅನನುಭವಿ ವರದಿಗಾರ ನನ್ನು ಕಳುಹಿಸಲಾಗಿತ್ತು. ಗೋಷ್ಠಿಯ ಮುನ್ನ ವರದಿಗಾರ ತನ್ನ ಪಕ್ಕ ದಲ್ಲಿದ್ದ ಒಬ್ಬಾಕೆಯನ್ನು ಅಂಜುತ್ತ ಕೇಳಿದ, "ಈ ರಾತ್ರಿ ನುಡಿಸಲಿರುವ ಈ ಐನ್‌ಸ್ಟೈನ್ ಯಾರು?" ಈ ವಿಖ್ಯಾತ ವಿಜ್ಞಾನಿಯನ್ನು ಅರಿಯದವ ನೊಬ್ಬ ಜರ್ಮನಿಯಲ್ಲಿರುವುದನ್ನು ತಿಳಿದು ಆಕೆ ತಲ್ಲಣಗೊಂಡಳು.

"ಅಯ್ಯೋ ದೇವರೇ! ಗೊತ್ತಿಲ್ಲವೇ? ಅವರು ಮಹಾಮಹಿಮ ಐನ್‌ಸ್ಟೈನ್!"

"ಓಹೋ, ಹಾಗೇನು?" ವರದಿಗಾರ ಆತುರದಿಂದ ಬರೆಯುತ್ತ ನುಡಿದಿದ್ದ.

ಮಾರನೆಯ ದಿನ ವೃತ್ತಪತ್ರಿಕೆ "ಮಹಾ ಸಂಗೀತಜ್ಞ ಐನ್ ಸ್ಟೈನ್"ರ ಯಶಸ್ವೀ ಪ್ರದರ್ಶನವನ್ನು ಕುರಿತು ಅವರನ್ನು ಪ್ರಖ್ಯಾತ ಸಂಗೀತಗಾರರೆಂದೂ, ಯಾರಿಗೂ ಕಡಮೆಯಿಲ್ಲದ ಕೌಶಲದ ಪಿಟೀಲು ವಿದ್ವಾಂಸರೆಂದೂ ಕೊಂಡಾಡಿತು.

ಐನ್‌ಸ್ಟೈನರು ಈ ವರದಿಯನ್ನೋದಿದಾಗ ಹಾಬರ್‌ಸ್ಟ್ರಾಸೆಯು ಕಟ್ಟಡವೇ ಪ್ರತಿಧ್ವನಿಗೈಯಿತು—ಅವರ ಹೃತ್ಪೂರ್ವಕ ನಗೆಯಿಂದ. ಪಿಟೀಲು ವಿದ್ವಾಂಸ......ಅದ್ವಿತೀಯ ಕಲಾಭಿಜ್ಞ, ಕೌಶಲ...ಹ ಹ್ಹ ಹ್ಹಾ......ಕಣ್ಣುಗಳಲ್ಲಿ ನೀರಾಡುವವರೆಗೂ ಅವರು ನಕ್ಕರು.

ಜಗತ್ತಿನಲ್ಲಿ ಪ್ರಕಟವಾದ ಕಥೆಗಳೆಲ್ಲದರ ಮೆಚ್ಚುಗೆಗೆ ಮತ್ತು ಶ್ಲಾಘನೆಗೆ ಐನ್‌ಸ್ಟೈನರು ವಸ್ತುವಾಗಿದ್ದರು. ಅವರು ಅನೇಕ ಪದಕಗಳನ್ನೂ, ಪಾರಿತೋಷಕಗಳನ್ನೂ, ಪದವಿ ಪ್ರಶಸ್ತಿಗಳನ್ನೂ ಪಡೆದಿದ್ದರು. ಆದರೆ ಅವುಗಳನ್ನು ಅವರು ಯಾರಿಗೂ ತೋರಿಸುತ್ತಿರಲಿಲ್ಲ. ಅನೇಕ ವೇಳೆ ಅವರೂ ಕೂಡ ಅವುಗಳನ್ನು ನೋಡಲು ಒಪ್ಪದೆ, ತಾವು ಅದಕ್ಕೆಲ್ಲ ಯೋಗ್ಯರಲ್ಲವೆಂದು ಹೇಳುತ್ತಿದ್ದರು. ಆದರೆ ಅವರ ಸಂಗೀತಗೋಷ್ಠಿಯನ್ನು ಕುರಿತ ವರದಿಯ ವಿಷಯವೇ ಬೇರೆ. ಆ ವರದಿಯನ್ನು ಅವರು ಹರಿದಿಟ್ಟುಕೊಂಡು ಅದು ಮಾಸಿಹೋಗುವವರೆಗೂ ತಾವು ಹೋದೆಡೆಯಲ್ಲಾ ತೆಗೆದುಕೊಂಡು ಹೋಗುತಿದ್ದರು. ತಮ್ಮ ಗೆಳೆಯರೊಬ್ಬರಿಗೆ "ನಾನು ವಿಜ್ಞಾನಿಯೆಂದು ತಿಳಿದಿರುವಿರಾ? ಆ......? ಓಹೊ! ನಾನೊಬ್ಬ ಪ್ರಖ್ಯಾತ ಪಿಟೀಲು ನುಡಿಸುವವ... ಹೌದು. ನಾನು ಅವನೇ!" ಎಂದು, ತಮ್ಮ ಕಿಸೆಯಿಂದ ಆ ಮುದುರಿದ ಚೀಟಿಯನ್ನು ತೆಗೆದು ತೋರಿಸುವಾಗ ಅವರ ಮುಖ ಆನಂದದಿಂದ ಸುಕ್ಕುಗಟ್ಟುತ್ತಿತ್ತು; ಕಣ್ಣುಗಳಲ್ಲಿ ಹೊಳಪು ಮಿನುಗುತ್ತಿತ್ತು.

ಸಂಯುಕ್ತ ಸಂಸ್ಥಾನಗಳಿಂದ ಹಿಂತಿರುಗಿದ ಕೆಲವು ತಿಂಗಳೊಳಗಾಗಿಯೇ ಜಪಾನಿನಲ್ಲಿ ಉಪನ್ಯಾಸಮಾಲೆಯೊಂದನ್ನು ನೀಡಲು ಐನ್‌ಸ್ಟೈನ್ ಒಪ್ಪಿದರು. ಎಲ್ಲರಿಗೂ ಆತಂಕ ಮಾಯವಾಗಿ ಆನಂದವಾಯಿತು. ಹೆಚ್ಚು ಹೆಚ್ಚು ದ್ವೇಷಾಸೂಯೆಗಳಿಂದ ಪರಿವೃತವಾಗುತ್ತಿದ್ದ ಪರಿಸರದಿಂದ ಅವರನ್ನು ಕೆಲವು ಕಾಲವಾದರೂ ಜರ್ಮನಿಯಾಚೆ ಕಳುಹಿಸುವುದು ಅವರಿಗೆ ತುಂಬ ಆನಂದದಾಯಕವಾಗಿತ್ತು. ಐನ್‌ಸ್ಟೈನರು ತಾವು ಅಪಾಯದಲ್ಲಿದ್ದೇವೆಂಬ ಸುದ್ದಿಯನ್ನು ಕೇಳಿ ನಕ್ಕಿದ್ದರಾದರೂ ಅವರ ಪತ್ನಿ ಮತ್ತು ಗೆಳೆಯರಿಗೆ ಅವರ ರಕ್ಷಣೆಯದೇ ದೊಡ್ಡ ಚಿಂತೆಯಾಗಿತ್ತು. ಏಕೆಂದರೆ ಆಲೋಚನಾಮಗ

ರಾಗಿ ಅವರು ನಗರದ ರಸ್ತೆಗಳಲ್ಲಿ ಹೋಗುತ್ತಿದ್ದರೆಂದರೆ ಅವರು ತಮ್ಮ ಸುತ್ತ ನಡೆಯುತ್ತಿದ್ದ ಯಾವ ಸಂಗತಿಯನ್ನೂ ಗಮನಿಸುತ್ತಿರಲಿಲ್ಲ.

ಐನ್‌ಸ್ಟೈನ್ ದಂಪತಿಗಳು ತಮ್ಮ ಪೌರ್ವಾತ್ಯ ಪ್ರದೇಶಗಳ ಪ್ರವಾಸಕ್ಕಾಗಿ ೧೯೨೨ರ ಮಾಗಿ ಕಾಲದಲ್ಲಿ ಫ್ರಾನ್ಸಿನ ಮಾರ್ಸೆಲ್ಸನ್ನು ಬಿಟ್ಟು ಹಡಗಿನಲ್ಲಿ ಹೊರಟರು. ಅವರ ಜಪಾನೀ ಹಡಗು ನಿಧಾನವಾಗಿ ಅನೇಕ ಸ್ಥಳ—ಈಜಿಪ್ಟ್, ಭಾರತ, ಚೈನಾಗಳಲ್ಲಿ ತಂಗಿ ಮುಂದೆಸಾಗಿತು. ಪ್ರತಿ ಬಂದರಿನಲ್ಲಿಯೂ ಅವರಿಗೆ ಆದರ ಸ್ವಾಗತ, ಅನೇಕ ಪ್ರೀತಿಯ ಉಡುಗೊರೆಗಳನ್ನು ನೀಡಲಾಯಿತು. ಜಪಾನಿನಲ್ಲಿ ಅವರು ಬಂದಿಳಿದ ದಿನವನ್ನು ರಾಷ್ಟ್ರೀಯ ರಜಾದಿನವೆಂದು ಘೋಷಿಸಿದರಲ್ಲದೆ ಚಕ್ರವರ್ತಿನಿಯೇ ಐನ್‌ಸ್ಟೈನ್ ದಂಪತಿಗಳಿಗೆ ಸ್ವಾಗತ ಬಯಸಲು ಬಂದಿದ್ದರು.

ಜಪಾನಿನ ಜನತೆ ಅವರ ಉಪನ್ಯಾಸಗಳಿಗೆ ಕಿಕ್ಕಿರಿದು ಸೇರುತ್ತಿದ್ದರು. ಶ್ರೋತೃಗಳ ಅನುಕೂಲಕ್ಕಾಗಿ ಸಮರ್ಥ ದುಭಾಷಿಯೊಬ್ಬನು ಅವರ ಜೊತೆಯಲ್ಲಿ ಇರುತ್ತಿದ್ದನು. ಅವನು ಐನ್‌ಸ್ಟೈನರ ಭಾಷಣವನ್ನು ತರ್ಜುಮೆ ಮಾಡುತ್ತಿದ್ದನು. ಅವರಿಗೆ ಅರ್ಥವಾಗದ ಭಾಷೆಯಲ್ಲಿ ಅವರಿಗರ್ಥವಾಗದ ವಿಷಯವನ್ನು ಗಂಟೆಗಟ್ಟಲೆ ಹೇಳುತ್ತಿದ್ದಾಗಲೂ ಸಭಿಕರು ಸ್ವಲ್ಪವೂ ಅಲುಗಾಡದೆ ಕುಳಿತಿರುತ್ತಿದ್ದುದನ್ನು ಕಂಡು ಅವರು ಅಚ್ಚರಿಗೊಂಡಿದ್ದರು.

ಅವರ ಒಂದು ಉಪನ್ಯಾಸ ನಾಲ್ಕು ಗಂಟೆಗೂ ಮೀರಿಹೋದ ಕಾರಣ ಸಾವಧಾನದಿಂದ ಆಲಿಸುತ್ತಿದ್ದ ಸಭಿಕರ ಮೇಲಿನ ಸಹಾನುಭೂತಿಯಿಂದಾಗಿ ಅವರು ಮುಂದಿನ ಉಪನ್ಯಾಸವನ್ನು ಮೊಟಕು ಮಾಡಲು ನಿರ್ಧರಿಸಿದರು. ಅದನ್ನು ಎರಡೇ ಗಂಟೆಗಳಲ್ಲಿ ಮುಗಿಸಿದಾಗ ಅವರಿಗೆ ಅತ್ಯಾನಂದವುಂಟಾಗಿತ್ತು. ಆದರೆ ಅವರ ಜಯಗಳಿಕೆಯ ಈ ಭಾವನೆ ಬಹಳ ಕಾಲವಿರಲಿಲ್ಲ. ಆ ಸಂಜೆ ಅವರ ಆತಿಥೇಯರು ಮೌನದುಮ್ಮಾನದಿಂದಲೇ ಅವರನ್ನು ಕಂಡರು. "ನಮ್ಮ ನಗರದವರು ಅವಮಾನಿತರಾದರೆಂದು ಭಾವಿಸುತ್ತಾರೆ" ಅವರು

ಹೇಳಿದರು, “ನಿಮ್ಮ ಭಾಷಣ ಉಳಿದ ನಗರಗಳಲ್ಲಿ ನಾಲ್ಕು ಗಂಟೆಗಳ ಕಾಲ ಸಾಗಿತ್ತು. ನಮಗೆ ಮಾತ್ರ ನೀವು ಕೇವಲ ಎರಡು ಗಂಟೆ ಮಾತನಾಡಿದಿರಿ!”

ಬಣ್ಣಗಳ ಬೆಡಗಿನ ಈ ದೇಶದಲ್ಲಿ ಐನ್‌ಸ್ಟೈನ್ ಜನ, ಜಾಗ, ಆಚಾರ, ಸಂಪ್ರದಾಯಗಳನ್ನು ತಿಳಿಯಲು ಸ್ವೇಚ್ಛಾಚಾರಿಯಾಗಿ ವಿಹರಿಸಿದರು. ಕಿರಿದಾದ ಅಥವಾ ಅಡ್ಡಾದಿಡ್ಡಿಯ ರಸ್ತೆಗಳಲ್ಲಿ ಅವರನ್ನೊಯ್ಯಲು ರಿಕ್ಷಾಗಾಡಿಯನ್ನು ಗೊತ್ತುಮಾಡುವುದನ್ನು ಅವರು ದೃಢನಿರ್ಧಾರದಿಂದ ವಿರೋಧಿಸಿದರು. “ನಾನೆಂದೂ ಮತ್ತೊಬ್ಬ ಮನುಷ್ಯನನ್ನು ಪ್ರಾಣಿಯಂತೆ ಬಳಸುವುದಿಲ್ಲ ಮತ್ತು ನಾನು ಇನ್ನೊಬ್ಬರಿಂದ ಎಳೆಸಿಕೊಳ್ಳಲು ಒಪ್ಪುವವನಲ್ಲ!”

ಅನೇಕ ವಾರಗಳ ನಂತರ ಐನ್‌ಸ್ಟೈನ್ ದಂಪತಿಗಳು ಜಪಾನನ್ನು ಬಿಟ್ಟು ಹೊರಟಾಗ ಅವರು ತಮ್ಮೊಡನೆ ಜಪಾನೀಯರ ಶುಭಾಶಯಗಳನ್ನು ಮಾತ್ರವಲ್ಲದೆ ಬುಟ್ಟಿಗಟ್ಟಲೆ ಉಡುಗೊರೆಗಳನ್ನೂ, ನೆನಪಿನ ಕಾಣಿಕೆಗಳನ್ನೂ ಕೊಂಡೊಯ್ದರು. ಅಷ್ಟೇ ಅಲ್ಲದೆ ವಿಚಿತ್ರ ಕನಸಿನಂತಿದ್ದ ತಮ್ಮ ಪ್ರವಾಸದ ಸ್ಮರಣೆಯನ್ನೂ ಅವರು ಕೊಂಡೊಯ್ದರು.

ಅವರು ಹಿಂತಿರುಗುವಾಗ ಪ್ಯಾಲೆಸ್ಟೈನಿನಲ್ಲಿ ನಿಂತುದು ಮಹಾ ವೈಭವಪೂರ್ಣ ಸಮಾರಂಭಕ್ಕೆ ಎಡೆಕೊಟ್ಟಿತು. ಅವರು ತಂಗಿದ್ದ ಬ್ರಿಟಿಷ್ ಹೈಕಮಿಷನರ ವಾಸಗೃಹದಲ್ಲಿ ಎಲ್ಲ ಕಾರ್ಯಕಲಾಪಗಳೂ ಅತ್ಯಂತ ವೈಭವದಿಂದ ಜರುಗಿದುವು. ಹೈಕಮಿಷನರು ತಮ್ಮ ಅಧಿಕೃತ ನಿವಾಸವನ್ನು ಬಿಡುವ ಪ್ರತಿಸಲವೂ ಗುಂಡು ಹಾರಿಸಲ್ಪಡುತ್ತಿತ್ತು. ರಂಗುರಂಗಿನ ಪೋಷಾಕು ಧರಿಸಿದ್ದ ಮಿಲಿಟರಿ ರಕ್ಷಣಾದಳದ ತಂಡಗಳು ಹೊರಾಂಗಣದಲ್ಲಿ ಸದಾ ಕವಾಯತು ಪ್ರದರ್ಶನ ನಡೆಯಿಸುತ್ತಿದ್ದರು.

ಐನ್‌ಸ್ಟೈನ್ ಇದೆಲ್ಲವನ್ನೂ ಸರಿಹೊಂದಿಸಿಕೊಂಡರು. ಅವುಗಳನ್ನು ಸಂಪೂರ್ಣವಾಗಿ ಅಲಕ್ಷಿಸಿ ತಮ್ಮ ಸಹಜರೀತಿಯಲ್ಲಿ ಅವರು ನಡೆದುಕೊಂಡರು. ಆದರೆ ಎಲ್ಸಾ ಕೊನೆಕೊನೆಗೆ ಎಲ್ಲವನ್ನೂ ಸಹಿಸಲಾರದೆ ಕೋಪಗೊಂಡರು. ಒಂದು ದಿನ ಅವರು ತಮ್ಮ ಪತಿ

ಯೊಂದಿಗೆ, "ನಾನೊಬ್ಬ ಸಾಮಾನ್ಯ ಗೃಹಿಣಿ. ಈ ಅರ್ಥವಿಲ್ಲದ ಪ್ರದರ್ಶನಗಳನ್ನು ನಾನು ತಡೆಯಲಾರೆ" ಎಂದು ತಮ್ಮ ವೇದನೆಯನ್ನು ತೋಡಿಕೊಂಡರು.

"ಸಾವಧಾನದಿಂದಿರು, ಪ್ರಿಯೆ ಎಲ್ಸಾ. ನಾವು ಮನೆಯತ್ತ ಹೊರಟಿದ್ದೇವೆ," ಎಂದು ಆಕೆಯನ್ನು ಸಂತೈಸಿದರು.

"ನಿಮಗೇನೋ ತಾಳ್ಮೆಯಿಂದಿರುವುದು ಸುಲಭ. ನೀವು ಹೇಗೂ ಪ್ರಸಿದ್ಧ ಪುರುಷರು. ನೀವೇನಾದರೂ ಸಂಪ್ರದಾಯದಲ್ಲಿ ತಪ್ಪಿ ನಡೆದರೆ, ನಿಮ್ಮಿಷ್ಟದಂತೆ ಮಾಡಿದರೆ ಯಾರೂ ಅದನ್ನು ಗಮನಿಸುವುದೇ ಇಲ್ಲ. ಆದರೆ ನನ್ನನ್ನು ಯಾವಾಗಲೂ ಪತ್ರಿಕೆಗಳಲ್ಲಿ ಟೀಕಿಸಿ ಕುಚೋದ್ಯವಾಡುತ್ತಾರೆ. ನನಗೆ ಸಮೀಪ ದೃಷ್ಟಿಯಿರುವುದರಿಂದ ನಾನು ಪಚ್ಚಡಿಯನ್ನು ತಿನ್ನದೆ ತಪ್ಪಾಗಿ ತಟ್ಟೆಯಲ್ಲಿನ ಹಸಿರೆಲೆಗಳನ್ನು ತಿಂದೆನೆಂದು ಅವರು ಹೇಳಿದ್ದಾರೆ. ಅಬ್ಬಾ, ನಿಜವಾಗಿಯೂ!"

ಅವರ ಪೌರ್ವಾತ್ಯ ಪ್ರವಾಸದ ಕಾಲದಲ್ಲಿಯೇ ಅವರು ಅತ್ಯಂತ ಸೋಜಿಗದ ಸುದ್ದಿಯನ್ನು ಕೇಳಿ ವಿಸ್ಮಿತರಾದದ್ದು. ವಿಜ್ಞಾನಿಯೊಬ್ಬ ಪಡೆಯಬಹುದಾಗಿದ್ದ ಅತ್ಯುನ್ನತ ಪಾರಿತೋಷಕವನ್ನು ಸ್ವೀಡಿಷ್ ವಿಜ್ಞಾನಿಗಳ ಅಕಾಡೆಮಿಯು ಐನ್‌ಸ್ಟೈನರಿಗೆ ನೀಡಿತ್ತು. ಭೌತ ವಿಜ್ಞಾನಕ್ಕೆ ಮೀಸಲಾಗಿದ್ದ ನೊಬೆಲ್ ಪಾರಿತೋಷಕವನ್ನು ಅವರಿಗೆ ನೀಡಲಾಗಿತ್ತು. ಸುದ್ದಿಯನ್ನು ಕೇಳಿ ಇಡೀ ಜರ್ಮನಿಯೇ ಹರ್ಷ ಧ್ವನಿಗೈದಿತು. ಯುದ್ಧಾನಂತರ ಜರ್ಮನಿಗೆ ದೊರೆತ ಪ್ರಥಮ ಪಾರಿತೋಷಕವಾಗಿದ್ದುದರಿಂದ ಅದು ಜರ್ಮನರಿಗೆ ಸೋಲಿನಿಂದ ಉಂಟಾದ ತೇಜೋವಧೆಯನ್ನು ನಿವಾರಿಸಿ ಆಪ್ಯಾಯನಗೊಳಿಸಿತು. ಅವರು ಆ ಕ್ಷಣಕ್ಕೆ ಐನ್‌ಸ್ಟೈನರು ಯೆಹೂದ್ಯರೆಂಬುದನ್ನು ಮರೆತರು. ಮತ್ತು ಪಾರಿತೋಷಕವನ್ನು ಜರ್ಮನರೆಂದು ಅವರು ಪಡೆದುದರಿಂದ ಹೆಮ್ಮೆ ಪಟ್ಟಿದ್ದರು.

ಕೆಲವೇ ವಾರಗಳು ಮನೆಯಲ್ಲಿದ್ದು ಐನ್‌ಸ್ಟೈನ್ ಪುನಃ ಪಯಣ ಸನ್ನದ್ಧರಾದರು — ಈ ಸಲ ಸ್ವೀಡನ್ನಿನ ದೊರೆಯಿಂದ ನೊಬೆಲ್ ಪಾರಿತೋಷಕವನ್ನು ಪಡೆಯಲು. ಆ ಗೌರವವೇ ಅತ್ಯಮೂಲ್ಯವಾದುದು.

ಆದರೆ ಈ ಗೌರವದೊಂದಿಗೆ ಸುಮಾರು ಎರಡು ಲಕ್ಷ ರೂಪಾಯಿಗಳಷ್ಟು ಬಹುಮಾನ ಧನವೂ ಬಂದಿತ್ತು. ಹೆಚ್ಚಿನ ಅವಶ್ಯಕತೆಗಳಿಲ್ಲದ ಆಡಂಬರರಹಿತ ಐನ್‌ಸ್ಟೈನರಿಗೆ ಹಣ ಅಷ್ಟೇನೂ ಪ್ರಧಾನವಾಗಿರಲಿಲ್ಲ. ಅವರು ಆ ಹಣವೆಲ್ಲವನ್ನೂ ತಮ್ಮ ಪುತ್ರರ ವಿದ್ಯಾಭ್ಯಾಸಕ್ಕೆಂದು ಸ್ವಿಟ್ಸರ್ಲೆಂಡಿನಲ್ಲಿದ್ದ ಮಿಲೇವಾಗೆ ಕಳುಹಿಸಿಕೊಟ್ಟರು.

ತಮ್ಮ ಕೆಲಸವನ್ನು ಪುನಃ ನೆಮ್ಮದಿಯಿಂದ, ಯಾವ ಆತಂಕವೂ ಇಲ್ಲದಂತೆ, ಪ್ರಾರಂಭಿಸುವ ನಿರ್ಧಾರದಿಂದ ಐನ್‌ಸ್ಟೈನ್ ತಾಯ್ನಾಡಿಗೆ ಹಿಂತಿರುಗಿದರು. ಸಾಪೇಕ್ಷವಾದಕ್ಕೆ ಸಂಬಂಧಿಸಿದ ಕೆಲವು ನೂತನ ಭಾವನೆಗಳನ್ನು ಪಕ್ವಗೊಳಿಸಿ ಅದನ್ನು ಕಾರ್ಯರೂಪಕ್ಕಿಳಿಸುವುದರಲ್ಲಿ ತಲ್ಲೀನರಾಗಲು ಅವರು ಆಸಕ್ತರಾಗಿದ್ದರು.

೧೪. ಜರ್ಮನಿಗೆ ನಮಸ್ತೆ!

ಆಗಾಗ್ಗೆ ನೆರೆಹೊರೆಯ ರಾಜ್ಯಗಳಿಗೆ ಸಣ್ಣಪುಟ್ಟ ಪ್ರವಾಸಗಳು, ದಕ್ಷಿಣ ಅಮೇರಿಕಕ್ಕೆ ೧೯೨೫ರಲ್ಲಿ ಕೆಲವು ವಾರಗಳ ಭೇಟಿ—ಇವನ್ನು ಬಿಟ್ಟರೆ ಅವರು ಮುಂದಿನ ವರ್ಷಗಳನ್ನು ಬರ್ಲಿನ್‌ನಲ್ಲಿಯೇ ಕಳೆದರು.

ಬರ್ಲಿನ್ ನಗರದಲ್ಲಿನ ಬ್ರಾನ್‌ಡೆನ್‌ಬರ್ಗ್ ದ್ವಾರ ಮತ್ತು ಪ್ರಾಣಿಸಂಗ್ರಹಾಲಯದಂತೆ ಐನ್‌ಸ್ಟೈನರೂ ಒಂದು ಮುಖ್ಯ ಆಕರ್ಷಕ ಪ್ರೇಕ್ಷಣೀಯ ವಸ್ತುವಾದರು. ಪ್ರವಾಸಿ ತಂಡಗಳು ಬರ್ಲಿನ್ ವಿಶ್ವವಿದ್ಯಾನಿಲಯವನ್ನು ಮೊದಲು ಹೊಕ್ಕು ಅಲ್ಲಿ ಈ ಪ್ರಸಿದ್ಧ ವಿಜ್ಞಾನಿಯ ದರ್ಶನಕ್ಕಾಗಿ ಉಪನ್ಯಾಸಾಗಂಣ ಹಜಾರಗಳಲ್ಲಿ ಇಣಿಕಿ ಇಣಿಕಿ ನೋಡುತ್ತಿದ್ದರು. ಐನ್‌ಸ್ಟೈನರು ಪ್ರೌಢ ವಿದ್ಯಾರ್ಥಿಗಳಿಗೆ ಉಪನ್ಯಾಸವೀಯುತ್ತಿದ್ದುದನ್ನು ಕಂಡ ಕೆಲವು ಅದೃಷ್ಟವಂತ ಪ್ರವಾಸಿಗರು ಮೆಲ್ಲಗೆ ಕೊಠಡಿಯನ್ನು ಹೊಕ್ಕು ಹಿಂದೆ ನಿಂತು ಆಲಿಸುತ್ತಿದ್ದರು. ಇದರಿಂದ ಐನ್‌ಸ್ಟೈನರಿಗೆ ಯಾವ ತೊಂದರೆಯೂ ಆಗುತ್ತಿರಲಿಲ್ಲ. ಭೌತ ವಿಜ್ಞಾನಿಯೆಂದರೇನೆಂದೇ ತಿಳಿಯದ ಅನೇಕ ಕುತೂಹಲಭರಿತ ಜನಗಳ ತಂಡವೊಂದು ತಮ್ಮನ್ನೇ ನೋಡುತ್ತಿರುವುದೆಂಬುದನ್ನು ತಿಳಿಯದವರಂತಿದ್ದು ಅವರು ತಮ್ಮ ಉಪನ್ಯಾಸವನ್ನು ಮುಂದುವರಿಸುತ್ತಿದ್ದರು. ಕೆಲವು ನಿಮಿಷಗಳ ನಂತರ—ಕುತೂಹಲದ ಪ್ರವಾಸಿಗಳಿಗೆ ಸಾಕಷ್ಟು ತೃಪ್ತಿಯಾದ ಬಳಿಕ—ಅವರು, "ನನ್ನ ಉಪನ್ಯಾಸದಲ್ಲಿ ಇನ್ನು ಆಸಕ್ತಿಯಿಲ್ಲದವರು ಕೊಠಡಿಯನ್ನು ಬಿಟ್ಟು ಹೋಗುವ ಸಲುವಾಗಿ ಒಂದು ಕ್ಷಣ ನಾನು ಮಾತು ನಿಲ್ಲಿಸುತ್ತೇನೆ" ಎನ್ನುತ್ತಿದ್ದರು. ತಮ್ಮ ವಿದ್ಯಾರ್ಥಿ ಶ್ರೋತೃಗಳು ಮಾತ್ರ ಉಳಿದ ಬಳಿಕ ಅವರು ಪುನಃ ಆನಂದದಿಂದ ಮುಂದುವರಿಸುತ್ತಿದ್ದರು.

ತಮ್ಮ ಬಗ್ಗೆ ಇದ್ದ ಆಸಕ್ತಿ ಏನೆಂಬುದು ಅವರಿಗೆ ಅರ್ಥವಾಗು

ತ್ತಿರಲಿಲ್ಲ. ಆದರೆ ಅವರು ತಮ್ಮ ಜಗದ್ವ್ಯಾಪಕ ಕೀರ್ತಿ ಅರ್ಥವಿಲ್ಲ ದ್ದೆಂದು ಭಾವಿಸಿಯೂ ಅದನ್ನು ಹೇಗೆ ಒಪ್ಪಿಕೊಂಡಿದ್ದರೋ, ಹಾಗೆಯೇ ಇದನ್ನೂ ಸಹ ಒಪ್ಪಿಕೊಂಡಿದ್ದರು.

ಎಲ್ಲಾ ಅವರ ಮುಖ್ಯ ಪತ್ರಗಳನ್ನು ಬೇರ್ಪಡಿಸುವುದು ಮಾತ್ರ ವಲ್ಲದೆ ಅವರ ಭೇಟಿಗಾಗಿ ಬಂದವರನ್ನೂ ಪ್ರತ್ಯೇಕವಾಗಿ ವಿಂಗಡಿಸು ತ್ತಿದ್ದರು. ಪ್ರತಿದಿನವೂ ಜನ ಅವರನ್ನು ಕಾಣಲು ಪ್ರಯತ್ನಿಸುತ್ತಿ ದ್ದರು—ಹಣ ಸಹಾಯಕ್ಕಾಗಿ, ಅವರ ಪರವಾಗಿ ತಮ್ಮ ಪ್ರಭಾವ ಬೀರಲೆಂದು, ಅಥವಾ ಯಾವುದಾದರೊಂದು ಯೋಜನೆಗೆ ಅವರ ಬೆಂಬಲವನ್ನು ಬಯಸಿ. ಜನ ಅವರನ್ನು ಮಾಂತ್ರಿಕನೆಂದೇ ತಿಳಿದಿರ ಬೇಕು—ಅಸಾಧ್ಯವಾದುದನ್ನು ಸಾಧ್ಯಗೊಳಿಸುವ ಜಾದೂಗಾರ ನೆಂದು. ಎಲ್ಲಿ ಸಾಧ್ಯವೋ ಅಲ್ಲಿ ಐನ್‌ಸ್ಟೈನ್ ಸಹಾಯಮಾಡುತ್ತಿ ದ್ದರು. ಸ್ವಪಕ್ಷಪಾತದಿಂದಾಗಲೀ ಅಥವಾ ತಮ್ಮ ಪ್ರಭಾವದಿಂದ ಹೆದರಿಸಿಯಾಗಲಿ ಕಾರ್ಯಸಾಧಿಸುವ ಗೋಜಿಗೆ ಎಂದೂ ಹೋಗು ತ್ತಿರಲಿಲ್ಲ.

ಅನೇಕ ಸಲ ಭೇಟಿಗಾಗಿ ಬಂದವರು ಪರದೇಶದ ಪ್ರಮುಖ ವ್ಯಕ್ತಿಗಳಾಗಿದ್ದು ಐನ್‌ಸ್ಟೈನ್ ಅವರನ್ನು ನೋಡಲೇ ಬೇಕಾಗುತ್ತಿತ್ತು. ಆಗ ತಮ್ಮ ಸಾಮಾನ್ಯ ಅತಿಥಿಯೊಬ್ಬನನ್ನು ಎಷ್ಟು ಪ್ರೀತಿ ಪುರಸ್ಕಾರ ಗಳಿಂದ ಆಹ್ವಾನಿಸುತ್ತಿದ್ದರೋ ಅಷ್ಟೇ ಅಭಿಮಾನದಿಂದ ಅವರನ್ನೂ ಸ್ವಾಗತಿಸುತ್ತಿದ್ದರು. ಈ ಭೇಟಿಗಳು ಬಹಳ ಕಾಲ ಸಾಗದಂತೆ ನೋಡಿಕೊಳ್ಳಲು ಎಲ್ಸಾ ಹಿಂಬದಿಯಲ್ಲಿಯೇ ಸುಳಿದಾಡುತ್ತಿದ್ದರು.

ಸಂಗೀತಗಾರರಿಗೆ ಸದಾ ಸುಸ್ವಾಗತವಿದ್ದು ಅವರು ಅನೌಪ ಚಾರಿಕ ಗೋಷ್ಠಿಯಲ್ಲಿ ಐನ್‌ಸ್ಟೈನರೊಂದಿಗೆ ಸೇರುವ ಆಹ್ವಾನವಿರು ತ್ತಿತ್ತು. ಸಂಗೀತ ಮತ್ತು ದೀರ್ಘ ಗಾಳಿಸಂಚಾರಗಳು ಅವರ ಅತ್ಯಂತ ಹರ್ಷದಾಯಕ ಹವ್ಯಾಸಗಳಾಗಿ ಇನ್ನೂ ಉಳಿದಿದ್ದುವು.

ಬಹಳ ವರ್ಷಗಳಿಂದ ತೊಡಗಿದ್ದ ಕಾರ್ಯದ ಸೋಜಿಗದ ವೈಜ್ಞಾನಿಕ ಭಾವನೆಗಳ ಫಲಿತಾಂಶಗಳನ್ನು ಅವರು ತಮ್ಮ ಐವತ್ತ ನೆಯ ಹುಟ್ಟು ಹಬ್ಬಕ್ಕೆ ಮುಂಚೆ ೧೯೨೯ರಲ್ಲಿ, ಪ್ರಕಟಿಸಿದರು.

ಸಾಪೇಕ್ಷವಾದದಿಂದ ಬೆಳೆದುಬಂದ ಇದನ್ನು ಅವರು "ಏಕೀಕೃತ ಕ್ಷೇತ್ರ ವಾದ" (Unified field theory)ವೆಂದು ಕರೆದರು.

ವರದಿಗಾರರು ಜಗತ್ತಿನೆಲ್ಲೆಡೆಯಿಂದಲೂ ಭೇಟಿ ಸಂದರ್ಶನ ಗಳಿಗಾಗಿ ಮತ್ತೊಮ್ಮೆ ಬಂದರು. ಈ ಹೊಸ ವಾದವನ್ನು ಅವರ ಐವತ್ತನೆಯ ಹುಟ್ಟು ಹಬ್ಬದಂದು ನಾಟಕೀಯವಾಗಿ ವರದಿ ಮಾಡು ವುದರ ಬಗ್ಗೆ ಅವರು ಅತ್ಯುತ್ಸುಕರಾಗಿದ್ದರು. ಎಂತಹ ಹೃದಯ ಸ್ಪರ್ಶೀ ಕಥೆಯಾಗುತ್ತದೆ ಈ ಸುದ್ದಿ!

ಐನ್‌ಸ್ಟೈನರಿಗೆ ಅಚ್ಚರಿಯಾಯಿತು. ಜನ ಏಕೀಕೃತ ಕ್ಷೇತ್ರ ವಾದವನ್ನು ಏಕೆ ತಿಳಿಯಲಾಶಿಸಬೇಕು? ಖಂಡಿತವಾಗಿಯೂ ಅವರು ಅದನ್ನು ಅರ್ಥ ಮಾಡಿಕೊಳ್ಳಲಾರರು. ಹಾಗೆ ನೋಡಿದರೆ ಅದು ಸಾಪೇಕ್ಷವಾದಕ್ಕಿಂತಲೂ ಕಠಿಣವೂ, ವಿವರಣೆಗೆ ಹೆಚ್ಚು ಜಟಿಲವೂ ಆಗಿತ್ತು. ತಮ್ಮನ್ನು ಹೀಗೆ ದೈವತ್ವಕ್ಕೇರಿಸುವುದರ ಅರ್ಥವೇನೆಂಬುದು ಅವರಿಗೆ ಎಂದಿಗಿಂತ ನಿಗೂಢ ಸಮಸ್ಯೆಯಾಯಿತು.

ಅವರು ಈ ಎಲ್ಲ ಉದ್ರೇಕ ಉತ್ಸವಗಳಿಂದ ತಪ್ಪಿಸಿಕೊಂಡು ಬಚ್ಚಿಟ್ಟುಕೊಳ್ಳಲು ನಿರ್ಧರಿಸಿದರು. ಅವರ ಹುಟ್ಟುಹಬ್ಬದ ದಿನ ಐನ್‌ಸ್ಟೈನ್ ದಂಪತಿಗಳು ಸಮೀಪದಲ್ಲಿದ್ದ ಸರೋವರದ ಬಳಿಯ ನಿವಾಸಕ್ಕೆ ತೆರಳಿದರು. ಆ ಹುಟ್ಟು ಹಬ್ಬವನ್ನು ಪ್ರಶಾಂತ ವಾತಾ ವರಣದಲ್ಲಿ, ಎಲ್ಸಾ ಪೊಟ್ಟಣ ಕಟ್ಟಿ ತಂದಿದ್ದ ಊಟ ತಿಂಡಿಗಳಿಂದ ಆಚರಿಸಲಾಯಿತು. ಐನ್‌ಸ್ಟೈನ್ ತಮ್ಮ ಹಳೆಯ ಉಡುಪು, ಮೇಲೊಂದು ಸ್ವೆಟರ್ ಹಾಕಿಕೊಂಡು ಬರಿ ಕಾಲಿನಲ್ಲೇ ತಿರುಗಾಡಿ ದರು. ಕಾಲುಚೀಲಗಳು ತೊಂದರೆ ಕೊಡುವ ನಿಷ್ಪ್ರಯೋಜಕ ವಸ್ತುಗಳೆಂದು ಅವರು ತಿಳಿದಿದ್ದರು. ತಮ್ಮ ಪಾದರಕ್ಷೆಗಳನ್ನೂ ತ್ಯಜಿಸುವ ಸಮಯ ಒದಗಿದಾಗಲಂತೂ ಅವರ ಸಂತೋಷಕ್ಕೆ ಮಿತಿಯೇ ಇರಲಿಲ್ಲ. ಇದೇ ಸಮಯದಲ್ಲಿ, ಸಂದೇಶಗಳೂ, ಉಡು ಗೊರೆಗಳೂ ಅವರ ಹೇಬರ್‌ಲಾಂಡ್ ಸ್ಟ್ರಾಸೆ ಮನೆಗೆ ಬಂದು ಸುರಿದು ಬೀಳುತ್ತಿದ್ದುವು. ಜನ ಅವರ ಮನೆಬಾಗಿಲಿಗೆ ಮುತ್ತಿಗೆಹಾಕಿದ್ದರು. ಟೆಲಿಫೋನ್ ಕರೆಗಳಂತೂ ಅಸಂಖ್ಯಾತವಾಗಿದ್ದುವು.

ಪುನಃ ತಾವೆಂದೂ ಖಾಸಗಿ ನಾಗರಿಕನಂತೆ ಬಾಳಲಾಗದೆಂದು ಅವರು ತಿಳಿದರು. ಇಂದಿನಿಂದ ಅವರ ಪ್ರತಿ ಮಾತೂ, ಪ್ರತಿ ಕಾರ್ಯವೂ ಸಾರ್ವಜನಿಕ ಆಸಕ್ತಿಗೆ ಸಂಬಂಧಿಸಿದುದಾಗಿತ್ತು. ಅವರು ಈ ಪರಿಸ್ಥಿತಿಗೂ ಮನಸ್ಸನ್ನೊಗ್ಗಿಸಿ ಅದರೊಡನೆ ಸಹ ಬಾಳ್ವೆ ನಡೆಸಬಲ್ಲವರಾಗಿದ್ದರು. ಏಕೆಂದರೆ ಅವರ ಸೃಜನಾತ್ಮಕ ಮಹಾ ಏಚ್ಛಕ್ತಿ ಮತ್ತಾವ ವಿಷಯಕ್ಕೂ ಪ್ರಾಧಾನ್ಯವೀಯದೆ ತನ್ನ ಕಾರ್ಯ ದಲ್ಲಿ ತಾನು ಮಗ್ನವಾಗುವಂತಹ ಸಾಮರ್ಥ್ಯವನ್ನು ಪಡೆದಿತ್ತು.

ವರ್ಷವೊಂದು ಉರುಳಿತು. ಕ್ಯಾಲಿಫೋರ್ನಿಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಮೂರು ತಿಂಗಳ ಕಾಲ ಸಮೀಕ್ಷಕ ಪ್ರಾಧ್ಯಾಪಕರಾಗಿ ಬರುವಂತೆ ಐನ್‌ಸ್ಟೈನರಿಗೆ ಆಹ್ವಾನವೀಯಲಾಯಿತು. ಸಂಯುಕ್ತ ಸಂಸ್ಥಾನಗಳಿಗೆ ಹೋಗಿ ಹತ್ತು ವರ್ಷಗಳಾಗಿದ್ದುದರಿಂದ ಅವರು ಆಹ್ವಾನವನ್ನು ಒಪ್ಪಿಕೊಳ್ಳುವ ನಿರ್ಧಾರಮಾಡಿದರು.

ಪಶ್ಚಿಮ ತೀರ ಪ್ರದೇಶಕ್ಕೆ ಹೋಗುವ ಹಾದಿಯಲ್ಲಿ, ನ್ಯೂಯಾರ್ಕಿನಲ್ಲಿ ಹಡ್ಸನ್ ನದಿಯ ಅಂತ್ಯಭಾಗದಲ್ಲಿರುವ ಸಣ್ಣ ಗುಡ್ಡವೊಂದರ ಮೇಲಿದ್ದ ರಿವರ್‌ಸೈಡ್ ಚರ್ಚನ್ನು ಅವರು ನೋಡಲುಹೋದರು. ಅವರನ್ನು ಪಾದ್ರಿ ಡಾ। ಹ್ಯಾರಿ ಎಮರ್ಸನ್ ಫಾಸ್ಡಿಕ್‌ರವರು ಆ ಸುಂದರ ಶಿಲ್ಪ ಕೃತಿಯನ್ನು ತೋರಿಸಲು ಕರೆದೊಯ್ದರು. ಮಹಾದ್ವಾರದ ಕಮಾನಿನಲ್ಲಿ ಮಾನವಕುಲದ ಮಹಾ ಮೇಧಾವಿಗಳ ಪ್ರತಿಮೆಗಳಿರುವುದನ್ನು ಅವರು ನೋಡುತ್ತ ನಿಂತರು. ಪ್ಲೇಟೋ, ಬುದ್ಧ, ಕನ್‌ಫ್ಯೂಷಿಯಸ್ ...ಮತ್ತೆ ಐನ್‌ಸ್ಟೈನ್. ಹಿಂದಿನ ಚರಿತ್ರೆಯನ್ನು ಚಿತ್ರಿಸಿದ್ದ ಬೃಹತ್ ಕಿಟಿಕಿಗಳ ಗಾಜಿನ ಬಾಗಿಲುಗಳನ್ನೊಂದೊಂದನ್ನು ನೋಡುತ್ತ ಅವರು ನಿಧಾನವಾಗಿ ಆ ನಿಶ್ಶಬ್ಧ ಚರ್ಚನ್ನು ನಡೆದು ಮುಗಿಸಿದರು.

"ಚರಿತ್ರೆಯ ಆರು ನೂರು ಮಹಾಪುರುಷರ ಚಿತ್ರವಿಲ್ಲಿದೆ" ಮೌನ ವೊಡೆದು ಮೆಲುದನಿಯಲ್ಲಿ ನುಡಿದರು ಡಾ। ಫಾಸ್ಡಿಕ್.

ಐನ್‌ಸ್ಟೈನ್ ಆ ಸ್ಮಾರಕಗಳತ್ತ ದೀರ್ಘ ಮೌನದಿಂದ ನೋಡುತ್ತ "ಈ ಎಲ್ಲದರ ನಡುವೆ ಇನ್ನೂ ಜೀವಿಸಿರುವವ ನಾನೊಬ್ಬನೇ ಅಲ್ಲವೇ?" ಎಂದರು.

"ಹೌದು, ನೀವೊಬ್ಬರೇ ಸರಿ."

ಆ ಉತ್ತರದಿಂದ ಐನ್‌ಸ್ಟೈನರಿಗೆ ಏನೋ ಹೊರೆ ಹೊರೆಸಿದಂತಾಗಿ ಅವರು ತಲೆ ತಗ್ಗಿಸಿದರು. ಮನಸ್ಸಿನ ಪೇಚಾಟಕ್ಕೆ ಸಿಲುಕಿ ಅವರು ಹಾಗೆಯೇ ಕಾಲೆಳೆದು ಚರ್ಚಿನಿಂದ ಹೊರಬಂದರು.

ಆ ರಾತ್ರಿ ಐನ್‌ಸ್ಟೈನರು ಗೀತಪ್ರಧಾನ ಪ್ರದರ್ಶನವೊಂದನ್ನು ನೋಡಲು ಹೋದರು—ಸಂಗೀತವೆಂದರೆ ಮಹದಾನಂದವಾಗುತ್ತಿದ್ದ ವ್ಯಕ್ತಿಗೆ ಇದು ಔತಣವೇ ಆಗಿತ್ತು. ಮೇರಿಯಾ ಜೆರಿಟ್ಸ ಪ್ರಧಾನ ಪಾತ್ರದಲ್ಲಿದ್ದ 'ಕಾರ್ಮೆನ್' ಅಂದಿನ ಪ್ರದರ್ಶನ. ಅವರು ತಮಗಾಗಿದ್ದ ಪ್ರತ್ಯೇಕ ಸ್ಥಾನದಲ್ಲಿ ಕುಳಿತ ಕೂಡಲೇ ಚಪ್ಪಾಳೆಯಿಂದ ಮಂದಿರವೇ ಮೊಳಗಿತು. ಐನ್‌ಸ್ಟೈನ್ ಕುತೂಹಲದಿಂದ ಸುತ್ತಮುತ್ತ ನೋಡಿದರು. ಪರದೆ ಇನ್ನೂ ಸರಿದಿರಲಿಲ್ಲ.

"ಅದು ನಿಮಗಾಗಿ, ಆಲ್ಬರ್ಟ್‌ಲ್! ಅವರು ನಿಮ್ಮನ್ನು ಕಂಡು ಸಂತೋಷ ವ್ಯಕ್ತಪಡಿಸುತ್ತಿದ್ದಾರೆ!"

ಐನ್‌ಸ್ಟೈನ್ ನಂಬದೆ ಎಲ್ಲಾರನ್ನು ದುರುಗಟ್ಟಿ ನೋಡಿದರು. ಏಕೆ, ಇವರೇಕೆ ಹೀಗೆ ಮಾಡುವರು? ಅವರು ವಿಸ್ಮಯಗೊಂಡಿದ್ದರು. ತಮಗೆ ಬೇಕಿಲ್ಲವಾಗಿದ್ದ ಕೀರ್ತಿಯಿಂದ ಅವರು ದಿಗ್ಭ್ರಮೆಗೊಂಡಿದ್ದರು ಮತ್ತು ಅದನ್ನು ಪ್ರತಿಭಟಿಸುವುದನ್ನು ಎಂದೂ ನಿಲ್ಲಿಸಿರಲಿಲ್ಲ.

ಮನಸ್ಸಿಲ್ಲದ ಮನಸ್ಸಿನಿಂದ ಅವರು ಎದ್ದು ನಿಂತಾಗ ಕರತಾಡನ ನಭೋಮಂಡಲಕ್ಕೇರಿತು. ಗೋಷ್ಠಿ ಇದರಿಂದಾಗಿ ಪ್ರಾರಂಭವಾಗಲು ಸ್ವಲ್ಪ ವಿಳಂಬವೇ ಆಯಿತು.

ಕ್ಯಾಲಿಫೋರ್ನಿಯಾದಲ್ಲಿ ಅವರಿಗೆ ಅತ್ಯಾನಂದಕರ ವಾತಾವರಣ ದೊರಕಿದ್ದುದರಿಂದ, ಕಾರ್ಯ ಸುಗಮವಾಗಿ ಸಾಗುತ್ತಿದ್ದುದರಿಂದ, ಮಾರನೆಯ ವರ್ಷವೂ ಬರಲು ತಮಗಿತ್ತ ಆಹ್ವಾನವನ್ನು ಐನ್‌ಸ್ಟೈನ್ ಒಪ್ಪಿದರು. ಅವರು ಹಿಂದಿರುಗುತ್ತಿದ್ದಾಗ ಅರಿಜೋನಾದಲ್ಲಿನ ಹೋಪಿ ಇಂಡಿಯನ್ ಪಂಗಡದವರು ಅವರನ್ನು ಔಪಚಾರಿಕವಾಗಿ ತಮ್ಮವರಾಗಿ ದತ್ತು ತೆಗೆದುಕೊಂಡರು. ತಮ್ಮ ಪಂಗಡದ ಈ ಹೊಸಬನಿಗೆ ಹೆಸರಿಡಲು ಅವರಲ್ಲಿ ಗೊಂದಲವೋ ಗೊಂದಲವಾ

ಯಿತು. "ಅವರು ಏನನ್ನು ಮಾಡುತ್ತಾರೆ?" ಎಂದು ಒಬ್ಬರನ್ನೊಬ್ಬರು ಪ್ರಶ್ನಿಸಿದರು. "ಮುಖ್ಯಸ್ಥನಿಗೆ ಅವನ ಕೆಲಸಕ್ಕನುಗುಣವಾದ ಹೆಸರನ್ನಿಡಬೇಕು." ಆಗ ಯಾರೋ ಒಬ್ಬರು ಐನ್‌ಸ್ಟೈನರು ಸಾಪೇಕ್ಷವಾದವನ್ನು ನಿರೂಪಿಸಿದವರೆಂದು ಹೇಳಿದರು. ಅವರಿಗೆ ಅಷ್ಟೇ ಸಾಕಿತ್ತು. ಭಲೇ! ಆಲ್ಬರ್ಟ್ ಐನ್‌ಸ್ಟೈನರನ್ನು "ಮಹಾ ಪ್ರಧಾನ ಸಾಪೇಕ್ಷ" (Chief Great Relative) ಎಂದು ನಾಮಕರಣ ಮಾಡಲಾಯಿತು.

ಕ್ಯಾಲಿಪೋರ್ನಿಯಾಕ್ಕೆ ಅವರಿತ್ತ ಎರಡು ಭೇಟಿಗಳ ನಡುವೆ, ೧೯೩೨ರ ವಸಂತಕಾಲದಲ್ಲಿ, ಐನ್‌ಸ್ಟೈನ್ ಬರ್ಲಿನ್‌ನಲ್ಲಿದ್ದರು. ನಾಡಿನಲ್ಲಿ ಕ್ಷೋಭೆಯುಂಟಾಗಿತ್ತು. ಜರ್ಮನ್ ರಿಪಬ್ಲಿಕ್‌ನ ಅಧ್ಯಕ್ಷಸ್ಥಾನಕ್ಕೆ ಅಡಾಲ್ಫ್ ಹಿಟ್ಲರ್ ಎಂಬಾತನಿಗೆ ಪ್ರತಿಸ್ಪರ್ಧಿಯಾಗಿ ಫೀಲ್ಡ್ ಮಾರ್ಷಲ್ ಹಿಂಡೆನ್‌ಬರ್ಗ್ ನಿಂತಿದ್ದರು. ಹಿಂಡೆನ್‌ಬರ್ಗ್ ಜಯಶೀಲರಾದರು.

ಹಿಂಡನ್‌ಬರ್ಗ್‌ರ ಈ ಆಯ್ಕೆ ಜರ್ಮನಿ ಪುನಃ ಹಿಂದಿನಂತೆ ಮಿಲಿಟರಿ ಯುದ್ಧದ ಸ್ವತ್ತಾಗುವುದಕ್ಕೆ ಪ್ರಥಮ ಹಂತವಾಯಿತೆಂದು ಅನೇಕರು ನಂಬಿದರು. ಜರ್ಮನ್ ಪ್ರಜಾಪ್ರಭುತ್ವ ರಾಜ್ಯವು ಕ್ರಮೇಣ ಕ್ಷೀಣಿಸುತ್ತ ಬಂದಿತು. ಸಂಕಟಕ್ಕೆ ಸಿಕ್ಕಿ ತುಳಿಯಲ್ಪಟ್ಟಿದ್ದ ಜರ್ಮನ್ ಜನತೆ ಇನ್ನೂ ಶೈಶವಾವಸ್ಥೆಯಲ್ಲಿದ್ದ, ಅಷ್ಟೇನೂ ಪ್ರಬಲವಲ್ಲದ ನಾಟ್ಸಿಪಕ್ಷವನ್ನು ಸೇರುವುದೆಂದು ಐನ್‌ಸ್ಟೈನ್ ಭಾವಿಸಿ ಅತ್ಯಂತ ಕಳವಳಗೊಂಡರು.

ಆದರೆ ಬೇಸಿಗೆಯ ಕಾಲದಲ್ಲಿ ಸ್ಥಿತಿಗತಿಗಳಲ್ಲಿ ಯಾವ ಗಮನಾರ್ಹ ಬದಲಾವಣೆಯೂ ಆಗಿರದಿದ್ದಾಗ ಐನ್‌ಸ್ಟೈನ್ ತಮ್ಮ ಮೂರನೆಯ ಕ್ಯಾಲಿಫೋರ್ನಿಯ ಪ್ರವಾಸವನ್ನು ಕೈಗೊಳ್ಳಲು ಸಿದ್ಧರಾದರು. ರಾಯಭಾರಿ ವರ್ಗದವರಿಗೆ ಕೊಡುವ ವಿಶೇಷ ಹಕ್ಕುಗಳುಳ್ಳ ಪಾಸ್‌ಪೋರ್ಟನ್ನು ಐನ್‌ಸ್ಟೈನ್‌ಗೆ ದಯಪಾಲಿಸಿದ್ದರು. ಪರದೇಶದಿಂದ ಸಂಯುಕ್ತ ಸಂಸ್ಥಾನಗಳಿಗೆ ಹೋಗಬಯಸುವವರು ಪಡೆಯಬೇಕಾಗಿದ್ದ ವಿಶೇಷ ರಹದಾರಿ ವೀಸಾವನ್ನು ಪಡೆಯಲು

ಐನ್‌ಸ್ಟೈನ್ ಅದನ್ನು ಬರ್ಲಿನ್ನಿನಲ್ಲಿದ್ದ ಅಮೆರಿಕದ ಕಾನ್ಸಲ್ ಕಚೇರಿಗೆ ಕಳುಹಿಸಿದರು.

ಐನ್‌ಸ್ಟೈನ್ ಹೊರಡಲಿದ್ದ ಹಿಂದಿನ ಬೆಳಿಗ್ಗೆ ಅವರ ಮನೆಗೆ ಟೆಲಿಫೋನ್ ಕರೆ ಬಂದಿತು. "ಇದು ಕಾನ್ಸಲರ ಕಚೇರಿ. ಪ್ರೊಫೆಸರ್ ಐನ್‌ಸ್ಟೈನರು ಈ ಬೆಳಿಗ್ಗೆ ಇಲ್ಲಿ ಹಾಜರಿರಬೇಕೆಂದು ಅವರಿಗೆ ತಿಳಿಸಿ"

ಎಲ್ಸಾರಿಗೆ ಇದು ಒಗಟಾಯಿತು. ಆಕೆ ಪತಿಯನ್ನು "ಅವರಿಗೇನು ಬೇಕಿರಬಹುದು?" ಎಂದು ಪ್ರಶ್ನಿಸಿದರು. ಬಹಳ ದಿನಗಳಿಂದಲೂ ಯಾರೂ ಅವರಿಗೆ ಹೀಗೆ ಅಪ್ಪಣೆ ಮಾಡಿರಲಿಲ್ಲ. "ಹೇಗಾದರೂ ಆಗಲಿ, ನೀವು ಅವಸರದಲ್ಲಿರುವಿರಿ. ನಿಮ್ಮ ಬದಲು ನಾನೇ ಹೋಗಿಬರುತ್ತೇನೆ."

"ಉಹುಂ, ಬೇಡ." ಐನ್‌ಸ್ಟೈನ್ ಅಸಮ್ಮತಿ ಸೂಚಿಸಿದರು. "ಅವರು ನನಗೆ ಟೆಲಿಫೋನ್ ಮಾಡಿದರೆ ನಾನೇ ಹೋಗಬೇಕು."

ಹೊರಗಿನ ಮಳೆಯಲ್ಲೇ ಗಾಳಿಬಡಿತ, ತೇವದಿಂದ ತೊಯ್ದು ಐನ್‌ಸ್ಟೈನ್ ಕಾನ್ಸಲ್‌ರ ಕಚೇರಿಗೆ ಹೋದರು. ಅವರ ಕೆದರಿದ ಕೂದಲಿನಿಂದ ನೀರ ಹನಿಗಳು ತೊಟ್ಟಿಕ್ಕುತ್ತಿದ್ದುವು.

ಗುಮಾಸ್ತನೊಬ್ಬ ಅವರು ಕೂರಲು ಕುರ್ಚಿಯನ್ನು ತೋರಿಸಿದ. ಪೆನ್ಸಿಲ್ ತೆಗೆದು ಮುದ್ರಿಸಿದ ಪ್ರಕಟನ ಪತ್ರವೊಂದನ್ನು ಬಿಚ್ಚುತ್ತಾ, "ನೀವೇಕೆ ಸಂಯುಕ್ತ ಸಂಸ್ಥಾನಗಳಿಗೆ ಹೋಗುತ್ತಿರುವಿರಿ?" ಎಂದು ಪ್ರಶ್ನಿಸಿದ.

"ನಿಮ್ಮ ವಿಜ್ಞಾನಿಗಳು ಕೆಲವರೊಡನೆ ಕೆಲಸವನ್ನು ಮುಂದುವರಿಸಲು ಹೋಗುತ್ತಿದ್ದೇನೆ," ಎಂದರು ಐನ್‌ಸ್ಟೈನ್. ನಯುಡ ನಗುವೊಂದು ಅವರ ಮುಖದಲ್ಲಿ ಕಂಡಿತು. "ನಿಮ್ಮ ದೇಶದ ಆಹ್ವಾನದ ಮೇರೆಗೆ" ಎಂದು ಸೇರಿಸಿದರು.

ಗುಮಾಸ್ತ ಕೆಲವಂಶಗಳನ್ನು ಬರೆದುಕೊಂಡ. "ನಿಮ್ಮ ರಾಜಕೀಯ ಆಸ್ಥೆ, ಚಟುವಟಿಕೆ, ಸಂಬಂಧಗಳೇನು?"

"ರಾಜಕೀಯ ಸಂಬಂಧ? ನನಗಾವ ರಾಜಕೀಯ ಸಂಬಂಧವೂ

ಇಲ್ಲ." ಐನ್‌ಸ್ಟೈನ್ ತಮ್ಮ ಕೆದರಿದ ತಲೆಗೂದಲಿನಲ್ಲಿ ಬೆರಳಾಡಿಸಿದರು. ಒಂದು ಕ್ಷಣ ದಿಗ್ಭ್ರಾಂತರಾಗಿ ಆ ಗುಮಾಸ್ತನನ್ನು ದುರುಗುಟ್ಟಿ ನೋಡಿದರು. ಮರುಕ್ಷಣವೇ ಅವರು ಎದ್ದು ನಿಂತರು.

"ಈ ವಿಷಯವನ್ನು ಮುಂದುವರಿಸುವ ಆಸೆ ನನಗಿಲ್ಲ" ಎಂದು ಮೆಲುದನಿಯಲ್ಲಿ ಖಂಡಿತವಾಗಿ ಹೇಳಿದರು. "ನನಗೆ ವೀಸಾ ರಹದಾರಿ ಕೊಡುವುದರ ಬಗ್ಗೆ ಪ್ರಶ್ನೆಗಳೇನಾದರೂ ಇದ್ದರೆ ನಾನು ಅಮೇರಿಕಕ್ಕೆ ಹೋಗದಿರುವುದೇ ಲೇಸು." ಅವರು ಕಚೇರಿಯನ್ನು ಬಿಟ್ಟು ಹೊರಟಾಗ ಅವರ ಹೆಜ್ಜೆಯಲ್ಲಿ ದೃಢಸಂಕಲ್ಪದ ಸಪ್ಪಳವಿತ್ತು.

ಐನ್‌ಸ್ಟೈನ್ ತಮ್ಮ ಪ್ರವಾಸ ರದ್ದುಗೊಳಿಸುವ ಇಚ್ಛೆಯುಳ್ಳ ಸಂಗತಿ ಹರಡಿದ ಕೂಡಲೆ ಆ ಮಧ್ಯಾಹ್ನ ಬರ್ಲಿನ್ನಿನ ಅಮೇರಿಕದ ರಾಯಭಾರಿ ವರ್ಗದಲ್ಲಿ ಕೋಲಾಹಲವೆದ್ದಿತು. ದೂತರು ಕಚೇರಿಯಿಂದ ಕಚೇರಿಗೆ ಓಡಾಡಿದರು; ತಂತಿಗಳು ಗುಂಯ್‌ಗುಟ್ಟಿದುವು; ಟೆಲಿಗ್ರಾಂಗಳು ಲೆಕ್ಕವಿಲ್ಲದಂತೆ ಹೋಗತೊಡಗಿದುವು. ಮುಖ್ಯ ಕಾನ್ಸಲರೇ ವಿವರಣೆ ನೀಡಲು ಬಂದರು. ಪ್ರಶ್ನೆಗಳು ವೀಸಾ ಕೊಡುವ ಮುನ್ನ ನಡೆಯಬೇಕಿದ್ದ ಮಾಮೂಲು ವಿಷಯವೆಂದೂ ಐನ್‌ಸ್ಟೈನರನ್ನು ಸಂಶಯಾತ್ಮಕದೃಷ್ಟಿಯಿಂದ ಪ್ರತ್ಯೇಕಿಸಿರಲಿಲ್ಲವೆಂದೂ ಅವರು ಹೇಳಿದರು. ವೀಸಾ ರಹದಾರಿಯನ್ನು ಕೂಡಲೆ ಕೊಟ್ಟು ಪಾಸ್‌ಪೋರ್ಟನ್ನು ವಿಶೇಷ ದೂತರ ಮೂಲಕ ಹಿಂತಿರುಗಿಸುವ ವ್ಯವಸ್ಥೆ ಮಾಡಿದರು.

ಮನೆಯವರೆಲ್ಲರೂ ಮಧ್ಯಾಹ್ನ ಊಟಕ್ಕೆ ಕುಳಿತಿದ್ದರು. ಪ್ರಫುಲ್ಲವದನ ಐನ್‌ಸ್ಟೈನ್ ಅಂದು ಬಿಗುಮಾನದಿಂದಿದ್ದರು. "ಅಪರಾಧಿಯಂತೆ ನನ್ನನ್ನೇಕೆ ಪ್ರಶ್ನಿಸಬೇಕು? ನನ್ನ ಜೀವನವೆಲ್ಲ ಅವರಿಗೆ ಗೊತ್ತಿದೆ. ಅದು ಸಾಕಷ್ಟು ಪ್ರಚಾರವಾಗಿದೆ. ನಾನೆಲ್ಲಿಗೆ ಹೋಗುತ್ತೇನೆ, ಏನು ಮಾಡುತ್ತೇನೆ, ಹೇಗೆ ನಡೆಯುತ್ತೇನೆ, ಏನು ತಿನ್ನುತ್ತೇನೆಂಬುದು ಎಲ್ಲರಿಗೂ ತಿಳಿದಿದೆ. ಯಾವುದೂ ಮುಚ್ಚಿಟ್ಟುಕೊಂಡಿಲ್ಲ. ಆದರೂ ನಾನಾವುದೋ ಗುಪ್ತ ಕರಾಳಕೃತ್ಯಕ್ಕೆ ಅವರ ದೇಶಕ್ಕೆ ಹೋಗುತ್ತಿರುವನಂತೆ ಅವರು ಭಾವಿಸುತ್ತಾರೆ. ಅವರು ಹೀಗೆಲ್ಲಭಾವಿಸುವುದಾದರೆ ನಾನು ಅಮೇರಿಕ ದೇಶಕ್ಕೆ ಹೋಗಲಾತಿಸುವುದಿಲ್ಲ!"

ಊಟ ಮುಗಿಯುವ ತನಕವೂ ಅವರು ಮತ್ತೊಂದು ಮಾತನ್ನೂ ಆಡಲಿಲ್ಲ. ಎಲ್ಸಾ ತನ್ನ ಮೃದುನುಡಿಗಳಿಂದ ಮೌನವನ್ನು ಮುರಿದರು. "ಅದೆಲ್ಲೋ ಗುಮಾಸ್ತೆಯ ತಪ್ಪಿರಬಹುದೆಂದು ನನಗೆನ್ನಿಸುತ್ತದೆ. ಅಚಾತುರ್ಯದ ಆ ಬಡ ಗುಮಾಸ್ತೆ ನಿಮ್ಮಿಂದ ತನ್ನ ಕೆಲಸವನ್ನು ಕಳೆದುಕೊಳ್ಳುತ್ತಾನೆ. ಪತ್ರಿಕೆಗಳಲ್ಲಿ ಇದು ಸುಂಟರಗಾಳಿಯಂತೆ ಹಬ್ಬಿಹೋಗಿದೆ."

ಐನ್‌ಸ್ಟೈನರ ವಿಶಾಲ ಹಣೆ ಸುಕ್ಕುಗಟ್ಟಿ ಕಣ್ಣುಗಳಲ್ಲಿ ಕಪ್ಪು ಮೂಡಿತು. ಕೆಲವು ಕ್ಷಣಗಳು ಅವರು ಯೋಚನಾಕ್ರಾಂತರಾಗಿ ಎಲ್ಸಾರನ್ನು ನೋಡುತ್ತಾ ಕುಳಿತುಬಿಟ್ಟರು. ಬಳಿಕ ತಮ್ಮ ಕುರ್ಚಿಯನ್ನು ಹಿಂದಕ್ಕೆ ದೂಡಿ ಅವರು ಎದ್ದುನಿಂತರು. "ಹೌದು, ನೀನು ಹೇಳುವುದು ಸರಿ. ನನ್ನ ಕೋಪದಿಂದ ಮತ್ತೊಬ್ಬನು ತೊಂದರೆಗೀಡಾಗುವುದು ಸರಿಯಲ್ಲ. ನಮ್ಮ ಏರ್ಪಾಟಿನಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಪತ್ರಿಕೆಯವರಿಗೆ ತಿಳಿಸು. ನಾವು ನಾಳೆ ಅಮೇರಿಕಕ್ಕೆ ತೆರಳೋಣ."

ಮಾರನೆಯ ಬೆಳಿಗ್ಗೆ ಐನ್‌ಸ್ಟೈನ್ ತಮ್ಮ ಅಧ್ಯಯನ ಮಂದಿರದ ಬಾಗಿಲಿನಲ್ಲಿ ನಿಂತಿದ್ದರು—ಗುಂಡಿ ಹಾಕಿದ್ದ ಓವರ್ ಕೋಟು, ತಲೆಯ ಮೇಲೆ ಚಪ್ಪಟೆಯಾಗಿ ಕುಳಿತಿದ್ದ ವಿಶಾಲವಾದ ಹ್ಯಾಟ್, ಕತ್ತಿನ ವರೆಗೂ ಇಳಿದುಬೀಳುತ್ತಿದ್ದ ನರೆಯುತ್ತಿದ್ದ ತಲೆಗೂದಲ ಗುಂಪುಲು. ಇನ್ನೂ ತಮ್ಮ ಮೇಜಿನ ಮೇಲೆಯೇ ಇದ್ದ ಧೂಮಪಾನದ ಕೊಳವಿ, ಅತ್ಯಂತ ಹಿತಕರವೆನಿಸಿದ್ದ ಹಳೆಯ ಸ್ವೆಟ್ಟರ್, ಅಡ್ಡವಾಗಿ ಬಿದ್ದಿದ್ದ ಅವರ ಕುರ್ಚಿ, ಮತ್ತೆ ಪುಸ್ತಕಗಳನ್ನು ಅಡಕಿದ್ದ, ನೆಲದಿಂದ ಸೂರಿನವರೆಗೂ ನಿಂತಿದ್ದ, ಅಲಮಾರುಗಳು ಇವುಗಳತ್ತ ಅವರು ತಮ್ಮ ದೃಷ್ಟಿಯನ್ನು ನಿಧಾನವಾಗಿ ಹಾಯಿಸಿದರು.

ನಿಧಾನವಾಗಿ ದೃಢನಿರ್ಧಾರದಿಂದ, ಪುನಃ ಹಿಂತಿರುಗಿ ನೋಡದೆ ಐನ್‌ಸ್ಟೈನ್ ಮೆಟ್ಟಿಲುಗಳನ್ನಿಳಿದು ೫ ಹೇಬರ್‌ಲಾಂಡ್ ಸ್ಟ್ರಾಸೆಯಿಂದ ಹೊರಬಂದರು. ಅವರು ಅದನ್ನು ಪುನಃ ನೋಡುವವರಾಗಿರಲಿಲ್ಲ.

೧೫. ಸ್ವಾತಂತ್ರ್ಯಕ್ಕಾಗಿ ಪಲಾಯನ

ಆಲೋಚನೆ ಹಾಗು ಕಾರ್ಯಸ್ವಾತಂತ್ರ್ಯವುಳ್ಳ ಸಂಪದ್ಭರಿತ ಹಿರಿನಾಡು ಅಮೇರಿಕದ ಸಂಯುಕ್ತ ಸಂಸ್ಥಾನಗಳು. ಅಲ್ಲಿನ ಜನ ಎಲ್ಲ ವಿಷಯಗಳಲ್ಲೂ ಆಸಕ್ತರೂ ಕುತೂಹಲವುಳ್ಳವರೂ ಆದ ವಿನೋದಪ್ರಿಯರು. ಆದರೂ ಅತಿಥಿಗಳನ್ನು ಅದೇ ಉಪಚಾರದಿಂದ ಸತ್ಕರಿಸುವ ಸ್ವಭಾವದ ಈ ಅಮೇರಿಕನ್ನರ ನಡುವೆಯೂ ಐನ್‌ಸ್ಟೈನ್ ದಂಪತಿಗಳಿಗೆ ಚಳಿಗಾಲವನ್ನು ಪ್ರಸನ್ನ ಮನಸ್ಸಿನಿಂದ ಪ್ರಶಾಂತವಾಗಿ ಕಳೆಯಲು ಸಾಧ್ಯವಾಯಿತು. ವಿಶ್ವವಿದ್ಯಾನಿಲಯದ ಬಳಿಯಲ್ಲಿಯೇ ಅವರ ಪುಟ್ಟ ಮನೆಯಿದ್ದಿತು. ದಕ್ಷಿಣ ಕ್ಯಾಲಿಫೋರ್ನಿಯಾದ ಶುಭ್ರಾಕಾಶದ ಬೆಚ್ಚಗಿನ ಬಿಸಿಲು ಅವರಿಗೆ ಹರ್ಷದಾಯಕವಾಗಿತ್ತು.

ಐನ್‌ಸ್ಟೈನ್ ತಮಗೆ ಬಂದ ಆತಿಥ್ಯದ ಅನೇಕ ಆಹ್ವಾನಗಳನ್ನು ತಿರಸ್ಕರಿಸಬೇಕಾಯಿತು. ನಯನಾಜೂಕಿನ ಆಧುನಿಕ ಗೃಹಿಣಿಯರು ಅವರನ್ನು ತಮ್ಮ ಭೋಜನಕೂಟಗಳಿಗೆ ಎಳೆಯಲು ಹಾತೊರೆಯುತ್ತಿದ್ದರು. "ಅವರೆಲ್ಲರನ್ನೂ ನಮ್ರತೆಯಿಂದ ತಿರಸ್ಕರಿಸಿಬಿಡು, ಎಲ್ಸಾ" ಎಂದವರು ಹೇಳುತ್ತಿದ್ದರು. "ಅವರಿಗೆ ನನ್ನ ಸಾಹಚರ್ಯ ಬೇಕಿಲ್ಲ. ಅವರಿಗೆ ನಾನು ಮೇಜಿನ ಮೇಲಿಡುವ ಅಲಂಕಾರವ ಸ್ತುವಿನಂತೆ ಆಕರ್ಷಣ ಕೇಂದ್ರವಾಗಬೇಕಾಗಿದೆ."

ಅವರಿಗೆ ಬರುತ್ತಿದ್ದ ಪತ್ರಗಳು ಎಂದಿನಂತೆಯೇ ಇದ್ದುವು. ಅವರಿಗೆ ಬರುತ್ತಿದ್ದ ಉಡುಗೊರೆಗಳೂ ಅಷ್ಟೇ. ಅವುಗಳಲ್ಲನೇಕವು ಸಣ್ಣ ಪುಟ್ಟವಾಗಿರುತ್ತಿದ್ದುವು—ಶಾಲಾಬಾಲಕನೊಬ್ಬ ತಾನೇ ಕೊರೆದಿದ್ದ ಪ್ರಾಣಿಯನ್ನು ಕಳುಹಿಸಿದ್ದ; ನಿರುದ್ಯೋಗಿಯೊಬ್ಬ ಸಿಗಾರೊಂದನ್ನು ಕಳುಹಿಸಿದ್ದ. ಈ ಸಣ್ಣಪುಟ್ಟ ಉಡುಗೊರೆಗಳು ಅವರಿಗೆ ಆನಂದವನ್ನುಂಟುಮಾಡಿದ್ದವಾದರೆ, ಕೆಲವು ಅಮೂಲ್ಯ ವಸ್ತುಗಳನ್ನು ಅವರು

ಹಿಂತಿರುಗಿಸಬೇಕಾಗುತ್ತಿತ್ತು. ಒಬ್ಬ ಧನಿಕ ಕೈಗಾರಿಕೋದ್ಯಮಿ ೩೦ ಸಾವಿರ ಡಾಲರ್ (ಸುಮಾರು ಒಂದೂವರೆ ಲಕ್ಷ ರೂಪಾಯಿ) ಬೆಲೆ ಬಾಳುವ ಪಿಟೀಲೊಂದನ್ನು ಕಳುಹಿಸಿದಾಗ ಅವರು ವಿನಮ್ರ ಚೀಟಿಯೊಡನೆ ಅದನ್ನು ಹಿಂದಕ್ಕೆ ಕಳುಹಿಸಿದ್ದರು: "ಈ ಅಮೂಲ್ಯ ವಾದ್ಯವನ್ನು ನಿಜವಾದ ಕಲೆಗಾರ ನುಡಿಸಬೇಕು. ದಯವಿಟ್ಟು ನನ್ನನ್ನು ಕ್ಷಮಿಸಿರಿ—ನನ್ನ ಹಳೆಯ ಪಿಟೀಲು ನನಗೆ ಆತ್ಮೀಯವಾಗಿದೆ."

ಜರ್ಮನಿಯಿಂದ ಶುಭಸುದ್ದಿಯೇನೂ ಬಂದಿರಲಿಲ್ಲ. ಆಡಾಲ್ಫ್ ಹಿಟ್ಲರನನ್ನು ಜರ್ಮನಿಯ ಮುಖ್ಯಾಧಿಕಾರಿಯಾಗಿ ನೇಮಿಸಿದ್ದುದರಿಂದ ಅವನೀಗ ಅತ್ಯಂತ ಪ್ರಭಾವಶಾಲಿಯಾಗಿದ್ದನು. ಅವನ ಮುತ್ತಿಗೆ ದಳದವರು ನಿರ್ಭೀತರಾಗಿಯೂ, ನಿಷ್ಕರುಣೆಯಿಂದಲೂ ವರ್ತಿಸತೊಡಗಿದರು. ಅವರ ಸಹಾಯ ಸಹಕಾರದಿಂದ ಮುಂದಿನ ಚುನಾವಣೆಯಲ್ಲಿ ಗೆಲ್ಲಲು ಹಿಟ್ಲರ್‌ಗೆ ಸುಲಭವಾಯಿತು.

ಹಿಟ್ಲರ್ ೧೯೩೩ರ ಮಾರ್ಚ್‌ನಲ್ಲಿ ಜರ್ಮನಿಯ ನಿರಂಕುಶಾಧಿಕಾರಿಯಾದನು. ಕ್ಯಾಲಿಫೋರ್ನಿಯಾದಿಂದ ಬರ್ಲಿನ್‌ಗೆ ಹಿಂತಿರುಗುವುದರಲ್ಲಿದ್ದ ಐನ್‌ಸ್ಟೈನ್ ಇದನ್ನು ತಿಳಿದು ಜರ್ಮನಿಯೊಡನೆ ತಮ್ಮ ಎಲ್ಲ ಸಂಬಂಧವನ್ನೂ ಕಡಿದುಹಾಕುವುದಾಗಿ ನಿರ್ಧರಿಸಿದರು.

ಪಶ್ಚಿಮ ದಿಕ್ಕಿಗೆ ಹೊರಟಿದ್ದ ರೈಲು ಅದರ ಪ್ರಯಾಣದ ಗಮ್ಯಸ್ಥಾನವನ್ನು ಸಮೀಪಿಸುತ್ತಿದ್ದಾಗ ಐನ್‌ಸ್ಟೈನ್ ತಮ್ಮ ಗಾಡಿಯಲ್ಲಿ ಒಬ್ಬರೇ ಕುಳಿತು ದೂರದಲ್ಲಿ ಆಕಾಶದ ಹಿನ್ನೆಲೆಯಲ್ಲಿ ಮಸುಕುಮಸುಕಾಗಿ ಎದ್ದು ಕಾಣುತ್ತಿದ್ದ ನ್ಯೂಯಾರ್ಕ್ ನಗರವನ್ನು ಈಕ್ಷಿಸತೊಡಗಿದರು. ಮೆಲ್ಲನೆ ಬಾಗಿಲು ತೆಗೆದು ಎಲ್ಸಾ ಇಣಿಕಿ ನೋಡಿದರು. ಉದ್ವೇಗದ ಧ್ವನಿಯಲ್ಲಿ, "ಆಲ್ಬರ್ಟ್ ನ್ಯೂಯಾರ್ಕಿನ ಜರ್ಮನ್ ಕಾನ್ಸಲ್ ನಿಮ್ಮೊಡನೆ ಮಾತನಾಡಲು ನೆವಾರ್ಕ್‌ನಲ್ಲಿ ರೈಲು ಹತ್ತಿದರು. ಇಗೋ, ಅವರು ಇಲ್ಲಿದ್ದಾರೆ," ಎಂದರು. ಭೇಟಿಕಾರರಿಗೆ ದಾರಿ ಮಾಡಿಕೊಡಲು ಅವರು ಮೆಟ್ಟಲಿಳಿದು, ಅವರಿಬ್ಬರನ್ನು ಮಾತ್ರವೇ ಒಟ್ಟಿಗೆ ಬಿಡಲಿಷ್ಟವಿಲ್ಲವೋ ಎಂಬಂತೆ, ನಿಧಾನವಾಗಿ ಬಾಗಿಲನ್ನು ಮುಚ್ಚಿದರು.

"ಓಹ್! ಡಾ। ಷ್ವಾರ್ಟ್ಸ್" ಎಂದರು ಐನ್‌ಸ್ಟೈನ್. "ನ್ಯೂಯಾರ್ಕ್‌ನಲ್ಲಿ ನೀವು ಜರ್ಮನ್ ಸರ್ಕಾರದ ಪ್ರತಿನಿಧಿಯಾಗಿದ್ದೀರೆಂಬುದು ನಿಜ. ಆದರೆ ಬಹಳ ಕಾಲದಿಂದಲೂ ನೀವು ನನ್ನ ವೈಯಕ್ತಿಕ ಮಿತ್ರರೆಂಬುದೂ ಅಷ್ಟೇ ನಿಜ. ಜರ್ಮನಿಯಲ್ಲಿನ ಪರಿಸ್ಥಿತಿಯೇನೆಂಬುದನ್ನು ಮುಚ್ಚುಮರೆಯಿಲ್ಲದೆ ನನಗೆ ತಿಳಿಸಿರಿ." ಅವರ ಧ್ವನಿ ಗಂಭೀರವಾಯಿತು. "ಜರ್ಮನಿಗೆ ಹಿಂತಿರುಗುವುದರಿಂದ ಅಪಾಯವುಂಟೆಂದು ನನಗೆ ತಿಳಿದಿದೆ."

"ನನ್ನ ಪ್ರಿಯ ಪ್ರಾಧ್ಯಾಪಕರೇ", ಕಾನ್ಸಲ್ ಬಿಗುಮಾನದಿಂದ ಐನ್‌ಸ್ಟೈನರ ಕಣ್ಣನ್ನು ತಪ್ಪಿಸಿ ಉತ್ತರಿಸಿದರು. "ನೀವು ನಿಮ್ಮ ತಾಯ್ನಾಡಿಗೆ ಹಿಂದಿರುಗಿ ಹೋಗಿರೆಂದು ಪ್ರೇರಿಸುವ ಸಲುವಾಗಿಯೇ ನಾನು ಬಂದಿದ್ದೇನೆ." ಅವರು ತಮ್ಮ ಗಂಟಲನ್ನು ಸರಿಮಾಡಿಕೊಂಡು ಕಂಪಿಸುತ್ತ ಮುಂದುವರಿಸಿದರು. "ಯಾರು ಸರಿಯಾಗಿ ನಡೆದುಕೊಂಡಿರುವರೋ ಅವರು ಜರ್ಮನಿಯಲ್ಲಿ ಅಂಜಬೇಕಿಲ್ಲ. ಅವರನ್ನು ನ್ಯಾಯವಾದ ರೀತಿಯಲ್ಲೇ ನೋಡಿಕೊಳ್ಳಲಾಗುವುದು. ನೀವು ಹಿಂತಿರುಗಿರೆಂದು ನಾನು ಒತ್ತಾಯಮಾಡುತ್ತೇನೆ."

ಐನ್‌ಸ್ಟೈನ್ ಎದ್ದು ನಿಂತರು. "ಜರ್ಮನ್ ಸರ್ಕಾರದ ಚಟುವಟಿಕೆಗಳಿಂದ ನನಗೆ ಬಹಳ ಖೇದವುಂಟಾಗಿದೆ. ಅಂತಹ ದೌಷ್ಟ್ಯ ದುಷ್ಕೃತ್ಯಗಳು ಜರಗುತ್ತಿರುವಾಗ ನಾನು ಜರ್ಮನಿಯಲ್ಲಿ ಎಂದಿಗೂ ಕಾಲಿಡಲಾರೆನೆಂದು ನಿಮಗೆ ತಿಳಿಸಬಯಸುತ್ತೇನೆ."

ಡಾ। ಷ್ವಾರ್ಟ್ಸ್ ಕೂಡ ಎದ್ದು ನಿಂತಿದ್ದರು. ಇದೇ ನಿಮ್ಮ ಕೊನೆಯ ತೀರ್ಮಾನವೆ? ಅದನ್ನು ಪುನರಾಲೋಚಿಸಲು ಸಾಧ್ಯವಿಲ್ಲವೇ?

"ಅದೇ ನನ್ನ ಕೊನೆಯ ನಿರ್ಧಾರ" ಐನ್‌ಸ್ಟೈನ್ ಖಚಿತವೆಂಬಂತೆ ತಲೆಯಾಡಿಸಿದರು.

ಡಾ। ಷ್ವಾರ್ಟ್ಸ್ ಐನ್‌ಸ್ಟೈನರನ್ನು ಅರ್ಥಗರ್ಭಿತವಾಗಿ ದುರುಗುಟ್ಟಿ ನೋಡುತ್ತಿದ್ದ ಒಂದು ಕ್ಷಣಕಾಲ ಮೌನವಾವರಿಸಿತ್ತು. ಆ ಬಳಿಕ ಅವರೆಂದರು, "ಜರ್ಮನ್ ಕಾನ್ಸಲ್ ಆಗಿ ನಾನು ನನ್ನ ನಿಯಮ

ಬದ್ಧ ಕರ್ತವ್ಯವನ್ನು ನಡೆಯಿದೆನಾದರೂ ನೀವು ಹಿಂತಿರುಗುವಂತೆ ಪ್ರೇರಿಸಲು ಸಾಧ್ಯವಾಗಲಿಲ್ಲ:" ತಕ್ಷಣವೇ ಅವರು ನಕ್ಕರು. "ಈಗ ಖಾಸಗಿ ವ್ಯಕ್ತಿಯಂತೆ, ನಿಮ್ಮ ಮಿತ್ರನಾಗಿ ಹೇಳುತ್ತೇನೆ—ನೀವು ಒಳ್ಳೆಯ ಬುದ್ಧಿವಂತಿಕೆಯ ನಿರ್ಧಾರವನ್ನೆ ಮಾಡಿದಿರಿ. ನೀವು ದಿಂದಿರುಗುವುದರಿಂದ ಕ್ಷೇಮವಿರಲಾರದು" ಮಿತ್ರನ ಕೈಕುಲುಕಲು ಅವರು ಕೈ ಮುಂದೂಡಿದರು.

ನ್ಯೂಯಾರ್ಕಿನಲ್ಲಿ ಐನ್‌ಸ್ಟೈನರನ್ನು ಜನರ ಗುಂಪು ಹರ್ಷೋದ್ಗಾರದಿಂದ ಸ್ವಾಗತಿಸಿತಾದರೂ ಈಗ ಐನ್‌ಸ್ಟೈನ್ ಅಷ್ಟು ಸುಲಭವಾಗಿ ಮಂದಹಾಸ ಬೀರುತ್ತಿರಲಿಲ್ಲ. ಅವರು ಜರ್ಮನಿಯಲ್ಲಿ ಜನ್ಮ ತಳೆದಿದ್ದರು. ಅಲ್ಲಿ ನಡೆಯುತ್ತಿದ್ದ ದುರ್ಘಟನೆಗಳಿಂದ ಇವರಿಗೆ ಬಹಳ ವ್ಯಥೆಯಾಗುತ್ತಿತ್ತು. ಅದರಲ್ಲೂ ಯೆಹೂದ್ಯರನ್ನು ಪ್ರತ್ಯೇಕಿಸಿ ವಿಚಿತ್ರ ಕ್ರೂರಹಿಂಸೆಗೊಳಪಡಿಸುತ್ತಿದ್ದುದು ಅವರಲ್ಲಿ ಮನೋವೇದನೆಯನ್ನುಂಟುಮಾಡಿತ್ತು.

ಇನ್ನು ಕೆಲವೇ ದಿನಗಳಲ್ಲಿ ತಾವು ಬೆಲ್ಜಿಯಂಗೆ ನೌಕಾಯಾನ ಮಾಡುವುದಾಗಿ ಅವರು ಪ್ರಕಟಿಸಿದರು. ಈ ಮಧ್ಯದಲ್ಲಿ, ಜರ್ಮನಿಯಲ್ಲಿ ತೊಂದರೆಗೀಡಾದವರ ಸಹಾಯಾರ್ಥವಾಗಿ ನಡೆದ ಸಾರ್ವಜನಿಕ ಪ್ರದರ್ಶನಗಳಲ್ಲಿ ಅವರು ಸಾಧ್ಯವಿದ್ದಷ್ಟೂ ಭಾಗವಹಿಸಿದ್ದರು. ಗಣ್ಯ ಶೀವಿಯ, ಗಂಭೀರಮುದ್ರೆಯ ಈ ವಿಜ್ಞಾನಿಯನ್ನು ನೋಡಲು ಜನ ಕಿಕ್ಕಿರಿದು ತುಂಬುತ್ತಿದ್ದರು. ಐನ್‌ಸ್ಟೈನ್ ಅವರಿಗೆ ಮಾನವನ ಮಹಾ ಘನತೆಯ ಬಗೆಗೂ, ಶಾಂತಿಯಲ್ಲಿ ತಮಗಿರುವ ಅಚಲ ನಂಬಿಕೆಯನ್ನೂ ಕುರಿತು ಹೇಳುತ್ತಿದ್ದರು.

ತಮ್ಮ ವಿರುದ್ಧ ಸಾರ್ವಜನಿಕ ಹೇಳಿಕೆಯಿತ್ತುದಕ್ಕೆ ನಾಟ್ಸಿ ಸರಕಾರವು ಕುಪಿತಗೊಂಡಿರುವುದೆಂದು ಯೂರೋಪಿಗೆ ತೆರಳುತ್ತಿದ್ದ ಐನ್‌ಸ್ಟೈನ್ ದಂಪತಿಗಳಿಗೆ ಹಡಗಿನಲ್ಲಿ ತಿಳಿಸಲಾಯಿತು. ಅವರ ಹೇಬರ್‌ಲ್ಯಾಂಡ್ ಸ್ಟ್ರಾಸೆಯ ಮನೆಗೆ ಕಾರ್ಯಭಾರಿಗಳು ಬಲಾತ್ಕಾರದಿಂದ ಪ್ರವೇಶಿಸಿ ಅವರ ಆಸ್ತಿಪಾಸ್ತಿಗಳನ್ನು ನಾಶಗೊಳಿಸಿದ್ದರು. ಬ್ಯಾಂಕಿನಲ್ಲಿದ್ದ ಅವರ ಹಣವನ್ನು ಸರ್ಕಾರ ವಶಪಡಿಸಿಕೊಂಡಿತು.

ಐನ್‌ಸ್ಟೈನರು ಅಮೂಲ್ಯ ವಸ್ತುಗಳನ್ನು ಶೇಖರಿಸಿರಲಿಲ್ಲ. ಹಣಕ್ಕಾಗಿ ಅವರು ಹೆಚ್ಚಿಗೆ ಗಮನವಿತ್ತವರಲ್ಲ. ಬ್ಯಾಂಕಿನಲ್ಲಿದ್ದ ಅಲ್ಪಸ್ವಲ್ಪ ಗಳಿಕೆಯು ಎಲ್ಸಾರವರು ಕೌಶಲದಿಂದ ವ್ಯವಸ್ಥೆಮಾಡಿ ಉಳಿಸಿದ್ದುದಾಗಿತ್ತು. ಅವರು ಮನೆಮಠವಿಲ್ಲದೆ, ಒಂದು ಪೈಸವೂ ಇಲ್ಲದೆ ಬೆಲ್ಜಿಯಂವನ್ನು ತಲುಪಿದರು.

ಐನ್‌ಸ್ಟೈನ್ ದಂಪತಿಗಳು ಸಮುದ್ರತೀರದಲ್ಲಿದ್ದ ಹಳ್ಳಿಯೊಂದರಲ್ಲಿ ಸಣ್ಣ ಮನೆಯೊಂದನ್ನು ಮಾಡಿಕೊಂಡು ವಾಸಿಸತೊಡಗಿದರು. ಐನ್‌ಸ್ಟೈನ್ ತಮಗೆ ಯಾವ ಅಡಚಣೆಯೂ ಆಗದಿದ್ದವರಂತೆ ತಕ್ಷಣದಲ್ಲಿಯೇ ತಮ್ಮ ಕಾರ್ಯದಲ್ಲಿ ಉದ್ಯುಕ್ತರಾದರು. ಮೊದಲನೆಯದಾಗಿ ಅವರು ಪ್ರಷ್ಯಾದ ವಿಜ್ಞಾನಗಳ ಅಕಾಡೆಮಿಗೆ ರಾಜಿನಾಮೆ ಪತ್ರ ಸಲ್ಲಿಸಿದರು. ತಾವೆಂದೂ ಪುನಃ ಅಲ್ಲಿ ಕೆಲಸ ಮಾಡುವುದಿಲ್ಲವೆಂದು ಅವರಿಗೆ ತಿಳಿದಿತ್ತು. ಅಲ್ಲದೆ. ತಮ್ಮ ಗೆಳೆಯ ಮ್ಯಾಕ್ಸ್ ಪ್ಲಾಂಕ್‌ರವರಿಗೆ ತಮ್ಮನ್ನು ಕೆಲಸದಿಂದ ತೆಗೆದುಹಾಕಬೇಕಾದಂತಹ ಇಷ್ಟವಿಲ್ಲದ ಕೆಲಸದಿಂದ ತಪ್ಪಿಸಬೇಕೆಂದು ಅವರು ಬಯಸಿದರು.

ಜರ್ಮನಿಯಲ್ಲಿ ಈಗ ದೊಡ್ಡ ದೊಂಬಿಯೇ ಎದ್ದಿತು. ಬರ್ಲಿನ್‌ಗೆ ಅವರು ಹಿಂತಿರುಗಿದ್ದರೆ ಅವರ ಜೀವಕ್ಕೆ ಬೆಲೆಯೇನು ದೊರಕುತ್ತಿರಲಿಲ್ಲವೆಂದು ತಿಳಿದೂ ಜನ ಅವರು ಅಕಾಡೆಮಿಯನ್ನು ತ್ಯಜಿಸಿದುದಕ್ಕಾಗಿ ದೇಶದ್ರೋಹಿಯೆಂದು ಅವರನ್ನು ಕರೆದರು. ಜರ್ಮನ್ ವೃತ್ತಪತ್ರಿಕೆಗಳು ಅವರನ್ನು ಸುಳ್ಳು ಸುದ್ದಿ ಹರಡುತ್ತಿರುವರೆಂದೂ, ದೇಶದ ಶತ್ರುವೆಂದೂ ದೂಷಿಸಿದುವಲ್ಲದೆ ಅವರ ಚಿತ್ರವನ್ನು ಪ್ರಕಟಿಸಿ ಅದಕ್ಕೆ "ಇನ್ನೂ ನೇಣುಹಾಕಿಲ್ಲ!" ಎಂಬ ಶಿರೋನಾಮೆಯಿತ್ತಿದ್ದರು.

ಎಲ್ಸ್ ಹೆದರಿ ಬಿಟ್ಟಿದ್ದರು. ನಾಟ್ಸಿಗಳು ನಿಷ್ಕರುಣಿಗಳೆಂದು ಆಕೆ ತಿಳಿದಿದ್ದರು. ಕೇವಲ ಯೆಹೂದ್ಯರಾಗಿದ್ದರೆಂಬ ಕಾರಣದಿಂದಲೇ ಐನ್‌ಸ್ಟೈನರ ಅನೇಕ ಮಿತ್ರರನ್ನು ಜರ್ಮನಿಯಲ್ಲಿ ಮರಣಕ್ಕೀಡು ಮಾಡಿದ್ದರು. ಮತ್ತೆ ನಾಟ್ಸಿಗಳಿಗೆ ಐನ್‌ಸ್ಟೈನರ ಬಗೆಗೆ ವಿಶೇಷ ದ್ವೇಷವೂ ಇತ್ತು.

ಆದರೆ ಐನ್‌ಸ್ಟೈನರು ಮಾತ್ರ ಯಾವ ಕಳವಳಕ್ಕೂ ಈಡಾಗದೆ ತಮ್ಮ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಿದ್ದರು. ಕೆಲವು ಸಲ ಗಾಳಿಸಂಚಾರಕ್ಕಾಗಿ ಸಮುದ್ರತೀರಗಳಲ್ಲಿ ಒಬ್ಬಂಟಿಗರಾಗಿ ಆಲೋಚನಾಮಗ್ನರಾಗಿ ಹೋಗುತ್ತಿದ್ದರು. ತಮ್ಮ ಹಳೆಯ ಹಿತಕರ ಸ್ವೆಟ್ಟರನ್ನು ಧರಿಸಿ ಕಾಲೆಳೆದು ಹಿಂತಿರುಗಿ ಬರುವ ಚಿರಪರಿಚಿತ ವ್ಯಕ್ತಿಯನ್ನು ಕಾಣುವವರೆಗೂ ಎಲ್ಲಾರಿಗೆ ಜೀವದಲ್ಲಿ ಜೀವವಿರುತ್ತಿರಲಿಲ್ಲ.

ಬೆಲ್ಜಿಯಂನ ರಾಜ ಮತ್ತು ರಾಣಿಯರು ಐನ್‌ಸ್ಟೈನರ ಪರಮಮಿತ್ರರಾಗಿದ್ದು ಅವರನ್ನು ತಮ್ಮ ನಾಡಿನಲ್ಲಿ ಇಟ್ಟುಕೊಳ್ಳುವ ಸನ್ನಿವೇಶ ಒದಗಿದ್ದಕ್ಕಾಗಿ ಆನಂದಿತರಾಗಿದ್ದರು. ಹಿಂದೆ ಒಟ್ಟಿಗೆ ಅವರು ಕೆಲವು ಮನೋಹರ ವಿನೋದಕರ ಪ್ರವಾಸಗಳನ್ನು ಕೈಕೊಂಡಿದ್ದರು. ತಮ್ಮ ಹಳ್ಳಿಯ ಮನೆಯಲ್ಲಿ ಸಂಗೀತಗೋಷ್ಠಿ ಏರ್ಪಡಿಸಿದ್ದ ಒಂದು ಸಂಜೆ ಐನ್‌ಸ್ಟೈನರು ಅವರ ಆಹ್ವಾನವನ್ನು ಮನ್ನಿಸಿ ಬಂದುದನ್ನು ಹರ್ಷದಿಂದ ನೆನೆಯುತ್ತಿದ್ದರು. ಪಿಟೀಲನ್ನು ಕಂಕುಳಲ್ಲಿ ಇರುಕಿಕೊಂಡೇ ಗಾಳಿ ಧೂಳುಗಳಲ್ಲಿ ಅವರು ದಾರಿಯುದ್ದಕ್ಕೂ ನಡೆದೇ ಬಂದು ಅವರ ಮುಂದೆ ಗೋಚರವಾಗಿದ್ದರು. ಆದರೆ ಇಷ್ಟೆಲ್ಲ ಹೊತ್ತೂ ರೈಲು ನಿಲ್ದಾಣದಲ್ಲಿ ಅವರಿಗಾಗಿ ಪೋಷಾಕಿನ ಇಬ್ಬರು ಸೇವಕರೂ, ರಾಜರ ಮೋಟಾರುಬಂಡಿಯೂ ಕಾದು ನಿಂತಿದ್ದುವು. ಪಾಪ, ಅವರು ಐನ್‌ಸ್ಟೈನರಿಗಾಗಿ ಪ್ರಥಮ ದರ್ಜೆಯ ತರಗತಿಯಲ್ಲಿ ಕಾಯುತ್ತಿದ್ದರು. ಆದರೆ ಐನ್‌ಸ್ಟೈನ್ ತಮ್ಮ ಪ್ರಿಯವಾದ ಮೂರನೆಯ ದರ್ಜೆಯ ತರಗತಿಯಲ್ಲಿ ಪ್ರಯಾಣ ಮಾಡಿ ಬಂದಿದ್ದರು.

ಆದರೀಗ ದೊರೆ ಮತ್ತು ರಾಣಿಯವರು ಚಿಂತೆಗೊಳಗಾಗಿದ್ದರು. ಐನಸ್ಟೈನರನ್ನು ಹಿಡಿಯಲು ನಾಟ್ಸಿಗಳು ಪ್ರಯತ್ನಿಸುವರೆಂದು ಅವರಿಗೆ ತಿಳಿದಿತ್ತು. ಅಲ್ಲದೆ ಬೆಲ್ಜಿಯಂ ಜರ್ಮನಿಯ ಪಕ್ಕದಲ್ಲಿಯೇ ಇತ್ತು. ಈ ಕೇಡಿನ ನೆರೆಯವರಿಂದ ಐನ್‌ಸ್ಟೈನರನ್ನು ರಕ್ಷಿಸಿ ಕಾಪಾಡುವುದು ಅವರ ಹೊಣೆಗಾರಿಕೆಯಾಗಿತ್ತು. ಐನ್‌ಸ್ಟೈನರಿಗೆ ಅಸಹನೀಯವೆನಿಸಿದರೂ ರಾಜದಂಪತಿಗಳು ಅವರ ಮನೆಯ ಸುತ್ತ ಯಾವಾಗಲೂ ಪಹರೆ

ಯವರನ್ನಿಡಿಸಿ ಅವರು ವಿಹಾರ ಹೊರಟಕಾಲದಲ್ಲಿ ರಕ್ಷಣೆಗಾಗಿ ಅವರನ್ನು ಹಿಂಬಾಲಿಸಿಹೋಗಲು ಪತ್ತೇದಾರರನ್ನು ವ್ಯವಸ್ಥೆ ಮಾಡಿದರು.

ಕಾವುಗಾರರು ದಕ್ಷರಾಗಿದ್ದರು. ಪ್ರಾಗ್‌ನಿಂದ ಬೆಲ್ಜಿಯಂಗೆ ಬಂದಿದ್ದ ಅವರ ಸ್ನೇಹಿತ ಡಾ॥ ಫಿಲಿಪ್ ಫ್ರಾಂಕ್ ಐನ್‌ಸ್ಟೈನರನ್ನು ಕಾಣಲು ನಿರ್ಧರಿಸಿದರು. ಅವರ ಮನೆ ಎಲ್ಲಿರುವುದೆಂದು ತಿಳಿದಿದ್ದ ಡಾ॥ ಫ್ರಾಂಕ್ ಅಲ್ಲಿಗೆ ನಡೆದೇ ಹೊರಟರು. ಆ ಸಣ್ಣ ಮನೆಯನ್ನು ಸಮೀಪಿಸುತ್ತಿದ್ದಂತೆಯೇ ಅವರು ಹಿಂದಿನಿಂದ ಹಿಡಿಯಲ್ಪಟ್ಟರು. ಅಲ್ಲಿ ಸಣ್ಣ ಹೋರಾಟನಡೆಯಿತು. ಒಬ್ಬ ಡಾ॥ ಫ್ರಾಂಕರ ಕೈಗಳನ್ನು ಹಿಂದಕ್ಕಿಡಿದು, ಮತ್ತೊಬ್ಬ ಯಾವುದಾದರೂ ಆಯುಧವಿರುವುದೇನೋ ಎಂದು ಅವರ ಜೇಬುಗಳನ್ನು ಶೋಧಿಸಿದ. ಮನೆಯ ಮುಂಭಾಗದಲ್ಲಿ ತೂಗುಕುರ್ಚಿಯ ಮೇಲೆ ಕುಳಿತಿದ್ದ ಎಲ್ಸಾರ ಮುಂದೆ ಅವರನ್ನು ಹಾಗೆಯೇ ಭದ್ರವಾಗಿ ಹಿಡಿದುಕೊಂಡು ನೂಕಿಕೊಂಡು ಬಂದರು. ಪೇಲವವಾಗಿ ಕಂಪಿಸುತ್ತ ಎಲ್ಸಾ ಥಟ್ಟನೆ ಎದ್ದುನಿಂತರು.

"ಏನು ವಿಷಯ?.......ಯಾರೀತ?........ಏನು ನಡೆಯಿತು?"

"ಏನೂ ಚಿಂತಿಸಬೇಡಿರಮ್ಮ. ಅವನನ್ನು ಸರಿಯಾಗಿ ಹಿಡಿದಿದ್ದೇವೆ. ಇವನು ಹೊಂಚುಹಾಕುತ್ತಿದ್ದ. ನಾವು ಗುಟ್ಟಾಗಿ ಇಲ್ಲಿ ಇವನನ್ನು ಹಿಡಿದೆವು."

ಎಲ್ಸಾ ದಿಟ್ಟಿಸಿ ನೋಡಿದರು. "ಆದರೆ....ಆದರೆ ಇವರು ನಮ್ಮ ಪರಮಮಿತ್ರ ಡಾ॥ ಫ್ರಾಂಕ್! ಇವರು ಸಂಚುಕಾರರಲ್ಲ!"

ಕಾವುಗಾರರು ಕೂಡಲೇ ಕೈಇಳಿಸಿ ಸುಕ್ಕಾಗಿಹೋಗಿದ್ದ ಪ್ರೊಫೆಸರರನ್ನು ಕುರಿಗಳಂತೆ ಬೆಪ್ಪಾಗಿ ನೋಡಿದರು. "ಓಹೊ! ಕ್ಷಮಿಸಿರಿ, ದಯವಿಟ್ಟು...ನಮಗೆ ಗೊತ್ತಿರಲಿಲ್ಲ...ನಾವು ಜಾಗರೂಕತೆಯಿಂದಿರಬೇಕಾಗಿದೆ....ಕ್ಷಮಿಸಿರಿ."

ತಮ್ಮ ಕೋಟನ್ನು ಸರಿಪಡಿಸಿಕೊಳ್ಳುತ್ತ ಡಾ॥ ಫ್ರಾಂಕ್ ನಕ್ಕರು. ತಮ್ಮ ಸ್ನೇಹಿತನನ್ನು ಇಷ್ಟು ಚೆನ್ನಾಗಿ ರಕ್ಷಿಸುತ್ತಿರುವುದಕ್ಕಾಗಿ ಅವರಿಗೆ ಆನಂದವೇ ಆಯಿತು.

ಜರ್ಮನಿಗೆ ಸಮೀಪವಿರುವ ಯಾವ ನಾಡಿನಲ್ಲಿಯೂ

ಐನ್‌ಸ್ಟೈನರಿರುವುದು ಸಾಧುವಲ್ಲವೆಂದು ಚೆನ್ನಾಗಿ ತಿಳಿಯಿತು. ಯಾರಾದರೊಬ್ಬ ಕೊಲೆಪಾತಕ ನಾಟ್ಸಿಗಳ ಶತ್ರುವನ್ನು "ಪೂರೈಸಿದ" ಕೀರ್ತಿಗೆ ಹವಣಿಸಿ ಎಲ್ಲೆಯನ್ನು ಹಾದು ಬರುವುದು ಎಂದೂ ಸಾಧ್ಯವಿತ್ತು.

ಐನ್‌ಸ್ಟೈನರಿಗೆ ಆಶ್ರಯ ನೀಡುವ ಆಹ್ವಾನಗಳು ಅನೇಕ ರಾಜ್ಯಗಳಿಂದ ಬಂದವು. ಅವರು ತಮ್ಮ ಹೊಸ ಮನೆಯಲ್ಲಿ ಪ್ರಶಾಂತಚಿತ್ತರಾಗಿ ತಮ್ಮ ಕೆಲಸವನ್ನು ಮುಂದುವರಿಸಬಹುದಿತ್ತು. ಪ್ಯಾರಿಸ್ಸಿನ ಸಾರ್ಬಾನ್, ಮೆಡ್ರಿಡ್ ಮತ್ತು ಜೆರೂಸೆಲಂ ವಿಶ್ವವಿದ್ಯಾನಿಲಯಗಳು ಅವರನ್ನು ಆಹ್ವಾನಿಸಿದ್ದವು. ಆದರೆ ತಾವೆಲ್ಲಿಗೆ ಹೋಗುವೆನೆಂಬುದು ಐನ್‌ಸ್ಟೈನರಿಗೆ ಮೊದಲೇ ತಿಳಿದಿತ್ತು.

ನ್ಯೂಜೆರ್ಸಿಯ ಪ್ರಿನ್ಸ್‌ಟನ್‌ನಲ್ಲಿ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್‌ಡ್ ಸ್ಟಡಿ (ಪ್ರೌಢವ್ಯಾಸಂಗ ಸಂಸ್ಥೆ) ಎಂಬ ಸಂಸ್ಥೆಯನ್ನು ವ್ಯವಸ್ಥೆಗೊಳಿಸಲಾಗುತ್ತಿತ್ತು. ವಿಜ್ಞಾನಿಗಳು ನಿರಾತಂಕವಾಗಿ ಆಲೋಚಿಸಲು ಮತ್ತು ಕಾರ್ಯದಲ್ಲಿ ತೊಡಗಲು ಆಶ್ರಯಸ್ಥಾನವಾಗಿ ಧನಿಕ ಸಂಸಾರವೊಂದರ ದಾನಗಳಿಂದ ಈ ಅಸಾಧಾರಣ ಸಂಸ್ಥೆಯನ್ನು ಸ್ಥಾಪಿಸಲಾಗುತ್ತಿತ್ತು. ಕೆಲವು ಕಾಲದ ಹಿಂದೆ ಐನ್‌ಸ್ಟೈನ್ ತಮ್ಮ ವೇಳೆಯಲ್ಲಿ ಸ್ವಲ್ಪ ಕಾಲವನ್ನು ಪ್ರಿನ್ಸ್‌ಟನ್ನಿನಲ್ಲಿಯೂ ಕಳೆಯುವುದಾಗಿ ಒಪ್ಪಿಕೊಂಡಿದ್ದು ಬರ್ಲಿನ್ ಮತ್ತು ಪ್ರಿನ್ಸ್‌ಟನ್‌ಗಳೆರಡರಲ್ಲೂ ತಮ್ಮ ಕಾರ್ಯವನ್ನು ಹಂಚಿಕೊಳ್ಳುವ ಯೋಜನೆ ಮಾಡಿದ್ದರು. ಆದರೀಗ ಸಂಪೂರ್ಣವಾಗಿ ಅಮೇರಿಕಕ್ಕೆ ವಲಸೆ ಹೋಗುವ ನಿರ್ಧಾರಮಾಡಿದರು.

ಐನ್‌ಸ್ಟೈನರು ತಮ್ಮ ಇನ್‌ಸ್ಟಿಟ್ಯೂಟಿನ ಪೂರ್ಣಕಾಲದ ಸದಸ್ಯರಾಗಲು ಒಪ್ಪಿದ್ದನ್ನು ಕೇಳಿ ನ್ಯಾಸ ನಿರ್ವಾಹಕ ಮಂಡಳಿಯವರು ಹರ್ಷಿತರಾದರು. ತಮ್ಮ ನಿಯಮಗಳೇನು ಎಂದು ಅವರನ್ನು ಕೇಳಿದಾಗ ಐನ್‌ಸ್ಟೈನ್ "ಬರ್ಲಿನ್ನಿನ ಪ್ರಷ್ಯ ಅಕಾಡೆಮಿಯಲ್ಲಿ ಕೊಡುತ್ತಿದ್ದ ವೇತನ ದೊರಕಿದರೆ ಅದು ಸಮ್ಮತವೆಂದು ತೋರುತ್ತದೆ" ಎಂದಿದ್ದರು. ಆದರೆ ಆ ವೇತನವೆಷ್ಟೆಂದು ತಿಳಿದಾಗ ಮಂಡಳಿಯು

ಇಂತಹ ಗಣ್ಯವ್ಯಕ್ತಿಗೆ ಅಷ್ಟು ಅಲ್ಪಸಂಬಳ ಯುಕ್ತವಲ್ಲವೆಂದು ಬರೆದು ಹೆಚ್ಚಿನ ವೇತನವನ್ನು ಸೂಚಿಸಿತು. ಐನ್‌ಸ್ಟೈನರಿಗೆ ನಿರುತ್ಸಾಹ ವುಂಟಾಗಿ ಆವರು ನೀಡಿಕೆಯನ್ನು ತಿರಸ್ಕರಿಸಿದ್ದರು. ಐನ್‌ಸ್ಟೈನರ ಪ್ರತಿ ಭಟನೆಯಿಂದ ಕರಾರಿಗೆ ತೊಡಕುಂಟಾಗುವುದರಲ್ಲಿದ್ದಾಗ ಎಲ್ಸಾ ಮಧ್ಯಸ್ಥಿಕೆ ವಹಿಸಿ ಸಂಧಾನ ನಡೆಸಲುಬಂದರು. ಆಲ್ಬರ್ಟ್ ಐನ್‌ಸ್ಟೈನರು ಮೂರನೆಯ ವರ್ಷದ ಮಾಗಿಯಿಂದ ಅಮೇರಿಕದಲ್ಲಿ ನೆಲೆಸಿ ತಮ್ಮ ಹೊಸ ಬದುಕನ್ನು ಹೂಡುವುದೆಂದು ಇತ್ಯರ್ಥವಾಯಿತು.

ಈ ಸಲ ಐನ್‌ಸ್ಟೈನರು ಯೂರೋಪನ್ನು ಬಿಟ್ಟುಬಂದುದು ಹಿಂದಿನಂತೆ ನಿಯತಕ್ರಮದಂತಿರದೆ ಬೇರೆ ರೀತಿಯದಾಗಿತ್ತು. ಅವರಿಗಾಗಿ ವ್ಯವಸ್ಥೆಗಳನ್ನು ಅತ್ಯಂತ ಗೋಪ್ಯವಾಗಿ ಮಾಡಲಾಯಿತು. ಯಾವ ಬಗೆಯ ವಿಶೇಷ ಉಪಚಾರವನ್ನು ಬಯಸದ ಐನ್‌ಸ್ಟೈನರು ತಮ್ಮ ಜೀವಕ್ಕೆ ಅಪಾಯವಿರುವುದನ್ನರಿತು ಅವರೊಡನೆ ಸಂಪೂರ್ಣವಾಗಿ ಸಹಕರಿಸಿದರು.

ಅವರನ್ನು ಚಿಕ್ಕ ದೋಣಿಯೊಂದರಲ್ಲಿ ಕೂರಿಸಿ ಸಾಗರದ ಮಧ್ಯದಲ್ಲಿ ಕಾಯುತ್ತಿದ್ದ ನೌಕೆಯೊಂದಕ್ಕೆ ಕಳುಹಿಸಲಾಯಿತು. ಅವರು ಪ್ರಶಾಂತರಾಗಿಯೂ ವಿನೀತರಾಗಿಯೂ ಇದ್ದರು. ಕ್ಯಾಲಿಫೋರ್ನಿಯಾದಲ್ಲಿ ಉಪನ್ಯಾಸ ಕೊಡಲು ಇದು ಮತ್ತೊಂದು ಶೀಘ್ರ ಪ್ರವಾಸವೆಂಬಂತೆ ಕಲ್ಪಿಸಿಕೊಂಡು ವರ್ತಿಸತೊಡಗಿದರು. ಅವರು ಹಿಂತಿರುಗಿಯೂ ಕೂಡ ನೋಡಲಿಲ್ಲ.

ನ್ಯೂಯಾರ್ಕ್ ಬಂದರಿನಲ್ಲಿ ಜಗ್ಗುದೋಣಿಯೊಂದು ಅವರನ್ನು ಹಡಗಿನಿಂದ ಇಳಿಸಿಕೊಂಡು ಸಮುದ್ರತೀರದ ಗುಪ್ತಸ್ಥಳವೊಂದಕ್ಕೆ ಕರೆದೊಯ್ಯಿತು. ಅಲ್ಲಿ ಅವರಿಗಾಗಿ ಕಾರೊಂದು ಕಾಯುತ್ತಿತ್ತು. ಬಳಿಕ ಯಾವ ಸದ್ದು ಗಲಭೆಯೂ ಇಲ್ಲದೆ ಯಾವ ಉದ್ರೇಕವೂ ಇಲ್ಲದೆ ಐನ್‌ಸ್ಟೈನರನ್ನು ವೇಗದಿಂದ ಪ್ರಿನ್ಸ್‌ಟನ್ನಿಗೆ ಸಾಗಿಸಲಾಯಿತು. ಅವರು ತಮ್ಮ ಹೊಸನಾಡಿನಲ್ಲಿ ಹೊಸ ಗೃಹದಲ್ಲಿ ಬಂದು ಸೇರಿದರು.

೧೬. ಪ್ರಿನ್ಸ್‌ಟನ್ನಿನಲ್ಲಿ ಜೀವನ

ನ್ಯೂಜೆರ್ಸಿಯ ಪ್ರಿನ್ಸ್‌ಟನ್ ಪಟ್ಟಣದ ಮೂಲಕ ಹಾದು ಹೋಗುವ ಮುಖ್ಯ ಮಾರ್ಗವೇ ನಾಸಾ ಬೀದಿ. ಮಿಕ್ಕೆಲ್ಲ ಹಾದಿಗಳಂತಿರದೆ ಈ ರಸ್ತೆಯಲ್ಲಿ ಅಂಗಡಿಗಳು ಒಂದೇ ಮಗ್ಗುಲಿನಲ್ಲಿವೆ. ಎಂದಿನಂತೆ ಕೆಂಪು ಮುಖದ್ವಾರದ ಐದು-ಹತ್ತು ಸೆಂಟಿನ ಅಂಗಡಿಗಳು, ಕತ್ತರಿ ಯಂತ್ರ, ಕಸ ತುಂಬುವ ತೊಟ್ಟಿಗಳನ್ನು ಮುಂದಿಟ್ಟು ಕೊಂಡಿದ್ದ ಕಬ್ಬಿಣದ ಸಾಮಾನಿನ ಅಂಗಡಿ, ಅತ್ಯಂತ ಗಡಿಬಿಡಿಯ ಮಾರ್ಕೆಟ್, ಮುಖ್ಯ ಸ್ಥಳದ ಮೂಲೆಯಲ್ಲಿ ಕಲ್ಲಿನ ಸ್ತಂಭಗಳಿಂದ ರೂಪಿತವಾಗಿದ್ದ ಬ್ಯಾಂಕು ಆ ರಸ್ತೆಯ ಸಾಮಾನ್ಯ ನೋಟವಾಗಿತ್ತು. ನಾಸಾ ರಸ್ತೆಯ ಆ ಮಗ್ಗುಲಿಗಿರುವ ಅಲಂಕೃತ ಕಬ್ಬಿಣದ ಬೇಲಿ ಪ್ರಿನ್ಸ್‌ಟನ್ ವಿಶ್ವವಿದ್ಯಾನಿಲಯದ ಮೈದಾನದ ಎಲ್ಲೆಯನ್ನು ಸೂಚಿಸುತ್ತದೆ.

ಉದ್ಯಾನದಂತಿದ್ದ ಮೈದಾನ, ಬೃಹದ್ವೃಕ್ಷಗಳ ನೆರಳಿನಲ್ಲಿ ನಿಂತ ಸೊಗಸಾದ ವಿಶ್ವವಿದ್ಯಾನಿಲಯದ ಭವನಗಳು ಪ್ರಿನ್ಸ್‌ಟನ್‌ಗೆ ಒಂದು ಗಂಭೀರ ಘನತೆಯನ್ನು ನೀಡಿವೆ. ಇದು ನ್ಯೂಜೆರ್ಸಿಯ ಇತರ ಸಣ್ಣಪುಟ್ಟ ಪಟ್ಟಣಗಳಂತಲ್ಲ. ಅಷ್ಟು ದೊಡ್ಡ ಪುಸ್ತಕಗಳ ಅಂಗಡಿಗಳಿರುವ ಇತರ ಸಣ್ಣ ಪಟ್ಟಣಗಳಿರುವುದು ಅಪರೂಪ. ವಿದ್ಯಾರ್ಥಿಗಳು ಗುಂಪು ಕೂಡಿ ಸೋಡಾ ಕುಡಿಯುತ್ತ ಹರಟೆ ಹೊಡೆಯಲು ಅಲ್ಲಿ ಮಿಕ್ಕೆಲ್ಲ ಪಟ್ಟಣಗಳಿಗಿಂತ ಹೆಚ್ಚು ಸಂಖ್ಯೆಯ ಮಿಠಾಯಿ ಅಂಗಡಿಗಳಿವೆ. ಅಲ್ಲಿಂದ ತಿರುಗಿದರೆ ಮೂಲೆಯಲ್ಲಿ ಹಳೆಯ ಬಟ್ಟೆಯ ಗಿರವಿ ಅಂಗಡಿಯಿದೆ. ವಿದ್ಯಾರ್ಥಿಗಳು ತಮಗೆ ಹಣ ಸಾಲದಾದಾಗ ಅಲ್ಲಿ ಷರ್ಟನ್ನೋ ಇಜಾರವನ್ನೋ ಗಿರವಿಯಿಟ್ಟು ಹಣ ಪಡೆಯುತ್ತಿದ್ದರು. ಫೋಟೋ ತೆಗೆಯುವವನ ಅಂಗಡಿಯ ಕಿಟಕಿಯಲ್ಲಿ ಮಕ್ಕಳ ಮತ್ತು ಮದುವಣಗಿತ್ತಿಯರ ಚಿತ್ರದೊಂದಿಗೆ

ಕೆಲವು ತರುಣರ ಚಿತ್ರವನ್ನೂ ಪ್ರದರ್ಶಿಸಲಾಗಿದೆ. ಈ ಛಾಯಾಚಿತ್ರ ಪ್ರದರ್ಶನದ ಮಧ್ಯಭಾಗದಲ್ಲಿ ಆಲ್ಬರ್ಟ್ ಐನ್‌ಸ್ಟೈನರ ದೊಡ್ಡ ಚಿತ್ರವೊಂದಿದೆ.

ನಾಸಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಗುಂಪುಗೂಡುವ ಸ್ಥಳಗಳಲ್ಲಿ ನಾಸಾ ರಸ್ತೆಯ 'ದಿ ಬಾಲ್ಟ್' ಒಂದಾಗಿತ್ತು. ೧೯೫೪ರ ವಸಂತಕಾಲದ ಒಂದು ಹಿತಕರ ದಿನ, ಒಬ್ಬ ವ್ಯಕ್ತಿ 'ದಿ ಬಾಲ್ಟ್'ನಿಂದ ಹೊರಬಿದ್ದು ನಾಸಾ ರಸ್ತೆಯನ್ನು ಹಾದು ವಿದ್ಯಾಲಯದ ಹಸಿರು ಮೈದಾನದಲ್ಲಿ ನಿಧಾನವಾಗಿ ನಡೆಯತೊಡಗಿದರು. ಅವರು ಹಳೆಯ ದೊಗಲೆ ಇಜಾರವನ್ನೂ ಅತಿ ಬಳಕೆಯಿಂದ ಕಾಲಿನಾಕಾರಕ್ಕೆ ಬಂದಿದ್ದ ಪಾದರಕ್ಷೆ, ಮಾಸಿದ ಬೆವರು ಷರಟನ್ನು ಧರಿಸಿದ್ದರು. ಅವರು ಸ್ಥಿರ ನಿಧಾನ ನಡಗೆಯಿಂದ ಹೋಗುತ್ತಿದ್ದರು. ಅವರ ಕೆದರಿದ ನರೆತ ಕೂದಲನ್ನು ಗಾಳಿ ಹಾರಿಸುತ್ತಿತ್ತು. ಅವರು ಶೃಂಗಾಕಾರದ ಐಸ್ ಕ್ರೀಮನ್ನು ತಿನ್ನುತ್ತ ನಡೆದಿದ್ದರು.

ಆಲ್ಬರ್ಟ್ ಐನ್‌ಸ್ಟೈನ್ ಮೈದಾನವನ್ನು ಹಾದು ೧೧೨, ಮರ್ಸರ್ ರಸ್ತೆಯಲ್ಲಿದ್ದ ತಮ್ಮ ಮನೆಗೆ ಹೋಗುತ್ತಿದ್ದರು. ಕೆಲವು ಸಲ ತಮ್ಮ ಪ್ರೌಢ ವ್ಯಾಸಂಗಸಂಸ್ಥೆಯಿಂದ ಬಳಸುದಾರಿಯ ಮೂಲಕ ಮನೆಗೆ ಹೋಗಲಾಶಿಸುತ್ತಿದ್ದರು. ಅವರು ಹಾದುಹೋಗುವಾಗ ವಿದ್ಯಾರ್ಥಿಗಳು ತಲೆಯಾಡಿಸಿ ಮಿತ್ರಭಾವದಿಂದ ಮಂದಹಾಸ ಬೀರುತ್ತಿದ್ದರು. ಈ ವೇಳೆಗಾಗಲೇ ಅವರು ಪರಿಚಿತ ವ್ಯಕ್ತಿಯಾಗಿದ್ದು ವಿಶೇಷ ಆಕರ್ಷಣೆಗೆ ಪ್ರೇರಕರಾಗಿರಲಿಲ್ಲ. ಕೆಲವು ಸಲ ಮತ್ತೊಬ್ಬ ಪ್ರಾಧ್ಯಾಪಕರು ಸ್ವಲ್ಪ ದೂರ ಅವರೊಂದಿಗೆ ಜೊತೆಗೂಡಿ ಬರುತ್ತಿದ್ದರು.

ಐನ್‌ಸ್ಟೈನರು ವಾಸಿಸುತ್ತಿದ್ದ ಸಣ್ಣ ಶ್ವೇತಕುಟೀರವು ಆ ಸೊಬಗಿನ ರಸ್ತೆಯ ಮತ್ತಾವ ಮನೆಯಿಂದಲೂ ವಿಭಿನ್ನವಾಗಿರಲಿಲ್ಲ. ದ್ರಾಕ್ಷಿಯ ಹಂಬುಗಳು ಮನೆಯ ಮುಂಭಾಗದ ಕಮಾನಿಗೆ ನಸು ನೀಲಿಯ ತೋರಣದಂತೆ ಬೆಳೆದು ಸೊಗಯಿಸುತ್ತಿದ್ದುವು. ಅವರ ವ್ಯಾಸಂಗದ ದೊಡ್ಡ ಕಿಟಕಿಯ ಮೂಲಕ ಮುಂದಿನ ಹೂದೋಟ

ವನ್ನು ಕಾಣಬಹುದಾಗಿತ್ತು. ಮನೆ ಈಗ ನಿಶ್ಶಬ್ದವಾಗಿರುತ್ತಿತ್ತು. ಅವರ ಊಟ ಉಪಚಾರಗಳನ್ನೂ ಇನ್ನಿತರ ವ್ಯವಹಾರಗಳನ್ನೂ ನೋಡಿಕೊಳ್ಳುತ್ತಿದ್ದ ಕಾರ್ಯದರ್ಶಿಯನ್ನು ಬಿಟ್ಟರೆ ಅವರು ಬಹಳ ಕಾಲವನ್ನು ಒಂಟಿಯಾಗಿಯೇ ಕಳೆಯುತ್ತಿದ್ದರು. ಎಲ್ಸಾ ೧೯೩೬ರಲ್ಲಿ ಪ್ರಿನ್ಸ್‌ಟನ್‌ನಲ್ಲಿ ಮರಣ ಹೊಂದಿದ್ದರು. ಅವರನ್ನು ಸಮೀಪದ ಮಸಣದಲ್ಲಿ ಸಮಾಧಿ ಮಾಡಲಾಗಿತ್ತು.

ಅವರು ಯಾವತ್ತೂ ಬಯಸಿದ್ದ ಪ್ರಶಾಂತವಾದ ಏಕಾಂತ ಜೀವನವೂ ಮತ್ತು ತಮಗೆ ಆತ್ಮೀಯವಾಗಿದ್ದ ಏಕಾಂತತೆಯೂ ಅವರಿಗೆ ಪ್ರಿನ್ಸ್‌ಟನ್‌ನಲ್ಲಿ ಲಭಿಸಿತು. ಅತಿ ಕುತೂಹಲಿಗಳಿಂದ ಕೂಡಿದ, ರಭಸದಿಂದ ಸಾಗುತ್ತಿದ್ದ ಕಾರುಗಳು ಇವರ ಮನೆಯ ಬಳಿ ನಿಧಾನ ವಾದಾಗ, ರಸ್ತೆಯಲ್ಲಿನ ಜನ ಇವರನ್ನು ಕಂಡು ತಿರುಗಿ ನೋಡ ತೊಡಗಿದಾಗ ಐನ್‌ಸ್ಟೈನ್ ಅವುಗಳನ್ನು ಗಮನಿಸದವರಂತೆ ಇರು ತ್ತಿದ್ದರು.

ಎಂತಹ ವಾತಾವರಣವಿದ್ದರೂ ಸರಿಯೇ, ಪ್ರತಿದಿನ ಬೆಳಿಗ್ಗೆ ಅವರು ಊರಿನಾಚೆಯ ತನಕ ನಡೆದು ಹೋಗುತ್ತಿದ್ದರು. ಕ್ರಮೇಣ ಮನೆಗಳು ವಿರಳವಾಗಿ ಕೊನೆಯಲ್ಲಿ ವಿಶಾಲವಾದ ಮೈದಾನದ ನಡುವೆ ಏಕೈಕವಾಗಿ ಮೆರೆಯುತ್ತಿದ್ದ ಬೃಹತ್ ಭವನದತ್ತ ಅವರು ನಡೆಯು ತ್ತಿದ್ದರು. ಅದೇ ಅವರ ಪ್ರೌಢ ವ್ಯಾಸಂಗದ ವಿದ್ಯಾಸಂಸ್ಥೆ.

ಅವರ ಕಚೇರಿ ಹೆಚ್ಚೇನೂ ಸಜ್ಜಾಗಿರಲಿಲ್ಲ. ಅವರು ಮೊದಲು ಬಂದಾಗ ಕಚೇರಿಗೆ ಏನು ಸರಂಜಾಮು ಬೇಕೆಂದು ಕೇಳಲಾಯಿತು. "ಎಲ್ಲಿ, ನೋಡೋಣ," ಅವರು ಉತ್ತರಿಸಿದ್ದರು. "ಒಂದು ಕಪ್ಪು ಹಲಗೆ ಮತ್ತು ಸೀಮೆಸುಣ್ಣ. ಒಂದು ಮೇಜು, ಕೆಲವು ಕುರ್ಚಿಗಳು.... ಸೀಸದ ಕಡ್ಡಿಗಳು, ಕಾಗದ. ಅಷ್ಟೇ ಅಂತ ಕಾಣುತ್ತೆ...ಓಹೋ! ಹೌದು. ಒಂದು ಕಸದ ಬುಟ್ಟಿ—ಸ್ವಲ್ಪ ದೊಡ್ಡ ಗಾತ್ರದ್ದು!''

"ದೊಡ್ಡ ಗಾತ್ರದ್ದು...?"

"ಹೌದು" ಐನ್‌ಸ್ಟೈನ್ ನಸುನಕ್ಕರು. "ಹೌದು, ನನ್ನ ತಪ್ಪು ಗಳಿಗೋಸ್ಕರ, ನೋಡಿ ನಾನು ಅನೇಕ ತಪ್ಪುಗಳನ್ನು ಮಾಡುತ್ತೇನೆ."

ಐನ್‌ಸ್ಟೈನ್ ತಮ್ಮ ಕಚೇರಿಯಲ್ಲಿ ಕೆಲವು ಸಲ ಒಂಟಿಯಾಗಿಯೂ ಕೆಲವು ಸಲ ಒಂದಿಬ್ಬರು ಸಹಾಯಕರೊಂದಿಗೆ ಕೆಲಸ ಮಾಡುತ್ತಿದ್ದರು. ಎಲ್ಲೋ ಒಂದೊಂದು ಸಲ ಅವರ ಭೌತ ವಿಜ್ಞಾನದ ಪ್ರೌಢ ವಿದ್ಯಾರ್ಥಿಗಳ ಗುಂಪಿಗೆ ಉಪನ್ಯಾಸವೀಯುತ್ತಿದ್ದರು. ಅವರ ಹವ್ಯಾಸಪದ್ಧತಿಗಳು ಆಜೀವ ಪರ್ಯಂತ ಬದಲಾಗಲಿಲ್ಲ. ತಮ್ಮ ಪ್ರತಿದಿನದ ವಿಹಾರ ನಡಿಗೆ, ಮಿತ್ರರೊಂದಿಗೆ ತಮ್ಮ ಕೊಠಡಿಯಲ್ಲಿ ನಡೆಯಿಸುತ್ತಿದ್ದ ಸಂಜೆಯ ಸಂಗೀತ ಗೋಷ್ಠಿಗಳನ್ನು ಅವರು ಈಗಲೂ ಅನುಭವಿಸಿ ಆನಂದಿತರಾಗುತ್ತಿದ್ದರು.

ಯಾವಾಗಲಾದರೊಮ್ಮೆ ಅವರು ಪ್ರಿನ್ಸ್‌ಟನ್‌ನ ಸಂಗೀತ ಗೋಷ್ಠಿಗೆ ಸಂಗೀತ ಕೇಳಲು ಹೋಗುತ್ತಿದ್ದರು. ಅವರು ಸಭಾ ಮಂದಿರವನ್ನು ಪ್ರವೇಶಿಸಿ ತಮ್ಮ ಸ್ಥಾನದಲ್ಲಿ ಕುಳಿತ ಕೂಡಲೇ ತಾವು ಎಷ್ಟು ಉದ್ರೇಕ, ಗೊಂದಲಕ್ಕೆ ಕಾರಣರೆಂಬುದನ್ನು ತಿಳಿಯದವರಂತೆ ಇರುತ್ತಿದ್ದರು. ಶ್ರಾವಕರ ಮಧ್ಯೆ ಸ್ವಲ್ಪ ಗೂನುಬೆನ್ನಿನ ಕಿರೀಟದಂತಹ ಆಕರ್ಷಕ ಕೂದಲುಳ್ಳ ಮಹನೀಯರಿದ್ದುದು ಎಲ್ಲರನ್ನೂ ವಿದ್ಯುತ್ ಪ್ರವಾಹದಂತೆ ಪ್ರಚೋದಿಸುತ್ತಿತ್ತು. ಶ್ರಾವಕರು ಅವರನ್ನು ಸಂಪೂರ್ಣವಾಗಿ ಮರೆತು ಸಂಗೀತವನ್ನು ಆಸ್ಥೆಯಿಂದ ಆಲಿಸಲು ಕಷ್ಟಸಾಧ್ಯವಾಗುತ್ತಿತ್ತು.

ಒಂದು ಸಂಜೆ ಅವರು ಊರಿನ ಸಿನಿಮಾ ಮಂದಿರಕ್ಕೆ ಹೊರಟರು. ಅವರು ಚಿತ್ರಗಳನ್ನು ಅಪರೂಪವಾಗಿ ನೋಡುತ್ತಿದ್ದರು. ಆದರೆ ಅಂದು ಖ್ಯಾತ ಫ್ರೆಂಚ್ ಲೇಖಕ ಎಮಿಲಿ ಸೋಲನ ಜೀವನವನ್ನು ಕುರಿತ ಚಿತ್ರಪ್ರದರ್ಶಿತವಾಗುವುದಿತ್ತು. ಹಣವಿತ್ತು ಟಿಕೇಟು ಪಡೆದು ಮಂದಿರವನ್ನು ಹೊಕ್ಕರು. ಅವರು ಕಂಡದ್ದು ಖಾಲಿ ಚಿತ್ರ ಮಂದಿರ ಅವರು ಅರ್ಧ ಗಂಟೆ ಮುಂಚೆ ಬಂದಿದ್ದರು.

"ಓಹೋ! ಈ ಸಂಜೆ ಬಹಳ ಸೊಗಸಾಗಿದೆ," ದ್ವಾರಪಾಲಕನಿಗೆ ಅವರೆಂದರು. "ಒಂದು ಸುತ್ತು ಹಾಕಿಕೊಂಡು ಪುನಃ ಬರುತ್ತೇನೆ. ನನ್ನ ಟಿಕೇಟನ್ನು ಹಿಂದಕ್ಕೆ ಕೊಡುವಿರಾ?"

"ಪರವಾಗಿಲ್ಲ ಸಾರ್" ದ್ವಾರಪಾಲಕ ಅವರಿಗೆ ವಚನವಿತ್ತಿದ್ದ.

"ನೀವು ಹಿಂತಿರುಗಿ ಬಂದಾಗ ಟಿಕೇಟಿನ ಅವಶ್ಯಕತೆಯೇನೂ ಇರುವುದಿಲ್ಲ."

ಐನ್‌ಸ್ಟೈನ್ ಸಂದೇಹ ತಾಳಿದರು. "ಆದರೆ....ನೀವು ನನ್ನನ್ನು ಗುರುತು ಹಿಡಿಯಲಾರಿರಿ...."

ದ್ವಾರಪಾಲಕ ಜಗತ್ತಿನ ಮಹಾವ್ಯಕ್ತಿಯನ್ನು ಕಂಡು ನಕ್ಕಿದ್ದ. "ನಾನು ನೆನಪಿನಲ್ಲಿಟ್ಟುಕೊಂಡಿರುತ್ತೇನೆ, ಸಾರ್," ಅವನೆಂದ.

ಐನ್‌ಸ್ಟೈನ್ ಸಹಜವಾದ ವಿನಯವಂತರು. ತಮ್ಮ ಜೀವಿತ ಕಾಲದಲ್ಲಿ ತಾವು ಮತ್ತೊಬ್ಬರಿಂದ ಪ್ರತ್ಯೇಕವೆಂದು ಅವರೆಂದೂ ಒಪ್ಪುತ್ತಿರಲಿಲ್ಲ. ಒಮ್ಮೆ ಹರ್ಷೋದ್ಗಾರಗಳಿಂದ ಚಪ್ಪಾಳೆಗಳಿಂದ ಸಡಗರ ಸೂಚಿಸುತ್ತಿದ್ದ ದೊಡ್ಡ ಸಭೆಯೊಂದರ ವೇದಿಕೆಯಲ್ಲಿ ಐನ್‌ಸ್ಟೈನರೊಡನೆ ಖ್ಯಾತ ವಿಜ್ಞಾನಿಯೊಬ್ಬರು ಕುಳಿತಿದ್ದರು.

"ಅವರೇಕೆ ಹಾಗೆ ಮಾಡುವರೆಂದು ವಿವರಿಸಬಲ್ಲಿರೇನು? ಅದಕ್ಕೆ ಕಾರಣವೇನೆಂದು ನಿಮಗೆ ಗೊತ್ತೆ?" ಅವರ ಜೊತೆಗಾರರು ಕೇಳಿದರು.

ಐನ್‌ಸ್ಟೈನರು ನಿಧಾನವಾಗಿ ತಲೆಯಾಡಿಸಿದರು. ಅವರ ಕಣ್ಣುಗಳಲ್ಲಿ ಒಗಟನ್ನು ಸೂಚಿಸುವಂತಹ ನೋಟವಿತ್ತು. "ನಾನೂ ಅದನ್ನೇ ಕೇಳುತ್ತಿದ್ದೇನೆ—ಅವರೇಕೆ ಹಾಗೆ ಮಾಡುತ್ತಾರೆ!" ಐನ್‌ಸ್ಟೈನ್ ಪಿಸುನುಡಿದರು.

ಅಮೇರಿಕದ ಜೀವನ ಶಾಂತಮಯವಾಗಿತ್ತಾದರೂ ತಾವು ಜರ್ಮನಿಯಲ್ಲಿ ಬಿಟ್ಟುಬಂದ ಜನರ ಹಿಂಸೆ ಯಾತನೆಗಳನ್ನು ಅವರು ಮರೆಯುವಂತಿರಲಿಲ್ಲ. ಹಿಟ್ಲರ್ ಒಬ್ಬ ಹುಚ್ಚು ಕಾಡುಮನುಷ್ಯನಾಗಿದ್ದ. ಐನ್‌ಸ್ಟೈನರ ಜನ್ಮಭೂಮಿಯಿಂದ ನಂಬಲಸದಳವಾದ ಭಯಾನಕ ವರದಿಗಳು ಬಂದುವು. ಗುಪ್ತ ನೆಲಮಾಳಿಗೆಗಳ ಸುರಂಗದಿಂದಲೋ, ರಾತ್ರಿಯಲ್ಲಿ ದೋಣಿಗಳ ಮೂಲಕವೋ, ಮುಳ್ಳುತಂತಿಯ ಬೇಲಿಯ ಮೂಲಕ ತೆವಳಿ ಬಂದೋ ಜರ್ಮನಿಯನ್ನು ಬಿಟ್ಟು ಜನ ಬರುತ್ತಿದ್ದರು. ಹೀಗೆ ತಪ್ಪಿಸಿಕೊಂಡು ಬಂದವರಲ್ಲಿ ಬಹುಮಂದಿ ಐನ್‌ಸ್ಟೈನರ ಸಹಾಯ ಕೋರುತ್ತಿದ್ದರು. ಐನ್‌ಸ್ಟೈನರನ್ನು ಹಣಕ್ಕಾಗಿ, ಪರಿಚಯಕ್ಕಾಗಿ ಕೇಳಿ ಬರೆಯುತ್ತಿದ್ದರು. ನಿರಾಶ್ರಿತರ ಸೈನ್ಯದ ಪ್ರಧಾನ

ಮುಖಂಡರೆಂಬಂತೆ ಅವರನ್ನು ತಮ್ಮ ನಾಯಕರನ್ನಾಗಿ ಕಾಣು ತ್ತಿದ್ದರು.

ಜನರ ಕಷ್ಟ-ನಷ್ಟ ನೋವುಗಳನ್ನು ಕಂಡು ಐನ್‌ಸ್ಟೈನ್ ಪರಿತ ಪಿಸುತ್ತಿದ್ದರು. ತಮ್ಮ ಅಪೇಕ್ಷೆ ಇದ್ದಷ್ಟು ಸಹಾಯವನ್ನು ಅವರು ಮಾಡಲು ಸಾಧ್ಯವಾಗುತ್ತಿರಲಿಲ್ಲವಾದರೂ ಯಾರಿಗೂ ಅವರು ಸಹಾ ಯವನ್ನು ಮಾಡದೆ ಇರುತ್ತಿರಲಿಲ್ಲ. ಒಂದು ಸಲ ಆಸ್ಪತ್ರೆಯೊಂದರಲ್ಲಿ ಖಾಲಿಯಿದ್ದ ಎಕ್ಸ್‌ರೇ ಸಲಕರಣೆಗಳ ತಾಂತ್ರಿಕ ಹುದ್ದೆಯೊಂದಕ್ಕೆ ಐನ್‌ಸ್ಟೈನ್ ನಾಲ್ವರನ್ನು ಶಿಫಾರಸು ಮಾಡಿದ್ದರು. ನಾಲ್ವರಲ್ಲಿ ಒಬ್ಬ ನನ್ನು ಪಕ್ಷಪಾತದಿಂದ ಕಾಣುವುದು ಅವರಿಗೆ ಸಹಿಸಲಾಗದೆ ಎಲ್ಲ ರನ್ನೂ ಶಿಫಾರಸು ಮಾಡಿ ಕಳುಹಿಸಿದ್ದರು.

ಅವರ ಸೋದರಿ ಮಾಯಾ ೧೯೩೯ರಲ್ಲಿ ಅವರನ್ನು ಕಾಣಲು ಬಂದರು. ಇಟಲಿಯಲ್ಲಿ ವಾಸಿಸುತ್ತಿದ್ದ ಆಕೆಗೆ ಮುಂಬರುವ ಯುದ್ಧದ ದಬ್ಬಾಳಿಕೆಯ ವಾಸನೆ ಹೊಡೆದಿತ್ತು. ಯೂರೋಪಿನಲ್ಲಿ ಅಪರೂಪವಾಗಿದ್ದ ಅದ್ಭುತ ಸ್ವಾತಂತ್ರ್ಯದ ರುಚಿ ಕಾಣಲು ಅವರು ಬಯಸಿದರು.

ಆಕೆ ದಾರಿಯಲ್ಲಿ ಹೋಗುತ್ತಿದ್ದುದನ್ನು ಮೊದಲ ಬಾರಿಗೆ ಕಂಡು ಪ್ರಿನ್ಸ್‌ಟನ್ನಿನ ಪ್ರಜೆಗಳು ದಿಗ್ಭ್ರಾಂತರಾದರು. ಇನ್ನೊಬ್ಬರು ಇಷ್ಟು ಮಟ್ಟಿಗೆ ಆ ಪ್ರಸಿದ್ಧ ವಿಜ್ಞಾನಿಯಂತೆಯೇ ಕಾಣಿಸುತ್ತಿದ್ದುದು ನಂಬಲಸಾಧ್ಯವಾಗಿ ತೋರಿತು. ಆಕೆಗೂ ಕೂಡ ಅದೇ ಕೆದರಿದ ನರೆತ ಕೂದಲು, ಅದೇ ಭಾರಯಿಸಿದ ಕಣ್ಣುಗಳು, ಮಾತನಾಡಿದರೆ ಅದೇ ರೀತಿಯ ಮೃದು ಮೆಲುದನಿ ಎಲ ಇದ್ದುವು. ದೂರದಿಂದಲೇ ತಾವು ಮೆಚ್ಚಿದ ಪ್ರತಿಭಾವಂತನನ್ನು ಸಂಪೂರ್ಣವಾಗಿ ಹೋಲುವ ವ್ಯಕ್ತಿಯು ವಿಜ್ಞಾನದ ಗಂಧವನ್ನೇ ಅರಿಯದ ಸಾಮಾನ್ಯ ಮಾನವನಾಗಿಯೇ ಇರ ಬಹುದೆಂಬುದರ ಅರಿವಾದಾಗ ಅವರಿಗೆ ತುಂಬ ನೆಮ್ಮದಿಯಾಯಿತು.

ಆಗಸ್ಟ್ ೧೯೩೯ರ ಆದಿಭಾಗದ ಒಂದು ಬೆಳಿಗ್ಗೆ ಐನ್‌ಸ್ಟೈನರನ್ನು ಕಾಣಲು ಇಬ್ಬರು ಭೇಟಿಕಾರರು ಬಂದಿದ್ದರು. ಅವರೂ ಕೂಡ ನಿರಾ ಶ್ರಿತ ವಿಜ್ಞಾನಿಗಳಾಗಿದ್ದು ಅದೇ ತಾನೇ ಯೂರೋಪಿನಲ್ಲಿ ಕಂಡುಹಿಡಿ

ದಿದ್ದ ಆಶ್ಚರ್ಯಕರ ಹೊಸ ಶೋಧದ ಬಗೆಗೆ ಹೇಳಲು ಬಂದಿದ್ದರು. ಪರಮಾಣುವಿನಲ್ಲಿ ಅಡಕವಾಗಿರುವ ಅತ್ಯದ್ಭುತ ಶಕ್ತಿಯನ್ನು ಬಿಡುಗಡೆ ಮಾಡುವುದರತ್ತ ಈ ಕಾರ್ಯ ನಡೆದಿತ್ತು. ಹಿಂದೆ, ೧೯೦೫ರಲ್ಲಿ ಭೌತವಿಜ್ಞಾನದ ಸಂಶೋಧನಾ ಪತ್ರಿಕೆಯೊಂದರಲ್ಲಿ ಐನ್‌ಸ್ಟೈನರು ಪ್ರಕಟಿಸಿದ್ದ ಪ್ರೌಢಲೇಖನದಲ್ಲಿನ ಭಾವನೆಗಳಿಗೆ ಇದು ಸಂಬಂಧಿಸಿತ್ತು.

ಇದನ್ನು ಕೇಳುತ್ತಾ ಐನ್‌ಸ್ಟೈನ್ ಅಚಲರಾಗಿ ಕುಳಿತುಬಿಟ್ಟರು. ಅವರೇನು ಹೇಳುತ್ತಿರುವರೆನ್ನುವುದನ್ನು ಅವರು ಸ್ಪಷ್ಟವಾಗಿ ಶೀಘ್ರದಲ್ಲಿಯೇ ಅರ್ಥಮಾಡಿಕೊಂಡರು. ಮಹತ್ತರ ಕಾರ್ಯವನ್ನು ಸಾಧಿಸಿದ್ದ ಆ ಜನರು ಯಾರೆಂಬುದನ್ನು ಅವರು ಚೆನ್ನಾಗಿ ಬಲ್ಲವರಾಗಿದ್ದರು.

"ಪರಮಾಣು ಶಕ್ತಿಯ ಸಾಧ್ಯತೆಯೇನೆಂಬುದು ಜರ್ಮನರಿಗೆ ತಿಳಿದಿದೆ, ಡಾ॥ ಐನ್‌ಸ್ಟೈನ್'' ಎಂದು ಅವರಲ್ಲೊಬ್ಬ ಅವಸರದಿಂದ ನುಡಿದ. "ಆದರೆ ಅವರು ತಮ್ಮದೇ ಆದ ತಾಪತ್ರಯಗಳಲ್ಲಿರುವುದರಿಂದ ಈ ಸಂಶೋಧನೆಗೆ ಆವಶ್ಯವಾದ ಜನವನ್ನಾಗಲೀ ಸಲಕರಣೆಯನ್ನಾಗಲೀ ನೀಡುವಂತಿಲ್ಲ. ಅಮೇರಿಕ ಅದನ್ನು ಮಾಡಬಹುದು—ಮಾಡಲೇಬೇಕು—ಜರ್ಮನಿ ಮಾಡುವುದಕ್ಕೆ ಮುಂಚೆಯೇ. ಪರಮಾಣು ಆಯುಧದ ಕೆಲಸದ ಬಗ್ಗೆ ಜರ್ಮನಿಯೇನಾದರೂ ಅಮೇರಿಕಕ್ಕಿಂತ ಮೊದಲೇ ಮುನ್ನುಗ್ಗಿದರೆ..." ಭೇಟಿಕಾರ ತಲೆಯಾಡಿಸಿದ; ಅವನ ಕಣ್ಣುಗಳು ಗಾಬರಿಗೊಂಡಿದ್ದುವು

"ಸಧ್ಯದ ಸ್ಥಿತಿಯಲ್ಲಿಯೆ ಈ ಯೋಜನೆಯನ್ನು ಕಾರ್ಯಗತ ಮಾಡಲು ಹಲವಾರು ತಿಂಗಳಾಗುತ್ತವೆ. ಪ್ರಾರಂಭವೇನೋ ಮಾಡಲಾಗಿದೆ. ಆದರೆ ಇನ್ನೂ ಹೆಚ್ಚಿನ ಪ್ರಯೋಗಗಳ ಅವಶ್ಯಕತೆಯಿದೆ, ಮತ್ತೆ ಅದನ್ನು ಆದಷ್ಟೂ ಜಾಗ್ರತೆ ಮಾಡಬೇಕು."

ಐನ್‌ಸ್ಟೈನ್ ಬಹಳ ಹೊತ್ತು ಮೌನದಿಂದಿದ್ದರು. ಆ ಬಳಿಕ, "ಇದೆಷ್ಟು ಪ್ರಧಾನ ವಿಷಯವೆಂಬುದು ನನಗರ್ಥವಾಗಿದೆ. ಆದರೆ ನಾನೇನು ಮಾಡಬಲ್ಲೆ? ಸರ್ಕಾರಕ್ಕೆ ಈ ವಿಷಯವನ್ನು ತಿಳಿಸಬೇಕು" ಎಂದರು.

"ಹೌದು! ಅದಕ್ಕಾಗಿಯೇ ನಾವು ನಿಮ್ಮ ಬಳಿಗೆ ಬಂದುದು!

ನಾವು ಸರಕಾರದ ಮಟ್ಟಕ್ಕೆ ಹೋಗುವ ಹಾಗಿಲ್ಲ; ನಮ್ಮನ್ನು ಕೇಳು ವವರು ಯಾರೂ ಇಲ್ಲ. ಆದರೆ ನೀವು ಅಧ್ಯಕ್ಷ ರೂಸ್‌ವೆಲ್ಟರಿಗೆ ಬರೆದರೆ ಅವರು ಅದಕ್ಕೆ ಗಮನಕೊಡುವರು.''

''ಗಮನ ಕೊಡುವರು...?" ಭೇಟಿಕಾರರನ್ನು ಅವರು ಸಂದೇಹ ದಿಂದ ನೋಡಿದರು. "ಅವರು ನನ್ನ ಪತ್ರಕ್ಕೆ ಗಮನ ನೀಡಲಾರರು...."

'ಅವರು ನನ್ನ ಪತ್ರಕ್ಕೆ ಗಮನನೀಡಲಾರರು.' ಹಾಗೆಂದು ಅವರು ಸುಮ್ಮನೆ ಹೇಳಿದರು; ಅದು ನಿಜವೆಂದು ನಂಬಿದರು. ಮತ್ತೆ, ಹಿಂದಿ ನಂತೆ, ಜಗತ್ತಿನಲ್ಲಿನ ಅವರ ಗಣನೀಯ ಸ್ಥಾನವನ್ನು ಅವರಿಗೇ ಮನ ವರಿಕೆಮಾಡಿಕೊಡಬೇಕಾಯಿತು. ಆ ಇಬ್ಬರು ಭೇಟಿಕಾರರು ಅವ ರೊಡನೆ ಶ್ರದ್ಧಾಸಕ್ತಿಗಳಿಂದ ಒತ್ತಾಯಪೂರ್ವಕವಾಗಿ ಬಹಳ ಹೊತ್ತು ಮಾತನಾಡಿದರು. ಆ ಬಳಿಕ ಐನ್‌ಸ್ಟೈನ್ ತಮ್ಮ ಮೇಜಿನ ಡ್ರಾಯರಿನಿಂದ ಕಾಗದ ಮತ್ತು ತಮ್ಮ ಪೆನ್ನನ್ನು ಹೊರತೆಗೆದರು.

ಅಂದು ಅವರು ಅಧ್ಯಕ್ಷ ಫ್ರಾಂಕ್ಲಿನ್ ರೂಸ್‌ವೆಲ್ಟ್‌ರಿಗೆ ಬರೆದ ಪತ್ರವೇ ಪರಮಾಣು ಯುಗದ ಪ್ರಾರಂಭಕ್ಕೆ ಸಂಕೇತವಾಯಿತು. ನಿಶ್ಶ ಬ್ದದಿಂದ ನಿಧಾನವಾಗಿ ಆದರೆ ನಿಸ್ಸಂದೇಹವಾಗಿ ಅಂದಿನಿಂದ ನೂತನ ಯುಗದ ರಾಟೆ ತಿರುಗತೊಡಗಿತ್ತು.

ಎಲ್ಲವನ್ನೂ ಅತ್ಯಂತ ರಹಸ್ಯವಾಗಿ ಮಾಡಲಾಗುತ್ತಿತ್ತು. ಹೊರ ನೋಟಕ್ಕೆ ಮಾತ್ರ ಜೀವನಮಾರ್ಗ ಪ್ರತಿನಿತ್ಯದಂತೆ ಕಾಣುತ್ತಿತ್ತು. ಆದರೆ ಗುಪ್ತ ಆಂತರಿಕ ಬದಲಾವಣೆಗಳಾಗಿದ್ದುವು. ಐನ್‌ಸ್ಟೈನರು ನೇರವಾಗಿ ಪರಮಾಣು ಯೋಜನೆಯಲ್ಲಿ ಪಾತ್ರವಹಿಸದಿದ್ದರೂ ಅದ ರೊಡನೆ ಅವರಿಗಿದ್ದ ಸಂಬಂಧ ಮುಖ್ಯವಾಗಿತ್ತು. ಅವರ ರಕ್ಷಣೆಯು ಸರ್ಕಾರದ ಹೊಣೆಯಾಗಿತ್ತು. ಕಾವುಗಾರರನ್ನು ಇಟ್ಟುಕೊಳ್ಳಲು ಅವರು ಇಚ್ಛಿಸುತ್ತಿರಲಿಲ್ಲ. ತಮ್ಮ ಚಟುವಟಿಕೆಗಳು ತಡೆಯಿಲ್ಲದೆ ಸಾಗಬೇಕೆಂದು ಅವರು ಖಂಡಿತವಾಕ್ಕುಗಳನ್ನಾಡಿದ್ದರು. ಅವರ ಪಾಡಿಗೆ ಅವರನ್ನು ಬಿಡಲಾಯಿತು--ಅಥವಾ ಹಾಗೆ ಬಿಟ್ಟಂತೆ ಕಾಣು ತ್ತ ಇತ್ತು.

ಅವರನ್ನು ರಕ್ಷಿಸಲು ವಹಿಸುತ್ತಿದ್ದ ಮುಂಜಾಗ್ರತೆ ಕ್ರಮಗಳನ್ನು

ಅವರಿಂದ ಮುಚ್ಚಿಡಲು ಕಷ್ಟವೇನೂ ಆಗಿರಲಿಲ್ಲ. ಅವರ ದಿನಚರಿ ರೂಢಿಯಾಗಿದ್ದು ಮುಂದೇನು ಮಾಡುವರೆಂಬುದನ್ನು ಸುಲಭವಾಗಿ ಗ್ರಹಿಸಬಹುದಿತ್ತು.

ಒಂದು ಸಲ ಅವರು ಅನಿರೀಕ್ಷಿತವಾಗಿ ಅತ್ಯವಸರದಿಂದ ನ್ಯೂಯಾರ್ಕಿಗೆ ಹೋಗುವ ಮನಸ್ಸು ಮಾಡಿದರು. "ನಾನು ಈ ಮಧ್ಯಾಹ್ನದ ಊಟಕ್ಕೆ ಮನೆಗೆ ಬರುವುದಿಲ್ಲ." ಎಂದು ಬೆಳಗಿನ ಉಪಾಹಾರಮಾಡುತ್ತಿದ್ದಾಗ ತಮ್ಮ ಕಾರ್ಯದರ್ಶಿಗೆ ತಿಳಿಸಿದರು. "ನಾನು ಹತ್ತು ಗಂಟೆಯ ರೈಲಿನಲ್ಲಿ ನ್ಯೂಯಾರ್ಕಿಗೆ ಹೋಗುತ್ತೇನೆ. ರಾತ್ರಿ ಊಟದ ವೇಳೆಗೆ ಸರಿಯಾಗಿ ಬಂದುಬಿಡುತ್ತೇನೆ.''

"ಆದರೆ ನೀವು ಒಬ್ಬರೇ ಹೋಗಕೂಡದು.'' ಆಕೆ ಪ್ರತಿಭಟಿಸಿದಳು. ''ನಿಮ್ಮೊಡನೆ ಹೋಗಲು ಯಾರನ್ನಾದರೂ ಜೊತೆ ಮಾಡಿಕೊಡುತ್ತೇನೆ."

"ನೀನು ಮಿಕ್ಕೆಲ್ಲರಷ್ಟೇ ಕೆಟ್ಟವಳೆ''ಂದು ಕೋಪಾವೇಶದಿಂದಲೇ ಐನ್‌ಸ್ಟೈನ್ ನುಡಿದರು. "ನನಗೆ ಜೊತೆಯೇನೂ ಬೇಕಾಗಿಲ್ಲ. ಈ ಸಣ್ಣ ಪ್ರಯಾಣವನ್ನು ನಾನೊಬ್ಬನೇ ಮಾಡಲು ಶಕ್ತನಾಗಿದ್ದೇನೆ."

ಅವರಿನ್ನೂ ಮನೆಬಿಟ್ಟು ಹೊರಡುತ್ತಿರುವಂತೆಯೇ ಅವರ ಕಾರ್ಯದರ್ಶಿ ಟೆಲಿಫೋನಿನತ್ತ ನಡೆದಿದ್ದಳು.

ಐನ್‌ಸ್ಟೈನ್ ತಮ್ಮ ಇನ್ಸ್‌ಟಿಟ್ಯೂಟ್‌ನಿಂದ ಅನತಿ ದೂರದಲ್ಲಿರುವಾಗಲೇ ಅವರ ಹಿಂದೆ ಯಾರೋ ವೇಗದಿಂದ ಬರುತ್ತಿರುವ ಹೆಜ್ಜೆಯ ಸಪ್ಪಳ ಕೇಳಿಸಿತು.

''ಸುಪ್ರಭಾತ, ಪ್ರೊಫೆಸರ್ ಐನ್‌ಸ್ಟೈನರೇ!" ಹಾಗೆಂದವರು ಅವರ ಸಹಾಯಕ ಉದ್ಯೋಗಿಗಳೊಬ್ಬರು.

"ಓಹೋ! ಸುಪ್ರಭಾತ. ಏನು, ಈ ಸೊಬಗಿನ ಬೆಳಿಗ್ಗೆ ನೀವೆಲ್ಲೋ ಅವಸರದಿಂದ ಧಾವಿಸುತ್ತಿರುವಂತಿದೆ?"

''ಹೌದು, ಹೌದು. ನೋಡಿ, ನಾನು ಹತ್ತು ಗಂಟೆಯ ರೈಲಿನಲ್ಲಿ ನ್ಯೂಯಾರ್ಕಿಗೆ ಹೋಗಿ ಅಲ್ಲಿ ಮೊದಲು ಮುಗಿಸಬೇಕಾದ ಕೆಲಸ ಸ್ವಲ್ಪವಿದೆ.''

"ಹತ್ತು ಗಂಟೆಯ ರೈಲು! ಚೆನ್ನಾಯಿತು, ನಾನೂ ಅದೇ ರೈಲಿಗೆ ಹೋಗುತ್ತಿದ್ದೇನೆ. ಅದೃಷ್ಟವಶಾತ್ ನೀವೇನಾದರೂ ಕೊಲಂಬಿಯಾ ವಿಶ್ವವಿದ್ಯಾನಿಲಯದ ವರೆಗೂ ಹೋಗುವವರಾಗಿದ್ದೀರೇನು?'' ಐನ್‌ಸ್ಟೈನ್ ಪ್ರಶ್ನಿಸಿದರು.

ಸಹೋದ್ಯೋಗಿ ಅಚ್ಚರಿ ಹೊಂದಿದವರಂತೆ ಕಂಡರು. "ನಾನು ಹೋಗುತ್ತಿರುವುದೇ ಅಲ್ಲಿಗೆ, ಪ್ರೊಫೆಸರ್ ಐನ್‌ಸ್ಟೈನ್‌ರವರೇ. ನಿಮ್ಮ ಜೊತೆ ಸಿಕ್ಕಿದ್ದುದರಿಂದ ನನಗೆ ಅಮಿತಾನಂದವಾಗಿದೆ."

ಐನ್‌ಸ್ಟೈನ್ ಗೊಳ್ಳೆಂದು ನಕ್ಕರು. ನೋಡಿ, ನನ್ನ ಕಾರ್ಯದರ್ಶಿ ನಾನು ಒಂಟಿಯಾಗಿ ಹೋಗುವುದರ ಬಗ್ಗೆ ಚಿಂತೆ ತೋರಿದಳು. ಅವಳು ಮೂರ್ಖಳಲ್ಲವೇ?''

"ಬಹಳ ಮೂರ್ಖಳು", ಅವರ ಸಹಾಯಕ ಉದ್ಯೋಗಿ ಸಮ್ಮತಿಸಿದರು. ಅವರು ಸೂಸಿದ ಕಿರುನಗೆಯ ಹಿಂದಿನ ತಂತ್ರ ಐನ್‌ಸ್ಟೈನರಿಗೆಂತು ತಿಳಿಯಬೇಕು?

೧೭. ಪರಮಾಣು ಬಾಂಬು

ಆಗಸ್ಟ್ ೬, ೧೯೪೫, ಜಪಾನಿನ ಹಿರೋಷಿಮಾ ನಗರದ ಮೇಲೆ ಕಣ್ಣು ಕೋರೈಸುವ, ಕುಕ್ಕುವ ಬೆಳಕು ಸ್ಫೋಟವಾಯಿತು. ಕ್ಷಣ ಕಾಲದಲ್ಲಿ ರುದ್ರ ನೀರವತೆ ಆವರಿಸಿತು. ಬಳಿಕ ಭೂಮಿಯನ್ನೇ ನಡು ಗಿಸುವಂತಹ ಗುಡುಗಿನ ಶಬ್ದ ಪ್ರವಾಹ ಭೋರ್ಗರೆದು ಭೂಮಿಗಿಳಿದು ಭವನಗಳನ್ನು ಧೂಳೀಪಟವೆಬ್ಬಿಸಿ ನುಚ್ಚುನೂರಾಗಿಸಿ ನೆಲಸಮ ಮಾಡಿತು; ಕಾರುಗಳನ್ನೂ ಇತರ ವಾಹನಗಳನ್ನೂ ಆಟದ ಸಾಮಾ ನುಗಳಂತೆ ಅಜ್ಜುಗುಜ್ಜು ಮಾಡಿ ಉರುಳಿಸಿತು. ಆ ಪ್ರದೇಶದ ಕೇಂದ್ರ ದಲ್ಲಿ ಬೊಬ್ಬೆಯೆಬ್ಬಿಸುವಷ್ಟು ಇದ್ದ ಶಾಖವು ಎಲ್ಲ ವಸ್ತುಗಳನ್ನೂ ಗುರುತು ಸಿಗದಂತೆ ಬಾಡಿಸಿತು.

ಸ್ಫೋಟನೆ ಜಪಾನಿನಲ್ಲಿ ಮಾತ್ರ ಅನುಭವವಾಯಿತಾದರೂ ನಡೆದ ಘಟನೆಯ ನಿಜಾರ್ಥ ಜಗತ್ತಿನ ದೂರದ ರಾಷ್ಟ್ರಗಳಿಗೂ ಅರಿ ವಾಗಿತ್ತು. ಅಮೇರಿಕದ ಸಂಯುಕ್ತ ಸಂಸ್ಥಾನವು ಪರಮಾಣು ಶಕ್ತಿ ಯನ್ನು ಬಿಡುಗಡೆ ಮಾಡುವ ವಿಧಾನವನ್ನು ಸಾಧಿಸಿತ್ತು!

ಪ್ರಿನ್ಸ್‌ಟನ್ನಿನ ಗ್ರಂಥಾವೃತವಾಗಿದ್ದ ತಮ್ಮ ಹಿತಕರ ವ್ಯಾಸಂಗದ ಕೊಠಡಿಯಲ್ಲಿನ ಮೇಜಿನ ಮುಂದೆ ಐನ್‌ಸ್ಟೈನ್ ಸುಮ್ಮನೆ ಕುಳಿತಿ ದ್ದರು. ಉದ್ಯಾನದಲ್ಲಿದ್ದ ಹೂಗಳು ದೊಡ್ಡ ಕಿಟಕಿಯ ಹಿಂದಿದ್ದ ಮೌನವ್ಯಕ್ತಿಯ ಮನಸೆಳೆಯಲೋ ಎಂಬಂತೆ ತಮ್ಮ ಹೊಳಪಿನ ವರ್ಣದ ತಲೆಯಾಡಿಸಿದುವು. ಹಸಿರು ಪೊದೆಗುಂಪುಗಳು ಸೂರ್ಯನ ಕಾಂತಿಯನ್ನು ಮೈಗೂಡಿಸಿಕೊಂಡುವು; ಮರದ ಎಲೆಗಳು ಮೃದು ವಾದ ಓಲಾಟವಾಡಿದುವು.

ಆದರೆ ಐನ್‌ಸ್ಟೈನ್ ಪ್ರಶಾಂತ ಬೇಸಿಗೆಯ ಉದ್ಯಾನವನ್ನು ನೋಡುತ್ತಿರಲಿಲ್ಲ. ಅವರು ತಮ್ಮ ಮನಸ್ಸಿನಲ್ಲಿಯೇ ಜಪಾನಿನಲ್ಲಿ ಪರ ಮಾಣು ಬಾಂಬಿನಿಂದಾದ ವಿಧ್ವಂಸವನ್ನು ಕಾಣುತಿದ್ದರು. ಆದರಿಂದ

ಅವರು ಬಹಳ ಖೇದಗೊಂಡಿದ್ದರು. ಬಹಳ ವರ್ಷಗಳ ಹಿಂದಿನ ತಮ್ಮೊಂದು ವೈಜ್ಞಾನಿಕ ಭಾವನೆಯು ಪರಮಾಣುಶಕ್ತಿಯ ಸಂಶೋಧನೆಗಳಿಗೆ ಬುನಾದಿಯಾಯಿತೆಂದು ಅವರು ತಿಳಿದಿದ್ದರು. ಅಷ್ಟೇ ಅಲ್ಲದೆ, ಬೃಹತ್ ಪ್ರಮಾಣದಲ್ಲಿ ಬಾಂಬುಗಳ ತಯಾರಿಕಾ ಯೋಜನೆಗೆ ತಾವು ಫ್ರಾಂಕ್ಲಿನ್ ರೂಸ್‌ವೆಲ್ಟರಿಗೆ ಬರೆದ ಪತ್ರವೇ ಕಾರಣವೆಂಬುದೂ ಅವರಿಗೆ ಗೊತ್ತಿತ್ತು.

ತಗ್ಗಿಸಿದ ತಲೆಯ ಮೇಲೆ ಹೊಣೆಗಾರಿಕೆಯ ಹೊಣೆ ಭಾರವಾಗಿ ಬಿದ್ದಿತ್ತು. ಪರಮಾಣು ಶಕ್ತಿಯ ದುರುಪಯೋಗದಿಂದಾಗುವ ಭಯಾನಕ ದುಷ್ಪರಿಣಾಮಗಳು ಜನರಿಗೆ ಮನದಟ್ಟಾಗುವಂತೆಯೂ ಆ ಶಕ್ತಿಯನ್ನು ಸದುಪಯೋಗಗಳಿಗೆ ಮಾತ್ರವೇ ಬಳಸುವಂತೆಯೂ ಪ್ರಪಂಚದ ಜನರನ್ನು ಪ್ರೇರೇಪಿಸಬಲ್ಲಷ್ಟು ಪ್ರಬಲವಾದ ಪ್ರಭಾವಶಕ್ತಿ ತಮಗಿದ್ದೀತೇ ಎಂಬ ನಿರ್ಭರ ಆಲೋಚನೆಗಳಲ್ಲಿ ಮಗ್ನರಾಗಿ ಆಯಾಸ ವಿಹ್ವಲರಾಗಿ ಐನ್‌ಸ್ಟೈನ್ ಕುಳಿತಿದ್ದರು. ತಮ್ಮ ಮುನ್ನೆಚ್ಚರಿಕೆಗೆ ಗಮನವೀಯಬೇಕೆಂದು ಜನರನ್ನು ಒತ್ತಾಯಪಡಿಸುವುದಾಗಿ ಅವರು ಮನಃಪೂರ್ವಕವಾಗಿ ನಿರ್ಧರಿಸಿದರು.

೧೮. ಕೇಳದ ಕೊನೆಯ ನುಡಿಗಳು

"....ಹೀಗಾಗಿ ನಮ್ಮೀ ಸಮೀಕರಣಗಳ ವ್ಯವಸ್ಥೆಗೆ ಈ ನಿಯಮವನ್ನನ್ವಯಿಸುವುದರ ಅರ್ಥ ಅದಕ್ಕೆ ಸಂಬಂಧಿಸಿದ ಟೆನ್ಸಾರ್ ಸಾಂದ್ರತೆಯು ನಿಷ್ಪನ್ನವು ಸೊನ್ನೆ ಎಂದು!"

ತರಗತಿಯ ಮುಂದೆ ನಿಂತಿದ್ದ ವ್ಯಕ್ತಿ ಭೌತ ವಿಜ್ಞಾನಿಗಳ ವಿಶೇಷ ಭಾಷೆಯಲ್ಲಿ ನಿಧಾನವಾಗಿ ಮಾತನಾಡುತ್ತ ಚಿಕ್ಕ ಕಪ್ಪು ಹಲಗೆಯ ಮೇಲೆ ಗಣಿತ ಸಂಕೇತಗಳನ್ನು ಸಣಕಲು ಗೀಟುಗಳಿಂದ ನಿರೂಪಿಸುತ್ತಿದ್ದರು. ಆ ವಿಲಕ್ಷಣ ಶಬ್ದಗಳನ್ನು ಗಡಸು ಜರ್ಮನ್ ಉಚ್ಚಾರಣೆಯಲ್ಲಿ ತೀರ ಮೆಲುದನಿಯಲ್ಲಿ ಮಾತನಾಡುತ್ತಿದ್ದುದರಿಂದ ಶ್ರಾವಕರು ಅದನ್ನು ಅರ್ಥಮಾಡಿಕೊಳ್ಳಲು ಅತ್ಯಾಸಕ್ತಿಯಿಂದ ಕೇಳಬೇಕಾಗಿತ್ತು.

ಶ್ರೋತೃವರ್ಗದಲ್ಲಿ ಹೆಚ್ಚೆಂದರೆ ಮೂವತ್ತು ಜನರಿದ್ದರು. ಅದರಲ್ಲಿ ಕೆಲವರು ತರುಣ ಪ್ರೌಢ ವಿದ್ಯಾರ್ಥಿಗಳಾಗಿದ್ದು ಆ ಮಹೋಪಾಧ್ಯಾಯರ ಬಾಯಿಂದ ಹೊರಟ ಪ್ರತಿ ಪದವನ್ನೂ ಶ್ರದ್ಧೆಯಿಂದ ಆಲಿಸುತ್ತಿದ್ದರು. ಉಳಿದವರಲ್ಲಿ ಬಹುಮಂದಿ ಆ ಸಂಸ್ಥೆಯ ಮತ್ತು ನೆರೆ ವಿಶ್ವವಿದ್ಯಾನಿಲಯಗಳ ಪ್ರಸಿದ್ಧ ವಿಜ್ಞಾನಿಗಳು.

ಯಾವಾಗಲಾದರೂ ಪ್ರೊಫೆಸರ್ ಐನ್‌ಸ್ಟೈನ್ ತಮ್ಮ ಏಕೀಕೃತ ಕ್ಷೇತ್ರವಾದದ ಬಗೆಗೆ ಮಾತನಾಡಲು ನಿರ್ಧರಿಸಿದಾಗ ಅದನ್ನು ಸಂಸ್ಥೆಯ ಇತರ ವಿಜ್ಞಾನಿಗಳ ಉಪನ್ಯಾಸದಂತೆ ಸೂಚನಾ ಪತ್ರಗಳನ್ನು ಕಳುಹಿಸುವುದರ ಮೂಲಕವಾಗಲೀ ಪ್ರಕಟಿಸುವುದಾಗಲಿ ಮಾಡುತ್ತಿರಲಿಲ್ಲ. ಹಾಗೇನಾದರೂ ಮುನ್ಸೂಚನೆ ಇತ್ತಿದ್ದರೆ ನಿಜವಾಗಿಯೂ ಅವರನ್ನು ಅರ್ಥಮಾಡಿಕೊಂಡು ಪ್ರಯೋಜನ ಹೊಂದಬಲ್ಲ ಕೆಲವೇ ಮಂದಿಗೆ ಕುತೂಹಲಿತ ಜನರ ಗುಂಪು

ಜಾಗವನ್ನೇ ಕೊಡುತ್ತಿರಲಿಲ್ಲ. ಅದಕ್ಕೆ ಬದಲಾಗಿ ವಿಷಯುವನ್ನು ಅತ್ಯಂತ ಜಾಗರೂಕತೆಯಿಂದ ಭವನದ ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ "ಈ ಕೊಠಡಿಯಲ್ಲಿ ಈ ಮಧ್ಯಾಹ್ನ ಮೂರಕ್ಕೆ! ಎಂದು ರಹಸ್ಯ ಸಂಕೇತಗಳಿಂದ ತಿಳಿಸುತ್ತಿದ್ದರು. ಕೆಲವರಿಗೆ ವಿಶೇಷ ವಾಗಿ ಟೆಲಿಫೋನಿನ ಮೂಲಕ ಸುದ್ದಿಯನ್ನು ತಿಳಿಸುತ್ತಿದ್ದರು. ಮಧ್ಯಾಹ್ನ ಮೂರು ಗಂಟೆಯ ವೇಳೆಗೆ ಕೊಠಡಿಯು ಉಪನ್ಯಾಸ ಕೇಳಲು ಅಧಿಕಾರಿಗಳಾಗಿದ್ದವರಿಂದ ಮಾತ್ರ ಹಿತವಾಗಿ ತುಂಬಿರು ತ್ತಿತ್ತು.

ಐನ್‌ಸ್ಟೈನ್ ತಮ್ಮ ಉಪನ್ಯಾಸವನ್ನು ಮುಗಿಸಿ ಶ್ರೋತೃ ವರ್ಗಕ್ಕೆ ತಲೆದೂಗಿ ಕೊಠಡಿಯಿಂದ ಹೊರಟುಬರುತ್ತಿದ್ದರು. ಬಾಗಿಲು ಮುಚ್ಚಿದ ಕೂಡಲೇ ಅದೇ ತಾನೇ ಶ್ರುತವಾಗಿದ್ದ ನೂತನ ಭಾವನೆಗಳ ಬಗೆಗೆ ಚರ್ಚೆ ನಡೆದು ಮೌನವಿದ್ದ ಕೊಠಡಿಯಲ್ಲಿ ಸಡಗರದ ಗದ್ದಲವೇಳುತ್ತಿತ್ತು.

ಸೇವಕನೊಬ್ಬ ಬಂದು ಗೋಡೆಗೆ ಬಿಗಿಸಿದ್ದ ಕಪ್ಪು ಹಲಗೆಯ ತಿರುಪು ಮೊಳೆಗಳನ್ನು ಸಡಿಲಿಸುತ್ತಿದ್ದ. ಬಹಳ ಜಾಗರೂಕತೆಯಿಂದ ಅದನ್ನು ಕೆಳಗಿಳಿಸಿ, ಅದರಲ್ಲಿನ ಯಾವೊಂದು ಅಕ್ಷರವೂ ಅಳಿಸದಂತೆ ಅದನ್ನೇನೂ ಉಜ್ಜದಂತೆ ಮಾರು ದೂರದಲ್ಲಿ ಅದನ್ನು ಹಿಡಿದು ಕೊಂಡು ಹೋಗುತ್ತಿದ್ದ. ಸೀಮೆಸುಣ್ಣದ ಗುರುತುಗಳು ಹಾಗೆಯೇ ಉಳಿವಂತೆ ಅದನ್ನು ಸೀಕರಗೊಳಿಸಿ ಜಾಗರೂಕತೆಯಿಂದ ಒಂದೆಡೆ ತೆಗೆದಿಡಲಾಗುತ್ತಿತ್ತು. ಮಹಾ ವಿಜ್ಞಾನಿಯ ಬರಹಗಳನ್ನು ಭವಿಷ್ಯಕ್ಕೆ ಹೀಗೆ ರಕ್ಷಿಸಿಡುತ್ತಿದ್ದರು.

ಈ ವೇಳೆಗೆ, ಐನ್‌ಸ್ಟೈನ್ ಮಹಡಿಯಿಳಿದು ತಮ್ಮ ಕಚೇರಿಗೆ ಹೋಗಿರುತ್ತಿದ್ದರು. ಕಷ್ಟಪಟ್ಟು ಅವರು ತಮ್ಮ ಚರ್ಮದ ನಡುವಂಗಿ ಯನ್ನು ತೊಟ್ಟು ಭಾರವಾದ ಟೊಪ್ಪಿಗೆಯನ್ನು ತಲೆಯ ಮೇಲೆ ಎಳೆದುಕೊಳ್ಳುತ್ತಿದ್ದರು. ಆ ವರ್ಷ, ೧೯೫೪ರಲ್ಲಿ, ಅದೇ ತಾನೆ ಅವರ ಎಪ್ಪತ್ತಾರನೆಯ ಹುಟ್ಟುಹಬ್ಬ ಕಳೆದಿತ್ತು. ಕೆಲಕಾಲದಿಂದ ಅವರ ಆರೋಗ್ಯ ಚೆನ್ನಿಲ್ಲದಿದ್ದುದರಿಂದ ಇನ್ನೂ ಚಳಿಯಿದ್ದ ವಸಂತಕಾಲದ

ಆದಿಯಲ್ಲಿ ವೈದ್ಯರು ಟೊಪ್ಪಿಗೆ ಬಳಸುವಂತೆ ಅವರನ್ನು ಒತ್ತಾಯಪಡಿಸಿದ್ದರು. ಅದೇನೇ ಇದ್ದರೂ ಐನ್‌ಸ್ಟೈನ್ ಆ ಟೊಪ್ಪಿಗೆಯನ್ನು ಮೆಚ್ಚಿಕೊಂಡಿದ್ದರು. ಹೌದು, ಮಾಯಾ ಅವರಿಗಾಗಿ ಅದನ್ನು ಹೆಣೆದಿದ್ದರು.

ಅವರಿಗಾಗಿ ಸಹಾಯಕ ಉದ್ಯೋಗಿಯೊಬ್ಬ ಕಾಯುತ್ತಿದ್ದು ಅವರು ಬಂದ ಕೂಡಲೇ ಇಬ್ಬರೂ ಹುಲ್ಲು ಹಾದಿಯನ್ನು ದಾಟುತ್ತ ಹೊರಟರು. ತರುಣ ಅವರ ಕಾಲ್ನಡಿಗೆಯ ವೇಗಕ್ಕೆ ತನ್ನ ನಡಗೆಯನ್ನು ಜೊತೆಗೂಡಿಸುತ್ತ ನಡೆದಿದ್ದ. ಐನ್‌ಸ್ಟೈನ್ ತಮ್ಮೊಡನೆ ಬೇರೊಬ್ಬರು ನಡೆದುಬರುವುದಕ್ಕಾಗಲೀ ತಲೆಗೆ ಟೋಪಿ ಹಾಕಿಕೊಳ್ಳುವುದಕ್ಕಾಗಲೀ ಈಗ ಪ್ರತಿಭಟನೆ ಮಾಡುತ್ತಿರಲಿಲ್ಲ. ತಾವು ಶಕ್ತಿವಂತರಲ್ಲವೆಂದು ಅವರಿಗೀಗ ತಿಳಿದಿತ್ತು. ಅನೇಕ ದಿನಗಳು ಅವರು ಮನೆಯನ್ನೇ ಬಿಟ್ಟು ಹೊರಡುತ್ತಿರಲಿಲ್ಲ.

ಮೂಲೆ ದಾಟಿ ಮರ್ಸರ್ ರಸ್ತೆಗೆ ಅವರಿಬ್ಬರೂ ಬಂದಾಗ ಮನೆಯೊಂದರಿಂದ ಚಿಕ್ಕ ಹುಡುಗಿಯೊಬ್ಬಳು ಓಡಿಬಂದು ರಸ್ತೆಯನ್ನು ದಾಟಿದಳು. ಹಾಗೆ ಹಾದುಹೋಗುತ್ತಿದ್ದಾಗ ಐನ್‌ಸ್ಟೈನರನ್ನು ಕಂಡು ಅವಳು ಸಂತೋಷದಿಂದ ಕೈಬೀಸಿದಳು. ಅದಕ್ಕೆ ಪ್ರತಿಯಾಗಿ ಐನ್‌ಸ್ಟೈನ್ ಕೈಬೀಸಿದಾಗ ಅವರ ಗಂಭೀರದ ಸುಕ್ಕುಗಟ್ಟಿದ ಮುಖದಲ್ಲಿ ಶಾಂತಿ ಕರುಣೆಗಳು ಮೂಡಿ ಅವರು ಮಂದಸ್ಮಿತರಾದರು. ಆ ಹುಡುಗಿ ಐನ್‌ಸ್ಟೈನರ ಗೆಳತಿಯಾಗಿದ್ದಳು. ಅನೇಕ ವೇಳೆ ಐನ್‌ಸ್ಟೈನ್ ಆ ಹುಡುಗಿಯ ಗಣಿತದ ಮನೆಲೆಕ್ಕಗಳನ್ನು ಮಾಡಲು ಅವಳಿಗೆ ಸಹಾಯಮಾಡಿದ್ದರು. ನೆರೆಯವರಾಗಿ ತಮ್ಮ ನಡುವೆ ಓಡಾಡುತ್ತಿದ್ದೂ ತಮ್ಮಿಂದ ಆಶ್ಚರ್ಯಕರ ಹಾಗು ವಿಸ್ಮಯಕರ ರೀತಿಯಲ್ಲಿ ಬೇರೆಯಾಗಿದ್ದ ಐನ್‌ಸ್ಟೈನರನ್ನು ಪ್ರಿನ್ಸ್‌ಟನ್ನಿನ ಇಡೀ ಜನ ಪ್ರೀತ್ಯಾದರಗಳಿಂದ ಕಾಣುತ್ತಿದ್ದರು.

ಐನ್‌ಸ್ಟೈನ್ ಹೆಚ್ಚುಹೆಚ್ಚಾಗಿ ತಮ್ಮ ವ್ಯಾಸಂಗದ ಕೊಠಡಿಯಲ್ಲಿ ಕೆಲಸ ಮಾಡತೊಡಗಿದರು. ದಿನ ಕಳೆದಂತೆ ಅವರು ಶಕ್ತಿಗುಂದಲು ವೈದ್ಯರು ಚಿಂತೆಗೊಳಗಾದರು. ಏಪ್ರಿಲ್ ಮಧ್ಯಭಾಗದಲ್ಲಿ ಅವರನ್ನು ಪ್ರಿನ್ಸ್‌ಟನ್ ಆಸ್ಪತ್ರೆಗೆ ವಿಶೇಷ ಶುಶ್ರೂಷೆಗಾಗಿ ಕರೆದುಕೊಂಡು

ಹೋದಬಳಿಕ ಅವರ ಆರೋಗ್ಯ ಸುಧಾರಿಸಿದಂತೆ ಕಾಣುತ್ತಿತ್ತು. ತಮ್ಮ ಭೇಟಿಕಾರರೊಡನೆ ಅವರು ಆತ್ಮೀಯವಾಗಿ ಹರಟೆ ಹೊಡೆಯುತ್ತಿದ್ದರು. ಆಸ್ಪತ್ರೆಯ ಅಧಿಕಾರಿ ವರ್ಗದವರಿಗೆ ತೊಂದರೆಕೊಡುತ್ತಿರುವುದಕ್ಕೆ ದೀನರಾಗಿ ಪಶ್ಚಾತ್ತಾಪ ಸೂಚಿಸುತ್ತಿದ್ದರು.

ಏಪ್ರಿಲ್ ೧೮ರ ಮಧ್ಯರಾತ್ರಿ ಅದೇ ತಾನೆ ಕಳೆದಿತ್ತು. ನಿದ್ದೆ ಮಾಡುತ್ತಿದ್ದ ಐನ್‌ಸ್ಟೈನ್ ಕಷ್ಟಪಟ್ಟು ಉಸಿರಾಡುತ್ತಿದ್ದುದನ್ನು ಹಾಸಿಗೆಯ ಪಕ್ಕದಲ್ಲಿ ನಿಂತುನೋಡುತ್ತಿದ್ದ ಶುಶ್ರೂಷಕಿ ಆಲ್ಬರ್ಟ್ ರೊಜೆಲ್ ಗಮನಿಸಿದಳು. ವೈದ್ಯರನ್ನು ಕರೆಯುವ ಸಲುವಾಗಿ ಆಕೆ ಬಾಗಿಲಿನತ್ತ ನಡೆಯುತ್ತಿದ್ದಂತೆ ಐನ್‌ಸ್ಟೈನ್ ಜರ್ಮನ್ ಭಾಷೆಯಲ್ಲಿ ಏನನ್ನೋ ಅಸ್ಪಷ್ಟವಾಗಿ ನುಡಿಯುತ್ತಿರುವುದನ್ನು ಕೇಳಿ ಪುನಃ ಹಾಸಿಗೆಯತ್ತ ಧಾವಿಸಿದಳು. ಆದರೆ ಕಾಲಮಿಂಚಿತ್ತು. ಜಗತ್ತಿನ ಮಹಾವಿಜ್ಞಾನಿ – ಅನೇಕ ಮಂದಿಗೆ ಅರ್ಥವಾಗದಿದ್ದ ವಸ್ತುಗಳ ಬಗೆಗೆತಿಳಿವು ಪಡೆದಿದ್ದ ಆ ವ್ಯಕ್ತಿ—ಮರಣ ಹೊಂದಿದ್ದರು.

ಆಲ್ಬರ್ಟ್ ಐನ್‌ಸ್ಟೈನರ ಜೀವಿತ ಕಾಲದಲ್ಲಿ ಅವರು ಹೇಳಿದುದೆಲ್ಲವನ್ನೂ ಜಗತ್ತಿನ ಎಲ್ಲ ಜನರೂ ಗೌರವದಿಂದ ಅತ್ಯಮೂಲ್ಯವೆಂದು ಪರಿಗಣಿಸುತ್ತಿದ್ದರು. ಈಗ ಅವರು ಕೊನೆಯ ಬಾರಿಗೆ ಮಾತನಾಡಿದ್ದರು. ಆದರೆ ರೊಜೆಲ್‌ಗೆ ಜರ್ಮನ್‌ಭಾಷೆ ತಿಳಿದಿರಲಿಲ್ಲ. ಅವರನ್ನು ಗೌರವಿಸಿ ದೈವಮೂರ್ತಿಯನ್ನಾಗಿಸಿದ ಜನತೆಗೆ ಅವರಿತ್ತ ಕೊನೆಯ ಸಂದೇಶವಾದರೂ ಏನು? ಯಾರು ಎಂದೂ ಅದನ್ನು ತಿಳಿಯಲಾರರು.

ಈ ಪುಸ್ತಕವನ್ನು ಕುರಿತು........

"ಈ ಹುಡುಗನೊಬ್ಬ ಮಹಾ ಮೂರ್ಖ!"

ಯಾವ ಹುತ್ತದಲ್ಲಿ ಯಾವ ಹಾವು ಹುದುಗಿರುವುದೋ! ಎಂಬುದನ್ನರಿಯದ ಶಾಲಾ ಉಪಾಧ್ಯಾಯರು ಮಿತಭಾಷಿ ಆಲ್ಬರ್ಟ್ ಐನ್‌ಸ್ಟೈನರನ್ನು ಛೀಮಾರಿಮಾಡಿದರು.

ಆದರೆ ಮುಂದೆ ಈ ಬಾಲಕನ ಮನಸ್ಸೇ ಸಾಪೇಕ್ಷವಾದದ ಸಂಶೋಧನಾಲಯವಾಯಿತು; ವಿಶ್ವದ ರಹಸ್ಯಗಳನ್ನು ಹೊರಗೆಡಹಿದ ವಿನೂತನ ವಿಚಾರಧಾರೆಯ ಜನ್ಮಸ್ಥಳವಾಯಿತು!

ಐನ್‌ಸ್ಟೈನರು ಈ ಯುಗದ ಅತ್ಯಂತ ಶ್ರೇಷ್ಠ ವಿಜ್ಞಾನಿಗಳು; ಅನೃತವನ್ನೂ ಅಮಂಗಳವನ್ನೂ ಹತ್ತಿರ ಸೇರಗೊಡದಿದ್ದ ಸತ್ಯಾನ್ವೇಷಕರು. ಧರ್ಮದಿಂದ ಸ್ಫೂರ್ತಿ ಪಡೆದು ವಿಜ್ಞಾನದಿಂದ ಜಗತ್ತಿಗೆ ಜ್ಯೋತಿ ನೀಡಿದ ಚಿರ ನಂದಾದೀಪ ಅವರು. ಸರಳಜೀವಿ; ಹಿರಿಯ ವಿಜ್ಞಾನಿ; ಶಾಂತಿದೂತ; ಯುಗಪುರುಷ.

ಇಂಥ ಮಹಾಪುರುಷರ ಜೀವನ ಚರಿತ್ರೆಯನ್ನು ಶ್ರೀ ಸೂ. ಸುಬ್ರಹ್ಮಣ್ಯಂ ಅವರು ತಮ್ಮ ಸಹಜ ಸರಳ ಶೈಲಿಯಲ್ಲಿ ಹೃದಯಂಗಮವಾಗಿ ಭಾಷಾಂತರಿಸಿದ್ದಾರೆ.

ಓದಲು ಪ್ರಾರಂಭಿಸಿದರೆ ಮುಗಿಯುವವರೆಗೂ ಬಿಡದೆ ಓದಬೇಕೆನ್ನಿಸುವ, ಮುಗಿದ ಬಳಿಕ ಮತ್ತೂ ತಿಳಿಯಬೇಕೆಂದು ಕುತೂಹಲ ಕೆರಳಿಸುವ ಸ್ಫೂರ್ತಿದಾಯಕ ಅನುಪಮ ಕೃತಿಯಿದು. ಕಿರಿಯರೂ ಹಿರಿಯರೂ ಅವಶ್ಯ ಓದಲೇಬೇಕಾದ ಅಪೂರ್ವ ಜೀವನ ಚರಿತ್ರೆ!

ಪ್ರಗತಿ ಪ್ರಕಟನಾಲಯ